## ನಿಲುವಳಿ ಸೂಚನೆ (ಅನುಮತಿ ಕೋರಿ ಚರ್ಚೆ)

### ಕೆ.ಎಸ್.ಆರ್.ಟಿ.ಸಿ ಬಸ್‌ದರ ಏರಿಕೆ

ಅಧ್ಯಕ್ಷರು : ತಾವು, ಮಾನ್ಯ ವಿರೋಧಪಕ್ಷದ ನಾಯಕರು, ಮಾನ್ಯ ವಾಟಾಳ್ ನಾಗರಾಜ್‌ರವರು, ರೆಡ್ಡಿಯವರು, ಪುಟ್ಟಣ್ಣಯ್ಯನವರು ಎಲ್ಲರೂ ಈ ಒಂದು ವಿಚಾರದಲ್ಲೇ ಕಳುಹಿಸಿದ್ದೀರಿ. ನಾನು ಮೊದಲು ಅವರಿಗೆ ಅವಕಾಶಕೊಟ್ಟು ನಾನು ಎಲ್ಲರ ಮಾತನ್ನು ಕೇಳುತ್ತೇನೆ. ಬಸ್ ದರಗಳ ವಿಚಾರದಲ್ಲಿ ತಾನೇ ತಾವು ಹೇಳುತ್ತಿರುವುದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೌದು.

ಅಧ್ಯಕ್ಷರು : ಬಂದಿದೆ, ನಾನು ಎಲ್ಲರಿಗೂ ಅವಕಾಶವನ್ನು ಕೊಡುತ್ತೇನೆ, ಅವರದ್ದು ನಿಲುವಳಿ ಸೂಚನೆ ಮೊದಲೇ ಬಂದಿರುವುದರಿಂದ, ನಾನು ಅವರನ್ನು ಕೇಳಿ ಮತ್ತೆ ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಜಿ.ಬಿ. ಶಿವಕುಮಾರ್ : ನಾನು ತಮ್ಮ ಅಪ್ಪಣೆಯನ್ನು ಪಡೆದು ಶೂನ್ಯವೇಳೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆಂದು ಹೇಳಿದ್ದೆ.

ಅಧ್ಯಕ್ಷರು : ತಾವು ಶೂನ್ಯವೇಳೆಯಲ್ಲಿ ಜೀವಿಜಯರವರಿಗೆ ಸಂಬಂಧಿಸಿದ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆಂದು ಹೇಳಿದ್ದು ತಾನೇ ?

ಶ್ರೀ ಜಿ.ಬಿ. ಶಿವಕುಮಾರ್ : ಸನ್ಮಾನ್ಯ ಮುಖ್ಯಮಂತ್ರಿಗಳು ಇಲ್ಲಿದ್ದಾರೆ. ಏಕೆಂದರೆ ತಾವು ಪ್ರಸ್ತಾಪ ಮಾಡಿದ್ದರಿಂದ, ನಾನು ಅವರ ಅಪ್ಪಣೆಯನ್ನು ಪಡೆದು, ಮಾನ್ಯ ವಿರೋಧ ಪಕ್ಷದ ನಾಯಕರನ್ನು....

ಅಧ್ಯಕ್ಷರು : ಬೇಡ, ಪ್ರಸ್ತಾಪ ಮಾಡಿದ್ದುದು ಸರಿ ಹೋಯಿತು, ಈಗ ನಾನು ನಿಲುವಳಿ ಸೂಚನಗೆ ಪ್ರಾಧಾನ್ಯತೆ ಕೊಡಬೇಕಾಗುತ್ತದೆ.

ಶ್ರೀ ಜಿ.ಬಿ. ಶಿವಕುಮಾರ್ : ಏಕೆಂದರೆ, ಇದನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಯಾವ ನಿಯಮದಲ್ಲಾದರೂ ಅವಕಾಶ ಮಾಡಿಕೊಡಬೇಕು, ಮರ್ಯಾದಸ್ತರು ಯಾರೂ ಕೂಡ ಸಂಜೆ ಆರು ಗಂಟೆಯ ನಂತರ ಓಡಾಡುವಂತಿಲ್ಲ.

ಅಧ್ಯಕ್ಷರು : ನಾಳೆ ತೆಗೆದುಕೊಳ್ಳೋಣ, we will take it up tomorrow. ದಯಮಾಡಿ ಸಹಕರಿಸಿ. ಯಡಿಯೂರಪ್ಪನವರೇ, ತಾವು ಏನೊ ಹೇಳುವವರಿದ್ದೀರಿ, ಅದನ್ನು ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) : ಮುಖ್ಯಮಂತ್ರಿಗಳು ದೇವಸ್ಥಾನಕ್ಕೆ ಹೋಗಿ ಒಳ್ಳೆಯ ಮೂಡಿನಲ್ಲಿ ಬಂದಿದ್ದಾರೆ, ನಮಗೆ ತುಂಬಾ ಸಂತೋಷವಾಗಿದೆ. ಬಹುಶಃ ತಾವು ಒಪ್ಪುವುದಾದರೆ, ಮಲ್ಲಿಕಾರ್ಜುನ ಖರ್ಗೆಯವರು ಒಪ್ಪಿದರೆ, ನಾವು ನಿಲುವಳಿ ಸೂಚನೆಯನ್ನು ಏನು ಕಳುಹಿಸಿದ್ದೇವೆ ಅದರ ಮೇಲೆ ಸಾರಿಗೆ ದರ ಏರಿಕೆಯ ಬಗ್ಗೆ ನಾವು ಬಹಳಷ್ಟು ಚರ್ಚೆ ಮಾಡುವುದಿದೆ. ರಾಜ್ಯದ ಜನರ ಅಭಿಪ್ರಾಯ ತಮಗೆ ಮನವರಿಕೆಯಾಗಿದೆ, ತಮ್ಮ ತಪ್ಪು ಅರಿವಾಗಿದೆ ಎಂದು ನಾನು

ತಿಳಿದುಕೊಂಡಿದ್ದೇನೆ, ನಾವು ನಿಮಗೆ ಸಂಪೂರ್ಣ ಸಹಕಾರ ಕೊಡಲು ಸಿದ್ದರಿದ್ದೇವೆ. ವಿದ್ಯುತ್ ದರ ಏರಿಕೆ ಮಾಡುವಂಥ ಕಾಲದಲ್ಲಿ ಸದನದ ಸಮಿತಿಯನ್ನು ಮಾಡಿ ನಿಮಗೆ, ಬಹುಶಃ ರಾಜ್ಯದ ಇತಿಹಾಸದಲ್ಲಿ ಮೊದಲಬಾರಿಗೆ ನಾವು ಆ ರೀತಿಯ ಒಂದು ಸಲಹೆಯನ್ನು ಕೊಟ್ಟು ಒಮ್ಮತ್ರದ ತೀರ್ಮಾನಕ್ಕೆ ಬಂದೆವು. ನಾನು ಏನು ಹೇಳುತ್ತೇನೆಂದರೆ, ದಯಮಾಡಿ, ಸಾರಿಗೆ ದರವನ್ನು ಏನು ಹೆಚ್ಚಿಸಿದ್ದೀರಿ ಅದನ್ನು ವಾಪಸ್ ತೆಗೆದುಕೊಳ್ಳಿ, ಎರಡು ಸದನಗಳ ಒಂದು ಸಮಿತಿಯನ್ನು ರಚನೆ ಮಾಡಿ, ನಾವು ಚರ್ಚೆ ಮಾಡೋಣ, ಎರಡು ತಿಂಗಳಲ್ಲಿ ಒಂದು ವರದಿಯನ್ನು ಕೊಡುತ್ತೇವೆ, ನಾವು ಯಾವ ರೀತಿ ಇದೇ ಹಳೆಯ ದರದಲ್ಲೇ ಇಲಾಖೆಯನ್ನು ನಡೆಸುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ಮನವರಿಕೆ ಮಾಡಿಕೊಡುತ್ತೇವೆ. ನಂತರ ಅಗತ್ಯವಿದ್ದರೆ ಎಷ್ಟು ಹೆಚ್ಚಿಗೆ ಮಾಡಬೇಕೆನ್ನುವುದನ್ನು ಚಿಂತನೆ ಮಾಡಿ ಇಲ್ಲಿ ಬರೋಣ, ಇನ್ನು ಬಹಳ ಪ್ರಮುಖವಾದ ವಿಷಯಗಳಿದ್ದಾವೆ, ಸಾರಿಗೆ ದರವನ್ನು ಏರಿಸುವುದರ ಮೂಲಕ ಕಳೆದ ಹದಿನೈದು ದಿವಸಗಳಲ್ಲಿ ತಮ್ಮ ಕಡೆಯಿಂದ ಅನೇಕ ಅಪರಾಧಗಳಾಗಿದ್ದಾವೆ. ತಾವೇ ಒಬ್ಬ ಸಭಾನಾಯಕರಾಗಿ ಒಂದು ಮೇಲ್ಪಂಕ್ಕಿಯನ್ನು ಹಾಕಿ ಕೊಡಿ, ನಾವು ಮೇಲ್ಪಂಕ್ತಿಯನ್ನು ರಚಿಸುವುದಕ್ಕೆ ಹೇಳಿ, ಒಪ್ಪಿ, ಒಂದು ಸರ್ವಾನುಮತದ ಒಂದು ಸಲಹೆಯನ್ನು ನಾವು ನಿಮಗೆ ಕೊಟ್ಟಿದ್ದೇವೆ. ಆದರೆ ಈಗ ನೀವು ಆ ರೀತಿಯ ಒಂದು ನಿಮ್ಮ ದೊಡ್ಡತನವನ್ನು ತೋರಿಸಿ, ಗೋಪಾಲಗೌಡರ ಶಿಷ್ಯರಾಗಿ ತಾವು ಮುಂದೆ ಬನ್ನಿ ನೊಡೋಣ.

ಅಧ್ಯಕ್ಷರು : ಮೊದಲು ಪ್ರಾರಂಭ ಮಾಡಲಿ. ಆಮೇಲೆ ನೋಡೋಣ;

ಶ್ರೀ ವಾಟಾಳ್ ನಾಗರಾಜ್ : ಈಗ ಯಡಿಯೂರಪ್ಪನವರು ಏನು ಹೇಳಿದರೆಂದರೆ, ದೇವಸ್ಥಾನಕ್ಕೆ ಮುಖ್ಯಮಂತ್ರಿಗಳು ಹೋಗಿ ಬಂದಿದ್ದಾರೆಂದು ಹೇಳಿದರು, ಇವರಿಗೆ ದೇವಸ್ಥಾನಕ್ಕೆ ಹೋಗಿದ್ದರೆಂಬುದು ಹೇಗೆ ಗೊತ್ತು? ಏಕೆಂದರೆ, ಆಗಲೇ ಯಡಿಯೂರಪ್ಪನವರು ದೇವಸ್ಥಾನಕ್ಕೆ ಹೋಗಿ ಬಂದಿದ್ದಾರೆಂದು ಹೇಳಿದರು, ಆವಾಗ ದೇವಸ್ಥಾನಕ್ಕೆ ಹೋಗಿದ್ದಕ್ಕೆ ಅವರ ಮೈಮೇಲೆ ಏನೊ ಒಂದು ಗುರುತು ಇತ್ತು, ಈಗ ಇದ್ದಕಿದ್ದಂತೆ ಗುರುತು ಬದಲಾವಣೆಯಾಗಿದೆ. ನೀವು ದೇವಸ್ಥಾನಕ್ಕೆ ಹೋದರೆ ಗುರುತು ಹಾಕಿಕೊಳ್ಳುವುದು, ಇಲ್ಲಿ ಸದನಕ್ಕೆ ಬಂದರೆ ಗುರುತು ತೆಗೆಯುವುದು, ನಿಮ್ಮದು ಇದ್ಯಾವ ನೀತಿ? ಸ್ವಲ್ಪ ಹೇಳಿ. ಈಗ ನಿಮಗೆ ದೇವರ ಬಗ್ಗೆ ನಂಬಿಕೆ ಇದ್ದರೆ ಕುಂಕುಮ ಹಚ್ಚಿಕೊಳ್ಳಿ, ಇಲ್ಲವೆಂದರೆ ಬಿಡಿ. ಆವಾಗಲೇ ಕುಂಕುಮ ಹಚ್ಚಿಕೊಂಡು ಬಂದಿದ್ದರು, ಸರ್ ಇದನ್ನು ಒಂದು ಕ್ರಿಯಾಲೋಪದ ಮೂಲಕ ತರಬೇಕೆಂದಿದ್ದೆ;

ಅಧ್ಯಕ್ಷರು : ಅಲ್ಲ, ಆದರಲ್ಲಿ ಅವರಿಗೆ ನಂಬಿಕೆ ಇರುವ ಪ್ರಶ್ನೆ ಬೇರೆ, ಅವರು ಸದನಕ್ಕೆ ಬಂದಾಗ ಕುಂಕುಮ ಇದ್ದದ್ದು ನಿಜ, ನಿಮ್ಮ ರಭಸಕ್ಕೆ ಬೇವರು ಬಂದು, ಬೆವರಿನಲ್ಲಿ ಅದು ಅಳಿಸಿ ಹೋಗಿದೆ.

ಶ್ರೀ ವಾಟಾಳ್ ನಾಗಾರಾಜ್ : ತಾವು ಮುಖ್ಯಮಂತ್ರಿಗಳ ರಕ್ಷಣೆಗೆ ಹೋಗುತ್ತಿದ್ದೀರಿ, ದಯ ಮಾಡಿ ಅವರು ಈಗ ಯಾವ ದೇವರ ಪರ, ಅವರ ಮನೆದೇವರು ಯಾವುದು, ಯಾವ ದೇವರಿಗೆ ಹೋಗಿದ್ದರು, ಅದು ಹೇಗಾಗಿದೆ, ಪರಿಸ್ಥಿತಿಯನ್ನು ಸ್ವಲ್ಪ ಹೇಳಲಿ ಸರ್.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ದೇವರ ಮೇಲೆಯೇ ಚರ್ಚೆ ಮಾಡಬೇಕೆಂದರೆ, ನಾವು ಇಡೀ ದಿವಸ ಮಾಡೋಣ; ಬಸ್ ದರ ಏರಿಕೆಯ ಬಗ್ಗೆ ಮಾತನಾಡುವುದನ್ನು ಬಿಟ್ಟು, ದೇವರ ಬಗ್ಗೆ ಕೇಳುವುದಾದರೆ ನಾನು ಅದಕ್ಕೆ ತಯಾರಾಗಿದ್ದೇನೆ; ನಾವೆಲ್ಲರೂ ತಯಾರಾಗಿದ್ದೇವೆ.

ಅಧ್ಯಕ್ಷರು : ಈಗ ದೇವರನ್ನು ಬಸ್‌ಗೆ ಹತ್ತಿಸಬೇಡಿ, ಮೊದಲು ಬಸ್ ಬಂದುಬಿಡಲಿ.

ಶ್ರೀ ಜೆ.ಹೆಚ್. ಪಟೇಲ್ : ನಾನು ಯಾವುದೇ ಒಂದು ಮಂಗಳಕಾರ್ಯ ಇದ್ದಾಗ, ಸಾಮಾನ್ಯವಾಗಿ ನಾನು ಅಲ್ಲಿಗೆ ಹೋದ ತಕ್ಷಣ ಕುಂಕುಮ ಇಟ್ಟು ಆರತಿ ಎತ್ತುತ್ತಾರೆ. ನಾನು ಸಾಮಾನ್ಯವಾಗಿ ಅದನ್ನು ಒರೆಸಿಕೊಂಡುಬಿಡುತ್ತೇನೆ. ಅದು ಯಡಿಯೂರಪ್ಪನವರು ಹೇಳಿದ ಮೇಲೆ ನೆನಪಾಯಿತು, ಕುಂಕುಮ ಇರಬಾರದೆಂದು ತೆಗೆದು ಹಾಕಿದೆ, ಏನು ಮಹಾ, ದೇವರೂ ಇಲ್ಲ ದಿಂಡರೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪರವಾಗಿಲ್ಲ, ನಿಮ್ಮ ದೇವರು ನಿಮ್ಮ ಹತ್ತಿರವಿರಲಿ, ಅವರು ದೇವರು ಅವರ ಹತ್ತಿರವಿರಲಿ.

ಶ್ರೀ ಜೆ.ಹೆಚ್. ಪಟೇಲ್ : ನಿಮ್ಮದು ಬೇರೆ ಇದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನ ಏತಕ್ಕೆ ಹೇಳಿದೆ ಎಂದರೆ, ಒಂದು ಸಾರಿ ಹಚ್ಚಿಕೊಳ್ಳುತ್ತಾರೆ ಮತ್ತೊಂದು ಸಾರಿ ಕೆಡಿಸಿಕೊಳ್ಳುತ್ತಾರೆ, ನಾವು ಹಚ್ಚಿಕೊಳ್ಳುವುದೇ ಇಲ್ಲ ಇನ್ನು ಕೆಡಿಸುವುದು ಎಲ್ಲಿ ಬಂತು? ಅವರು ಹಚ್ಚಿಕೊಂಡರೆ ಯಾವಾಗಲೂ ಹಾಗೆಯೇ ಇಟ್ಟುಕೊಂಡಿರುತ್ತಾರೆ, ಅದಕ್ಕಾಗಿ ನಾನು ಹೇಳಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ದೇವರು ನಮಗೆ ಒಳ್ಳೆಯದು ಮಾಡುತ್ತಿದ್ದಾನೆ, ಈಗ ಅವರು ಪರಿಸ್ಥಿತಿ ಹೀಗೆ ಹದಗೆಟ್ಟು ಹೋಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ಈಗ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ದರವನ್ನು ಏಕಾ ಏಕಿಯಾಗಿ ಶೇಕಡ 35 ರಿಂದ 50 ರವರೆಗೆ ಹೆಚ್ಚಿಸಿದ್ದರಿಂದ.....

ಶ್ರೀ ಬಿ.ಎಸ್.ಯಡಿಯೂರಪ್ಪ : ಸರ್, ಸಾರಿಗೆ ಸಚಿವರು ಏನಾದರೂ ರಾಜೀನಾಮೆಯನ್ನು ಕೊಟ್ಟಿದ್ದಾರೋ?

ಅಧ್ಯಕ್ಷರು : ಇಲ್ಲ, ಅವರು ನನಗೆ ಹೇಳಿ ಹೋದರು, ಅವರಿಗೆ ಪರಿಷತ್ತಿನಲ್ಲಿ ಪ್ರಶ್ನೋತ್ತರ ವೇಳೆ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ನಾವು ರಾಜೀನಾಮೆ ಕೇಳುತ್ತೇವೆಂದು ಏನಾದರೂ ಗೊತ್ತಿತ್ತೋ ಏನೊ? ಮುಖ್ಯಮಂತ್ರಿಗಳಿಗೆ ಏನಾದರೂ ತಲುಪಿದೆಯೇ?

ಅಧ್ಯಕ್ಷರು : ಮೇಲ್ಮನೆಯಲ್ಲಿ ಅವರದ್ದು ಪ್ರಶ್ನೋತ್ತರವಿದೆ.

ಶ್ರೀ ವಾಟಾಳ್ ನಾಗರಾಜ್ : ಇವರು ರಾಜೀನಾಮೆ ಕೊಡುವುದಕ್ಕೆ ಎಂ.ವಿ. ರಾಮರಾಯರು ಕೆಟ್ಟುಹೋದರೇ? ಇದು ಅಷ್ಟು ಸುಲಭವೇ?

ಅಧ್ಯಕ್ಷರು : ಮೇಲ್ಮನೆಯಲ್ಲಿ ಪ್ರಶ್ನೋತ್ತರ ಇರುವುದರಿಂದ ನನ್ನ ಅನುಮತಿಯನ್ನು ಪಡೆದುಕೊಂಡು ಹೋಗಿದ್ದಾರೆ, ಸರ್ಕಾರದ ಪರವಾಗಿ ಅವರು ನೋಟ್ಸ್ ಮಾಡಿಕೊಳ್ಳುತ್ತಾರೆ, ಅಲ್ಲಿ ಮುಗಿಸಿಕೊಂಡು ತಕ್ಷಣ ಈ ಸದನಕ್ಕೆ ಬರುತ್ತಾರೆ.

+ಶ್ರೀ ಎಂ. ಮಲ್ಲಿಕಾರ್ಜನ ಖರ್ಗೆ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಪ್ರಯಾಣ ದರವನ್ನು ಏಕಾಏಕಿ ಶೇಕಡ ಮೂವತ್ತೈದರಿಂದ ಐವತ್ತರವರೆಗೆ ಹೆಚ್ಚು ಮಾಡಿದ್ದರಿಂದ ರಾಜ್ಯದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯ ವಿಚಾರವನ್ನು ಸದನದಲ್ಲಿ ಪ್ರಸ್ತಾಪಿಸುವ ಸಲುವಾಗಿ ಈ ಒಂದು ನಿಲುವಳಿ ಸೂಚನೆಯನ್ನು ನಾವು ಕಳುಹಿಸಿದ್ದೇವೆ.

12.30 ಪಿ.ಎಂ

ಆದರೆ ಪ್ರಶ್ನಾವಳಿಯನ್ನೇ ಸಸ್ಪೆಂಡ್ ಮಾಡಿ ತಾವು ತೆಗೆದುಕೊಳ್ಳಬೇಕು ಎನ್ನತಕ್ಕಂಥ ವಿನಂತಿ ಮಾಡಿಕೊಂಡಿದ್ದೇನೆ. ಆದರೆ ಪ್ರಶ್ನೋತ್ತರ ಆದಮೇಲೆ ತಾವು ತೆಗೆದುಕೊಳ್ಳಬೇಕೆಂದು ಅಪ್ಪಣೆ ಕೊಟ್ಟಮೇಲೆ ತಮ್ಮ ಅಪ್ಪಣೆ ಮೇರೆಗೆ ನಾನು ಪ್ರಸ್ತಾಪಮಾಡುತ್ತಿದ್ದೇನೆ. ಕೆ.ಎಸ್.ಆರ್.ಟಿ.ಸಿ. ದರವನ್ನು ಇವತ್ತು ಏಕಾಏಕಿ ಮಾನ್ಯ ಸಾರಿಗೆ ಸಚಿವರು ಮತ್ತು ಕೆ.ಎಸ್.ಆರ್.ಟಿ.ಸಿ.ಯ ಸಂಸ್ಥೆಯವರು ಏನು ಏರಿಸಿದ್ದಾರೆ ಇದನ್ನು ನೋಡಿದೆ ಸಾಮಾನ್ಯ ಜನರ ಬಗ್ಗೆ ಇವರಿಗೆ ಕಳಕಳಿ ಇಲ್ಲ ಎಂಬುದು ಅರ್ಥವಾಗುತ್ತದೆ. ಸಾಮಾನ್ಯ ಜನರು, ಬಡವರು, ರೈತರು ಮತ್ತು ಪಟ್ಟಣದಲ್ಲಿ ಇರತಕ್ಕಂಥ ಅನೇಕ ಕಾರ್ಮಿಕರೂ ಕೂಡ ಇವತ್ತು ಬಸ್ಸಿನಲ್ಲಿ ಅಡ್ಡಾಡುತ್ತಿದ್ದಾರೆ. ಇಂತಹ ಪರಿಸ್ಥಿತಿ ಇದ್ದಾಗ ನಾವು ಎಷ್ಟರಮಟ್ಟಿಗೆ ಇದರಲ್ಲಿ ಕೈಹಾಕಬೇಕಾಗಿತ್ತು, ಎಷ್ಟರಮಟ್ಟಿಗೆ ನಾವು ದರವನ್ನು ಏರಿಸಬಹುದಾಗಿತ್ತು ಎನ್ನತಕ್ಕಂಥ ಚಿಂತನೆ ಮಾಡದೆ, ತರಾತುರಿಯಲ್ಲಿ ಮತ್ತು ಯಾವ ವಿಷಯವನ್ನು ಕೂಡ ಗಮನಕ್ಕೆ ತೆಗೆದುಕೊಳ್ಳದೆ, ಹೋದ ಸಾರಿ ಸುಮಾರು 12 ದಿವಸ ಸದನ ನಡೆಯಿತು. ಈ ಸಮಯದಲ್ಲಿಯೂ ಕೂಡ ಯಾವ ಪ್ರಸ್ತಾವನೆಯನ್ನು ಕೂಡ ಇದರ ಬಗ್ಗೆ ಮಾಡಲಿಲ್ಲ. ಮತ್ತು ಪ್ರಶ್ನೋತ್ತರ ಕಾಲದಲ್ಲಿ, ಶೂನ್ಯ ವೇಳೆಯಲ್ಲಿ ಈ ಸದನದಲ್ಲಿ ಮತ್ತು ಆ ಸದನದಲ್ಲಿ ಕೂಡ ಅವರಿಗೆ ಕೇಳಿದಾಗ ದರ ಏರಿಸುವುದರ ಬಗ್ಗೆ ಯಾವ ಅಭಿಪ್ರಾಯವನ್ನು ಕೂಡ ಅವರು ಹೇಳಲಿಲ್ಲ. ದರ ಸಧ್ಯದಲ್ಲಿ ನಾನು ಏರಿಸುವುದಿಲ್ಲ ಎನ್ನತಕ್ಕಂಥ ಮಾತನ್ನು ಹೊರಗಡೆ ಮತ್ತು ಒಳಗಡೆ ಹೇಳಿಕೊಂಡು ಬಂದರು. ಆದರೆ ಇವತ್ತು ತರಾತುರಿಯಲ್ಲಿ ಸದನ ಈಗ ಸೇರುತ್ತಾ ಇದೆ. 17ನೇ ತಾರೀಖು ಬಜೆಟ್ ತಾವು ಮಂಡಿಸುತ್ತೀರಿ ಎನ್ನತಕ್ಕಂಥದ್ದು ಅವರಿಗೆ ಗೊತ್ತಿದ್ದರೂ ಕೂಡ ಅವರು ಒಂದು ಸುತ್ತೋಲೆಯನ್ನು ಹೊರಡಿಸಿ ಸುಮಾರು ಶೇ. 35ರಿಂದ ಶೇ.150ರವರೆಗೆ ಏರಿಸಿದ್ದಾರೆ. ನಾನು ಅಂಕಿಅಂಶ ಕೊಡುತ್ತೇನೆ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ನಮಗೆ ಒಂದು ಕಿವಿಮಾತನ್ನು ಹೇಳಿದ್ದಾರೆ. ಯಾರೇ ಬರಬೇಕಾದರೆ ಈ ಸದನದಲ್ಲಿ ಅಭ್ಯಾಸ ಮಾಡಿಕೊಂಡು ಬರಬೇಕು, ಅಂದರೆ ನಾವು ಕೇಳುತ್ತೇವೆ. ಸರಿಯಾಗಿ ಅಭ್ಯಾಸ ಮಾಡಿ ಬಂದ ಮೇಲೆ ಅದಕ್ಕೆ ಉತ್ತರವನ್ನು ಕೊಡುವುದಕ್ಕೆ ನಮಗೆ ಆಗುತ್ತದೆ ಎನ್ನತಕ್ಕಂಥ ಒಂದು ಪಾಠವನ್ನು ನಮಗೆ ಹೇಳಿ ಕೊಟ್ಟಿದ್ದಾರೆ. ನಾವು ಅದಕ್ಕೆ ಸರಿಯಾಗಿ ಅಭ್ಯಾಸ ಮಾಡಿಕೊಂಡು ಇವತ್ತು ಕೇಳಲಿಕ್ಕೆ ಬಂದಿದ್ದೇವೆ. ಆದರೆ ಅವರು ಈ ರೀತಿಯಾಗಿ ಪದೇ ಪದೇ ಏತಕ್ಕೆ ಹೇಳುತ್ತಾರೋ ಗೊತ್ತಿಲ್ಲ.

ಇಲ್ಲೂ ಹೇಳಿದರು, ಮತ್ತು ನಾವು ಹೊರಗಡೆ ಹೋದಾಗ ಮತ್ತು ಅನೇಕ ಪ್ರೆಸ್ ಕಾನ್‌ಫರೆನ್ಸ್‌ನಲ್ಲೂ ಕೂಡ ಹೇಳುತ್ತಾರೆ. ಸರಿಯಾಗಿ ಓದಿಕೊಂಡು ಬರುವುದಿಲ್ಲ, ಶಾಸಕರು ನೋಡುವುದಿಲ್ಲ, ಗಮನ ಈ ಕಡೆ ಹರಿಸುವುದಿಲ್ಲ ಎಂದು ಇದು ನನಗೆ ಸ್ವಲ್ಪ ಏನು ಅನ್ನಿಸುತ್ತದೆ ಎಂದರೆ ಈ ರೀತಿಯಾಗಿ ಮಾತನಾಡಿದರೆ ಶಾಸಕರನ್ನು ತಾವು ಹಗುರವಾಗಿ ನೋಡುತ್ತೀರಿ ಎಂಬ ಅಭಿಪ್ರಾಯ ಬರುತ್ತದೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಅಧ್ಯಕ್ಷರೆ, ಶಾಸಕರಿಗೆ ಯಾವುದೇ ರೀತಿಯಿಂದ ಅಗೌರವ ಆಗಬೇಕು ಎಂದು ಅಲ್ಲ, ಹೇಳಿದ್ದುದು ನನಗೆ ಸ್ವಲ್ಪ ಅನುಭವ ಇರುವುದರಿಂದ ಮತ್ತು 25-30ವರ್ಷಗಳಿಂದ ಈ ಸದನದಲ್ಲಿರುವುದರಿಂದ ಹೊಸದಾಗಿ ಬಂದಂತವರಿಗೆ ಅವರನ್ನು ಏನು ಅವಮಾನ ಮಾಡಬೇಕಂತಲ್ಲ, ಓದಿಕೊಂಡು ಬರಬೇಕು, ಸರಿಯಾಗಿ ಮಂಡನೆ ಮಾಡಬೇಕು ಎಂದು ಹೇಳಿದೆ ಅಷ್ಟೇ, ಅವಮಾನ ಮಾಡಬೇಕು ಎಂದು ಅಲ್ಲ. ನಾನು ಹೇಳಿದಾಗ ತಾವೂ ಇದ್ದಿರಿ.. I did not mean any disrespect to anybody.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದ್ದರು, ಆದರೆ ಪತ್ರಿಕೆ ಹೇಳಿಕೆಯಲ್ಲಿ ಕೂಡ ಅನೇಕ ಸಲ ಬಂದಿದೆ, ಬಹುಶಃ ನಮ್ಮ ಸದಸ್ಯರೂ ಕೂಡ ಓದಿರಬಹುದು. ನಾನು ಈ ಮಾತನ್ನು ಏತಕ್ಕೆ ಹೇಳುತ್ತೇನೆಂದರೆ ಅವರವರ ಧಾಟಿಯಲ್ಲಿರುತ್ತದೆ. ಪ್ರೆಸೆಂಟೇಷನ್ ಮಾಡುವುದೂ ಕೂಡ ಅವರವರ ಧಾಟಿ; ಅವರವರ ತಿಳುವಳಿಕೆಗೆ ಅನೇಕ ಸಾರಿ, ಕೆಲವು ಸಲ ಏನಾಗುತ್ತದೆಂದರೆ ತಾವೇ ಮೊನ್ನೆ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರಿಗೆ ಹೋಲಿಸಿದಾಗ ಒಂದು ಮಾತನ್ನು ಹೇಳಿದ್ದಿರಿ. ವೀರೇಂದ್ರ ಪಾಟೀಲರು ಕೆಲವು ವಿಷಯಗಳ ಬಗ್ಗೆ ಐ.ಎ.ಎಸ್. ಆಫೀಸರ್ ತರಹ ಪ್ರತಿಯೊಂದು ವಿಷಯಗಳನ್ನು ಮೆಟಿಕ್ಯುಲೆಸ್ ಆಗಿ ನೋಡಿಕೊಂಡು ಅದನ್ನು ಅಭ್ಯಾಸ ಮಾಡಿ ಆಮೇಲೆ ಉತ್ತರ ಕೊಡುತ್ತಿದ್ದರು ಎಂದು. ನಾವು ಕೆಲವು ಸಲ ಸರಾಸರಿ ಗ್ಲಾನ್ಸ್ ಮಾಡಿಕೊಂಡು, ನೋಡಿಕೊಂಡ ಮೇಲೆ ಹೇಳತಕ್ಕಂಥದ್ದೂ ಕೂಡ ಸ್ವಭಾವ ಇದೆ. ಹಾಗೆ ಅನೇಕ ಸಾರಿ ಅವರವರ ಒಂದು ಪದ್ಧತಿಯನ್ನು ಉಪಯೋಗ ಮಾಡುತ್ತಾರೆ. ಅದಕ್ಕೆ ನಾನು ಇವತ್ತು ಎಲ್ಲಾ ಸ್ಟಾಟಿಸ್ಟಿಕ್ಸ್ ಏನು ಬೇಕು, ನಿಮ್ಮ ಇಲಾಖೆ ಯಾವ ರೀತಿಯಾಗಿ ನಡೆದಿದೆ, ಅಲ್ಲಿ ಆಡಳಿತ ಯಾವ ರೀತಿಯಾಗಿ ನಡೆದಿದೆ ಎನ್ನತಕ್ಕಂಥ ವಿವರವನ್ನು ನಾವು ಸಂಪೂರ್ಣವಾಗಿ ಕೊಡುತ್ತೇವೆ. ಮತ್ತು ನಾವು ಹೊರಗಡೆ ಶೇ. 25 ರಿಂದ ಶೇ. 35 ಮಾತ್ರ ನಾವು ಸೀಮಿತವಾಗಿದ್ದೇವೆ ಎನ್ನತಕ್ಕಂಥ ಹೇಳಿಕೆಯನ್ನು ಕೊಡುತ್ತಿದ್ದಿರಿ, ಆ ಅಂಕಿಸಂಖ್ಯೆಯನ್ನು ಕೊಡುತ್ತೇನೆ. ಸುಮಾರು 150 ಪರ್ಸೆಂಟ್‌ವರೆಗೆ ತಾವು ಹೆಚ್ಚು ಮಾಡಿದ್ದೀರಿ ಎನ್ನತಕ್ಕಂಥ ಮಾತನ್ನು ಕೂಡ ಇಲ್ಲಿ ನಾನು ಪ್ರಸ್ತಾಪ ಮಾಡುತ್ತೇನೆ. ಹೀಗೆ ಕೆ.ಎಸ್.ಆರ್.ಟಿ.ಸಿ. ಇವತ್ತೇ ಹೊಸದಾಗಿ ಸೃಷ್ಟಿಯಾದಂಥದ್ದಲ್ಲ. ಅಥವಾ ಅಲ್ಲಿ ಲಾಸಸ್ ಆಗತಕ್ಕಂಥದ್ದೂ ಕೂಡ ನಿಮ್ಮ ಕಾಲದಲ್ಲೇ ಎಂದು ನಾನು ಹೇಳುತ್ತಿಲ್ಲ, ಇದು ಅಕ್ಯುಮುಲೇಟೆಡ್ ಲಾಸ್. ನೀವು ಹಿಂದೆ 6-7 ವರ್ಷಗಳ ರಾಜ್ಯಭಾರ ಮಾಡಿದ್ದೀರಿ. ಪುನಃ ನಾನು ಶಾಸಕನಾಗಿ ಬಂದು 10ನೇ ಮಾರ್ಚಿಗೆ 25 ವರ್ಷ ಮುಗಿದು 26 ವರ್ಷಕ್ಕೆ ಕಾಲಿಡುತ್ತಿದ್ದೇನೆ. ನಾವು ನೋಡಿದ ಹಾಗೆ 10 ವರ್ಷ ಹೆಚ್ಚು ಕಡಿಮೆ ನೀವೇ ರಾಜ್ಯ ಆಳುತ್ತಿದ್ದೀರಿ. ಈ ಒಂದು 8 ವರ್ಷದಲ್ಲಿ ಎರಡೂವರೆ ವರ್ಷ ಹಿಡಿದರೆ ಬಹುಶಃ ನಮ್ಮ ಶಾಸಕರ

ಜೀವನದಲ್ಲಿ ನಿಮ್ಮದು 10 ವರ್ಷ, ನಮ್ಮದು 15 ವರ್ಷ ಹೆಚ್ಚು ಕಡಿಮೆ ಆದರೆ ಎಷ್ಟು ಜವಾಬ್ದಾರರು ಇವತ್ತು ನೀವು ಬರೀ ಕಾಂಗ್ರೆಸ್ ಪಕ್ಷದ ಮೇಲೆ ಹಾಕುತ್ತೀರೋ ಅದರಷ್ಟೇ ಹೆಚ್ಚಿನ ಜವಾಬ್ದಾರಿ ನಿಮ್ಮ ಮೇಲೆ ಇದೆ ಎನ್ನತಕ್ಕಂಥದ್ದನ್ನು ನಾನು ಅರಿವು ಮಾಡಿಕೊಡುತ್ತೇನೆ. ಆದರೆ ಇಷ್ಟೊಂದು ಇದ್ದರೂ ಕೂಡ ಇದು ಒಂದು ಸರ್ವೀಸ್ ಓರಿಯೆಂಟೆಡ್ ಆರ್ಗನೈಸೇಷನ್; ಈ ಆಸ್ಪತ್ರೆಯಾಗಲೀ, ಸಿಟಿ ಬಸ್ ಆಗಲೀ ಅಥವಾ ಹಳ್ಳಿ ಬಸ್ಸನ್ನು ಕೊಡತಕ್ಕಂಥದಾಗಲೀ, ಇದೆಲ್ಲವೂ ಕೂಡ ನಾವು ಜನರಿಗೆ ಅನುಕೂಲ ಮಾಡಿಕೊಡತಕ್ಕಂಥ ಒಂದು ಸಂಸ್ಥೆಗಳು. ಇವು ಸೋಷಿಯಲ್ ಸರ್ವೀಸಸ್ ಕ್ವಾರ್ಸ್. ಇದರಿಂದ ನಮಗೆ ಲಾಭ ಬರುತ್ತದೆ ಎನ್ನತಕ್ಕಂಥದ್ದಿಲ್ಲ. ಅನೇಕ ಸಾರಿ ಲುಕ್ಸಾನಾಗಬಹುದು. ಅಥವಾ ನಾವು ಅಪೇಕ್ಷೆ ಪಟ್ಟಷ್ಟು ಲಾಭ ಸಂಪಾದನೆ ಮಾಡುವುದಾಗದೇ ಇರಬಹುದು. ಆದರೆ ಹೆಚ್ಚು ಕಡಿಮೆ ಯಾವುದೋ ಒಂದು ಸರ್ಕಾರ ಇದ್ದಾಗ ಅಥವಾ ಸಂಸ್ಥೆ ನಡೆಸುವಾಗ ನೋ ಲಾಸ್, ನೋ ಪ್ರಾಫಿಟ್‌ನಲ್ಲಿ ನಡೆಸತಕ್ಕಂಥ ಆಸೆ ನಮಗೆಲ್ಲರಿಗೂ ಇರುತ್ತದೆ. ಆದರೆ ಆ ನೋ ಲಾಸ್-ನೋ ಪ್ರಾಫಿಟ್ ಮಾಡಲಿಕ್ಕೆ ಏನು ಮಾಡಬೇಕು? ಆಮೇಲೆ ಆ ಸಂಸ್ಥೆಯಲ್ಲಿ ಏನು ತೊಂದರೆಗಳಿವೆ, ಎಷ್ಟರಮಟ್ಟಿಗೆ ನೀವು ಆಸಕ್ತಿವಹಿಸಿ ಅದರಲ್ಲಿ ಕೆಲಸ ಮಾಡಿದ್ದೀರಿ, ಇವತ್ತು ಏನು 30-100-150 ಪರ್ಸೆಂಟ್ ಬಸ್ ದರವನ್ನು ಏರಿಸಿದ್ದೀರಿ ಅದನ್ನು ಎರಡೂವರೆ ವರ್ಷದಲ್ಲಿ ವರ್ಷ ಅಂದರೆ ಶೇ. 50ರಷ್ಟು ಆಗಿಹೋಯಿತು. ಈ ಅವಧಿಯಲ್ಲಿ ಅರ್ಧ ನಿಮ್ಮ ಅವಧಿ ಮುಗಿದ್ದರೂ ಕೂಡ ಇದನ್ನು ಸುಧಾರಣೆ ಮಾಡಲಿಕ್ಕೆ ನಿಮಗೆ ಆಗಲಿಲ್ಲ. ಅಥವಾ ಚುನಾವಣೆಗೋಸ್ಕರ, ನೀವು ಪಾರ್ಲಿಮೆಂಟ್ ಚುನಾವಣೆಗೋಸ್ಕರ, ಸ್ಥಳೀಯ ಸಂಸ್ಥೆಗಳ ಚುನಾವಣೆಗೋಸ್ಕರ ನೀವು ಪೋಸ್ಟ್‌ಪೋನ್ ಮಾಡಿಕೊಂಡು ಬಂದು ಇವತ್ತಿನ ದಿವಸ ಈ ತಾರೀಖಿನಲ್ಲಿ ನೀವು ಎಷ್ಟೊಂದು ದರವನ್ನು ಏರಿಸಬೇಕೆಂದರೆ ನನ್ನಗನ್ನಿಸುತ್ತದೆ, ನಿಮಗೆ ಈ ರಾಜ್ಯದ ಪ್ರಜೆಗಳು, ರೈತರು ಮತ್ತು ಬಡವರ ಬಗ್ಗೆ ಆಗಲೀ ಕಾಳಜಿ ಇಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳಬೇಕಾಗುತ್ತದೆ. ನೀವು ಹೇಳಬಹುದು, ಅವರು ಕೊಡುವುದಕ್ಕೆ ತಯಾರಾಗಿದ್ದಾರೆ, ನಾವು ತೆಗೆದುಕೊಳ್ಳುವುದಕ್ಕೆ ತಯಾರಿದ್ದೇವೆ, ಅವರು ಒಲ್ಲೆ ಅಂದರೆ ಬಿಟ್ಟುಹೋಗಲಿ, ನಡೆದುಕೊಂಡು ಹೋಗಲಿ, ಈ ಧಾಟಿಯಲ್ಲಿ ನಿಮ್ಮ ಸರ್ಕಾರ, ನೀವು ಮಾತನಾಡುತ್ತೀರಿ ಎಂಬುದು ನನಗೆ ಗೊತ್ತಿದೆ. ಏಕೆಂದರೆ ಯಾವಾಗಲೂ ನಾವು ಕೇಳಿದಾಗ, ಅವರಿಗೆ ದುಬಾರಿಯಾದರೆ ನಾವು ಏನು ಮಾಡೋಣ? ಯಾರಿಗೆ ಶಕ್ತಿಯಿದೆ ಅವರು ಕೊಟ್ಟು ಹೋಗುತ್ತಾರೆ ಎನ್ನತಕ್ಕಂಥ ಧಾಟಿ ಈ ಸರ್ಕಾರದ್ದು ಇದೆ. ಹಾಗಲ್ಲ, ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಎಂದು ಹೇಳಿ ನಾವು ನೀವು ಇಲ್ಲಿ ಸೇರಿದ್ದೇವೆ. ಸಾಧ್ಯವಾದಷ್ಟು ಮಟ್ಟಿಗೆ ಜನರಿಗೆ ಸಹಾಯವಾಗಬೇಕು, ಅನುಕೂಲವಾಗಬೇಕು, ಬಡತನದಲ್ಲಿ ಅವರಿಗೆ ಸಹಾಯಕರಾಗಿ ನಡೆದುಕೊಳ್ಳಬೇಕೆಂಬುದೇ ನಮ್ಮ ಗುರಿ ಇರಬೇಕೇ ಹೊರತಾಗಿ ಅವರನ್ನು ಶೋಷಣೆ ಮಾಡಬೇಕು, ಅವರನ್ನು ತುಳಿಯಬೇಕು, ಅಥವಾ ಅವರನ್ನು ಅಸಹಾಯಕರನ್ನಾಗಿ ಮಾಡಬೇಕು, ಅವರೆಲ್ಲರೂ ಕೂಡ ಬೀದಿಯ ಮೇಲೆ ನಡೆಯಬೇಕು, ಬಸ್ಸಿನಲ್ಲಿ ಯಾರೂ ಕೂಡ ಹೋಗಬಾರದು ಎನ್ನತಕ್ಕಂಥ ಒಂದು ಗುರಿಯನ್ನು, ಧೋರಣೆಯನ್ನು, ಪಾಲಿಸಿಯನ್ನಿಟ್ಟು ಕೊಂಡರೆ ಖಂಡಿತವಾಗಿಯೂ ಇದು ಯಾರಿಗೂ ಕೂಡ ಒಳ್ಳೆಯದಾಗುವುದಿಲ್ಲ; ಜನ ಇದರ ಬಗ್ಗೆ ನಿಮಗೆ ಸರಿಯಾಗಿ ಪಾಠ ಕಲಿಸುತ್ತಾರೆ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈಗಾಗಲೇ

ತಮಗೆ ಜನ ಪಾಠ ಕಲಿಸಿದ್ದಾರೆ. ಆದರೂ ಕೂಡ ಇನ್ನೂ ಕೆಲವು ಮೂಡಿಲ್ಲ. ಅದು ಏಕೆ ಏನೋ ನನಗೆ ಗೊತ್ತಾಗುತ್ತಿಲ್ಲ. ಇವತ್ತು ಕೆ.ಎಸ್.ಆರ್.ಟಿ.ಸಿ.ಯ ಪರಿಸ್ಥಿತಿ ಏನು ಆಗಿದೆ? ಮಾನ್ಯ ಅಧ್ಯಕ್ಷರೆ, ಇದನ್ನು ಸರ್ಕಾರದ ಗಮನಕ್ಕೆ ತರುತ್ತೇನೆ ಮತ್ತು ತಮ್ಮ ಗಮನಕ್ಕೆ ಕೂಡ ತರುತ್ತೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು 106 ಕೆ.ಎಸ್.ಆರ್.ಟಿ.ಸಿ.ಯ ಡಿಪೋಗಳು ಕೆಲಸ ಮಾಡುತ್ತಿವೆ. ಇದರಲ್ಲಿ ಸುಮಾರು 11065 ಬಸ್ಸುಗಳು ಇವತ್ತು ಓಡಾಡುತ್ತಿವೆ. ಈ 11.065 ಬಸ್ಸುಗಳನ್ನು ಮೇಂಟೇನ್ ಮಾಡತಕ್ಕಂಥ ಜವಾಬ್ದಾರಿ ಈ 106 ಡಿಪೋಗಳದ್ದಾಗಿರುತ್ತದೆ. ಇದರಲ್ಲಿ ಸುಮಾರು 1254 ಬಸ್ಸುಗಳು ಕಂಡೆಮ್ ಆಗಿವೆ. ಅದರಲ್ಲಿ ಕೆಲವು ಬಸ್ಸುಗಳನ್ನು ವರ್ಷವರ್ಷ ಹರಾಜು ಹಾಕುತ್ತಾರೆ. 1995-96ನೇ ಸಾಲಿನಲ್ಲಿ 1476 ಬಸ್ಸುಗಳನ್ನು ಹರಾಜು ಮಾಡಲಾಗಿದೆ. 1993-94ರಲ್ಲ ಹರಾಜು ಮಾಡಿದ ಬಸ್ಸುಗಳ ಸಂಖ್ಯೆ 734 ಇತ್ತು. ಆದರೆ ಇವತ್ತು ಬಸ್ಸುಗಳ ಹರಾಜು ಮಾಡತಕ್ಕಂಥ ಸಂಖ್ಯೆ, ಕಂಡೆಮ್ ಆಗತಕ್ಕಂಥದ್ದನ್ನು ನಾವು ನೋಡಿದರೆ ಹಿಂದೆ ಇದ್ದುದ್ದಕ್ಕಿಂತ ಎರಡರಷ್ಟು ಅಂದರೆ 1476 ಬಸ್ಸುಗಳನ್ನು ಹರಾಜು ಮಾಡಿದ್ದಾರೆ. ಕಳೆದ ವರ್ಷ 1319 ಹೊಸ ಬಸ್ಸುಗಳನ್ನು ಖರೀದಿ ಮಾಡಿದ್ದಾರೆ. ಅಂದರೆ ಹಳ್ಳಿ ಪ್ರದೇಶದಲ್ಲಿ ಸುಮಾರು 11,065 ಬಸ್ಸುಗಳು ಓಡಾಡತಕ್ಕಂಥದ್ದು ಇವೆ. ಬಿ.ಟಿ.ಎಸ್.ನಲ್ಲಿ ಸುಮಾರು 2,008 ಬಸ್ಸುಗಳು ಇವೆ. ಆ ಬಿ.ಟಿ.ಎಸ್.ಬಸ್ಸುಗಳು ಸುಮಾರು 9 ಲಕ್ಷ ಕಿ.ಮೀ.ನಷ್ಟು ಬೇರೆ ಬೇರೆ ರೂಟುಗಳಲ್ಲಿ ಓಡಾಡುತ್ತಿವೆ. ಇದರಲ್ಲಿ ಒಂದು ವೆಹಿಕಲ್‌ನ ಪರ್ಸೆಂಟೇಜ್ ಅಂಡ್ ಯುಟಿಲೈಸೇಷನ್ ಎಷ್ಟು ಇದೆಯೆಂದರೆ ಹೆಚ್ಚು ಕಡಿಮೆ ಅದರ ಯುಟಿಲೈಸೇಷನ್ 89 ಪರ್ಸೆಂಟ್ ಇದೆ. ಇದನ್ನು ಬೇರೆ ರಾಜ್ಯಗಳಿಗೆ ನಾವು ಹೋಲಿಸಿ ನೋಡಿದಾಗ ಇಲ್ಲಿ ಯುಟಿಲೈಸೇಷನ್ ಕೂಡ ಮಾಕ್ಸಿಮಮ್ ಇದೆ. ಮಾಕ್ಸಿಮಮ್ ಉಪಯೋಗ ಇದ್ದರೂ ಕೂಡ ಇವತ್ತು ಕೆ.ಎಸ್.ಆರ್.ಟಿ.ಸಿ.ಯಲ್ಲಿ ಏಕೆ ಲಾಸ್ ಆಗುತ್ತಿದೆ? ಮಾಕ್ಸಿಮಮ್ ಯುಟಿಲೈಷನ್ ಇದ್ದರೂ ಕೂಡ ಸೋರಿಕೆ ಪ್ರಮಾಣ ಏಕೆ ಹೆಚ್ಚಿಗೆ ಇದೆ ಎನ್ನತಕ್ಕಂಥದ್ದಕ್ಕೆ ಉತ್ತರವನ್ನು ತಾವು ಕೊಡಬೇಕು. ಕೆ.ಎಸ್.ಆರ್.ಟಿ.ಸಿ.ಯಲ್ಲಿ ಆಗತಕ್ಕಂಥ ಸೋರಿಕೆಯನ್ನು ಸರಿಪಡಿಸದೆ, ಅಲ್ಲಿ ಆಗತಕ್ಕಂಥ ವಂಚನೆ, ಮೋಸ ಏನಿದೆ ಅದರ ಬಗ್ಗೆ ತಾವು ಚಿಂತನೆ ಮಾಡದೆ ತರಾತುರಿಯಲ್ಲಿ ಶೇಕಡ 150ರಷ್ಟು ದರವನ್ನು ನೀವು ಇವತ್ತ ಹೆಚ್ಚಿಗೆ ಮಾಡಿದ್ದೀರೆಂದರೆ, ಇದಕ್ಕೆ ನಾವು ನಿಮಗೆ ಹೇಳಬೇಕು? ಅಂದರೆ ನೇರವಾಗಿ ಜನರಿಗೆ ಬಸ್ ದರವನ್ನು ಹೆಚ್ಚಿಗೆ ಮಾಡಿದ್ದಕ್ಕಿಂತಲೂ ಅವರಿಗೆ ದರೋಡೆ, ಸುಲಿಗೆ ಮಾಡಿದ ಹಾಗೆ, ಸರ್ಕಾರ ನೇರವಾಗಿ ಅವರ ಜೇಬಿನಿಂದ ಹಣವನ್ನು ಕಿತ್ತುಕೊಂಡು ಹಾಗೆ ಎಂದು ನಾವು ಹೇಳಬೇಕಾಗುತ್ತದೆ. ಅಂತಹ ಒಂದು ಪರಿಸ್ಥಿತಿಯನ್ನು ಕೆ.ಎಸ್.ಆರ್.ಟಿ.ಸಿಯವರು ನಿರ್ಮಾಣ ಮಾಡಿದ್ದಾರೆ. ಈ ಬಸ್ಸು ದರ ಹೆಚ್ಚು ಮಾಡಿದ್ದರಿಂದ ಕೇವಲ ಕೆ.ಎಸ್.ಆರ್.ಟಿ.ಸಿ. ಬಸ್ಸಿನಲ್ಲಿ ಓಡಾಡತಕ್ಕಂಥವರಿಗೆ ಮಾತ್ರ ಅನಾನುಕೂಲವಾಗಿದೆ ಎಂದು ತಿಳಿದುಕೊಂಡರೆ ತಪ್ಪಾಗುತ್ತದೆ. ಕರ್ನಾಟಕ ರಾಜ್ಯದ ಸುಮಾರು 5 ಕೋಟಿ ಜನರಲ್ಲಿ ಪ್ರತಿ ದಿನ 71 ಲಕ್ಷ ಜನರು ಕೆ.ಎಸ್.ಆರ್.ಟಿ.ಸಿ ಬಸ್ಸುಗಳಲ್ಲಿ ಓಡಾಡುತ್ತಿದ್ದಾರೆ. ಖಾಸಗಿ ಬಸ್ಸುಗಳು, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿಗಳು, ಕಾರುಗಳು ಇವುಗಳಲ್ಲಿ ಓಡಾಡುವವರನ್ನು ಲೆಕ್ಕ ಹಾಕಿಕೊಂಡರೆ ಸುಮಾರು 62 ಲಕ್ಷ ಜನ ಇದರಲ್ಲಿ ಓಡಾಡುತ್ತಿದ್ದಾರೆ. ಅಂದರೆ ಸರಾಸರಿ ಸುಮಾರು ಒಂದೂವರೆ ಕೋಟಿ ಜನ ಈ ಬಸ್ಸು ಪ್ರಯಾಣದ ದರ ಏರಿಕೆಯಿಂದ ತೊಂದರೆಗೊಳಗಾಗಿದ್ದಾರೆ.

ಏಕೆಂದರೆ ಪ್ರಯಾಣ ದರ ಏರಿಕೆ ಕೇವಲ ಕೆ.ಎಸ್.ಆರ್.ಟಿ.ಸಿ ಬಸ್ಸಿನವರಿಗೆ ಸೀಮಿತವಾಗಿಲ್ಲ. ಈ ಪ್ರಯಾಣ ದರದ ಪರಿಣಾಮ ಏನಾಗಿದೆಯೆಂದರೆ, ನೀವು ಕೆ.ಎಸ್.ಆರ್.ಟಿ.ಸಿ. ಬಸ್ಸಿನ ಪ್ರಯಾಣ ದರವನ್ನು ಹೆಚ್ಚಿಗೆ ಮಾಡಿದರೆ ಸ್ವಾಭಾವಿಕವಾಗಿ ಖಾಸಗಿ ಬಸ್ಸಿನವರು ಪ್ರಯಾಣ ದರವನ್ನು ಹೆಚ್ಚಿಗೆ ಮಾಡುತ್ತಾರೆ. ಇವರ ಜೊತೆಗೆ ಟ್ಯಾಕ್ಸಿಯವರು, ಮ್ಯಾಕ್ಸಿಕ್ಯಾಬ್‌ನವರು ಇವರೆಲ್ಲಾ ನಿಮ್ಮ ದಾರಿಯನ್ನು ತುಳಿಯುವುದಲ್ಲದೆ ನಿಮಗಿಂತಲೂ ಹೆಚ್ಚಿಗೆ ಪ್ರಮಾಣದಲ್ಲಿ ದರವನ್ನು ಏರಿಸುತ್ತಾರೆ. ಕೊನೆಗೆ ಆಟೋದವರೂ ಕೂಡ ಹೆಚ್ಚಿಗೆ ದರವನ್ನು ವಸೂಲಿ ಮಾಡುತ್ತಾರೆ. ಏಕೆಂದರೆ ನಮ್ಮಲ್ಲಿ ಲೋಕಲ್ ಬಸ್ಸುಗಳ ಪ್ರಯಾಣ ದರ ಹೆಚ್ಚಿಗೆ ಮಾಡಿದ ಮೇಲೆ ಆಟೋ ಪ್ರಯಾಣ ದರ ಕೂಡ ಹೆಚ್ಚಿಗೆ ಆಗುತ್ತದೆ. ಹಾಗೆಯೇ ಕಾರುಗಳಲ್ಲಿನ ಪ್ರಯಾಣ ದರ ಕೂಡ ಹೆಚ್ಚುತ್ತದೆ. ಇಂತಹ ಒಂದು ಪರಿಸ್ಥಿತಿಯನ್ನು ತಯಾರು ಮಾಡಿದಂಥವರು, ಅಥವಾ ನಿರ್ಮಾಣ ಮಾಡಿದಂಥವರು ಯಾರು ಎಂದರೆ - ತಾವು. ಅಂದರೆ ಸುಮಾರು ಒಂದೂವರೆ ಕೋಟಿ ಜನರಿಗೆ ತೊಂದರೆ ಕೊಡತಕ್ಕಂಥ ಕೆಲಸವನ್ನು ಈ ಸರ್ಕಾರ ಮಾಡಿದೆ. ಮತ್ತು ಈ ಸರ್ಕಾರ ಏನು ಹೇಳಿಕೊಳ್ಳುತ್ತದೆ ಎಂದರೆ ' ನಾವು ಬಡವರ ಪರವಾಗಿ ಇದ್ದೇವೆ, ಯಾವಾಗಲೂ ನಾವು ಬಡವರ ಪರವಾಗಿ ಕೆಲಸ ಮಾಡುತ್ತೇವೆ, ಬಡವರಿಗೆ ಸಹಾಯ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ನಿನ್ನೆ ಅನೇಕ ಸಾರಿ ಹೇಳಿದರು, ಮತ್ತು ಬಜೆಟ್ ಮಂಡನೆ ಮಾಡಿದಾಗಲಂತೂ' ನಮ್ಮ ಸರ್ಕಾರ ಕಡು ಬಡವರ ಪರವಾಗಿ ಇದೆ, ಹಿಂದುಳಿದವರ ಪರವಾಗಿ ಇದೆ ಎಂದು ಹೇಳಿದರು. ಅಂದರೆ ಒಂದು ಜೋಬಿನಿಂದ ಮೊದಲೇ ಕಿತ್ತುಕೊಳ್ಳುವುದು ನಂತರ ಬಜೆಟ್ ದಿವಸ ಅದನ್ನು ಕೊಡುವುದು, ಇದು ಹೇಗಿದೆಯೆಂದರೆ - ಒಂದು ಕಡೆ ಕೆ.ಇ.ಬಿ.ಯಿಂದ ವಿದ್ಯುತ ದರಗಳನ್ನು ಹೆಚ್ಚಿಗೆ ಮಾಡಿಸಿ ಸುಮಾರು 700 ರಿಂದ 800 ಕೋಟಿ ರೂಪಾಯಗಳನ್ನು ಹೆಚ್ಚಿಗೆ ಮಾಡಿದರು ಮತ್ತು ಕೆ.ಎಸ್.ಆರ್.ಟಿ.ಸಿ. ಬಸ್ಸಿನ ಪ್ರಯಾಣ ದರವನ್ನು ಹೆಚ್ಚಿಗೆ ಮಾಡಿ ಸುಮಾರು 130 ಕೋಟಿ ರೂಪಾಯಿಗಳನ್ನು ಹೆಚ್ಚಿಸಿಕೊಂಡರು. ಈ ರೀತಿ ಸುಮಾರು 1000 ಕೋಟಿ ರೂಪಾಯಿಗಳನ್ನು ಬಡವರ ಜೇಬಿನಿಂದ ಕಿತ್ತುಕೊಂಡು ನಾವು ಸಬ್ಸಿಡಿ ಕೊಟ್ಟಿದ್ದೇವೆ, ಹೊಸ ಕಾರ್ಯಕ್ರಮ ಕೊಟ್ಟಿದ್ದೇವೆ, ಮನೆಗಳನ್ನು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ನಿನ್ನೆ ದಿವಸ ಹೇಳಿದರು. ಮತ್ತು ರಿಲೀಫ್ ಏನು ಕೊಟ್ಟಿದ್ದೀರಿ ಎನ್ನುವ ಬಗ್ಗೆ ನಾನು ಬಜೆಟ್‌ನ ಮೇಲೆ ಮಾತನಾಡುವಾಗ ಹೇಳುತ್ತೇನೆ. ಆದರೆ ಇಲ್ಲಿ ಕೂಡ ಎಲೆಕ್ಟ್ರಾನಿಕ್ಸ್ ಗೂಡ್ಸ್ ಇಟ್ಟುಕೊಂಡು ಜೂಜು ಆಡುವವರಿಗೆ ಸುಮಾರು 400 ಕೋಟಿ ರೂಪಾಯಿ ಹಾಕಿದ್ದರು ಅದರಿಂದ ಬಡವರಿಗೆ ಏನೂ ರಿಲೀಫ್ ಸಿಕ್ಕಿಲ್ಲ. ಎಲ್ಲ ದೊಡ್ಡವರಿಗೆ ಮಾತ್ರ ರಿಲೀಫ್ ಸಿಕ್ಕಿದೆ. ಇಲ್ಲಿಯವರೆಗೆ ವಿದ್ಯುಚ್ಛಕ್ತಿ ಬಳಸತಕ್ಕಂಥ ರೈತನಿಗೆ ತೆರಿಗೆ ಇರಲಿಲ್ಲ, ಈಗ ಅವನಿಗೆ ತೆರಿಗೆ ಹಾಕಿದ್ದಾರೆ. ಯಾವ ಬಡವ 2 ರೂಪಾಯಿಗಳಲ್ಲಿ ಪ್ರಯಾಣ ಮಾಡುತ್ತಿದ್ದ ಅವನು ಇವತ್ತು 5 ರೂಪಾಯಿ ಕೊಟ್ಟು ಪ್ರಯಾಣಿಸಬೇಕಾಗುತ್ತದೆ. ಇಂಥ ಪರಿಸ್ಥಿತಿಯನ್ನು ಇವತ್ತು ಸರ್ಕಾರ ಮಾಡಿ ಇನ್ನೊಂದು ಕಡೆ ' ನಾವು ಬಡವರಿಗೆ ಸಹಾಯ ಮಾಡಿದ್ದೇವೆ' ಎನ್ನತಕ್ಕಂಥದ್ದನ್ನು ಹೇಳುತ್ತಿದ್ದಾರೆ. ಇನ್ನು ಆಕ್ಯುಪೆನ್ಸಿ ರೇಷಿಯೋ ಕೂಡ ಸುಮಾರು ಶೇಕಡ 71ರಷ್ಟು ಇದೆ. ಯಾವುದೇ ಒಂದು ಹೋಟೆಲ್ ಆಗಲಿ, ಯಾವುದೇ ಒಂದು ಬಸ್ಸು ಆಗಲಿ, ಯಾವುದೇ ಒಂದು ಟ್ಯಾಕ್ಸಿ ಆಗಲಿ ಅದರ ಆಕ್ಯುಪೆನ್ಸಿ 16 ಪರ್ಸೆಂಟ್ ಇದ್ದರೆ, ಅದು ಲಾಭದಲ್ಲಿ ನಡೆಯುತ್ತದೆ ಎನ್ನುವುದನ್ನು ಎಲ್ಲಾ ಎಕನಾಮಿಸ್ಟ್‌ಗಳು

ಹೇಳುತ್ತಾರೆ ಮತ್ತು ಎಕನಾಮಿಕ್ಸ್ ಬಗ್ಗೆ ಜ್ಞಾನ ಇರತಕ್ಕಂಥ ಜನ ಇದನ್ನು ಹೇಳುತ್ತಾರೆ. ಇದು ಒಂದು ಆಕ್ಸ್‌ಫರ್ಡ್ ಲಾಜಿಕ್, ಆದರೆ ಇಲ್ಲಿ 71 ಪರ್ಸೆಂಟ್ ಆಕ್ಯುಪೆನ್ಸಿ ಇದ್ದು, 89 ಪರ್ಸೆಂಟ್ ಯುಟಿಲೈಸೇಷನ್ ಇದ್ದು, 11 ಸಾವಿರ ವೆಹಿಕಲ್ಸ್ ನಿಮ್ಮದೇ ಆಗಿದ್ದು, ಇವತ್ತು ನೀವು ಸುಮಾರು 160 ಕೋಟಿ ರೂಪಾಯಿ ಪ್ರತಿ ವರ್ಷ ನಷ್ಟ ತೋರಿಸುತ್ತಿದ್ದೀರಿ ಎಂದರೆ ಯಾವ ಮಟ್ಟಕ್ಕೆ ಈ ಸಂಸ್ಥೆ ಇಳಿದಿದೆ? ಯಾವ ಮಟ್ಟದಲ್ಲಿ ಸಂಸ್ಥೆ ನಡೆಯುತ್ತಿದೆ ಎಂಬುದನ್ನು ಗೊತ್ತಾಗುತ್ತದೆ. ಈ ಕೆ.ಎಸ್.ಆರ್.ಟಿ.ಸಿ ಸಂಸ್ಥೆಯನ್ನು ಸುಧಾರಣೆ ಮಾಡುವುದು ಬಿಟ್ಟು, ಅಲ್ಲಿ ನಡೆಯುತ್ತಿರುವ ಲೋಪದೋಷಗಳನ್ನು ಸರಿಮಾಡುವುದು ಬಿಟ್ಟು ಇವತ್ತು ಅದಕ್ಕೆ ಕಾಂಪೆನ್ಸೇಟ್ ಮಾಡುವುದಕ್ಕೋಸ್ಕರ ಹೆಚ್ಚಿನ ಕರಭಾರವನ್ನು ಏರಿಸುವುದಕ್ಕೆ ತಾವು ಏನು ಮಾಡಿದ್ದೀರಿ ಇದು ನಿಜವಾಗಿಯೂ ಖಂಡನೀಯ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇನ್ನು ಸ್ಟಾಫ್ ಬಗ್ಗೆ ಕೂಡ ಬೇರೆ ರಾಜ್ಯದ ಅಂಕಿ ಅಂಶಗಳು ಕೂಡ ನನ್ನ ಬಳಿ ಇದೆ. ನಮ್ಮಲ್ಲಿರುವ ಸ್ಟಾಫ್ ಸಂಖ್ಯೆ ಬೇರೆ ರಾಜ್ಯಗಳಿಗಿಂತ ಹೆಚ್ಚು ಇದೆ. ಏಕೆಂದರೆ ಈಗಾಗಲೇ ಸುಮಾರು 8 ಸಾವಿರ ಖಾಲಿ ಹುದ್ದೆಗಳಿವೆ. ಆ ಖಾಲಿ ಹುದ್ದೆಗಳನ್ನು ನೀವು ಅಂದರೆ ನಿಮ್ಮ ಸರ್ಕಾರ ಭರ್ತಿ ಮಾಡಿಲ್ಲ. ಹೊಸ ರಿಕ್ರೂಟ್‌ಮೆಂಟ್ ಮಾಡಿಲ್ಲ. ಖಾಲಿ ಹುದ್ದೆಗಳ ಸಂಬಳ ಕೂಡ ಇವತ್ತು ಉಳಿದಿದೆ. ಇಷ್ಟೊಂದು ಹಣ ಉಳಿತಾಯ ಇದ್ದರೂ ಕೂಡ ಯಾವ ರೀತಿಯಿಂದ ಇಲ್ಲಿ ನಷ್ಟ ಆಗುತ್ತಿದೆ ಎನ್ನತಕ್ಕಂಥದ್ದನ್ನು ಸರ್ಕಾರ ಸ್ಪಷ್ಟಪಡಿಸಬೇಕು. ಇನ್ನು ಕೆ.ಎಸ್.ಆರ್.ಟಿ.ಸಿ.ಯ ರೆವಿನ್ಯೂ ಬಗ್ಗೆ ಹೇಳುವುದಾದರೆ 1995-96ರಲ್ಲಿ 770 ಕೋಟಿ ರೂಪಾಯಿ ಕಲೆಕ್ಷನ್ ಇದ್ದರೆ 1996-97ರಲ್ಲಿ 918 ಕೋಟಿ ರೂಪಾಯಿಗಳು ಕಲೆಕ್ಷನ್ ಇದೆ. ಅಂದರೆ ಒಂದು ದಿನಕ್ಕೆ ಸರಾಸರಿ ಕಲೆಕ್ಷನ್ ಹೆಚ್ಚುಕಡಿಮೆ 2,65,000 ರೂಗಳು ಆಗುತ್ತವೆ. ಈ ಕಲೆಕ್ಷನ್ ಪ್ರಯಾಣ ದರ ಹೆಚ್ಚಿಸುವುದಕ್ಕಿಂತ ಮುಂಚೆ ಇತ್ತು. ಇವತ್ತು ಕೆ.ಎಸ್.ಆರ್.ಟಿ.ಸಿ. ಪ್ರಯಾಣ ದರವನ್ನು ಹೆಚ್ಚಿಸಿದ ಮೇಲೆ, ಅವರು 25 ಪರ್ಸೆಂಟ್ ಹೆಚ್ಚಿಗೆ ಏರಿಸಿದ್ದಾರೆ. ಅಂದರೆ ಮಿನಿಮಮ್ 35 ಪರ್ಸೆಂಟ್‌ನಿಂದ 150 ಪರ್ಸೆಂಟವರೆಗೆ ದರವನ್ನು ಹೆಚ್ಚಿಸಿದ್ದಾರೆ. ಆ ಸರಾಸರಿಯನ್ನು ತೆಗೆದುಕೊಂಡಾಗಲೂ ಕೂಡ ಇವತ್ತಿನ ದಿವಸ ಸುಮಾರು ಪ್ರತಿ ದಿವಸಕ್ಕೆ 5 ರಿಂದ 6 ಕೋಟಿ ರೂಪಾಯಿ ಬರಬೇಕಾಗುತ್ತದೆ. ಇವೊತ್ತು 200 ಕೋಟಿ ರೂಪಾಯಿಗಳ ಸಂಪಾದನೆ ಮಾಡುತ್ತೇವೆಂದು ಹೇಳಿ ನೀವು ದರವನ್ನು ಹೆಚ್ಚಿಸಿದ್ದೀರಿ, ನಾನು ಇವೊತ್ತು ಪತ್ರಿಕೆಯಲ್ಲಿ ನೋಡಿದೆ. ಇದರ ಬಗ್ಗೆ ಇವೊತ್ತು ಕೂಡ ಬಂದಿದೆ. ಇಷ್ಟೊಂದು ದರವನ್ನು ಹೆಚ್ಚಿಸಿದರೂ ಕೂಡ ಇನ್ನು ಕೆ.ಎಸ್.ಆರ್.ಟಿ.ಸಿ. ಚೇತರಿಸಿಕೊಳ್ಳತಕ್ಕಂತಹ ಸಾಧ್ಯತೆ ಇಲ್ಲ. ಇನ್ನೊಂದು ಕೆ.ಎಸ್.ಆರ್.ಟಿ.ಸಿ. ಯು ಲುಕ್ಸಾನ್‌ನಲ್ಲಿದೆ. ಅಕ್ಯುಮುಲೇಟೆಡ್ ಲಾಸ್ಸಸ್ ಸುಮಾರು 31.3.1996ಕ್ಕೆ ಅಂದರೆ 1989ರಿಂದ 1996ರ ವರೆಗೆ 488 ಕೋಟಿ ರೂಪಾಯಿಗಳು. ಅದರಲ್ಲಿ ಮೋಟಾರ್ ವೆಹಿಕಲ್ ಟ್ಯಾಕ್ಸ್‌ನ್ನು ಸಹ ಕೊಟ್ಟಿಲ್ಲ. ಇದು 130 ಕೋಟಿ ರೂಪಾಯಿಗಳು ಬಾಕಿ. ಎಲ್.ಐ.ಸಿ.ಯಿಂದ ಐ.ಡಿ.ಬಿ.ಐ. ಯಿಂದ ಮತ್ತು ಹೌಸಿಂಗ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಿಂದ 100ಕೋಟಿ ರೂಪಾಯಿಗಳು ಬಾಕಿ ಇದೆ. ಇದು ಅಲ್ಲದೆ ತಮಿಳುನಾಡಿಗೆ ನಮ್ಮ ವೆಹಿಕಲ್ಸ್ ಏನು ಹೋಗುತ್ತಿದೆ ತಮಿಳುನಾಡಿನವರಿಗೆ ರೆಸಿಪ್ರೋಕಲ್ ಟ್ಯಾಕ್ಸ್‌ನ್ನು ಕೊಟ್ಟಿಲ್ಲವೆಂದು ಹೇಳಿ ತಮಿಳುನಾಡಿನವರು ನಮ್ಮ ಕೆ.ಎಸ್.ಆರ್.ಟಿ.ಸಿ. ಬಸ್‌ಗಳನ್ನು ಹಿಡಿದು ನಿಲ್ಲಿಸಿದರು. ಅದು

ಪತ್ರಿಕೆಯಲ್ಲಿ ಬಂದಿದೆ. ಇಲ್ಲಿಂದ ಹೋದಂತಹ ಕೆ.ಎಸ್.ಆರ್.ಟಿ.ಸಿ. ಬಸಗಳನ್ನು ನಿಲ್ಲಿಸಿ ಪ್ರಯಾಣಿಕರನ್ನು ಕೆಳಗೆ ಇಳಿಸಿ ಆ ಬಸಗಳನ್ನು ಅಲ್ಲಿಯ ಆರ್.ಟಿ.ಓ.ರವರು ಸೀಜ್ ಮಾಡಿದ್ದಾರೆ. ಅಂದರೆ ಇಂತಹ ಪರಿಸ್ಥಿತಿ, ಆಡಳಿತ ಇಷ್ಟೊಂದು ಹದಗೆಡಬೇಕು ಎಂದರೆ ಕಾರಣವೇನು? ಯಾರಾಗಲೂ ನಮ್ಮ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಹೇಳುತ್ತಿದ್ದರು ನಾನು ಇದನ್ನು ಸುಧಾರಣೆ ಮಾಡುತ್ತೇನೆ ಎಂದು ಆದರೆ ಸುಧಾರಣೆ ಮಾಡಲು ಹೋದರೆ ಟ್ರೇಡ್ ಯೂನಿಯನ್‌ನವರು ಅಡ್ಡ ಬರುತ್ತಿದ್ದಾರೆ ಎನ್ನುವಂತಹ ರೀತಿಯಲ್ಲಿ ಅವರು ಮಾತನಾಡುತ್ತಿದ್ದರು. ವರ್ಕರ್ಸ್ ಕೋ-ಆಪರೇಟ್ ಮಾಡುತ್ತಿಲ್ಲ. ಅದಕ್ಕಾಗಿ ಇವೊತ್ತು ಲುಕ್ಸಾನ್‌ನಲ್ಲಿ ನಡೆಯುತ್ತಿದೆ . ನಾನು ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡುತ್ತಿದ್ದೇನೆ. ನನ್ನನ್ನು ಜನ ದುರ್ಯೋಧನ ಎನ್ನುತ್ತಾರೆಂದು ಅವರೆ ಹೇಳಿಕೊಂಡಿದ್ದಾರೆ. ನಾವು ಏನೂ ಆ ರೀತಿ ಹೇಳಿಲ್ಲ. ದುರ್ಯೋಧನ ಎನ್ನುತ್ತಾರೋ, ರಾವಣ ಎನ್ನುತ್ತಾರೋ, ದುಶ್ಯಾಸನ ಎನ್ನುತ್ತಾರೋ ನಮಗೇನೂ ಗೊತ್ತಿಲ್ಲ. ಅವರೇ ಹೇಳಿಕೊಂಡಿದ್ದು ಪತ್ರಿಕೆಯಲ್ಲಿ ಬಂದಿದೆ. ಜನ ನನ್ನನ್ನು ದುರ್ಯೋಧನ ಎನ್ನುತ್ತಾರೆ ನಾನೇನು ದುರ್ಯೋಧನ ತರಹ ಇದ್ದೀನಾ ಎನ್ನತಕ್ಕಂತಹ ಮಾತು ಹೇಳಿದ್ದಾರೆ. ಅವರು ದುರ್ಯೋಧನನಾದರೂ ಆಗಲಿ, ರಾಮನಾದರೂ ಆಗಲಿ, ರಾವಣನಾದರೂ ಆಗಲಿ, ದುಶ್ಯಾಸನನಾದರೂ ಆಗಲಿ ಆದರೆ ಜನರಿಗೆ ಮಾತ್ರ ಅವರು ರಾವಣನೇ ಆಗಿದ್ದಾರೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಕೆ.ಎಸ್.ಆರ್.ಟಿ.ಸಿ. ಟ್ರೇಡ್ ಯೂನಿಯನ್‌ನವರದ್ದು ಜಗಳ ಒಂದು ಕಡೆ. ಮತ್ತು ಇದರಲ್ಲಿ ಸುಧಾರಣೆಯನ್ನು ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲ. ಇವೊತ್ತು ನಿಮ್ಮ ಬಸ್‌ಗಳನ್ನು ತಮಿಳುನಾಡಿನವರು ಹಿಡಿದು ನಿಲ್ಲಿಸುತ್ತಾರೆ, ಮತ್ತು ನಿಮ್ಮ ಪ್ರಯಾಣಿಕರನ್ನು ಬಸ್‌ನಿಂದ ಇಳಿಸುತ್ತಾರೆಂದರೆ ಇದಕ್ಕಿಂತಲೂ ದೊಡ್ಡ ಅವಮಾನ ಇನ್ನು ಎನು ಆಗಬೇಕು ಈ ರಾಜ್ಯಕ್ಕೆ?

ಅಧ್ಯಕ್ಷರು : ನಾನು ಎಲ್ಲಾ ಸದಸ್ಯರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನಾನು ಈ ವಿಚಾರವನ್ನು ಪದೇ ಪದೇ ಪ್ರಸ್ತಾಪ ಮಾಡುವುದಕ್ಕೆ ಬೇಸರವಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಗಹನವಾದಂತಹ ವಿಚಾರದ ಮೇಲೆ ಮಾತನಾಡುತ್ತಿದ್ದಾರೆ ತಮ್ಮ ತಮ್ಮ ಮಧ್ಯೆ ಇರತಕ್ಕ ಚರ್ಚೆಯನ್ನು ಸ್ವಲ್ಪ ಮುಂದುವರೆಸಿಕೊಂಡು ಅನಂತರ ಮಾಡಿಕೊಳ್ಳಬಹುದು. ಈ ಸಭೆಗೆ ಒಂದು ಗೌರವ ಇದೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ, ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಅಥವಾ ಯಾರೇ ಹಿರಿಯ ಸದಸ್ಯರುಗಳು ಮಾತನಾಡುವಾಗ ಸ್ವಲ್ಪ ಆ ಕಡೆಗೆ ಗಮನವನ್ನು ಕೊಟ್ಟರೆ ಒಳ್ಳೆಯದು. ಎಲ್ಲರೂ ತಮ್ಮ ತಮ್ಮ ಮಧ್ಯೆ ಒಂದು ಸಣ್ಣ ಅಸೆಂಬ್ಲಿಯನ್ನು ನಡೆಸುವುದಾದರೆ ನಾನು ಇಲ್ಲಿ ಇರಬೇಕಾದಂತಹ ಅಗತ್ಯವೂ ಇಲ್ಲ. ಅವರು ಮಾತನಾಡುವಂತಹ ಅಗತ್ಯವೂ ಸಹ ಇಲ್ಲ. ದಯಮಾಡಿ ಸಹಕರಿಸುತ್ತೀರಿ ಎಂದು ಅಪೇಕ್ಷೆ ಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಗಳು ನಮಗೆ ಪಾಠವನ್ನು ಹೇಳುತ್ತಾರೆ, ಅವರಿಗೆ ಹೇಳಿ ಕೊಡುವವರಿಲ್ಲ, ಇದು ನಮಗೆ ಬಂದಿರತಕ್ಕಂತಹ ಕಷ್ಟ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಲ್ಪ ಏನಾದರೂ ಕೊರತೆ ಇದ್ದರೆ ನಾವು ಏನಾದರೂ

ಹೇಳಿದರೆ ಸುಧಾರಿಸಿಕೊಳ್ಳುತ್ತೇವೆಂದು. ಅಲ್ಲಿ ಸುಧಾರಿಸುವುದಕ್ಕೆ ಆಗುವುದಿಲ್ಲ ಕುಲಗೆಟ್ಟು ಹೋಗಿದೆ. ಅದು ರಿಪೇರಿಯಾಗುವುದಿಲ್ಲವೆಂದು ನಮಗೆ ಹೇಳುತ್ತಾರೆ. ನೀವು ಅದನ್ನು ಅಪರಾರ್ಥ ಮಾಡಿಕೊಂಡರೆ ಹೇಗೆ? ಏನು ಮಾನ್ಯ ಮುಖ್ಯಮಂತ್ರಿಗಳೇ, ನಾನು ಹೇಳಿದ್ದು ಸರಿ ಇದೆ ತಾನೆ?

ಶ್ರೀ ಜೆ.ಹೆಚ್. ಪಟೇಲ್ : ಸರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಏನು ಯಡಿಯೂರಪ್ಪನವರು ಹೇಳಿದ್ದು ಎಲ್ಲಾ ಕರೆಕ್ಟ್ ಎಂದು ಹೇಳುತ್ತೀರಿ. ಪೂರ್ಣ ಹದಗೆಟ್ಟಿದೆ ಎಂದರೆ ಅದು ಕರೆಕ್ಟಾ? ಅದನ್ನು ಅವರು ಒಪ್ಪಿಕೊಂಡಿದ್ದಾರೆ, ಅದು ಪೂರ್ಣ ಹದಗೆಟ್ಟು ಹೋಗಿದೆ ಅದನ್ನು ಸುಧಾರಣೆ ಮಾಡುವುದಕ್ಕೆ ಆಗುವುದಿಲ್ಲವೆಂದು. ಅದಕ್ಕೆ ಇವೊತ್ತು ಈ ಪರಿಸ್ಥಿತಿಯು ಇದ್ದಾಗ ನಿಮ್ಮ ಆಡಳಿತ ಎಷ್ಟರ ಮಟ್ಟಿಗೆ ಚುರುಕುಕೊಂಡಿದೆ ಎಂದು ನಾವು ಭಾವಿಸೋಣ. ಏಕೆಂದರೆ ನೀವು ಸೋರಿಕೆಯಲ್ಲಿ ಕಡಿಮೆಯನ್ನು ಮಾಡಲಿಲ್ಲ; ಯುಟಿಲೈಸೇಷನ್ ಇದ್ದರೂ ಕೂಡ ಲಾಸಸ ಏನೂ ಕಡಿಮೆ ಮಾಡಲಿಲ್ಲ, ಕೊಡತಕ್ಕಂತಹ ಟ್ಯಾಕ್ಸ್ ಮತ್ತು ಸಾಲವನ್ನೂ ಸಹ ಮರುಪಾವತಿ ಮಾಡಲಿಲ್ಲ. ಇವೊತ್ತು ಲಾಸ್ ಯಾವ ಕಾರಣಕ್ಕೆ ಆಗುತ್ತದೆ ಎನ್ನುವುದಕ್ಕೆ ಕೆಲವು ಕಾರಣಗಳಿವೆ. ಅದರಲ್ಲಿ ಸುಮಾರು ಇಂಧನದಲ್ಲಿಯೇ 20 ಪರ್ಸೆಂಟ್ ಕಳ್ಳತನ ಮಾಡುತ್ತಾರೆ, ಆಮೇಲೆ ಆಯಿಲ್, ಟೈರ್ ಮತ್ತು ಟ್ಯೂಬ್ ಇದರಲ್ಲಿಯೂ ಕೂಡ 60 ರಿಂದ 70 ಪರ್ಸೆಂಟ್, ಅದೇ ರೀತಿಯಾಗಿ ಬ್ಯಾಟರಿಯಲ್ಲಿಯೂ ಸಹ ಕಳ್ಳತನವಾಗುತ್ತದೆ. ಅದು 1.5 ಪರ್ಸೆಂಟ್ ಎಂದು ತೋರಿಸಿದ್ದಾರೆ ಇಲ್ಲಿ ನಿಮ್ಮ ಇಲಾಖೆಯ ವರದಿಯೇ ಇದೆ ನಾನು ಏನೂ ಹೊಸದಾಗಿ ಹುಟ್ಟಿಸಿ ಹೇಳುತ್ತಿಲ್ಲ. ಕೆ.ಎಸ್.ಆರ್.ಟಿ.ಸಿ. ಯವರು ಒಂದು ವರದಿಯನ್ನು ತಯಾರು ಮಾಡಿದ್ದಾರೆ ಏಕೆಂದರೆ ಜನರನ್ನು ಕನ್ವಿನ್ಸ್ ಮಾಡಲಿಕ್ಕೆ. ಅಥವಾ ಕ್ಯಾಬಿನೆಟ್‌ಗೆ ಹೇಳಿಕೊಡುವುದಕ್ಕೆ ಏಕೆ ನಾವು 150 ಪರ್ಸೆಂಟ್ ಹೆಚ್ಚಿಸುತ್ತಿದ್ದೇವೆಂದು ಹೇಳುವುದಕ್ಕೆ ಅವರು ಎಲ್ಲಾ ಕೆಲವು ಪಾಯಿಂಟ್ಸ್ ಮಾಡಿ ಕೊಟ್ಟಿದ್ದಾರೆ. ಅದನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ ಇದನ್ನು ಅವರು ನೋಡಿದರೋ ಅಥವಾ ಇಲ್ಲವೋ ಎಂದು ವಿವರವಾಗಿ, ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆಮೇಲೆ ಸ್ಟೇಷನರಿ ಮತ್ತು ಯೂನಿ-ಫಾರಮ್‌ಟಿಕೇಟ್ ಇದು 10 ಪರ್ಸೆಂಟ್, ಅದರ ಕನ್ಸುಮೆಬಲ್ಸ್ ಅದು 10 ಪರ್ಸೆಂಟ್ ಈ ರೀತಿಯಾಗಿ ಅವರ ಖರ್ಚು ಇದೆ. ಗೈರುಹಾಜರಿಯಂತ ಮಿತಿ ಮೀರಿದೆ. ಏಕೆಂದರೆ ಅದಕ್ಕೆ ಹಿಡಿತವೇ ಇಲ್ಲ, ಟ್ರೇಡ್ ಯೂನಿಯನ್‌ಗೆ ಹೆದರುತ್ತೇನೆ, ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳುತ್ತೇವೆಂದು ಹೇಳುತ್ತೀರಿ. ಅವರ ಜೊತೆಯಲ್ಲಿ ಮಾತುಕತೆಯಾಡಿ ಎಷ್ಟು ಕಂಡಕ್ಟರ್ ಗೈರು ಹಾಜರಿ ಇರುತ್ತಾರೆ; ಎಷ್ಟು ಡ್ರೈವರ್ ಗೈರು ಹಾಜರಾಗಿದ್ದಾರೆ ಅವರ ಕಷ್ಟ ಏನು? ಏಕೆ ಗೈರು ಹಾಜರು ಆದರು ಎಂಬುದನ್ನು ವಿಚಾರಿಸಿದ್ದೀರಾ? ಇಲ್ಲ ಎಂದರೆ ಯಾರು ಕೆಲಸವನ್ನು ಮಾಡುವುದಿಲ್ಲ ಅವರನ್ನು ಡಿಸ್ಮಿಸ್ ಮಾಡಿ ಹೊಸ ಆಯ್ಕೆಯನ್ನು ಮಾಡಿ. ಹೊಸ ಆಯ್ಕೆಯನ್ನೂ ಸಹ ಮಾಡುವುದಿಲ್ಲ, ತಪ್ಪು ಮಾಡಿದವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಇನ್ನೊಂದು ಕಡೆ ಏನು ಎಂದರೆ ನನಗೆ ಹೊಡೆಯುವುದಕ್ಕೆ ಬಂದಿದ್ದಾರೆ, ಬೆದರಿಕೆ ಕೊಲೆ, ಹಾಕಿದ್ದಾರೆ ಎಂದು ರಾಜ್ಯದ ಒಬ್ಬ ಸಚಿವರೇ ಈ ಮಾತನ್ನು ಹೇಳಬೇಕಾದರೆ ಬೇರೆ

ಶಾಸಕರಿಗೆ ಈ ರಾಜ್ಯದಲ್ಲಿ ರಕ್ಷಣೆ ಇದೆಯೇ? ನಿಮಗೇ ಪೊಲೀಸ್ ರಕ್ಷಣೆ ಬೇಕು, ಸಚಿವರಿಗೆ ನಮ್ಮ ಕಾರ್ಮಿಕರು ಹೊಡೆಯುತ್ತಾರೆಂದು ಹೇಳಿ ನಿಮಗೆ ನೀವು ರಕ್ಷಣೆಯನ್ನು ಕೇಳುತ್ತಿದ್ದೀರಿ, ಪೊಲೀಸ್ ರಕ್ಷಣೆಯನ್ನು ತೆಗೆದುಕೊಂಡು ನೀವು ತಿರುಗುತ್ತಿದ್ದೀರಿ. ನಿಮ್ಮ ಬಾಗಿಲ ಮುಂದೆ ರಕ್ಷಣೆ ಬೇಕು, ನಿಮ್ಮ ಹಿಂದೆ ರಕ್ಷಣೆ ಬೇಕು, ನೀವು ಹೋದಲ್ಲಿ, ಬಂದಲ್ಲಿ, ನೀವು ಮೀಟಿಂಗ್ ನಡೆಸುವಲ್ಲಿ, ನಿಮ್ಮ ಸಮಾರಂಭಗಳಲ್ಲಿ ಪೋಲೀಸ್ ರಕ್ಷಣೆ ಬೇಕು. ನಿಮ್ಮ ಜೀವಕ್ಕೆ ಅಪಾಯ ಇದೆ ಎಂದು ಹೇಳುತ್ತೀರಿ. ಇಲ್ಲಿ ನಾವು ನಿಮ್ಮನ್ನು ಟೀಕೆ ಮಾಡುವವರು, ಅಥವಾ ಹೊರಗಡೆ ಆಗುಹೋಗುಗಳ ಬಗ್ಗೆ ನಾವೂ ಕೂಡ ಈ ಸದನದಲ್ಲಿ ಪ್ರಸ್ತಾಪವನ್ನು ಮಾಡುತ್ತೇವೆ, ಕೆಲವು ತಪ್ಪುಗಳನ್ನು ಅನೇಕ ಸಂಸ್ಥೆಗಳು ಮಾಡುತ್ತವೆ. ಅಂದರೆ ಬೇರೆ ಶಾಸಕರಿಗೆ ಎಷ್ಟು ತೊಂದರೆ ಇರಬಹುದು. ಅನೇಕ ಶಾಸಕರು ಪ್ರಶ್ನೆಗಳನ್ನು ಹಾಕುತ್ತಾರೆ ಏಕೆಂದರೆ ರಾಜ್ಯ ಸರ್ಕಾರಕ್ಕೆ ಸಹಾಯವಾಗಲಿ ಎಂದು, ಜನರಿಗೆ ಸಹಾಯವಾಗಲಿ ಎಂದು ಅಂದರೆ ಅವರ ರಕ್ಷಣೆ ಹೇಗೆ? ಅಂದರೆ ನಿಮಗೆ ರಕ್ಷಣೆ ಸಿಗುವುದಿಲ್ಲ ಎನ್ನುವಂತಹ ಮಾತನ್ನು ನೀವೇ ಹೇಳಿಕೊಳ್ಳತಕ್ಕದ್ದು ಎಷ್ಟು ರಿಡಿಕ್ಯುಲಸ. ನೀವು ಈ ರಾಜ್ಯದಲ್ಲಿರತಕ್ಕಂತಹ ಸಾಮಾನ್ಯ ನಾಗರೀಕರ ರಕ್ಷಣೆಯನ್ನು ಮಾಡುವುದಕ್ಕೆ ಸಾಧ್ಯವೇ? ಏನು ಮಾನ್ಯ ಎಲ್. ಶಿವರಾಮೇಗೌಡರೇ, ಇದನ್ನು ನೀವು ಒಪ್ಪುತ್ತೀರೋ? ಪಾಪ ಶಿವರಾಮೇಗೌಡರ ರಕ್ಷಣೆಯಾಗಬಹುದೇ? ನಿಮಗೇ ರಕ್ಷಣೆ ಇಲ್ಲ ಎಂದು ಹೇಳುವಾಗ ನಾವು ಏನು ಮಾಡಬೇಕು? ಈ ರೀತಿಯಾಗಿ ಒಂದು ಸಲ 10 ಸಲ ಹೇಳಿಕೆಯೂ ಪತ್ರಿಕೆಯಲ್ಲಿ ಬಂದಿದೆ. ಅದೇ ರೀತಿಯಾಗಿ ಅವರ ಬಾಗಿಲ ಮುಂದೆ ಇಬ್ಬರು ಮೂವರು ಜವಾನರು ಕುಳಿತುಕೊಂಡಿರುವ ಫೋಟೋ ಕೂಡ ಪತ್ರಿಕೆಯಲ್ಲಿ ಬಂದಿದೆ. ನಾವು ಅದನ್ನು ನೋಡಿದ್ದೇವೆ, ಮತ್ತು ನೋಡುತ್ತಿದ್ದೇವೆ. ಕೆಲವು ಜನ ಪೊಲೀಸ್ ಡ್ರೆಸ್ ಹಾಕಿಕೊಂಡರೆ ಅಸಹ್ಯ ಕಾಣುತ್ತದೆಂದು ಹೇಳಿ ಮಫ್ತಿ ಡ್ರೆಸ್‌ನಲ್ಲಿ ಅವರ ಹಿಂದೆ ಓಡಾಡುತ್ತಾರೆ. ಇಂತಹ ಪರಿಸ್ಥಿತಿಯನ್ನು ಕೆ.ಎಸ್.ಆರ್.ಟಿ.ಸಿ. ನವರು ತಂದು ಕೊಂಡಿದ್ದಾರೆ. ನೀವು ಲೆಕ್ಕ ಹಾಕಿ, ಸುಮ್ಮನೆ ಫ್ರೀಯಾಗಿ ಸಾಮಾನ್ಯ ನಾಗರೀಕರಂತೆ ಅವರು ಓಡಾಡುವಂತಿಲ್ಲ. ಅಂದರೆ ಅವರದು ಕೆಲರು ಪ್ರಿವಿಲೇಜ್ಸ್‌ಗಳು ಇವೆ. ಅದು ಇರಲಿ, ಗನಮ್ಯಾನ ಇರುತ್ತಾನೆ. ಆದರೆ ಈ ಪರಿಸ್ಥಿತಿಯು ಇವೊತ್ತಿನ ದಿವಸ ಉದ್ಭವವಾಗಿದೆ. ಮತ್ತು ಟ್ರೇಡ್ ಯೂನಿಯನ್ ಮತ್ತು ಮಂತ್ರಿಗಳ ಮಧ್ಯೆ ಸಾಮರಸ್ಯ ಏನಿದೆ? ಇವೊತ್ತಿನದಿವಸ ಕಾರ್ಮಿಕರು ಅವರಿಗೆ ಕೋ-ಅಪರೇಟ್ ಮಾಡುತ್ತಿಲ್ಲ, ಇವರು ಅವರಿಗೆ ಕೋ-ಅಪರೇಟ್ ಮಾಡುತ್ತಿಲ್ಲ. ಇದರಿಂದ ಇದು ಇನ್ನು ಹದಗೆಟ್ಟಿದೆ. ಆಗತಕ್ಕಂತಹ ಲಾಸ್‌ನಲ್ಲಿ ಇನ್ನು ಹೆಚ್ಚುವರಿಯಾಗಿದೆಯೇ ಹೊರತಾಗಿ ಕಡಿಮೆ ಮಾಡತಕ್ಕಂತಹ ಪ್ರಯತ್ನವನ್ನೂ ಅವರು ಮಾಡಿಲ್ಲ. ತಮ್ಮ ಲಾಸ್‌ನ್ನು ಯಾವ ರೀತಿಯಲ್ಲಿ ಮೇಕಪ ಮಾಡಬೇಕೆಂದು ಮಾಡಿದ್ದಾರೆಂದರೆ ದರವನ್ನು ಹೆಚ್ಚಿಸಿ ಮಾಡಬೇಕೆಂದಿದ್ದಾರೆಯೇ ಹೊರತಾಗಿ, ಅದರಲ್ಲಿರತಕ್ಕಂತಹ ಸೋರಿಕೆಯನ್ನು ಕಂಡು ಹಿಡಿದು, ಫ್ಯೂಯಲ್ ಕಳ್ಳತನವನ್ನು ಮಾಡುವಂಥದ್ದು, ಬ್ಯಾಟರಿಯನ್ನು ಕಳ್ಳತನವನ್ನು ಮಾಡುವಂಥದ್ದು, ನಿಲ್ಲಿಸಲು ಕ್ರಮ ಕೈಗೊಂಡಿಲ್ಲ. ಕೆಲವು ಸಲ ಅಂತೂ ಬಸ್ ಡಿಪೋಯಿಂದ ಹೋಗಿದ್ದು ಸಿಗಲಿಲ್ಲವೆಂದು ಹೇಳಿ ಪತ್ರಿಕೆಯಲ್ಲಿ ಬಂದಿತ್ತು. ನಾನು ಏಕೆ ಹೇಳುತ್ತೇನೆ ಅಂದರೆ ಆ ಸಂಸ್ಥೆಗೆ ಈ ರೀತಿಯಾದ ವಾತಾವರಣ ಬಂದಿದೆ.

1.00 ಪಿ.ಎಂ.

ಶ್ರೀ ಜೆ.ಹೆಚ್. ಪಟೇಲ್ : ಯಾರ ಕಾಲದಲ್ಲಿ ಆಯಿತು?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನಮ್ಮ ಕಾಲದಲ್ಲಿ ಆಯಿತು ಎಂದು ತಿಳಿದುಕೊಳ್ಳಿ, ನಮ್ಮ ಕಾಲದಲ್ಲಿ ಒಂದು ಬಸ್ ಹೋದರೆ ನಿಮ್ಮ ಕಾಲದಲ್ಲಿ ನೂರು. ನೀವು ಅದನ್ನು ಹೇಳುತ್ತಿದ್ದೀರಿ. ನಾನು ಸಂಸ್ಥೆಯ ಬಗ್ಗೆ ಹೇಳುತ್ತಿದ್ದೇನೆ. ಇದನ್ನು ಸರಿಪಡಿಸಿದರೆ ನೀವು 150 ಪರ್ಸೆಂಟ್ ಏರಿಸತಕ್ಕಂಥ ಅವಶ್ಯಕತೆ ಇಲ್ಲವೆನ್ನತಕ್ಕ ಮಾತನ್ನು ನಾನು ಹೇಳುತ್ತಿದ್ದೇನೆ. ಅದನ್ನು ಮಾಡದೆ ನೀವು ಇವತ್ತಿನ ದಿವಸ ಬರಿ ದರ ಏರಿಸಿ ಸರಿಪಡಿಸಿಕೊಳ್ಳುತ್ತೀರೆಂದು ಹೇಳಿದರೆ, ನೀವು 200 ಏನು 300 ಪಟ್ಟು ದರ ಏರಿಸಿದರೂ ಕೂಡ ಇದು ಸರಿಹೋಗುವುದಿಲ್ಲ. ಅದಕ್ಕಾಗಿ ಇವತ್ತು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಮಾನ್ಯ ಮಂತ್ರಿಗಳಿಗೆ ಮತ್ತು ಅಲ್ಲಿರತಕ್ಕಂಥ ಟ್ರೇಡ್ ಯೂನಿಯನ್ ವರ್ಕರ್ಸ್‌ಗೆ ಅಥವಾ ಎಂಪ್ಲಾಯಿಸ್‌ಗಾಗಲೀ ಅವರಿಗೆ ಯಾವ ರೀತಿಯ ಒಳ್ಳೆಯ ಸಂಬಂಧವಿಲ್ಲ. ಅವರು ಇಬ್ಬರೂ ಕೂಡ ಸೌಹಾರ್ದತೆಯಿಂದ ನಡೆದುಕೊಳ್ಳುತ್ತಿಲ್ಲ. ಆದ್ದರಿಂದ ಇವತ್ತಿನ ದಿವಸ ಇನ್ನೂ ಹೆಚ್ಚಿನ ಲಾಸ್ ಈ ಒಂದು ಇಲಾಖೆಯಲ್ಲಿ ಆಗುತ್ತಿದೆ. ಅದಕ್ಕಾಗಿ ನಾನು ಅವರಿಗೆ ಹೇಳಬೇಕಾಗಿದೆ. ಬರೀ ಪ್ರೆಸ್ ಸ್ಟೇಟಮೆಂಟ್ ಕೊಟ್ಟು ಹೆದರಿಸಿದರೆ ಸುಧಾರಣೆಯಾಗುವುದಿಲ್ಲ. ಅಥವಾ ನಾವು ಅಸೆಂಬ್ಲಿಯಲ್ಲಿ ಹೆದರಿಸಿದರೆ, ಬೆದರಿಸಿದರೆ ಅದರಿಂದಲೂ ಆಗುವುದಿಲ್ಲ. ರಿಯಲ್ ಲೀಕೇಜ್ ಎಲ್ಲಿದೆ ಅದನ್ನು ಕಂಡುಹಿಡಿದು ಅದನ್ನು ನೀವು ಸುಧಾರಣೆ ಮಾಡಿದರೆ ಇವತ್ತು ನೀವು ಏನು 160 ಕೋಟಿ ರೂಪಾಯಿಗಳು ಕಾಲಕಾಲಕ್ಕೆ ಟ್ಯಾಕ್ಸ್‌ನ್ನು ಏರಿಸುತ್ತಿದ್ದೀರಿ, ಅದನ್ನು ಕಡಿಮೆ ಮಾಡುವುದಕ್ಕೆ ಸಾಧ್ಯ ಇದೆ. ಇಲ್ಲದಿದ್ದರೆ, ಇವತ್ತು ನೀವು 160 ಕೋಟಿ ರೂಪಾಯಿ ಎನ್ನಬಹುದು. ಇನ್ನೊಬ್ಬರು ಬಂದರೆ ಪೆಟ್ರೋಲ್, ಡಿಸೇಲ್ ಹೆಚ್ಚಿಗೆ ಆಯಿತು ಇನ್ನೂ 20 ಪರ್ಸೆಂಟ್ ಏರಿಸಬೇಕೆಂದು ಅವರು ಹೇಳಬಹುದು ಅದಕ್ಕೆ ಈ ಕಡೆ ಇವರ ಗಮನ ಇಲ್ಲ. ಆದ್ದರಿಂದ ಈ ತೊಂದರೆಯಾಗಿದೆ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಆಮೇಲೆ 8 ರಿಂದ 9 ಸಾರಿ ಇವತ್ತು ಎಷ್ಟೋ ಟ್ರಿಪ್ಸ್‌ಗಳನ್ನು ತಾವು ಕ್ಯಾನ್ಸಲ್ ಮಾಡುತ್ತೀರಿ. ಏಕೆಂದರೆ ಕಂಡಕ್ಟರ್ ಇಲ್ಲ, ಡ್ರೈವರ್ಸ್ ಇಲ್ಲ ಎಂದು ಹೇಳಿ ಕೆಲವು ಟ್ರಿಪ್ಸ್‌ಗಳನ್ನು ಕ್ಯಾನ್ಸಲ್ ಮಾಡುತ್ತಾರೆ. 8 ಸಾವಿರ ವೇಕೆನ್ಸಿ ಇಲ್ಲಿಯವರೆಗೆ ಬಿದ್ದಿದೆ, ಏತಕ್ಕೆ ನೀವು ತುಂಬಲಿಲ್ಲ? 8 ಸಾವಿರ ವೇಕೆನ್ಸಿಗಳನ್ನು ಇಟ್ಟುಕೊಂಡು ಹಳ್ಳಿಗಳಿಗೆ ಹೋಗತಕ್ಕಂಥ ಬಸ್‌ಗಳನ್ನು ಬಿಡದೆ ಇವತ್ತು ಡಿಪೋದಲ್ಲಿಯೇ ಇಟ್ಟುಕೊಂಡು ನೀವು ಲಾಸ್ ತೋರಿಸುತ್ತಿದ್ದೀರಿ. ಒಂದು ಕಡೆ 89 ಪರ್ಸೆಂಟ್ ಫೂಲ್ ಯುಟಿಲೈಜೇಷನ್ ಎಂದು ಹೇಳುತ್ತೀರಿ, ಇನ್ನೊಂದು ಕಡೆ ಡ್ರೈವರ್ಸ್ ಮತ್ತು ಕಂಡಕ್ಟರ್ಸ್ ಇಲ್ಲ ಎಂದು ಹೇಳಿ ಬಸ್‌ಗಳನ್ನು ಬಿಡುವುದಿಲ್ಲ. ಇದು ಒಂದು ವಿಚಿತ್ರವಾದ ವಾತಾವರಣ ಇವತ್ತನ ದಿವಸ ಅಲ್ಲಿ ನಿರ್ಮಾಣವಾಗಿದೆ. ಇದರ ಬಗ್ಗೆ ತಾವು ಎಲ್ಲವನ್ನು ತಿಳಿದುಕೊಂಡಿದ್ದರೂ ಕೂಡ ಇದರ ಬಗ್ಗೆ ಮಾಡುತ್ತಾ ಇಲ್ಲ ಎಂದರೆ ನನಗನಿಸುತ್ತದೆ, ಏನು ಇದರ ಬಗ್ಗೆ ಆಸಕ್ತಿ ಇಲ್ಲವೋ ಏನಾದರೂ ಮುಖ್ಯಮಂತ್ರಿಗಳು ಹೇಳಿದ್ದಾರೋ ನೀವು ಇದೇ ರೀತಿಯಾಗಿ ಮಾಡಿ ಕೊನೆಗೆ ನಾನು ಯಾವುದಾದರೂ ಬೇರೆ ಪೋರ್ಟ್‌ಫೋಲಿಯೋ ಕೊಡುತ್ತೇನೆ. ಆಮೇಲೆ ಚೇಂಜ್ ಮಾಡಿಕೊಳ್ಳೋಣ ಎಂದು ಹೇಳಿದ್ದಾರೋ

ಏನೋ ಗೊತ್ತಿಲ್ಲ. ಏಕೆಂದರೆ ಇದರಲ್ಲಿ ಎಷ್ಟು ಅಧ್ವಾನ್ನ ಮಾಡಬೇಕು ಅಷ್ಟು ನೀರು ಮಾಡಿ ಹೊರಗೆ ಬಾ ಆಮೇಲೆ ನೋಡೋಣ ಬೇರೆ ಯಾವುದಾದರೂ ಕೊಡೋಣ ಎಂದು ಮಾತನಾಡಿಕೊಂಡಿದ್ದೀರಾ? ಇಲ್ಲದಿದ್ದರೆ ಈ ಪರಿಸ್ಥಿತಿ ಬರುತ್ತಾ ಇರಲಿಲ್ಲ. ಸುಮಾರು 11 ಸಾವಿರ, ಅಷ್ಟೊಂದು ಬಸಗಳನ್ನು ಇಟ್ಟುಕೊಂಡು...

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವರು ಆನದಿ ಕಾಂಟ್ರರಿ ಇದನ್ನು ನೀನು ಸರಿ ಮಾಡು, ಸರಿ ಮಾಡದೆ ಹೋದರೆ ಸ್ಯಾಕ್ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಇದು ಖರ್ಗೆ ಸಾಹೇಬರ ಅನುಭವ ಎಂಬುದು ಗೊತ್ತಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸರಿ ಮಾಡು ಇಲ್ಲದಿದ್ದರೆ ಸ್ಯಾಕ್ ಮಾಡುತ್ತೇನೆಂದು ಅಂದಿದ್ದರೆ ಅವರು ನೀವು ಕುಳಿತು ಇದಕ್ಕೆ 8,9 ತಿಂಗಳು ಬೇಕಾಗಿರಲಿಲ್ಲ. ಅಥವಾ ಈ ಸರ್ಕಾರ ಎಂದು ನಾನು ಹೇಳುತ್ತೇನೆ. ಅದರಲ್ಲಿ ನೀವು ಬಂದು ಕೆಲವು ದಿವಸ ಆಯಿತು. ಆದರೆ ಈ ಸರ್ಕಾರಕ್ಕೆ ಇದನ್ನು ಸರಿಪಡಿಸಬೇಕೆಂದಿದ್ದರೆ ನಿಮ್ಮ ವರದಿ ಏನಿದೆ, ತಾವು ಕೊಟ್ಟಂಥ ವರದಿಯನ್ನು ನೋಡಿರಬೇಕಲ್ಲಾ?

ಶ್ರೀ ಜೆ.ಹೆಚ್. ಪಟೇಲ್ : ನಿಮ್ಮ ವಿವರಗಳಿಗೆ ಉತ್ತರ ಕೊಡುತ್ತೇವೆ, but if there is anybody who is capable of setting right that organisation, it is my Minister.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಅದನ್ನು ಹಾಗೆ ಹೇಳಿಕೊಳ್ಳಬೇಕಾಗುತ್ತದೆ. ಏಕೆಂದರೆ ಹಾಗೆ ಹೇಳಿಕೊಳ್ಳದಿದ್ದರೆ ನಿಮಗೂ ಕೂಡ ಅದು ಅಗೌರವ. ನೀವು ಆ ರೀತಿಯೇ ಹೇಳಿಕೊಳ್ಳಿ ಆದರೆ ಹಿಂದೆ ಅವರು ಮಂತ್ರಿಗಳಾಗಿದ್ದಾಗ ಅವರು ಕೊಟ್ಟಂಥ ರಿಪೋರ್ಟ್ ಅದನ್ನು ಇಂಪ್ಲಿಮೆಂಟ್ ಮಾಡಿಕೊಂಡು ನೀವು ಇಲ್ಲಿಯವರೆಗೆ ಮಾಡಬಹುದಾಗಿತ್ತಲ್ಲಾ? ಆದರೆ ಎರಡು ವರ್ಷ ಏತಕ್ಕೆ ಕಾಯಬೇಕಾಗಿತ್ತು? ಅಂದರೆ ಇನ್ನೂ ಹದಗೆಡಲಿ ಎಂದೇ? ಅದಕ್ಕಾಗಿ ನಾನು ಇವತ್ತು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಿಮ್ಮ ಎಫಿಸಿಯೆಂಟ್ ಮಿನಿಸ್ಟರ್ ಬಗ್ಗೆ ನಿಮ್ಮ ನಂಬಿಕೆ ಯಾರ ಮೇಲಿದೆ...

ಶ್ರೀ ಬಿ.ಎಸ್.ಯಡಿಯೂರಪ್ಪ : ತಾವು ಹೇಳಿದ್ದಕ್ಕೆ ತದ್ವಿರುದ್ಧವಾಗಿ ಮಾನ್ಯ ಸಾರಿಗೆ ಸಚಿವರು ಹೇಳಿರುವಂತೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಕ್ಯಾನ್ಸರಿಗಿಂತ ಭಯಾನಕವಾಗಿರುವ ಏಡ್ಸ್‌ರೋಗ ಬಂದಿದೆ. ಕೆ.ಎಸ್.ಆರ್.ಟಿ.ಸಿ. ಕುರಿತು ಸಿಂಧ್ಯವರು ಹೇಳಿರುವುದು. ಯಾರೂ ಬಂದರೂ ಇದನ್ನು ಸುಧಾರಣೆ ಮಾಡುವುದಕ್ಕಾಗುವುದಿಲ್ಲ, ಇದು ಕುಲಗೆಟ್ಟು ಹೋಗಿದೆ, ಎಂದು ಅವರು ಹೇಳಿದ್ದಾರೆ. ಅದನ್ನು ಸರಿ ಮಾಡುವುದಕ್ಕೆ ಆಗದೇನೆ, ಕುಲಗೆಟ್ಟು ಹೋಗಿದ್ದಂಥ ಈ ಸಂಸ್ಥೆಯನ್ನು ರಿಪೇರಿ ಮಾಡದೇ ಜನರ ತಲೆ ಬೋಳಿಸುವ ಕೆಲಸ ಮಾಡಬೇಡಿ ಎಂದು ನಾವು ಹೇಳುತ್ತಿದ್ದೇವೆ. ಅವರು ಪೂರ್ಣ ನುಣ್ಣಗೆ ಮಾಡಲಿ ಎಂದು ನಿಮ್ಮ ಅಪೇಕ್ಷೆ ಇದ್ದರೆ ಸರ್ಕಾರ ನುಣ್ಣಗಾಗುವವರೆಗೆ ನೀವು ಇದನ್ನೇ ಮುಂದುವರೆಸಿಕೊಂಡು ಹೋಗುವುದಾದರೆ ನಮ್ಮ ಅಭ್ಯಂತರವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಮೇಲೆ ಅಬ್ಸೆಂಟಿಸಮ ಎಷ್ಟು ಇದೆ ಅಂದರೆ 35 ಪರ್‌ಸೆಂಟ್. 35 ಪರಸೆಂಟ್‌ದಿಂದ ನೀವು ಎಷ್ಟು ಕಡಿಮೆ ಮಾಡಿರುತ್ತೀರಿ? ಹಿಂದಿನ ರಿಪೋರ್ಟ್‌ನಲ್ಲಿ

ಇರತಕ್ಕದ್ದು, ಮತ್ತು ಇದಕ್ಕೂ ಹೋಲಿಸಿದರೆ ಬಹಳ ದೊಡ್ಡ ವ್ಯತ್ಯಾಸ ಏನೂ ಆಗಿಲ್ಲ. ಆವಾಗ 35 ಪರಸೆಂಟ್ ಆಗಿತ್ತು. ನಿಮ್ಮ ಎಫಿಷಿಯೆಂಟ್ ಮಿನಿಸ್ಟರ್ ಅದನ್ನು 10 ಪರಸೆಂಟ್‌ಗೆ ಇಳಿಸಿದ್ದಾರೆಂದು ಹೇಳಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. 35 ಪರಸೆಂಟ್‌ದಿಂದ ಕಡಿಮೆ ಮಾಡಿಸಿ ಇವತ್ತು ಅದು 10ಕ್ಕೆ ಬಂದಿದೆ ಎಂದು ನಾನು ತಿಳಿದುಕೊಳ್ಳಬಹುದಿತ್ತು. (ಮಾನ್ಯ ಮುಖ್ಯಮಂತ್ರಿಗಳು ನಿರ್ಗಮಿಸಿದ್ದನ್ನು ಗಮನಿಸಿ) ಅಧ್ಯಕ್ಷರೆ, ಪುಕಸಟ್ಟೆ ಸರ್ಟಿಫಿಕೇಟ್ ಕೊಟ್ಟರು, ಹೊರಟರು. ಅದಕ್ಕಾಗಿ ಸರ್ಟಿಫಿಕೇಟ್ ಪುಕಸಟ್ಟೆ ಸಿಕ್ಕಿತು ಎಂದು ಹೇಳಿ ಬಾಯಿ ಮಾತಲ್ಲಿ ಕೊಡುವುದು, ಹೊರಡುವುದು.

ಅಧ್ಯಕ್ಷರು : ನನಗೆ ಒಂದು ಚೀಟಿ ಬರೆದು ಕಳುಹಿಸಿದರು. ಆಫೀಸರ್ಸ್ ಮೀಟಿಂಗ್ ಇದೆ, ನೀವು ಅನುಮತಿ ಕೊಟ್ಟರೆ ಹೊರಡುತ್ತೇನೆಂದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮುಖ್ಯಮಂತ್ರಿಗಳು ಹೋಗಲಿ, ನಾನು ಬೇಡವೆನ್ನುವುದಿಲ್ಲ.

ಅಧ್ಯಕ್ಷರು : ಕೊಜೆಂಟ್ರಿಕ್ಸ್ ಬಗ್ಗೆ ಸಂಬಂಧಿಸಿದ ಮೀಟಿಂಗ್ ಇದೆ ಹೋಗುತ್ತೇನೆಂದು ಅನುಮತಿ ಕೇಳಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮುಖ್ಯಮಂತ್ರಿಗಳು ಪಾಪ ಹಿರಿಯರಿದ್ದಾರೆ ಹೋಗಲಿ ನಾನು ಒಪ್ಪಿಕೊಂಡೆ. ಆದರೆ ಸರ್ಟಿಫಿಕೇಟ್ ಕೊಡುವವರು ಕೊಡುವಾಗ ಸುಮ್ಮನೆ ಕೊಟ್ಟರೆ ಹೇಗೆ? ಅವರು ಹೇಳುತ್ತಾರೆ ನಾನು ಸರ್ಟಿಫಿಕೇಟ್ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಇದು ಹದಗೆಟ್ಟು ಹೋಗಿದೆ. ಇದಕ್ಕೆ ಕ್ಯಾನ್ಸರ್ ರೋಗವಾಗಿದೆ. ಇದಕ್ಕೆ ಏಡ್ಸ್ ಆಗಿದೆ, ಇದು ಸುಧಾರಣೆಯಾಗುವುದಕ್ಕೆ ಸಾಧ್ಯವೇ ಇಲ್ಲ. ಇದರಿಂದ ನನ್ನನ್ನು ಬಿಡಿಸಿರೆಂದು ಅವರು ಹೇಳುತ್ತಾರೆ. ನಾನು ಬಿಡುವುದಿಲ್ಲವೆಂದು ಇವರು ಅನ್ನುತ್ತಾರೆ. ಹೀಗಾಗಿ ಎಂತಹ ಪರಿಸ್ಥಿತಿ ಇದೆ ಎಂದರೆ ಇವರು ಅದರಲ್ಲಿ ಸಿಕ್ಕುಹಾಕಿಕೊಂಡು ಬಿಟ್ಟಿದ್ದಾರೆ. ಇವರಿಗೆ ಬಿಡಿಸಿಕೊಳ್ಳುವುದಕ್ಕಾಗುತ್ತಿಲ್ಲ. ಮತ್ತೆ ಸುಧಾರಣೆ ಮಾಡುವುದಕ್ಕೆ ಕೂಡ ಆಗುತ್ತಿಲ್ಲ. ಒಂದು ಕಡೆ ಎಂಪ್ಲಾಯಿಸ್ ಮೈಮೇಲೆ ಬಿದ್ದಿದ್ದಾರೆ. ಇನ್ನೊಂದು ಕಡೆ ಸರ್ಕಾರದ ಕೋ-ಅಪರೇಷನ್ ಇಲ್ಲ. ಒಂದು ಮಾತನ್ನು ಇದರಲ್ಲಿ ಸ್ಪಷ್ಟಪಡಿಸುತ್ತಿದ್ದೇನೆ. ಹಾಗೂ ಹೀಗೂ ಮಾಡಿ ಸಿದ್ಧರಾಮಯ್ಯನವರು ಸಿಂಧ್ಯಾ ಅವರ ಸಹಾಯಕ್ಕೆ ಬಂದಿದ್ದಾರೆ. 70 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಅದು ಆದರೆ ಆ 70 ಕೋಟಿ ರೂಪಾಯಿ ತೆಗೆದುಕೊಂಡು ನೀವು ಏನಾದರೂ ಬಡವರಿಗೆ ಸಹಾಯ ಮಾಡಿದ್ದೀರಾ? ಬಾಕಿಕೊಡುವುದನ್ನು ಅಲ್ಲಿಗಲ್ಲಿಗೆ ಸರಿ ಮಾಡಿಕೊಂಡರು. ಈ ಜೇಬಿನಿಂದ ತಂದು ಆ ಜೇಬಿಗೆ ಕೊಟ್ಟಿದ್ದಾರೆ. ಸುಮಾರು 134 ಕೋಟಿ ರೂಪಾಯಿ ಮೋಟಾರು ವೆಹಿಕಲ್ ಟ್ಯಾಕ್ಸ್‌ನ್ನು ಹೆಚ್ಚು ಕಡಿಮೆ ಅಲ್ಲಿ ಸರಿ ಮಾಡಿಕೊಂಡರು. ಅದು ಇವತ್ತಿನ ದಿವಸ ಇಷ್ಟೊಂದು ಸರ್ಕಾರದಿಂದ ಲಾಭ ಬಂದರೂ ಕೂಡ ಬಡವರಿಗೆ ಹಾಗೂ ಪ್ಯಾಸೆಂಜರಿಗೆ ಇದರಿಂದ ಅನುಕೂಲವಾಗಲಿಲ್ಲ. ಈ ರೀತಿಯಲ್ಲಿ ಇವತ್ತಿನ ದಿವಸ ಕೆ.ಎಸ್.ಆರ್.ಟಿ.ಸಿ. ಕೆಲಸ ಮಾಡುತ್ತಿದೆ. ಆಮೇಲೆ ಇದರೊಳಗೆ ಚೆಕ್ಕಿಂಗ್ ಆಗಿಲ್ಲ, ಡಿಟೆಕ್ಷನ್ ಆಗಲಿ, ಮಿಸ್ ಅಪ್ರೋಪ್ರಿಯೇಷನ್ ಆಗಲಿ ಮತ್ತು ಪರಚೇಸ್‌ನಲ್ಲಿ ಹತೋಟಿ ಇಲ್ಲ. ಐ.ಎಸ್.ಐ. ಸ್ಟಾಂಡರ್ಡ್ ಎಂದು ಹೇಳುತ್ತೇವೆ. ಆದರೆ ಯಾವುದಾದರೊಂದು ಪರ್‌ಚೇಸ್ ಮಾಡಿಕೊಂಡು ಅಲ್ಲಿ ಹಾಕುತ್ತಾರೆ. ಸ್ಪೇರ್‌ಪಾರ್ಟ್ಸ್ ಎಂಟು ದಿವಸ ಇರುವುದಿಲ್ಲ. ಮತ್ತೆ ಇವರು ಡಿಪೋಕ್ಕೆ ವಾಪಸ್ಸು

ಬರಬೇಕು. ಗುಲ್ಬರ್ಗಾದಲ್ಲಿ ಏನಾದರೂ ಬಸ್ ಕೆಟ್ಟರೆ ಅದು ಹುಬ್ಬಳ್ಳಿ ಡಿಪೋಗೆ ಹೋಗಬೇಕು. ಅಥವಾ ಹುಬ್ಬಳ್ಳಿ ಮೆಕ್ಯಾನಿಕಲ್ ಡಿವಿಜನ್‌ಕ್ಕೆ ಹೋಗಬೇಕು. ರಾಯಚೂರದಲ್ಲಿ ಏನಾದರೂ ಆದರೆ ಹುಬ್ಬಳ್ಳಿಗೆ ಹೋಗಬೇಕು. ಹೀಗೆ ಹೋಗಿ ಬರಬೇಕೆಂದರೆ ಸುಮಾರು 600 ರಿಂದ 700 ಕಿ.ಮೀ. ಬರೇ ಫ್ಯೂಯಲ್ ಚಾರ್ಜಸ್ ಆಗುತ್ತದೆ. ಇಂತಹ ಒಂದು ಪರಿಸ್ಥಿತಿಯನ್ನು ಇಟ್ಟುಕೊಂಡು, ಹಿಂದೆ ಟ್ರೈಫರ್‌ಕೇಷನ್ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಆದರೆ ಒಂದು ಸಣ್ಣ ಕೆಲಸ ಮಾಡುವುದಕ್ಕೆ ನಿಮಗೆ 9 ತಿಂಗಳು ಹಿಡಿಯುತ್ತದೆ. ಅದು ಮಾಡುತ್ತೇನೆಂದು ಹೇಳಿದರು. ಡಿಸ್ಟ್ರಿಕ್ಟ್ ರಿ-ಆರ್ಗನೈಸೇಷನ್ ಮಾತಿನ ಭಾಷಣವೂ ಒಂದೇ, ತಮ್ಮ ಕೆ.ಎಸ್.ಆರ್.ಟಿ.ಸಿ. ಟ್ರೈಫರ್‌ಕೇಷನ್ ಮಾಡತಕ್ಕಂಥ ಭಾಷಣವೂ ಒಂದೇ ಏನೂ ವ್ಯತ್ಯಾಸ ಇಲ್ಲ. ಒಂದು ಸ್ಟೇಟ್‌ಮೆಂಟ್ ಕೊಡುವುದು 4 ದಿವಸ ಸುಮ್ಮನೆ ಇರುವುದು. ಅವರು ಒಂದು ಸ್ಟೇಟ್‌ಮೆಂಟ್ ಕೊಟ್ಟರು ಅಂದರೆ 8 ದಿವಸದಲ್ಲಿ 4 ಬಸ್‌ಗಳಾದರೂ ಸುಟ್ಟು ಹೋಗಿರುತ್ತವೆ. ಇಲ್ಲವೆಂದರೆ, ಕಾರಿನ ಮೇಲೆ ಕಲ್ಲು ಹೊಡೆಯುತ್ತಾರೆ. ಇಂತಹ ಒಂದು ಪರಿಸ್ಥಿತಿಯನ್ನು ಇವತ್ತು ನೀವು ನಿರ್ಮಾಣ ಮಾಡುತ್ತಿದ್ದೀರಿ. ಅದಕ್ಕೆ ಸಂಪೂರ್ಣವಾದ ಹೊರೆಯನ್ನು ನೀವು ಹೊತ್ತುಕೊಳ್ಳಬೇಕಾಗುತ್ತದೆ. ಆಮೇಲೆ ನಾನು ಒಂದು ಟೇಬಲ್ ಕೊಡುತ್ತೇನೆ. ಏಕೆಂದರೆ ಅವರು ಬಹಳ ಸಲ ಸಮರ್ಥನೆ ಮಾಡಿಕೊಂಡರು; ಹೆಚ್ಚಿನ ಹೊರೆಯನ್ನು ನಾನು ಹೊರಿಸಿಲ್ಲವೆಂಬ ಮಾತನ್ನು ಹೇಳಿದರು. ಎನ್‌ಟಿಟಿಎಫ್ ತುಮಕೂರು ರಸ್ತೆಯಿಂದ ಮಹಾಲಕ್ಷ್ಮಿ ಲೇಔಟ್‌ಗೆ ಎಕ್ಸಿಸ್ಟಿಂಗ್ ರೇಟ್ 1.50 ಇದ್ದರೆ ಈಗ ಎನ್‌ಹ್ಯಾನ್ಸ್ಡ್ ರೇಟ್ ಅಂದರೆ ಸಿಂಧ್ಯ ಅವರ ಕೃಪೆ ಮತ್ತು ಜೆ.ಹೆಚ್. ಪಟೇಲ್‌ರ ಆಶೀರ್ವಾದ 3 ರೂಪಾಯಿ ಕೊಡಬೇಕು. ಅಂದರೆ ಎಷ್ಟಾಯಿತು - 100 ಪರ್ಸೆಂಟ್ ಆಯಿತು. 25-30 ಪರ್ಸೆಂಟ್‌ಲ್ಲಿ, 100 ಪರ್ಸೆಂಟ್ ಎಲ್ಲಿ? ಸರ್ಬನ್ ಸರ್ವೀಸಸ್ ತೆಗೆದುಕೊಂಡರೆ ಇದರಲ್ಲಿ 1.25 ಇದ್ದದ್ದು 2.50 ಪೈಸೆ ಆಗಿದೆ. ಅಂದರೆ 100 ಪರ್ಸೆಂಟ್ ಆಯಿತು. ರೂಟ್ ನಂ. 273 ದಾಸರ ಹಳ್ಳಿಯಿಂದ ಹೆಚ್‌ಎಂಟಿ ಸ್ಟಾಪ್ 1.50 ಪೈಸೆ ಇದ್ದದ್ದು 3 ರೂಪಾಯಿ ಆಗಿದೆ. ಆಮೇಲೆ ಬಸ್ ನಿಲ್ದಾಣದಿಂದ ವಸಂತ್ ನಗರಕ್ಕೆ ಪುಷ್ಪಕ್ ಬಸ್‌ನಲ್ಲಿ 2 ರೂಪಾಯಿ ಇದ್ದದ್ದು 5 ರೂಪಾಯಿ ಆಗಿದೆ. ಅಂದರೆ 150 ಪರ್ಸೆಂಟ್ ಆಯಿತು. ಇದರಲ್ಲಿ ಬಡವರು ಅಡ್ಡಾಡುತ್ತಾರಲ್ಲವೇ? ಇದರಲ್ಲಿ ಎಕ್ಸೈಜ್ ಕಂಟ್ರಾಕ್ಟರ್ಸ್, ಗ್ರಾನೈಟ್ ಲಾಬಿ ಮಾಡತಕ್ಕವರು, ಮಂತ್ರಿಗಳು, ಶಾಸಕರು ಇವರೇ ಬಸ್ಸುಗಳಲ್ಲಿ ಅಡ್ಡಾಡುವುದು ತಾನೇ? ಬಡವರು ಎಲ್ಲಿ ಅಡ್ಡಾಡುತ್ತಾರೆ? ಬಡವರು ಕಾರಿನಲ್ಲಿ, ವಿಮಾನದಲ್ಲಿ ಹೋಗುತ್ತಾರೆ. ಅದಕ್ಕಾಗಿ ಇದನ್ನು ಮಾಡಿದ್ದು! ವಿಜಯನಗರದಿಂದ ನಾಗರಭಾವಿಗೆ 2 ರೂಪಾಯಿ ಇದ್ದದ್ದು ಈಗ 5 ರೂಪಾಯಿ. ಅಂದರೆ 150 ಪರ್ಸೆಂಟ್ ಜಾಸ್ತಿ ಇದು ನಗರದಲ್ಲಿರತಕ್ಕವರಿಗೆ ಮಾನ್ಯ ಸಿಂಧ್ಯ ಅವರು ಕೊಟ್ಟಂಥ ಕೊಡುಗೆ. Gift to the poor people those who are travelling in the buses, ordinary buses, city buses etc., ಮಕ್ಕಳಿಗೆ ಅಥವಾ ಗೃಹಿಣಿಯವರಿಗೆ ಕೊಟ್ಟಂಥ ಕೊಡುಗೆ. ಇನ್ನು ಇವರು ಹಳ್ಳಿಯ ಜನರ ಬಗ್ಗೆ ಬಹಳಷ್ಟು ಹೇಳುತ್ತಾರೆ. ಹಳ್ಳಿಯ ಜನರಿಗೆ ಏನು ಕೊಟ್ಟಿದ್ದಾರೆಂದರೆ, ಇಲ್ಲಿಂದ ತುಮಕೂರಿಗೆ ಚಾರ್ಜ್‌ಬಲ್ ಸ್ಟೇಜಸ್ ಕಡಿಮೆ ಮಾಡಿದ್ದಾರೆ. 11 ಇದ್ದದ್ದು 8 ಮಾಡಿದ್ದಾರೆ. ಏಕೆಂದರೆ 8 ಇದ್ದವನು ಅಷ್ಟೇ ಕೊಡಬೇಕು, 6 ಇದ್ದವನು ಅಷ್ಟೇ ಕೊಡಬೇಕು. ಏಕೆಂದರೆ ಬರುವಷ್ಟು ದುಡ್ಡು ಬರಲಿ ಎಂದು ಮಾಡಿದ್ದಾರೆ. ತುಮಕೂರು 11 ಚಾರ್ಜ್‌ಬಲ್

ಸ್ಟೇಜಸ್, ಎಕ್ಸಿಸ್ಟಿಂಗ್ ರೇಟ್ 17 ರೂಪಾಯಿ, ರಿವೈಸ್ಡ್ ರೇಟ್ 23 ರೂಪಾಯಿ. ಇದು ಬಡವರಿಗೆ ಮಾಡಿದಂಥ ಸಹಾಯ! ಬೆಂಗಳೂರಿನಿಂದ ತುಮಕೂರಿಗೆ ಎಲ್ಲಾ ಬಿಸಿನೆಸ್‌ಮನ್ ಹೋಗುತ್ತಾರೆ. ದೊಡ್ಡ ದೊಡ್ಡ ಇಂಡಸ್ಟ್ರೀಗಳನ್ನು ಇಟ್ಟುಕೊಂಡಿರುವವರು ಬಸ್‌ನಿಂದ ಹೋಗಿ ಇಂಡಸ್ಟ್ರೀ ನಡೆಸಿಕೊಂಡು ವಾಪಸ್ಸು ಬರುತ್ತಾರೆ. ಮಂಡ್ಯ 15 ಚಾರ್ಜ್‌ಬಲ್ ಸ್ಟೇಜಸ್, 24 ರೂಪಾಯಿ ಇದ್ದದ್ದು 30 ರೂಪಾಯಿ ಆಗಿದೆ. ಮೈಸೂರಿಗೆ 34 ರೂಪಾಯಿ ಇದ್ದದ್ದು ಈಗ 44 ರೂಪಾಯಿ ಆಗಿದೆ. ಹಾಸನಕ್ಕೆ 45 ರೂಪಾಯಿ ಇದ್ದದ್ದು 58 ರೂಪಾಯಿ ಆಗಿದೆ. ಕನಿಷ್ಟಪಕ್ಷ ಹಾಸನಕ್ಕಾದರೂ ಕಡಿಮೆ ಮಾಡುತ್ತಾರೆಂದು ತಿಳಿದುಕೊಂದಿದ್ದೆ; ಅದನ್ನು ಮಾಡಲಿಲ್ಲ. ಚಿಕ್ಕಮಗಳೂರಿಗೆ 60 ರೂಪಾಯಿ ಇದ್ದುದ್ದು ಈಗ 80 ರೂಪಾಯಿ ಆಗಿದೆ. ಮಡಕೇರಿಗೆ 64 ರೂಪಾಯಿ ಇದ್ದದ್ದು ಈಗ 84 ರೂಪಾಯಿ ಆಗಿದೆ. ದಾವಣಗೆರೆ 65 ರೂಪಾಯಿ ಇದ್ದದ್ದು 85 ರೂಪಾಯಿ ಆಗಿದೆ. ಶಿವಮೊಗ್ಗಕ್ಕೆ 68 ರೂಪಾಯಿ ಇದ್ದದ್ದು 90 ರೂಪಾಯಿ ಆಗಿದೆ. ಬಳ್ಳಾರಿಗೆ 77 ರೂಪಾಯಿ ಇದ್ದದ್ದು 101 ರೂಪಾಯಿ ಆಗಿದೆ. ಮುಂದಕ್ಕೆ ಹೋದ ಹಾಗೆ ಇನ್ನೂ ಹೆಚ್ಚಾಗಿದೆ. ಹೊಸಪೇಟೆ 84 ರೂಪಾಯಿ ಇದ್ದದ್ದು 111ರೂಪಾಯಿ ಆಗಿದೆ. ಹುಬ್ಬಳ್ಳಿಗೆ 99 ರೂಪಾಯಿ ಇದ್ದದ್ದು 131 ರೂಪಾಯಿ, ಧಾರವಾಡಕ್ಕೆ 103 ರೂಪಾಯಿ ಇದ್ದದ್ದು 137 ರೂಪಾಯಿ, ರಾಯಚೂರಿಗೆ 109 ರೂಪಾಯಿ ಇದ್ದದ್ದು 159 ರೂಪಾಯಿ, ಬೆಳಗಾಂಗೆ 120 ರೂಪಾಯಿ ಇದ್ದದ್ದು 161 ರೂಪಾಯಿ, ಕಾರವಾರಕ್ಕೆ 126 ರೂಪಾಯಿ ಇದ್ದದ್ದು 170 ರೂಪಾಯಿ, ಬಿಜಾಪುರಕ್ಕೆ 138 ರೂಪಾಯಿ ಇದ್ದದ್ದು 186 ರೂಪಾಯಿ, ಗುಲ್ಬರ್ಗಾಕ್ಕೆ 150 ರೂಪಾಯಿ ಇದ್ದದ್ದು 203 ರೂಪಾಯಿ ಆಗಿದೆ. ಕನಕಪುರದ್ದು ಹೆಚ್ಚು ಕಡಿಮೆ ಅಷ್ಟೇ ಬರುತ್ತದೆ. ಏಕೆಂದರೆ ಸಧ್ಯಕ್ಕೆ ಅದರಲ್ಲಿ ವ್ಯತ್ಯಾಸ ಮಾಡುವುದಕ್ಕಾಗುವುದಿಲ್ಲ. ಆಮೇಲೆ ನೋಡೋಣ.

ಶ್ರೀ ಹೆಚ್. ಶಿವಪ್ಪ : ನೋಡದೆ ಮಾಡಿದ್ದಾರೆಂದರೆ ಡಿಸ್ಕ್ರಿಮಿನೇಷನ್ ತೋರಿಸಿದ್ದಾರೆಂಬ ಮಟ್ಟಕ್ಕೆ ಹೇಳುತ್ತೀರಿ. ತಾವು ನೋಡಿ ಹೇಳಬೇಕು. ಐರಾನಿಕಲ್ ಆಗಿ ಹೇಳಬೇಕಾದರೆ there must be soem basis.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಎಷ್ಟು ವಕಾಲತ್ತು ಮಾಡಿದರೂ ಅವರು ನಿಮ್ಮನ್ನು ಮುಂದಿನ ಕ್ಯಾಬಿನೆಟ್ ಎಕ್ಸ್‌ಪ್ಯಾನ್‌ಷನ್‌ನಲ್ಲಿ ಸೇರಿಕೊಳ್ಳುವುದಿಲ್ಲ.

(ಗೊಂದಲ)

SRI H. SHIVAPPA : We must know what his stand is.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ರೀತಿಯಾಗಿ ಇವತ್ತಿನ ದಿವಸ ಈ ಬಸ್ ಚಾರ್ಜಸ್ ಪ್ರತಿ ಹಂತದಲ್ಲಿ ತಾವು ಏರಿಸಿದ್ದೀರಿ. ಎಲ್ಲವನ್ನು ಲೆಕ್ಕ ಹಾಕಿದಾಗ 40-50-100-150 ಪರ್ಸೆಂಟ್ ಆ ರೀತಿಯಾಗಿ ತಮ್ಮ ಏರಿಕೆ ಇವತ್ತಿನ ದಿವಸ ಇದೆ. ಇದಲ್ಲದೆ ತಾವು ಈ ಹಿಂದೆ ಇದೇ ಸದನದಲ್ಲಿ ಶ್ರೀಮತಿ ನೇಸರ್ಗಿಯವರ ಪ್ರಶ್ನೆಗೆ ಪುಷ್ಪಕ್ ಸರ್ವೀಸಸ್ ಬಗ್ಗೆ ಉತ್ತರ ಕೊಟ್ಟಿರಿ. The question was, "when Pushpak Services were started in Bangalore city? What is the purpose?

ಇದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ನಾವು ಒಳ್ಳೆಯ ಸರ್ವೀಸಸ್ ಕೊಡಬೇಕು ಮತ್ತು ಕಂಫರ್ಟ್ಸ್ ಕೊಡಬೇಕೆಂದು ಇದನ್ನು ಪ್ರಾರಂಭ ಮಾಡಿದ್ದೇವೆ; ಇದರಲ್ಲ ಹೈ ಕ್ವಾಲಿಟಿ ಸರ್ವೀಸ್ ಇರುವುದರಿಂದ ಆರ್ಡಿನರಿ ಬಸ್‌ಗಿಂತ ಸ್ವಲ್ಪ ಮಟ್ಟಹೆಚ್ಚಿಗೆ ದರವನ್ನು ಗೊತ್ತು ಮಾಡಿದ್ದೇವೆಂದು ತಾವು ಫೆಬ್ರವರಿ 21 ರಂದು ಹೇಳಿದ್ದೀರಿ. ಆದರೆ ಅದನ್ನು ಹೇಳಿ ಇನ್ನೂ 15 ದಿನ ಕೂಡ ಆಗಿಲ್ಲ, ತಾವು ಇದಕ್ಕೂ ಕೂಡ 150 ಪರ್ಸೆಂಟ್ ದರವನ್ನು ಏರಿಸಿದ್ದೀರಿ. ಅಂದರೆ ಅಸೆಂಬ್ಲಿಯಲ್ಲಿ 22-1-97ರಂದು ಪ್ರಶ್ನೆಗೆ ಉತ್ತರ ಕೊಟ್ಟ ಮೇಲೆ ಈ ದರವನ್ನು ಏರಿಸಿದ್ದೀರಲ್ಲಾ ಎಷ್ಟರಮಟ್ಟಿಗೆ ತಮಗೆ ನಿಮ್ಮ ಮಾತಿನ ಮೇಲೆ ನಂಬಿಕೆ ಇದೆ ಎಂದು ತಾವು ಹೇಳಬೇಕು.

(ಶ್ರೀ ಬಿ.ಆರ್. ಯಾವಗಲ್ ಅವರು ಪೀಠವನ್ನಲಂಕರಿಸಿದರು)

ತಾವು ಯಾವಾಗಲೂ ಬೇರೆ ರಾಜ್ಯಗಳಿಗೆ ಹೋಲಿಸತಕ್ಕ ಪ್ರಯತ್ನವನ್ನು ಸಾಕಷ್ಟು ಮಾಡಿದ್ದೀರಿ. ಆದರೆ ಇವತ್ತು ಅಕ್ಯುಪೆನ್ಸಿ ರೇಷಿಯೋ ತೆಗೆದುಕೊಂಡರೆ ಆಂಧ್ರಪ್ರದೇಶದಲ್ಲಿ 73 ಪರ್ಸೆಂಟ್ ಆಕ್ಯುಪೆನ್ಸಿ ರೇಷಿಯೋ ಇದೆ. ಕರ್ನಾಟಕದಲ್ಲಿ 71 ಪರ್ಸೆಂಟ್, ಉತ್ತರ ಪ್ರದೇಶ, ಗುಜರಾತ್, ಮಹಾರಾಷ್ಟ್ರದಲ್ಲಿ 58, 67, 68 ಪರ್ಸೆಂಟ್ ಈ ರೀತಿ ಇದೆ. ಮಹಾರಾಷ್ಟ್ರ, ಗುಜರಾತ್ ಉತ್ತರ ಪ್ರದೇಶ ಇವಕ್ಕೆ ಹೋಲಿಸಿದರೆ ನಮ್ಮ ಆಕ್ಯುಪೆನ್ಸಿ ರೇಷಿಯೋ 71 ಪರ್ಸೆಂಟ್ ಅಂದರೆ ಹೆಚ್ಚಿಗೆ ಇದೆ. ಆಂಧ್ರಪ್ರದೇಶಕ್ಕಿಂತ ಕಡಿಮೆ ಇದೆ. ಅಂದರೆ ಗುಜರಾತ್‌ನಲ್ಲಿ ಪ್ರಾಫಿಟ್‌ಸಲ್ಲಿ ನಡೆಯಬಹುದು, ಮಹಾರಾಷ್ಟ್ರದಲ್ಲಿ ಪ್ರಾಫಿಟ್‌ನಲ್ಲಿ ನಡೆಯಬಹುದು. ನಮ್ಮಲ್ಲಿ ಏತಕ್ಕೆ ಪ್ರಾಫಿಟ್‌ನಲ್ಲಿ ನಡೆಯುವುದಕ್ಕಾಗುವುದಿಲ್ಲ? ಇವತ್ತು ಮಹಾರಾಷ್ಟ್ರದಲ್ಲಿ ಆಕ್ಯುಪೆನ್ಸಿ ರೇಟ್ 58 ಪರ್ಸೆಂಟ್ ಇದ್ದರೆ ಅಲ್ಲಿ ಲಾಸ್ ಕಡಿಮೆ ಇದೆ. ಪ್ರಾಫಿಟ್‌ಅಂದರೆ ನಾನು ಆ ದೃಷ್ಟಿಯಿಂದ ಹೇಳುತ್ತಿಲ್ಲ. ಆಕ್ಯುಪೆನ್ಸಿ ರೇಷಿಯೋ ನಮ್ಮದು 71 ಪರ್ಸೆಂಟ್, ಅಲ್ಲಿನದು 58 ಪರ್ಸೆಂಟ್ ಇದ್ದರೂ ಕೂಡ ಇವತ್ತು ನಮಗಿಂತ ಕಡಿಮೆ ಲಾಸ್‌ನಲ್ಲಿ ಅಲ್ಲಿ ಹೇಗೆ ನಡೆಯುತ್ತದೆ? ಇಲ್ಲಿ ಏತಕ್ಕೆ ನಡೆಯುವುದಿಲ್ಲ? ಅದನ್ನು ನೀವು ಸರಿಪಡಿಸಿ ಇದೆಲ್ಲವನ್ನೂ ಕೂಡ ನೋಡಿಕೊಂಡು ಆಮೇಲೆ ನೀವು 5-10 ಪರ್ಸೆಂಟ ಹೆಚ್ಚಿಗೆ ಮಾಡಬೇಕು ಎನ್ನತಕ್ಕ ವಾದವನ್ನು ಇಟ್ಟಿದ್ದರೆ ಅದಕ್ಕೇನಾದರೂ ಅರ್ಥಇರುತ್ತಿತ್ತು. ಆಕ್ಯುಪೆನ್ಸಿ ರೇಷಿಯೋ ಯುಟಿಲೈಸೇಷನ್ ಇದೆಲ್ಲವನ್ನೂ ನಾವು ನೋಡಿದಾಗ ಇವತ್ತಿನ ದಿವಸ ಹೆಚ್ಚು ಕಡಿಮೆ ಬೇರೆ ರಾಜ್ಯದಷ್ಟೇ ಇದ್ದರೂ ಕೂಡ ನಮ್ಮಲ್ಲಿ ಇಷ್ಟೊಂದು ಸೋರಿಕೆ ಆಗುವುದಕ್ಕೆ ಕಾರಣರು ಯಾರು? ಇವತ್ತು ಸುಧಾರಣೆ ಹೇಗಾಗುತ್ತದೆ? ಬರೀ ಬಾಯಿಮಾತಿನಿಂದ ಆಗುತ್ತದಾ? ಅದೇ ರೀತಿ ಸ್ಟಾಫ್ ಕೂಡ. ನಮ್ಮಲ್ಲಿ ಅತಿ ಹೆಚ್ಚಿನ ಸ್ಟಾಫ್ ಇಲ್ಲ ಆಂಧ್ರಪ್ರದೇಶಕ್ಕೆ ಹೋಲಿಸಿದರೆ. ಅಲ್ಲಿ 8.33 ಪರ್ಸೆಂಟ್ ಇದೆ. ಉತ್ತರಪ್ರದೇಶದಲ್ಲಿ 8 ಪರ್ಸೆಂಟ್ ಇದೆ. ಮಹಾರಾಷ್ಟ್ರದಲ್ಲಿ 8.07 ಇದೆ. ನಮಗಿಂತ ಜಾಸ್ತಿ ಇದೆ. ಗುಜರಾತಿನಲ್ಲಿ 7.99 ಅಂದರೆ 8 ಪರ್ಸೆಂಟ್ ಇದೆ. ಕರ್ನಾಟಕದಲ್ಲೂ 8 ಪರ್ಸೆಂಟ್ ಇದೆ. ಅಂದರೆ ಇವತ್ತು ಏನು ನಾವು ಬಸ್ಸಿಗೆ ನೇಮಕ ಮಾಡುತ್ತೇವೆ ಜನರನ್ನು ಪ್ರತಿ ಬಸ್ಸಿಗೆ 8 ಜನ ಗುಜರಾತಿನಲ್ಲಿದ್ದಾರೆ, ಆಂಧ್ರಪ್ರದೇಶದಲ್ಲಿದ್ದಾರೆ, ಯು.ಪಿ.ಯಲ್ಲಿದ್ದಾರೆ, ಕರ್ನಾಟಕದಲ್ಲಿದ್ದಾರೆ. ಮತ್ತು ಅಲ್ಲಿ ಲಾಸ್ ಕಡಿಮೆ ಇದ್ದು ಇಲ್ಲಿ ಏತಕ್ಕೆ ಜಾಸ್ತಿ ಇದೆ? ಅದೇ ಅಂಕಿಸಂಖ್ಯೆ ಇದೆ. ಅಷ್ಟೇ ಜನ ಇಲ್ಲೂ ಕೂಡ ಕೆಲಸ ಮಾಡುತ್ತಿದ್ದಾರೆ. ಅದೇ ರೀತಿಯಾಗಿ

ಇವತ್ತು ಎಫ್‌ಕ್ಟೀವ್ ಆಗಿ ಕಿಲೋಮೀಟರ್ ಪರ್‌ಸ್ಟಾಫ್ ಪರ್ ಡೇ ನಾವು ಲೆಕ್ಕ ಹಾಕಿಕೊಂಡರೆ ಕರ್ನಾಟಕದಲ್ಲಿ 41 ಕಿಲೋಮೀಟರ್. ಬೇರೆ ಕಡೆ ಗುಜರಾತ್, ಆಂಧ್ರಪ್ರದೇಶ ಲೆಕ್ಕಹಾಕಿಕೊಂಡರೆ ಗುಜರಾತಿನಲ್ಲ 40 ಪರ್ಸೆಂಟ್ , ಆಂಧ್ರದಲ್ಲಿ 36 ಪರ್ಸೆಂಟ್, ಮಹಾರಾಷ್ಟ್ರದಲ್ಲಿ 35 ಪರ್ಸೆಂಟ್, ಉತ್ತರ ಪ್ರದೇಶದಲ್ಲಿ 29 ಪರ್ಸೆಂಟ್ ಅಂದರೆ ಇಲ್ಲೂ ಕೂಡ ಎಫ್‌ಕ್ಟೀವ್ ಕಿಲೋಮೀಟರ್ ಪರ್‌ಸ್ಟಾಫ್ ಪರ್ ಡೇ ಈ ಒಂದು ರೆಷಿಷೂನಲ್ಲಿ ಮುಂದಿದ್ದರೂ ಕೂಡ ಇವತ್ತು ಲುಕ್ಸಾನಾಗಿದೆ. ಆದಾದಮೇಲೆ ಆವರೇಜ್‌ನಂಬರ್ ಆಫ್ ಬಸಸ್ ಆನ್ ರೋಡ್, 11 ಸಾವಿರಕ್ಕೂ ಮೇಲ್ಪಟ್ಟಿರತಕ್ಕ ರೂರಲ್ ಬಸ್‌ಗಳು 2 ಸಾವಿರಕ್ಕಿಂತ ಹೆಚ್ಚಿಗೆ ಇರುವ ಸಿಟಿ ಬಸ್‌ಗಳು ಇವುಗಳನ್ನು ಲೆಕ್ಕ ಹಾಕಿದಾಗ, ಕೆಲವು ಕೆಟ್ಟುಹೋಗಿ ನಿಲ್ಲುತ್ತದೆ, ಇದು ಸಾವಿರವೋ ಎರಡು ಸಾವಿರವೋ ಮೂರು ಸಾವಿರವೋ ಲೆಕ್ಕ ಇರುತ್ತದೆ. ರೇಷಿಯೋ ತೆಗೆದುಕೊಂಡಾಗ ಆಂಧ್ರಪ್ರದೇಶದಲ್ಲಿ ಇವತ್ತಿನ ದಿವಸ ಸುಮಾರು 14 ಸಾವಿರ ಇದ್ದರೆ ಕರ್ನಾಟಕದಲ್ಲಿ8,297 ಇದೆ. ಅಂದರೆ ರೋಡ್‌ನಲ್ಲಿರತಕ್ಕದ್ದು. ಕೆಟ್ಟಿದ್ದನ್ನು ತಾವು ಲೆಕ್ಕಹಾಕಿಕೊಂಡರೂ ಸುಮಾರು 11 ಸಾವಿರ 12 ಸಾವಿರ ಸಮೀಪ ಬರುತ್ತದೆ. ಆ ಪ್ರಕಾರ ಇವತ್ತು ರೋಡಿನಲ್ಲಿ ಅಡ್ಡಾಡತಕ್ಕ ಬಸ್ಸುಗಳು 2292. ಸಮೀಪ ಸಮೀಪ ಇವತ್ತಿನದಿವಸ 4 ಸಾವಿರ 5 ಸಾವಿರ ಬಸ್ಸುಗಳು ಕೆಟ್ಟುನಿಲ್ಲುತ್ತವೆ ಅಥವಾ ಓಡಾಡುವುದಿಲ್ಲ. ಕಂಡಕ್ಟರ್ ಡ್ರೈವರ್ಸ್ 25 ಪರ್ಸೆಂಟ್ ಆಬ್ಸೆಂಟ್ ಇರುತ್ತದೆ. ಆ ಕಾರಣದಿಂದ ಹೋಗುವುದಿಲ್ಲ ಎಂಬುದು ಇದರಲ್ಲಿ ಸ್ಪಷ್ಟವಾಗುತ್ತದೆ. ಆಮೇಲೆ ಯಟಿಲೈಸೇಷನ್ ಬಗ್ಗೆ ಈಗಾಗಲೇ ನಾನು ಹೇಳಿದೆ. ಆಂಧ್ರಪ್ರದೇಶದಲ್ಲಿ 94 ಪರ್ಸೆಂಟ್, ಕರ್ನಾಟಕದಲ್ಲಿ 89 ಪರ್ಸೆಂಟ್ ಇದೆ. ಅಂದರೆ ಬಸ್ಸನ್ನು ಎಷ್ಟು ಯುಟಿಲೈಸೇಷನ್ ಮಾಡುತ್ತಿದ್ದೇವೆ ಎಂದು. ಇದು ಯು.ಪಿ.ಯಲ್ಲಿ 88 ಪರ್ಸೆಂಟ್ ಇದೆ. ಗುಜರಾತಿನಲ್ಲಿ85 ಪರ್ಸೆಂಟ್, ಮಹಾರಾಷ್ಟ್ರದಲ್ಲಿ84 ಪರ್ಸೆಂಟ್ ಇದೆ. ಅಂದರೆ ಮಹಾರಾಷ್ಟ್ರಕ್ಕೆ ಹೋಲಿಸಿದರೆ ನಮ್ಮ ಯುಟಿಲೈಸೇಷನ್ 89 ಪರ್ಸೆಂಟ್ ಇದ್ದರೂ ನಷ್ಟದಲ್ಲಿ ನಡೆಯುತ್ತಿದೆ. ಪ್ರತಿ ಬಸ್ಸಿನಲ್ಲಿ ಪ್ರತಿ ಕಿಲೋಮೀಟರ್‌ಗೆ ಎಷ್ಟು ಲುಕ್ಸಾನಾಗುತ್ತದೆ ಎಂಬ ಮಾತನ್ನು ನಾನು ಪ್ರಸ್ತಾಪ ಮಾಡುವುದಿಲ್ಲ. ಏಕೆಂದರೆ ಅದು ಬಹಳ ಡೀಟೈಲ್ಸ್ ಇದೆ. ಎಲ್ಲಾ ರಾಜ್ಯದ್ದೂ ಹೇಳುತ್ತಿದ್ದೇನೆ. ಆದರೆ ಇವತ್ತು ಬಹಳ ಡೀಟೈಲ್ಸ್ ಇದೆ. ಎಲ್ಲಾ ರಾಜ್ಯದ್ದೂ ಹೇಳುತ್ತಿದ್ದೇನೆ. ಆದರೆ ಇವತ್ತು ಇಷ್ಟೊಂದು ನಾವು ಸಹಾಯ ಮಾಡುವುದಕ್ಕೆ ಇದ್ದರೂ ಕೂಡ ಅಥವಾ ಸರ್ಕಾರದಲ್ಲಿ ಇಷ್ಟೊಂದು ಸವಲತ್ತು ಇದ್ದರೂ ಕೂಡ ಇವತ್ತು ಏತಕ್ಕೆ ಈ ರೀತಿಯಾಗಿ ಈ ಒಂದು ಸಂಸ್ಥೆ ಕೆಟ್ಟುಹೋಗಿದೆ ಅಥವಾ ಹಾಳಾಗಿದೆ ಎಂಬುದಕ್ಕೆ ತಾವು ಉತ್ತರ ಕೊಡಬೇಕಾಗುತ್ತದೆ. ಬೇರೆ ಯಾರು ಬಂದರೂ ಸುಧಾರಣೆ ಆಗುವುದಿಲ್ಲ ಎಂದು ಹೇಳಿ ನೀವು ಒಂದು ಪಬ್ಲಿಕ್ ಅಂಡರ್‌ಟೇಕಿಂಗ್ ಹಾಳು ಮಾಡಿದರೆ ಇದರಿಂದ ಮುಂದೆ ಬರತಕ್ಕ ಪೀಳಿಗೆಗೆ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಮೇಲೆ ವಿಶ್ವಾಸ ಹೋಗುತ್ತದೆ. ನಾನು ಬರೀ ಕೆ.ಎಸ್.ಆರ್.ಟಿ.ಸಿ. ಬಗ್ಗೆ ಮಾತನಾಡುತ್ತಿಲ್ಲ. ಯಾವುದೇ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಇರಬಹುದು. ಅದು ರೈಲ್ವೆ ಇರಬಹುದು, ಬಸ್ ಇರಬಹುದು, ಕಾರ್ಖಾನೆಗಳಿರಬಹುದು, ಸ್ಟೀಲ್ ಕಾರ್ಖಾನೆಗಳಿರಬಹುದು ಅಥವಾ ಮೈಸೂರು ಲ್ಯಾಂಪ್ಸ್ ಇರಬಹುದು. ಒಂದು ವೇಳೆ ಈ ಸರ್ಕಾರವನ್ನೇ ನಡೆಸುವುದಕ್ಕೆ ಅಸಮರ್ಥರು, ಅವರ ಕೈಯಿಂದ ನಡೆಸುವುದಕ್ಕಾಗುವುದಿಲ್ಲ ಎಂದರೆ ಮುಂದೆ ಎಲ್ಲಾ ಪ್ರೈವೆಟೈಸೇಷನ್ ಮತ್ತು ಕ್ಯಾಪಿಟಲೈಸೇಷನ್ ಕೈಯಲ್ಲಿ ಹೋಗತಕ್ಕ ಸಾಧ್ಯತೆ ಇದೆ.

ಈಗಾಗಲೇ ಲಿಬರಲೈಸೇಷನ್ ಪಾಲಿಸಿಯಲ್ಲಿ ಹೆಚ್ಚಿನ ಅಟಿಟ್ಯೂಡ್ ಏನೆಂದರೆ ಪ್ರೈವೆಟೈಸೇಷನ್ ಕಡೆ ನಡೆದಿದೆ. ಅಂದಾಗ ಹಳ್ಳಿಯ ಜನರಿಗೆ ಸೌಲಭ್ಯ ಕೊಡುವವರು ಯಾರು? ಪ್ರೈವೇಟ್ ಜನ ಎಲ್ಲಿ ಹೋಗುತ್ತಾರೆ? ಪ್ರೈವೇಟ್‌ನವರು ಎಲ್ಲಿ ಲಾಭ ಇದೆ ಆ ಕಡೆ ಹೋಗುತ್ತಾರೆ. ಪ್ರೈವೇಟ್ ಜನ ಇಂಟೀರಿಯರ್‌ಗೆ ಹೋಗು ಎಂದರೂ ಹೋಗುವುದಿಲ್ಲ. ಒಂದೊಂದು ದಿವಸ ಒಂದೊಂದು ಹಳ್ಳಿಗೆ ಹೋಗುವ ಬಸ್ಸಿನಲ್ಲಿ ನಾಲ್ಕು ಅಥವಾ ಐದು ಜನ ಕೂತಿರುತ್ತಾರೆ. ಆದರೂ ಕೂಡ ಆ ಹಳ್ಳಿಗೆ ಸೌಲಭ್ಯ ಕೊಡಬೇಕೆಂಬ ದೃಷ್ಟಿಯಿಂದ ನಾವು ಬಸ್ಸನ್ನು ಕಳುಹಿಸಬೇಕಾಗುತ್ತದೆ. ಅದಕ್ಕೆ ಒಂದು ವೇಳೆ ಇದೇ ರೀತಿಯಾಗಿ ಅಕ್ಯುಮುಲೇಟೆಡ್ ಲಾಸ್ ಹೆಚ್ಚು ಮಾಡಿಕೊಳ್ಳುತ್ತಾ ಹೋಗಿ ಇದನ್ನು ಸಂಪೂರ್ಣವಾಗಿ ಕೆಡಿಸಿದರೆ ಖಂಡಿತವಾಗಿ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಮೇಲೆ ಜನರಿಗೆ ವಿಶ್ವಾಸ ಹೋಗಿ ಜನ ನಾಳೆ ನಿಮ್ಮನ್ನು ಬೀದಿಗೆ ಎಳೆಯುತ್ತಾರೆ. ಮತ್ತೆ ಬೇಡಪ್ಪ, ಪ್ರೈವೇಟ್‌ನವರೇ ಒಳ್ಳೆಯವರು, ಕ್ಯಾಪಿಲಿಸ್ಟ್ ಜನರೇ ಒಳ್ಳೆಯವರು, ಅವರು ಏನೇ ಲಾಭ ಮಾಡಿಕೊಳ್ಳಲಿ ಕೊನೆಗೆ ನಮಗೆ ಬಸ್ಸಾದರೂ ಹೋಗುತ್ತದಲ್ಲಾ ಎಂದು ಜನ ಹೇಳುತ್ತಾರೆ.ಬಸ್ಸಿನ ಟಾಪ್ ಮೇಲೆ ಜನ ಕುಳಿತು ಹೋಗುತ್ತಾರೆ. ಕೆ.ಎಸ್.ಆರ್.ಟಿ.ಸಿ ಬಸ್ಸಿರಲಿ ಪ್ರೈವೇಟ್ ಬಸ್ಸಿರಲಿ ಟಾಪ್ ಮೇಲೆ ಕುಳಿತು ಹೋಗುತ್ತಾರೆ. ಟ್ರ್ಯಾಕ್ಟರ್‌ನಲ್ಲಿ ತುಂಬಿಕೊಂಡು ಹೋಗುತ್ತಾರೆ. ಲಾರಿಯಲ್ಲಿ ಎಲ್ಲದರ ಮೇಲೂ ಕೂಡ ಜನ ಹೋಗುತ್ತಾರೆ. ತಾವು ನೋಡಿರಬಹುದು. ಎಲ್ಲಾ ಕಡೆಯೂ ಇದೆ. ಟ್ರ್ಯಾಕ್ಟರ್‌ನಲ್ಲೂ ಇವತ್ತು ಪ್ಯಾಸೆಂಜರ್ಸ್ ತುಂಬುತ್ತಿದ್ದಾರೆ ಏಕೆಂದರೆ ಬಸ್ಸಿನ ಕೊರತೆ ಇದ್ದ ಕಾರಣ. ಇಷ್ಟು ಜನ ದುಡ್ಡು ಕೊಟ್ಟು ಹೋಗುವವರಿದ್ದರೂ ಕೂಡ.ಕೆ.ಎಸ್.ಆರ್.ಟಿ.ಸಿ ಲುಕ್ಸಾನಾಗುತ್ತದೆ. ಇದಕ್ಕೆ ಔಷಧಿ ಕಂಡುಹಿಡಿಯುವುದಕ್ಕೆ ಏತಕ್ಕೆ ಸಾಧ್ಯ ಆಗಲಿಲ್ಲ? ಎಲ್ಲಿ ಹೋಯಿತು ನಿಮ್ಮ ಎಫಿಷಿಯೆನ್ಸಿ ಎಂದು ನಾನು ಕೇಳುತ್ತಿದ್ದೇನೆ. ಆ ಕಡೆ ಗಮನ ಏತಕ್ಕೆ ಕೊಡಲಿಲ್ಲ? ಏತಕ್ಕೆ ಗಮನ ಹರಿಸಲಿಲ್ಲ? ಇವತ್ತು ಇನ್ನೊಂದು ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತೇನೆ. ಬೇರೆ ರಾಜ್ಯದಲ್ಲಿ ಫ್ಯುಯಲ್ ಮತ್ತು ಕಾಸ್ಟ್ ಆಫ್ ಫ್ಯೂಯಲ್ ಇದಕ್ಕೆ ಹೋಲಿಕೆ ಮಾಡಿದಾಗ ಕರ್ನಾಟಕದಲ್ಲಿ ಸ್ವಲ್ಪ ಜಾಸ್ತಿ ಇದೆ. ಕರ್ನಾಟಕದಲ್ಲಿ ಪ್ರತಿ ಕಿಲೋಮೀಟರ್‌ಗೆ 150 ಪೈಸೆ., ಮಹಾರಾಷ್ಟ್ರದಲ್ಲಿ 155 ಪೈಸೆ, ಉತ್ತರ ಪ್ರದೇಶದಲ್ಲಿ 149 ಪೈಸೆ, ಗುಜರಾತಿನಲ್ಲಿ 139 ಪೈಸೆ ಆಂಧ್ರಪ್ರದೇಶದಲ್ಲಿ136 ಪೈಸೆ ಇದೆ. ಅಂದರೆ ಆಂಧ್ರ ಮತ್ತು ಗುಜರಾತಿಗೆ ಹೋಲಿಸಿದರೆ ನಮ್ಮಲ್ಲಿ ಸುಮಾರು 20 ಪರ್ಸೆಂಟ್ ಪರ್ ಕಿಲೋಮೀಟರ್ ಹೆಚ್ಚಿಗೆ ಖರ್ಚು ಮಾಡುತ್ತಿದ್ದೇವೆ ಎನ್ನತಕ್ಕದ್ದು ಇದೆ. ಯಾವ ರೀತಿಯಾಗಿ ಅವರು ಮಾಡುತ್ತಿದ್ದಾರೆ, ನಾವು ಏತಕ್ಕೆ ಮಾಡುವುದಕ್ಕಾಗುವುದಿಲ್ಲ? ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರಿಗಳೇ ಸಾಕು. ಅದಕ್ಕೆ ಯಾವ ದೊಡ್ಡ ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಬೇಕು? ಬೇರೆ ರಾಜ್ಯಗಳಲ್ಲಿ ಕಾಸ್ಟ್ ಆಫ್ ಫ್ಯೂಯಲ್ ಪರ್ ಕಿಲೋಮೀಟರ್ 137 ಪೈಸೆ ಬಂದರೆ ನಮ್ಮಲ್ಲಿ 160 ಪೈಸೆ ಬರುತ್ತದೆಂದರೆ ಇದಕ್ಕೆ ಕಾರಣಗಳೇನು? ಲೀಕೇಜ್ ಇದೆಯೇ ಫಿಲರೇಜ್ ಇದೆಯೇ ಎಂಬುದನ್ನು ಇವತ್ತಿನ ದಿವಸ ನೋಡಿಕೊಳ್ಳಬೇಕಾಗುತ್ತದೆ. ಇದನ್ನು ನೋಡಿಕೊಳ್ಳದೇ ಹೋದರೆ ಖಂಡಿತವಾಗಿ ಈಗಾಗಲೇ ಅದು ಕೈ ಬಿಟ್ಟಿದೆ. ಮುಂದೆ ಸಂಪೂರ್ಣವಾಗಿ ಅದು ನಾಶವಾಗುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹೀಗ ಅನೇಕ ಬಾಬುಗಳಲ್ಲಿ ನೀವು ಹೆಚ್ಚಿನ ಹಣವನ್ನು ಖರ್ಚು ಮಾಡುತ್ತಿದ್ದೀರಿ. ಆದರೆ ಅದಕ್ಕೆ ತಕ್ಕಂತೆ ಇವತ್ತು ಲಾಭ

ಕೆ.ಎಸ್.ಆರ್.ಟಿ.ಸಿ.ಯಿಂದ ಬರುತ್ತಿಲ್ಲ. ಮತ್ತು ಇವತ್ತು ಹೆಚ್ಚಿನ ಲೀಕೇಜ್ ಕೂಡ ಇದರಲ್ಲಿದೆ ಎಂಬುದನ್ನು ಈಗಾಗಲೇ ನಾನು ಹೇಳಿದ್ದೇನೆ. ಲೀಕೇಜ್‌ನ್ನು ಯಾವರೀತಿ ಸರಿಪಡಿಸಬೇಕು ಎಂಬುದಕ್ಕೆ ಕೂಡ ಇವತ್ತಿನ ದಿವಸ ನಾವು ಸ್ಪಷ್ಟವಾದ ನೀತಿಯನ್ನು ರೂಪಿಸಬೇಕಾಗುತ್ತದೆ. ಇನ್ನೊಂದು ತಮ್ಮ ಗಮನಕ್ಕೆ ತರಬೇಕಾದರೆ ಸುಮಾರು ಅನೇಕ ಡಿಪೋಗಳಲ್ಲಿ ಬಸ್ ಟಿಕೆಟ್ಟನ್ನು ಅವರೇ ಬೋಗಸ್ ಪ್ರಿಂಟ್ ಮಾಡುತ್ತಾರೆ. ಪತ್ರಿಕೆಯಲ್ಲಿ ಮೊನ್ನೆ ಬಂದಿತ್ತು. ಇದನ್ನು ತಾವೂ ಗಮನಿಸಿದ್ದೀರಿ ಎಂದು ಕಾಣುತ್ತದೆ. ಬಹುಶಃ ಮಂಡ್ಯ ಜಿಲ್ಲೆಯಲ್ಲಿ 16 ಸಾವಿರ ರೂಪಾಯಿನ ಬಸ್ ಟಿಕೆಟ್ಟನ್ನು ಪ್ರಿಂಟ್ ಮಾಡಿ ಕೊಡುತ್ತಿದ್ದರು ಎಂಬುದು ಬೆಳಕಿಗೆ ಬಂದಿದೆ. ಅದರ ಹಿಂದೆ ಭಾಲ್ಕಿಯಲ್ಲಿ ಕೂಡ ಇದೇ ರೀತಿ ಆಯಿತು ಎನ್ನುವುದು ಸರ್ಕಾರದಲ್ಲಿದೆ.

ಶ್ರೀ ವಾಟಾಳ್ ನಾಗರಾಜ್ : ಏನಾಯಿತು ಆ ತನಿಖೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಇಲ್ಲೂ ಕೂಡ ಇದೆ. ಇದನ್ನು ಹೇಗೆ ಮಾಡುತ್ತಾರೆ? ಇದಕ್ಕೆ ಯಾರು ಕಾರಣರು? ಡಿಪೋ ಮ್ಯಾನೇಜರ್? ಅಥವಾ ಇನ್‌ಸ್ಪೆಕ್ಟರ್ ಕಂಡಕ್ಟರ್; ಯಾರು ಕಾರಣರು? ಇದುವರೆಗೆ ಇದಕ್ಕೆ ಔಷಧ ಮಾಡುತ್ತಿದೆಯೆ? ಎಲ್ಲವನ್ನೂ ಟ್ಯಾಕ್ಸ್ ಏರಿಸಿಯೇ ಕಲೆಕ್ಟ್ ಮಾಡುತ್ತೇವೆ, ಅಕ್ಯುಮುಲೇಟೆಡ್ ಲಾಸ್ ಸರಿಪಡಿಸುತ್ತೇವೆ ಎಂದರೆ ಇದು ಎಷ್ಟರಮಟ್ಟಿಗೆ ಸಮಂಜಸ ಎಂಬುದನ್ನು ನೀವೇ ಹೇಳಬೇಕು.

1.30 ಪಿ.ಎಂ

ಇವೆಲ್ಲವನ್ನೂ ಕೂಡ ಇವತ್ತಿನ ದಿವಸ ಬಯಲಿಗೆ ಹಾಕಿ ಅದನ್ನು ನೀವು ಸುಧಾರಣೆ ಮಾಡದೆ ಇದ್ದರೆ ಟ್ಯಾಕ್ಸ್ ಏರಿಸಿ ರೊಕ್ಕ ಕಲೆಕ್ಟ್ ಮಾಡುತ್ತೇವೆ ಅಥವಾ ಈ ಅಕ್ಯುಮಲೇಟೆಡ್ ಲಾಸ್ ಸರಿಪಡಿಸಿಕೊಳ್ಳುತ್ತೇವೆ ಎಂಬುದು ಎಷ್ಟರಮಟ್ಟಿಗೆ ಸಮಂಜಸ ಎಂಬುದನ್ನು ನೀವು ಹೇಳಬೇಕು. ಇದೆಲ್ಲಾ ಕೂಡ ಲೀಕೇಜಸ್ ಇಲ್ಲಿದೆ. ಬೋಗಸ್ ಟಿಕೇಟ್ ಪ್ರಿಂಟ್ ಮಾಡಿಸುವುದು, ಟೈರ್ ಕದಿಯುವುದು, ಬ್ಯಾಟರಿಗಳನ್ನು ಕದಿಯುವುದು, ಡೀಸಲ್ ಕದಿಯುವುದು ಮತ್ತೆ ಬಸ್ ಕಂಡಕ್ಟರ್ಸ್ ಲಾಂಗ್ ಟ್ರಿಪ್‌ಗೆ ಹೋದರೆ ದುಡ್ಡು ಹೊಡೆಯುವುದು ಈ ಕೆಲಸವನ್ನು ಮಾಡುವಾಗ ಅದನ್ನು ಸ್ಟಾಪ್ ಮಾಡುವ ಶಕ್ತಿಯನ್ನು ನೀವು ಇಟ್ಟುಕೊಳ್ಳಲಿಲ್ಲ. ಬರೀ ಜಗಳ ಮಾಡಿದರೆ ಏನು ಬಂತು? ನಾನು ದುರ್ಯೋಧನ, ನಾನು ದುಶ್ಯಾಸನ ಎಂದು ನೀವು ಹೇಳುತ್ತಾ ಕುಳಿತರೆ ಸುಧಾರಣೆಯಾಗುತ್ತದೆಯೇ? ಅದನ್ನು ಸರಿಪಡಿಸಬೇಕು. ಸರಿಪಡಿಸಿದಾಗ ಮಾತ್ರ ನಾವು ಹೇಳಬಹುದು, ನೀವು ಸಮರ್ಥರಾಗಿದ್ದೀರಿ, ಬಿಗಿಯಾಗಿದ್ದೀರಿ, ಯಾರು ಹೇಳಿದರೂ ನೀವು ಕೇಳಲಿಲ್ಲ. ನಿಮಗೆ ಇಲ್ಲಿಯವರೆಗೆ ಇಂಟರ್‌ಫಿಯರ್ ಮಾಡಿದ್ದಾರೆಯೇ? ತಮ್ಮ ಇಲಾಖೆಯಲ್ಲಿ ಇಂಥಾದ್ದಾಗಿದೆ ಎಂದು ಯಾರೋ 4 ಜನ ಕರೆಫ್ಟ್ ಆಫೀಸರ್ಸ್‌ನ್ನು ತೆಗೆದು ಹಾಕಿದರೆ ಯಾರಾದರೂ ಡೆಲಿಗೇಷನ್ ಬಂದು ಅಥವಾ ಶಾಸಕರಾಗಲಿ ಬಂದು ಇಂಟರ್‌ಫಿಯರ್ ಮಾಡಿದ್ದಾರೆಯೇ? ಯಾರಾದರೂ ಮಾಡಿದ್ದರೆ ಮಂತ್ರಿಗಳು ಮಾಡಿರಬಹುದೇ ಹೊರತು ಬೇರೆ ಯಾರೂ ಮಾಡಿಲ್ಲ. ಅಂದಾಗ ಇದನ್ನು ಏತಕ್ಕೆ ಸರಿಪಡಿಸಿಲ್ಲ? ಏನು ತೊಂದರೆ ಇದೆ, ಏನು ಕಷ್ಟ ಇದೆ? ನಿಮಗೆ ಮುಖ್ಯಮಂತ್ರಿಗಳ ಸಹಕಾರ ಇಲ್ಲವೆ ಅಥವಾ ಕೆ.ಎಸ್.ಆರ್.ಟಿ.ಸಿ. ಗೂ

ನಿಮಗೂ ಸರಿಯಾಗಿಲ್ಲವೆ? ನಿಮಗೂ ಎಂಪ್ಲಾಯಿಸ್‌ಗೂ ಸರಿಯಿಲ್ಲ ಎನ್ನುವುದು ಬಹಿರಂಗವಾಗಿ ಮಾಲೀಕರಿಗೆ ಮತ್ತು ನೌಕರರಿಗೆ ಪರಸ್ಪರ ಸಹಕಾರ ಇಲ್ಲದೆ ಇದ್ದರೆ ಆ ಸಂಸ್ಥೆ ಸರಿಯಾಗಿ ನಡೆಯುವುದಿಲ್ಲ ಎನ್ನುವುದು ಸ್ಪಷ್ಟ. ಅದಕ್ಕಾಗಿ ನಾನು ಅವರಿಗೆ ಹೇಳಿದ್ದುದು, ನೀವಾದರೂ ದೂರ ಸರಿಯಬೇಕಾಗುತ್ತದೆ ಇಲ್ಲದಿದ್ದರೆ ಆ ಸಂಸ್ಥೆಯನ್ನು ಇಂಡಿಪೆಂಡೆಂಟ್ ಆಗಿ ನಿಮ್ಮಿಂದ ಟ್ರೈಫರ್‌ಕೇಟ್ ಮಾಡಿ ಬೇರೆಯವರಿಗೆ ಕೊಡಬೇಕಾಗುತ್ತದೆ. ಏಕೆಂದರೆ ಇದನ್ನು ಸರಪಡಿಸಬೇಕಾದರೆ ಇದರಲ್ಲಿ ಹೊಂದಾಣಿಕೆ ಆಗಲೇಬೇಕು. ಯಾವಾಗ ನಿಮ್ಮಿಬ್ಬರಲ್ಲಿ ಹೊಂದಾಣಿಕೆ ಇಲ್ಲ ಎಂದರೆ ಖಂಡಿತವಾಗಿ ನೀವು ಮುಖ್ಯಮಂತ್ರಿಗಳಿಗೆ ನೇರವಾಗಿ ಹೇಳಬೇಕು. ನನಗೆ ಅಲ್ಲಿರುವ ಎಂಪ್ಲಾಯಿಸ್ ಸರಿಯಾಗಿ ಕೋ-ಅಪರೇಟ್ ಮಾಡುವುದಿಲ್ಲ, ನಾನು ಎಷ್ಟೇ ಸುಧಾರಣೆ ತರಬೇಕೆಂದರೂ ನನಗೆ ಸಹಕಾರ ಕೊಡುತ್ತಾ ಇಲ್ಲ, ದಯವಿಟ್ಟು ಈ ಖಾತೆಯನ್ನು ನಿಮ್ಮಲ್ಲಿಟ್ಟುಕೊಳ್ಳಿ ಅಥವಾ ನಿಮ್ಮಲ್ಲಿಂದ ಯಾವುದಾದರೂ ಖಾತೆ ಕೊಡಬೇಕೆಂದಿದ್ದರೆ ಕೊಡಲಿ, ಇಲ್ಲದಿದ್ದರೆ ಮಿನಿಸ್ಟರ್ ಫಾರ್ ವಿತ್ ಔಟ್ ಪೋರ್ಟ್‌ಫೋಲಿಯೋ ಇರಲಿ. ಏಕೆಂದರೆ ಇದೆಲ್ಲಾ ಹೇಳಿ ಅಂಕಿಸಂಖ್ಯೆ ಕೊಟ್ಟಮೇಲೆ ಸುಧಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂಬುದು ನಮ್ಮ ಸ್ಪಷ್ಟ ಅಭಿಪ್ರಾಯ, ನಿಮ್ಮ ಅಭಿಪ್ರಾಯವೂ ಇದೇ. ಸುಮ್ಮನೆ ರಾಜೀನಾಮೆ ಕೊಟ್ಟು ಹೋಗಿಬಿಡಿ, ಸುಮ್ಮನೆ ಇಲ್ಲಿ ಏತಕ್ಕೆ ಇರಬೇಕು? ರಾಜೀನಾಮೆ ಕೊಟ್ಟರೆ ನಿಮಗೆ ಒಳ್ಳೆಯ ಕೀರ್ತಿ ಬರುತ್ತದೆ. ಸಿಂಧ್ಯರವರು ಆ ಸಂಸ್ಥೆಯನ್ನು ಸುಧಾರಣೆ ಮಾಡುವುದಕ್ಕೆ ಆಗಲಿಲ್ಲ, ಅಲ್ಲಿರುವ ಎಂಪ್ಲಾಯೀಸ್ ಕೋ-ಅಪರೇಟ್ ಮಾಡಲಿಲ್ಲ, ಪ್ರಾಮಾಣಿಕವಾಗಿ ಈ ಇಲಾಖೆಯಲ್ಲಿ ಸುಧಾರಣೆ ತರಬೇಕು ಎಂದು ಪ್ರಯತ್ನ ಮಾಡಿದರು, ಆದರೆ ಅದು ಆಗಲಿಲ್ಲ, ಪಾಪ ರಾಜೀನಾಮೆ ಕೊಟ್ಟು ಹೊರಗೆ ಬಂದರು ಎಂಬ ಸಿಂಪತಿ ಬರುತ್ತದೆ, ಮುಂದೆಯಾದರೂ ಆ ಸಿಂಪತಿ ಕೆಲಸಕ್ಕೆ ಬರಬಹುದು. ಅದಕ್ಕಾಗಿ ಈ ಸಿಂಪತಿಯಾದರೂ ಗಳಿಸಿಕೊಳ್ಳಿ. ಅದೂ ಇಲ್ಲ, ಇದೂ ಇಲ್ಲ ನೀವು ಹೊಡೆದಂತೆ ಮಾಡಿ ನಾನು ಅತ್ತಂತೆ ಮಾಡುತ್ತೇನೆ ಎಂದು ಹೇಳಿ ಆ ಕಡೆ ಅವರನ್ನು ಬಯುವುದಕ್ಕೂ ಸರಿ, ಈ ಕಡೆ ಸುಧಾರಣೆಯೂ ಆಗುವುದಿಲ್ಲ ಇದು ಒಂದು.

ಇನ್ನೊಂದು ಇವರ ಕೊಡುಗೆ ಏನೆಂದರೆ, ಬಸದರ ಹೆಚ್ಚಿಗೆಯಾಗಿದೆ ಎಂದು ಹೇಳಿ ನಮ್ಮ ಪಕ್ಷದ ಅಧ್ಯಕ್ಷರಾದ ಶ್ರೀಮಾನ್ ಧರ್ಮಸಿಂಗ್ ಅವರು 13ನೇ ತಾರೀಖು ಒಂದು ಪೀಸ್‌ಫುಲ್ ಡೆಮಾನ್ ಸ್ಟ್ರೇಷನ್ ಮಾಡೋಣ ಎಂದು ಹೇಳಿ ಒಂದು ನಿರ್ಧಾರವನ್ನು ಕೈಗೊಂಡರು. ಇಡೀ ಕರ್ನಾಟಕ ರಾಜ್ಯದಲ್ಲಿ ಸುಮಾರು 2 ಕೋಟಿ ಜನರಿಗೆ ನೇರವಾಗಿ ಈ ಬಸಗಳಲ್ಲಿ ಅಡ್ಡಾಡುತ್ತಾರೆ, ಪ್ರೈವೇಟ್ ಬಸ್‌ನಲ್ಲಿ ಅಡ್ಡಾಡುತ್ತಾರೆ. ಅವರಿಗೆ ಇವತ್ತಿನ ದಿವಸ ಅನಾನುಕೂಲವಾಗಿದೆ. ಅದಕ್ಕೋಸ್ಕರ ಶಾಂತಿಯುತವಾಗಿ ಪ್ರತಿಭಟನೆ ಮಾಡಬೇಕು, ಶಾಂತಿಯುತವಾಗಿ ಜನರಿಗೆ ಇದರ ಬಗ್ಗೆ ಇರತಕ್ಕ ಒಂದು ಸಂತಾಪವನ್ನು ತೋರಿಸಬೇಕು ಎಂದು ಹೇಳಿ ಮಹಾತ್ಮ ಗಾಂಧಿ ಸ್ಟ್ಯಾಚ್ಯೂನಿಂದ ಪ್ರೊಸೆಷನ್ ಪ್ರಾರಂಭವಾಯಿತು. ಪ್ರೊಸೆಷನ್ ಪ್ರಾರಂಭವಾಗಿ ಅದು ಕಸ್ತೂರಬಾ ರೋಡ್‌ನಿಂದ, ಮಲ್ಯಾ ಸರ್ಕಲ್‌ನಿಂದ ಹಡಸನ್ ಸರ್ಕಲ್‌ನಿಂದ ಮೈಸೂರು ಸರ್ಕಲ್‌ಗೆ ಬಂದು ಮೈಸೂರು ಸರ್ಕಲ್‌ನಿಂದ ಕೆ.ಆರ್. ಸರ್ಕಲಿಗೆ ಬಂದು ಅಲ್ಲಿಂದ ಮುಂದೆ ವಿಧಾನಸೌಧಕ್ಕೆ ಬಂದು ಒಂದು ರೆಪ್ರಸೆಂಟೇಷನ್ ಅಂದರೆ. ಬಸ್ ದರವನ್ನು ಏನು ಹೆಚ್ಚು ಮಾಡಿದ್ದೀರಿ,ಅದು ಸರಿಯಲ್ಲ ಅನ್ಯಾಯ ಎಂದು ಹೇಳಿ

ಮುಖ್ಯಮಂತ್ರಿಗಳಿಗೆ ಒಂದು ಮನವಿಪತ್ರವನ್ನು ಕೊಡಬೇಕೆಂದು ಹೇಳಿ ಬಂದರೆ, ಯಾವುದೇ ಪ್ರೊವೋಕೇಷನ್ ಇಲ್ಲ, ಯಾವುದೇ ತೊಂದರೆ ಇಲ್ಲ ಇವರು ಪೊಲೀಸ್‌ರನ್ನು ಉಪಯೋಗ ಮಾಡಿಕೊಂಡು ಅಲ್ಲಿರತಕ್ಕಂಥ ಮುಖಂಡರ ಮೇಲೆ ಲಾಠಿ ಚಾರ್ಜ್‌ನ್ನು ಮಾಡಿಸಿದರು. ಇದು ನಿಮ್ಮ ನೀತಿಯೇ? ಆಗ ಏನು ಪ್ರವೋಕೇಷನ್ ಇತ್ತು ಹೇಳಿ. ಕಸ್ತೂರಬಾ ರಸ್ತೆಯಲ್ಲಿ ಎಲ್ಲಾದರೂ ಯಾವುದಾದರೂ ಒಂದು ಅಂಗಡಿ ಮೇಲೆ ಕಲ್ಲು ಬಿದ್ದಿತ್ತೇ? ಯಾವುದಾದರೂ ಒಂದು ಬಸ್ ಸುಟ್ಟಿತ್ತೇ? ಯಾವುದಾದರೂ ಒಂದು ಬಸ್ಸಿನ ಮೇಲೆ ಕಲ್ಲು ಹೊಡೆದಿದ್ದರೇ? ಯಾವುದಾದರೂ ಒಂದು ಪ್ರೈವೇಟ್ ವೆಹಿಕಲ್ ಮೇಲೆ ಕಲ್ಲು ಬಿದ್ದಿತ್ತೇ? ಯಾರಾದರೂ ಬೈಪಾಸ್‌ರ ಮೇಲೆ ಕಲ್ಲು ಬಿದ್ದಿತ್ತೇ? ಯಾರಿಗಾದರೂ ಒಂದು ಹನಿ ರಕ್ತ ಸಿಡಿದಿತ್ತೇ? ಇಂಥಾದ್ದು ಏನೂ ಇಲ್ಲ. ಇಡೀ ಬಜಾರ್‌ನಿಂದ ಮೈಸೂರು ಸರ್ಕಲ್‌ವರೆಗೆ ಸಾವಿರಾರು ಜನ ಇರುತ್ತಾರೆ, ಕಸ್ತೂರಬಾ ರೋಡ್‌ನಲ್ಲಿ ಸಾವಿರಾರು ಜನ ಇರುತ್ತಾರೆ, ಮಲ್ಯಾ ಸರ್ಕಲ್‌ನಲ್ಲಿ ಸಾವಿರಾರು ಜನ ಇರುತ್ತಾರೆ, ಹಡಸನ್ ಸರ್ಕಲ್‌ನಲ್ಲಿ ಸಾವಿರಾರು ಜನ ಅಡ್ಡಾಡುತ್ತಾರೆ, ಅಲ್ಲಿ ಪೆಟ್ರೋಲ್ ಬಂಕ್‌ಗಳಿವೆ. ಇಷ್ಟೊಂದು ಇದ್ದರೂ ಕೂಡ ಪ್ರೊಸೆಷನಿಸ್ಟ್ ಅಲ್ಲಿ ಯಾವ ರೀತಿಯ ತೊಂದರೆಯನ್ನೂ ಯಾರಿಗೂ ಕೂಡ ಮಾಡಲಿಲ್ಲ, ಮುಂದೆ ಬಂದರೂ ಕೂಡ ತೊಂದರೆ ಆಗಲಿಲ್ಲ, ಮನವಿಪತ್ರ ಕೊಡಲಿಕ್ಕೆ ಬರುತ್ತಿದ್ದಾರೆ ಎಂದೆರ ಪೊಲೀಸರು ಅಡ್ಡ ಬಂದು ತಡೆ ಸಿಡಿಸು ಇವತ್ತು ಏನು ದೊಡ್ಡ ಅನಾಹುತವಾಗುತ್ತದೆಯೇ ಎಂದು ಹೇಳಿ ಅವರು without any provocation ನೀರು ಬಿಡುವುದು, ಲಾಠಿ ಚಾರ್ಜ್ ಮಾಡುವುದು, ಹೆಣ್ಣು ಮಕ್ಕಳ ಮೇಲೆ ಲಾಠಿ ಚಾರ್ಜ್ ಮಾಡುವುದು, ನಿಮಗೆ ಗೊತ್ತಿದೆ ಉಮೆನ್ಸ್ ವಿಂಗ್‌ನ ಅನೇಕ ಕನ್ವೀನರ್‌ಗಳು ಬಸ್ ದರವನ್ನು ಹೆಚ್ಚಿಸಿರುವುದು ಸರಿಯಲ್ಲ ಅದನ್ನು ಪ್ರತಿಭಟಿಸಬೇಕು ಎಂದು ಹೇಳಿ ಬರುತ್ತಿದ್ದಂಥವರ ಮೇಲೆ ನೀರು ಬಿಡುವುದು, ಪಟಾಕಿ ಹಾರಿಸುವುದು, ಲಾಠಿ ಚಾರ್ಜ್ ಮಾಡುವುದು. ಬಹುಶಃ ಮರುದಿನ ಪತ್ರಿಕೆಯಲ್ಲಿ ಬಂದಿದ್ದನ್ನು ತಾವು ಗಮನಿಸಿರಬಹುದು ಎಂದು ನಾನು ಭಾವಿಸಿದ್ದೇನೆ. ಧರ್ಮಸಿಂಗ್ ಅವರ ಮೇಲೆ ಲಾಠಿ ಚಾರ್ಜ್ ಆಗಿದೆ, ನಾನು ಅದರಲ್ಲಿದೆ. ಚಂದ್ರಶೇಖರ್‌ಮೂರ್ತಿಯವರು ಎಕ್ ಫೈನಾನ್ಸ್ ಮಿನಿಸ್ಟರ್, ಅವರು 20 ವರ್ಷ ಪಾರ್ಲಿಮೆಂಟ್ ಸದಸ್ಯರಾಗಿದ್ದರು. ಅವರನ್ನು ಪೊಲೀಸರು ಗುರುತು ಹಿಡಿಯಲಿಕ್ಕೆ ಆಗಲಿಲ್ಲ. ತಾವು ಈ ಫೋಟೋ ನೋಡಿದೆರ ತಮಗೆ ಗೊತ್ತಾಗುತ್ತದೆ, ಎಷ್ಟರಮಟ್ಟಿಗೆ ಯಾವ ರೀತಿಯಾಗಿ ಪೊಲೀಸರು ಅವರಿಗೆ ಹೊಡೆಯುತ್ತಿದ್ದಾರೆ ಎಂಬುದು. ತಾವು ಇನಫರ್‌ಮೇಷನ್ ಡಿಪಾರ್ಟ್‌ಮೆಂಟ್‌ನಿಂದ ಅಥವಾ ಬೇರೆ ಇಲಾಖೆಯಿಂದ ಮಾಹಿತಿ ತರಿಸಿಕೊಳ್ಳಿ. ಯಾವ ರೀತಿಯಿಂದ ಪೊಲೀಸರು ವರ್ತನೆ ಮಾಡಿದ್ದಾರೆ, ಎಂದು ಈ ಧೈರ್ಯ ಅವರಿಗೆ ಹೇಗೆ ಬಂತು? ಧೈರ್ಯ ಎಂದರೆ ಇವತ್ತಿನ ದಿವಸ ಬಸ್ ದರದ ಏರಿಕೆ ವಿರುದ್ಧ ವಿರೋಧ ಪಕ್ಷದವರು ಏನು ಹೋರಾಟ ಪ್ರಾರಂಭ ಮಾಡಿದ್ದಾರೆ ಇದನ್ನು ಯಾವುದೇ ರೀತಿಯಿಂದ ದಮನ ಮಾಡಬೇಕು, ಹತ್ತಿಕ್ಕಬೇಕು. ಅವರನ್ನು ಹೆದರಿಸಬೇಕು. ನಾಳೆ ಇಂತಹ ಅನ್ಯಾಯಗಳು ಏನೇ ಮಾಡಿದರೂ ಕೂಡ ಅದರಲ್ಲಿ ಯಾವ ಕಾರ್ಯಕರ್ತರೂ ಭಾಗಿಯಾಗಬಾರದು ಎಂದು ಒಂದು ವಾತಾವರಣವನ್ನು ತಯಾರು ಮಾಡಬೇಕೆಂದು ಹೇಳಿ ಅವತ್ತಿನ ದಿವಸ ಲಾಠಿ ಚಾರ್ಜ್‌ನ್ನು ಮಾಡಿ ಎಲ್ಲರ ಮೇಲೆ ಗದಾಪ್ರಹಾರವನ್ನು ಮಾಡಿದ್ದಾರೆ. ಈ ರೀತಿ ನಿಜವಾಗಿಯೂ ಈ ಸರ್ಕಾರಕ್ಕೆ ನಾಚಿಕೆ ತರತಕ್ಕಂಥ

ಕೆಲಸವನ್ನು ಮಾಡಿದ್ದಾರೆ ಎಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇಲ್ಲದಿದ್ದರೆ ಇದಕ್ಕೆ ಯಾವ ಪ್ರವೋಕೇಷನ್ ಕೂಡ ಇಲ್ಲ, ಒಂದು ಅಂಗಡಿ ಮೇಲೆ ಕಲ್ಲು ಬಿದ್ದಿಲ್ಲ, ಆ ದಿವಸ ಎಲ್ಲಾ ಆಫೀಸ್ ಓಪನ್ ಇತ್ತು, ಪ್ರಿಂಟಿಂಗ್ ಪ್ರೆಸ್ ಓಪನ್ ಇತ್ತು, ಮಲ್ಟಿ ಸ್ಟೋರೀಡ್ ಬಿಲ್ಡಿಂಗ್ ಓಪನ್ ಇತ್ತು, ಸರ್ವೆ ಅಂಡ್ ಸೆಟಲ್‌ಮೆಂಟ್ ಆಫೀಸಸ್, ಪಬ್ಲಿಕ್ ಇನ್‌ಸ್ಟ್ರಕ್ಷನ್ ಆಫೀಸಸ್ ಓಪನ್ ಇದ್ದರೂ ಸಹ ಎಲ್ಲಿಯಾದರೂ ಅಧಿಕಾರಿಗಳ ಮೇಲೆ ಅಥವಾ ಎಲ್ಲಿಯಾದರೂ ಆಫೀಸರ್ಸ್ ಮೇಲೆ ಪ್ರೊಸೆಷನಿಸ್ಟ್ಸ್ ಒಂದು ಕಲ್ಲು ಏನಾದರೂ ಹೊಡೆದಿದ್ದಾರೆಯೇ? ಈಗ ನಾನು ಚಾರ್ಜ್ ಮಾಡುತ್ತೇನೆ. ಪೊಲೀಸರೇ ಕೆಲವು ಗೂಂಡಾ ಹುಡುಗರಿಗೆ ಪ್ರಚೋದನೆ ಮಾಡಿ ಅವರ ವೆಹಿಕಲ್ ಮೇಲೆ ಅವರೇ ಕಲ್ಲು ಹೊಡಿಸಿಕೊಳ್ಳುವಂಥ ಪ್ರಯತ್ನ ಮಾಡಿದ್ದಾರೆ. ಏಕೆಂದರೆ, ಲಾಠಿ ಚಾರ್ಜ್ ಏತಕ್ಕೆ ಆಯಿತು ಎಂಬ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಇರಲಿ ಎಂದು ಹೇಳಿ ಆ ಹುಡುಗರಿಂದ ಕಲ್ಲು ಹೊಡಿಸಿಕೊಂಡು ತೋರಿಸಿಕೊಂಡಿದ್ದಾರೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತೇನೆ ಎಂದರೆ ನಾನು ಯಾವ ವೆಹಿಕಲ್‌ನಲ್ಲಿ ಕುಳಿತಿದ್ದೆ ಆ ವೆಹಿಕಲ್ ಬ್ರೇಕ್ ಫೈಲ್ ಆಯಿತು ಎಂದು ಹೇಳಿ ಆಕ್ಸಿಡೆಂಟ್ ಆಗಬೇಕಾದುದು ನಿಂತಿತು. ಇಲ್ಲದಿದ್ದರೆ ನಾವು 10 ಜನ ಅಲ್ಲೆ ಸತ್ತು ಹೋಗುತ್ತಿದ್ದೆವು. ಏಕೆಂದರೆ ಅವನು ಆ ಗಿಡಕ್ಕೆ ಹೊಡೆದುಬಿಟ್ಟಿದ್ದರೆ ಬಹುಶಃ ಸ್ಪಾಟ್ ಡೆತ್ ಆಗುತ್ತಿತ್ತು. ಆದರೆ ಆ ಅಸಿಸ್ಟೆಂಟ್ ಸಬ್ ಇನ್‌ಸ್ಪೆಕ್ಟರ್ ಅದನ್ನು ತಿಳಿದುಕೊಂಡು ನಿಂತ ಕಾರಣ ಹೋಗಿ ಇನ್ನೊಂದು ಕಲ್ಲಿಗೆ ತಗುಲಿಸಿದ್ದರಿಂದ ಅದು ಅಲ್ಲಿಯೇ ನಿಂತಿತು. ಆದರೆ ಅದು ನಿಂತ ತಕ್ಷಣವೇ ಒಬ್ಬ ಹುಡುಗ ಬಂದು ಆ ವೆಹಿಕಲ್‌ಗೆ ದಡ್ ಎಂದು ಕಲ್ಲು ಹೊಡೆದನು. ನಾನು ಪೊಲೀಸರಿಗೆ ಅವನನ್ನು ಹಿಡಿಯಿರಿ ಎಂದು ಹೇಳಿದರೆ ಪೊಲೀಸರು ನಗುತ್ತಾ ನಿಂತಿದ್ದರು. ಕಲ್ಲು ಹೊಡೆದು ಓಡುತ್ತಿದ್ದಾನೆ ಅವನನ್ನು ಹಿಡಿಯಿರಿ ಎಂದು ಅಲ್ಲಿರತಕ್ಕಂಥ ಅಸಿಸ್ಟೆಂಟ್ ಸಬ್ ಇನ್‌ಸ್ಪೆಕ್ಟರ್‌ಗೆ, ಜಮೇದಾರ ಅವರಿಗೆ ಹೇಳಿದರೂ ಅವರು ಕೈ ಕಟ್ಟಿಕೊಂಡು ನಿಂತು, ಹೋಗಲಿ ಸಾರ್ ಆಗಿದ್ದು ಆಯಿತು ಎಂದು ಹೇಳುತ್ತಿದ್ದಾರೆ. ನಮ್ಮ ವರ್ಕರ್ ಇದ್ದರೆ ನಾನು ಹಿಡಿದು ಅಲ್ಲಿಯೇ ನಿಲ್ಲಿಸುತ್ತಿದ್ದೆ. ಏಕೆಂದರೆ ನಮ್ಮ ಎಜಿಟೇಷನ್‌ಗೆ ಯಾವುದೇ ಒಂದು ಕಳಂಕ, ಕೆಟ್ಟ ಹೆಸರು ಬರಬಾರದು, ಬಹಳ ಪೀಸ್‌ಫುಲ್ ಆಗಿ ಆಗಬೇಕು, ಇಲ್ಲದಿದ್ದರೆ ನಾಳೆ ಜನ ಇವರು ಪೀಸ್‌ಫುಲ್ ಎಜಿಟೇಷನ್ ಮಾಡುವುದಕ್ಕೆ ಹೋಗಿ ಸಾಮಾನ್ಯ ನಾಗರೀಕರಿಗೆ ತೊಂದರೆ ಕೊಟ್ಟರು, ಅಂಗಡಿಯವರಿಗೆ ತೊಂದರೆ ಕೊಟ್ಟರು, ಬೈಪಾಸರ್‌ಗೆ ತೊಂದರೆ ಕೊಟ್ಟರು ಎಂಬ ಆಪಾದನೆ ನಮ್ಮ ಮೇಲೆ ಬರಬಾರದೆಂದು ಹೇಳಿ ನಾವು ಸಾಕಷ್ಟು ಪ್ರಯತ್ನ ಮಾಡಿ ನಾವೆಲ್ಲರೂ ಕೂಡ ಅದರಲ್ಲಿದ್ದೇವೆ. ಜಾಫರ್ ಶರೀಫ್ ಸಾಹೇಬರಿದ್ದರು, ಧರ್ಮಸಿಂಗ್ ಇದ್ದರು, ಹೆಚ್.ಕೆ. ಪಾಟೀಲ್ ಇದ್ದರು, ಚಂದ್ರಶೇಖರ್ ಮೂರ್ತಿರವರು ಇದ್ದರು, ನಮ್ಮ ಇನ್ನು ಅನೇಕ ಶಾಸಕರಿದ್ದರು. ಎಲ್ಲರೂ ಕೂಡ ಬಹಳ ಸಂಯಮದಿಂದ ವಿತ್‌ಟಾಲರೆನ್ಸ್ ನಾವು ಈ ಪ್ರೊಸೆಷನ್ ನಡೆಸಿದ್ದೇವೆ. ಆ ಒಂದು ಶಾಂತಿಯುತವಾಗಿ ನಡೆದಂತಹ ಒಂದು ಪ್ರೊಸೆಷನ್‌ಗೆ ಆ ಸಭೆಗೆ ಭಂಗ ತರವಂಥ ಪ್ರಯತ್ನ ಇವತ್ತು ನಡೆದಿದ್ದರೆ, ಅದು ಸರ್ಕಾರದಿಂದ, ಪೊಲೀಸ್‌ರಿಂದ, ನಿಮ್ಮ ಪ್ರಚೋದನೆಯಿಂದ ನಡೆದಿದೆ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಅದಕ್ಕೆ ಸಾಬೀತು ಮಾಡತಕ್ಕಂಥದ್ದೂ ಕೂಡ ಇವತ್ತು ನಮ್ಮ ಕಣ್ಣೆದುರು ನಡೆದ ಒಂದೇ ಘಟನೆ ಸಾಕು ಎಂಬು ಮಾತನ್ನು ನಾನು ಹೇಳುತ್ತೇನೆ. ಎಲ್ಲರೂ ಕೂಡ ಬಹಳ ಸಂಯಮದಿಂದ, ತಾಳ್ಮೆಯಿಂದ ನಾವು

ಪ್ರೊಸೆಷನ್ ಅನ್ನು ತಂದಿದ್ದೇವೆ. ಹಾಗೆಯೇ ಶಾಂತಿಯುತವಾಗಿ ನಡೆದಂಥ ಪ್ರೊಸೆಷನ್‌ಗೆ, ಆ ಒಂದು ಸಭೆಗೆ ಭಂಗ ತರತಕ್ಕಂಥ ಪ್ರಯತ್ನ ಇವತ್ತು ನಡೆದಿದ್ದರೆ ಅದು ಸರ್ಕಾರದಿಂದ, ಪೋಲಿಸರಿಂದ, ನಿಮ್ಮ ಪ್ರಚೋದನೆಯಿಂದ ನಡೆದಿದೆ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಅದನ್ನು ಸಾಬೀತು ಮಾಡಲಿಕ್ಕೆ ನಮ್ಮ ಕಣ್ಣೆದುರಿಗೇ ನಡೆದಂಥ ಆ ಒಂದು ಘಟನೆಯೇ ಸಾಕು ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಸ್ವಾಮಿ 'ನಮ್ಮ ಪೋಲೀಸರ ಮೇಲೆ ದೌರ್ಜನ್ಯ ಆಯಿತು, ಹತ್ತು ಪೋಲೀಸರು ಗಾಯಗೊಂಡರು' ಎಂದರು. ನಾನು ಕೇಳುತ್ತೇನೆ, ಆ ಹತ್ತು ಪೋಲೀಸರು ಯಾವ ಹಾಸ್ಪಿಟಲ್‌ನಲ್ಲಿ ಇದ್ದಾರೆ? ಎಲ್ಲಿ ಅಡ್ಮಿಟ್ ಆಗಿದ್ದಾರೆ? ಒಬ್ಬ ಪೋಲೀಸರಿಗೂ ಜಖಂ ಆಗಲಿಲ್ಲ. ಸುಮ್ಮನೆ ಬಡಕೊಂಡರು, ಹತ್ತು ಪೋಲೀಸರಿಗೆ ಜಖಂ ಆಯಿತಂತೆ, ಅದಕ್ಕೆ ಲಾಠಿಚಾರ್ಜ್ ಮಾಡಿದರಂತೆ ಎಂದು. ಎಷ್ಟು ಜನರಿಗೆ ಹಿಂದೆ ಲಾಠಿಚಾರ್ಜ್ ಮಾಡಿದ್ದೀರಿ? ಯಾವ ಪ್ರಚೋದನೆ ಇಲ್ಲದೇನೆ, ಕಲ್ಲು ಹೊಡೆಯದೆ, ಯಾವ ಪಬ್ಲಿಕ್ ಪ್ರಾಪರ್ಟಿ ಹಾಳಾಗದೆ ಇವತ್ತು ಶಾಂತ ರೀತಿಯಿಂದ ನಡೆದುಕೊಂಡಿದ್ದರೂ ಕೂಡ, ಎಷ್ಟೋ ಸಾರಿ ಸಾಮಾನ್ಯವಾಗಿ ಒಂದು ಅಜಿಟೇಷನ್ ನಡೆದರೆ, ನೂರಾರು ಬಸ್ಸುಗಳು ಹಾಳಾಗಿವೆ. ನಿಮ್ಮ ಹೇಳಿಕೆಗಳಿಂದ, ಡಿಸ್ಟ್ರಿಕ್ಟ್ ರಿಆರ್ಗನೈಜೆಷನ್ ಮಾಡುತ್ತೇವೆ ಎಂದು ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟರೆ ನಾಲ್ಕೈದು ಬಸ್ಸುಗಳನ್ನು ಸುಟ್ಟಂಥ ಅನೇಕ ಘಟನೆಗಳ ನಿದರ್ಶನಗಳು ನಮ್ಮ ಮುಂದಿವೆ. ಆದರೆ ಇಷ್ಟು ದೊಡ್ಡ ಒಂದು ಪ್ರೊಸೆಷನ್ ಬರುವಾಗ ಯಾವುದೇ ಒಂದು ದುರ್ಘಟನೆ ಆಗಲಿಲ್ಲ. ಯಾವುದೇ ಒಂದು ಸಣ್ಣ ಘಟನೆ ಕೂಡ ನಡೆಯಲಿಲ್ಲ, ಕಲ್ಲು ತೂರಾಟ ಆಗಲಿಲ್ಲ. ಆದರೆ ಕಲ್ಲು ತೂರಾಟ ಆಯಿತು ಎಂದು ಹೇಳುವ ನೆಪದಲ್ಲಿ ಮುಖಂಡರನ್ನು ಹೊಡೆದು, ಲಾಠಿಚಾರ್ಜ್ ಮಾಡಿ ಮತ್ತು ಆ ಒಂದು ಕಾರ್ಯಕರ್ತರ ಮನೋಧೈರ್ಯವನ್ನು ಕುಗ್ಗಿಸತಕ್ಕಂಥ ಕೆಲಸ ಏನು ಮಾಡಿದ್ದೀರಿ, ಇದರ ಪರಿಣಾಮವನ್ನು ನೀವು ಅನುಭವಿಸಬೇಕಾಗುತ್ತದೆ. ಅದೇ ಪರಿಸ್ಥಿತಿ ನಾಳೆ ನಿಮಗೂ ಕೂಡ ಬರಬಹುದು. ಅದನ್ನು ನೆನಪಲ್ಲಿ ಇಟ್ಟುಕೊಂಡು ಎಚ್ಚರಿಕೆಯಿಂದ ನಡೆದುಕೊಳ್ಳಬೇಕು. ಅಧ್ಯಕ್ಷರೇ, ನಾನು ಹೇಳುತ್ತೇನೆ, ಪ್ರಜಾಪ್ರಭತ್ವದಲ್ಲಿ ಪೀಸ್‌ಫುಲ್ ಡೆಮಾನ್‌ಸ್ಟ್ರೇಷನ್ ಮಾಡುವುದು ತಪ್ಪಾ? ನ್ಯಾಯವಾಗಿ ನಾವು ಇವತ್ತಿನ ದಿವಸ ಮುಖ್ಯಮಂತ್ರಿಗಳಿಗೆ ಮನವಿ ಕೊಡುತ್ತೇವೆ, ನಮಗೆ ಅವಕಾಶ ಮಾಡಿಕೊಡಿ ಎಂದು ಕೇಳುವುದು ತಪ್ಪಾ? ಇದನ್ನು ಕೇಳುವುದಕ್ಕೆ ಬಂದವರ ಮೇಲೆ ನೀವು ಲಾಠಿಪ್ರಹಾರ ಮಾಡುತ್ತೀರಿ, ನೀರು ಬಿಡುತ್ತೀರಿ, ಪಟಾಕಿ ಹಾರಿಸುತ್ತೀರಿ. ಇದು ಯಾವ ಸರ್ಕಾರ ಎಂದು ನಾವು ಹೇಳೋಣ? ಇದೇನು ಡಿಕ್ಟೇಟರ್ ಶಿಫ್ ಅಥವಾ ಇವತ್ತು ಪ್ರಜಾಪ್ರಭುತ್ವ ತತ್ವದ ಮೇಲೆ ನಿಮಗೆ ನಂಬಿಕೆ ಇದೆಯಯೆಂದು ಹೇಳೋಣವೇ? ನೀವು ಈ ಪ್ರಜಾಪ್ರಭುತ್ವ ತತ್ವಕ್ಕೆ ಬಲಿಕೊಟ್ಟು ಇಂತಹ ಪೀಸ್‌ಫುಲ್ ಎಜಿಟೇಷನ್‌ನ್ನು ಹತ್ತಿಕ್ಕಬೇಕು, ಹದ್ದುಬಸ್ತಿನಲ್ಲಿಡಬೇಕು, ತೊಂದರೆ ಕೊಡಬೇಕು ಎನ್ನತಕ್ಕಂಥ ಒಂದೇ ಒಂದು ನಿರ್ಧಾರದಿಂದ ಪೋಲೀಸರನ್ನು ನಿಮ್ಮ ಎಜೆಂಟ್‌ರನ್ನಾಗಿ ಉಪಯೋಗ ಮಾಡಿಕೊಂಡಿದ್ದೀರಿ. ಇವತ್ತಿನ ದಿವಸ ಎಲ್ಲಾ ಕಡೆ ಬಳಸುತ್ತಿದ್ದೀರಿ. ನಾನು ತಿಳಿದುಕೊಂಡಿದ್ದೆ, ಇದನ್ನು ನೀವು ಬರೀ ಚುನಾವಣೆಯಲ್ಲಿ ಬಳಸಿಕೊಂಡು ಇದನ್ನು ಪ್ರಯೋಗ ಮಾಡುತ್ತೀರಿ ಎಂದು ಆದರೆ ಇವತ್ತು ಚುನಾವಣೆ ಅಷ್ಟೇ ಅಲ್ಲ, ಎಜಿಟೇಷನ್ ಮಾಡುವ ಸಂದರ್ಭದಲ್ಲಿ ಕೂಡ , ನಿಮ್ಮ ಜನ ವಿರೋಧ ನೀತಿ ಏನಿದೆ, ಆ ನೀತಿಯ ವಿರುದ್ಧ ನಾವು ಪ್ರತಿಭಟನೆ

ಮಾಡಬೇಕು ಎಂದರೆ, ಅದಕ್ಕೂ ಕೂಡ ಇವತ್ತಿನ ದಿವಸ ಹತ್ತಿಕ್ಕತಕ್ಕಂಥ ಪ್ರಯತ್ನ ಏನು ಮಾಡುತ್ತೀದ್ದೀರ. ಇದು ಡಿಕ್ಟೋಟಿರಿಯಲ್ ಆಟಿಟ್ಯೂಡ್ ಇದೆ. ಇದು ಪ್ರಜಾಪ್ರಭುತ್ವ ನೀತಿಮೇಲೆ ನಿಮಗೆ ವಿಶ್ವಾಸ ಇಲ್ಲವೆಂಬುದನ್ನು ತೋರಿಸುತ್ತದೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಬಹಳ ಲಘುವಾಗಿ ಮಾತನಾಡುತ್ತಾರೆ. ಯಾರು ಬಾ ಎಂದು ಹೇಳಿದ್ದು ಅವರಿಗೆ? ನಾನು ಸಿಂಧ್ಯಾರವರಿಗೆ ಹೇಳುತ್ತಿದ್ದೇನೆ. ಡೆಪ್ಯುಟಿ ಚೀಫ್ ಮಿನಿಸ್ಟರ್ ಅವರು ಬಜೆಟ್ ಮಂಡನೆ ಮಾಡಿದ್ದೇನೆ ಎಂದು ಹೇಳಿ, ಬಹಳಷ್ಟು ರಿಲೀಫ್ ದೊಡ್ಡವರಿಗೆಲ್ಲಿ ಕೊಟ್ಟಿದ್ದೀರಿ. ನಿಮ್ಮ ಮೇಲೆ ಟ್ಯಾಕ್ಸ್ ಹಾಕಿದ್ದೇನೆ, ಅದಕ್ಕಾಗಿ ನೀವು ಹಾಗೆಯೇ ಮಾತನಾಡಿ, ನಾನು ಖುಷಿಯಲ್ಲಿ ಈ ಕಡೆಯಲ್ಲಿ ಮಾತನಾಡುತ್ತೇನೆ ಎಂದು ಹೇಳಿ ಅವರು ಖುಷಿಯಲ್ಲಿದ್ದಾರೆ. ಅದಕ್ಕಾಗಿ ಇವತ್ತಿನ ದಿವಸ ನಾನು ಹೇಳತಕ್ಕಂಥಾದ್ದು ಏನೆಂದರೆ, ಹಿಂದೆ 17-18ನೇ ಶತಮಾನದಲ್ಲಿ ಯಾವರೀತಿಯಾಗಿ ಧಾಳಿ ಮಾಡಿ ಫೋರ್ಟ್ ಕ್ಯಾಫ್‌ಚರ್ ಮಾಡುತ್ತಿದ್ದರು, ಅಧಿಕಾರ ಕ್ಯಾಪ್ಚರ್ ಮಾಡುತ್ತಿದ್ದರು, ಅದೇ ರೀತಿಯಾಗಿ ಇವತ್ತು ಇವರು ಅಂತಹ ಒಂದು ವಾತಾವರಣವನ್ನು ತಯಾರು ಮಾಡಿ ಪೋಲೀಸರು ನಮ್ಮವರರ ಮೇಲೆ ಲಾಠಿಚಾರ್ಜ್ ಮಾಡಿಬಿಟ್ಟರು. ಅಂತಹ ಯಾವ ಘಟನೆ ನಡೆದಿತ್ತು? ವಿಧಾನಸೌಧಕ್ಕೆ ಮುಖಂಡರು ಬಂದು ಮನವಿ ಪತ್ರ ಕೊಡುವುದಕ್ಕೆ ಬಂದರೆ, ಅದಕ್ಕಾಗಿ ನೀವು ಅವರ ಮೇಲೆ ಲಾಠಿಚಾರ್ಜ್ ಮಾಡತಕ್ಕಂಥ ಒಂದು ಪ್ರಯತ್ನ ಮಾಡುವಂಥ ಆಡಳಿತ ಇದೆಯಲ್ಲಾ, ಇದನ್ನು ನೀವು ಸಮರ್ಥನೆ ಮಾಡಿಕೊಳ್ಳುತ್ತೀರಿ ಎಂದರೆ ಇದಕ್ಕೆ ನಾನು ಏನು ಹೇಳಬೇಕು? ನೀವು ಉದ್ದೇಶಪೂರ್ವಕವಾಗಿ ಪೊಲಿಟಿಕಲಿ ಇಂತಹ ಅಜಿಟೇಷನ್‌ನ್ನು ಸಪ್ರೆಸ್ ಮಾಡಬೇಕು, ಮತ್ತು ಜನ ವಿರೋಧಿ ನೀತಿಯನ್ನು ಏನು ಅನುಸರಿಸುತ್ತಿದ್ದೀರಿ, ಅದಕ್ಕೆ ನಿಮಗೆ ಶಕ್ತಿ ಇರಲಿ ಎಂದು ಹೇಳಿ ನಮ್ಮನ್ನು ಹತ್ತಿಕ್ಕತಕ್ಕಂಥ ಪ್ರಯತ್ನ ಮಾಡುತ್ತಿದ್ದೀರಿ ಎನ್ನುವ ಮಾತನ್ನು ನಾನು ಹೇಳುತ್ತೇನೆ. ನಾವಂತೂ ಬರೇ ಪೀಸ್‌ಫುಲ್ ಅಜಿಟೇಷನ್ ಮಾಡಿದ್ದೇವೆ. ನಿಮ್ಮ ಹಿಂದಿನ ಇತಿಹಾಸವನ್ನು ತೆಗೆದರೆ, ನಿಮ್ಮ ಚರಿತ್ರೆಯನ್ನು ತೆಗೆದರೆ, ಶ್ರೀಮಾನ್ ಜೆ.ಹೆಚ್. ಪಟೇಲರು ಇದೇ ಸಭೆಯಲ್ಲಿ ಹೇಳಿದರು. ಶ್ರೀಮತಿ ಇಂದಿರಾಗಾಂಧಿಯವರು ಟ್ರೇನ್‌ನಿಂದ ಭದ್ರಾವತಿ ಮುಖಾಂತರ ಶಿವಮೊಗ್ಗಕ್ಕೆ ಬರಬೇಕಾದರೆ ನಾನು ಅಲ್ಲಿರತಕ್ಕಂಥ ಬ್ರಿಡ್ಜ್‌ಗೆ ಬಾಂಬ್ ಇಟ್ಟು ಹಾರಿಸಬೇಕು ಎನ್ನತಕ್ಕಂಥ ಪ್ರಯತ್ನ ಮಾಡಿದ್ದೆ ಎನ್ನತಕ್ಕಂಥ ಮಾತನ್ನು ಹೇಳಿರತಕ್ಕಂಥವರು ಪ್ರಜಾಪ್ರಭುತ್ವ ನೀತಿ, ನಿಯಮ ಬಗ್ಗೆ ಹೇಳುತ್ತೀರಿ; ನಿಮಗೆ ನಾಚಿಕೆ ಬರಬೇಕು. ಯಾರೋ ಒಬ್ಬ ರಾಷ್ಟ್ರೀಯ ನಾಯಕಿಯನ್ನು ಕೊಲೆ ಮಾಡಬೇಕು ಎಂದು ಹೊರಟಂಥ ಜನ ನಮಗೆ ನೀತಿ ಕಲಿಸುತ್ತೀರೋ? ನಮಗೆ ಪ್ರಜಾಪ್ರಭುತ್ವ ತತ್ವವನ್ನು ಹೇಳಿಕೊಡುತ್ತೀರೋ? ಅದೇ ಒಂದು ಖುಷಿಯಿಂದ ಆವತ್ತು ನೀವು ಹೇಳುತ್ತಿದ್ದಿರಿ. ಏನು ಸ್ವಾತಂತ್ರ್ಯ ಯುದ್ಧದಲ್ಲಿ ಭಾಗಿಯಾಗತಕ್ಕಂಥ ರೀತಿಯಲ್ಲಿ ಏನು ಹೇಳುತ್ತಾ ಇದ್ದರು ಎಂದರೆ, ಇಂದಿರಾಗಾಂಧಿಯವರು ಟ್ರೇನ್‌ನಿಂದ ಬರುತ್ತಿದ್ದರು, ಆ ಟ್ರೇನ್‌ನನ್ನು ಹಾರಿಸಬೇಕೆಂದು ನಾನು ಮತ್ತು ಜಾರ್ಜ್‌ಫರ್ನಾಂಡೀಸ್ ಎಂದು ಹೇಳಿ ಇನ್ನೊಬ್ಬರು ಸೇರಿ ಬಾಂಬ್ ಇಟ್ಟು ಆ ಒಂದು ಸೇತುವೆಯನ್ನು ಹಾರಿಸಬೇಕೆನ್ನುವಂಥ ಪ್ರಯತ್ನ ನಾವು ಮಾಡಿದ್ದೆವು. ಆದರೆ ವಿಫಲರಾಗಿದ್ದೇವೆ ಎಂದು ಹೇಳುವಂಥ ಜನ, ಪ್ರಜಾಪ್ರಭುತ್ವದಲ್ಲಿ ನೀವು ಹೇಗೆ ಇದ್ದೀರಿ ಎನ್ನತಕ್ಕದ್ದು ನಿಮ್ಮ ಮಾತಿನಿಂದ ತೋರಿಸುತ್ತದೆ; ಮತ್ತೆ ಮೊನ್ನೆ 13ನೇ ತಾರೀಖು ಯಾವರೀತಿ ಮುಖಂಡರ ಮೇಲೆ ಲಾಠಿಚಾರ್ಜ್

ಮಾಡಿದ್ದೀರಿ, ಆದರಿಂದ ನೀವು ಎಂತಹ ಜನ ಎನ್ನತಕ್ಕಂಥಾದ್ದು ಮತ್ತು ನಿಮ್ಮಲ್ಲಿ ಯಾವ ಗುಣ ಇದೆ, ಅದೂ ಕೂಡ ಇವತ್ತು ಹೊರಬಿದ್ದಿದೆ ಎಂಬ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಆದ್ದರಿಂದ ಅಧ್ಯಕ್ಷರೇ, ಆ ಒಂದು ಅನ್ಯಾಯದ ಕೆಲಸ ಪಾಪದ ಕೆಲಸ ಏನು ಇತ್ತು ಅವರು ಮಾಡಿದ್ದಾರೆ, ಅಮಾಯಕರ ಮೇಲೆ ಲಾಠಿಚಾರ್ಜ್ ಮಾಡಿಸತಕ್ಕದ್ದು, ಮತ್ತು ಬಡವರಿಗಾಗಿ, ರೈತರಿಗಾಗಿ, ನಾಗರೀಕರಿಗಾಗಿ ಏನು ಸೌಲಭ್ಯಗಳು ಬೇಕು ಎಂದು ಅದರ ಬಗ್ಗೆ ಕೇಳತಕ್ಕಂತಹ ಮುಖಂಡರ ಮೇಲೆ ಏನು ಪ್ರಹಾರ ಮಾಡಿದ್ದಾರೆ, ಅದರ ಬಗ್ಗೆ ಸಮಗ್ರವಾಗಿ ಒಂದು ತನಿಖೆಯಾಗಬೇಕು. ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ಇವತ್ತು ಒಂದು ಹೌಸ್ ಕಮಿಟಿಯನ್ನು ತಾವು ಮಾಡಿ. ಅದು ಜಾಯಿಂಟ್ ಹೌಸ್ ಕಮಿಟಿಯಾಗಬೇಕು. ಮತ್ತು ಇವತ್ತ ಏರಿಸಿದಂಥ ದರ ಏನಿದೆ, ಆ ದರವನ್ನು ಯಾವರೀತಿಯಾಗಿ ನಾವು ರೀಎಸ್ಟಿಮೇಟ್ ಮಾಡಬೇಕು ಅಥವಾ ಯಾವರೀತಿಯಾಗಿ ಇಳಿಸಬೇಕು, ಯಾವರೀತಿಯಾಗಿ ಕೈಬಿಡಬೇಕು ಎನ್ನತಕ್ಕಂಥಾದ್ದಕ್ಕೆ ಒಂದು ಸದನ ಸಮಿತಿಯನ್ನು ಮಾಡಿ. ನಾವು ಬೇರೆ ಏನೂ ಕೇಳುತ್ತಿಲ್ಲ. ಏಕೆಂದರೆ ಇಲ್ಲಿ ನಿಮ್ಮ ಪ್ರತಿಷ್ಠೆಯ ಪ್ರಶ್ನೆ ಕೂಡ ಇರಬಾರದು. ನಮ್ಮ ಕಡೆ ಮತ್ತು ನಿಮ್ಮ ಕಡೆಯ ಶಾಸಕರನ್ನೂ ಸೇರಿಸಿ, ಕೌನ್ಸಿಲ್‌ನಲ್ಲಿ ಇರತಕ್ಕಂಥ ಶಾಸಕರನ್ನು ಕೂಡ ಸೇರಿಸಿ ಒಂದು ಸದನದ ಸಮಿತಿಯನ್ನ ಮಾಡಿ. ಆ ಸದನದ ಸಮತಿಯ ವರದಿ ಬರಲಿ. ಆ ವರದಿ ಬಂದಮೇಲೆ ಅದರಲ್ಲಿ ಇರತಕ್ಕಂಥ ಆಗುಹೋಗುಗಳನ್ನು ನೋಡಿದ ಮೇಲೆ ನಾವು ಏನು ಮುಂದಿನ ಕ್ರಮ ತೆಗೆದುಕೊಳ್ಳಬೇಕು, ಅದನ್ನು ತೆಗೆದುಕೊಳ್ಳುತ್ತೇವೆ. ಅಲ್ಲಿಯವರೆಗೆ ನೀವು ಇವತ್ತು ಏರಿಸಿದಂಥ ದರವನ್ನು ವಾಪಸ್ಸು ತೆಗೆದುಕೊಳ್ಳಬೇಕು, ಅದನ್ನು ರದ್ದುಗೊಳಿಸಬೇಕು. ತತಕ್ಷಣದಿಂದಲೇ ಅದನ್ನು ವಿತ್‌ಡ್ರಾ ಮಾಡಬೇಕು. ಇಲ್ಲದಿದ್ದರೆ ನಾನು ಸ್ಪಷ್ಟವಾಗಿ ಹೇಳುತ್ತೇನೆ, ಈ ಸದನವನ್ನಂತೂ ಮುಂದುವರಿಯಗೊಡುವುದಿಲ್ಲ. ನಮಗೆ ಏನೇ ಶಿಕ್ಷೆಯಾಗಲೀ, ನೀವು ಯಾವ ಶಿಕ್ಷೆಯನ್ನೇ ಕೊಡಿರಿ. ನಮಗೆ ಹೆದರಿಕೆ ಹಾಕಿರಿ, ಅಥವಾ ಯಾವರೀತಿ ನೀವು ನಡೆದುಕೊಂಡರೂ ಸಹ, ಇದನ್ನು ನಾವು ಬಿಡುವುದಿಲ್ಲ. ಆದ್ದರಿಂದ ದಯವಿಟ್ಟು ಒಂದು ಸದನ ಸಮಿತಿಯಾಗಬೇಕು. ಮುಖಂಡರ ಮೇಲೆ ಲಾಠಿಪ್ರಹಾರ ಏನು ಆಗಿದೆ, ಅದರ ಬಗ್ಗೆ ತನಿಖೆಯಾಗಬೇಕು. ಈ ಸದನ ಸಮಿತಿಯೇ ಎರಡೂ ಕೆಲಸವನ್ನೂ ಮಾಡುತ್ತದೆ. ಅದಕ್ಕಾಗಿ ಇದು ಎರಡಕ್ಕೂ ಕೂಡ ಲಿಂಕ್ ಇದೆ ಎನ್ನತಕ್ಕಂಥ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಬಸ್‌ಫೇರ್ ಬಗ್ಗೆಯೇ ನಾವು ಒಂದು ಅಜಿಟೇಷನ್ ಪ್ರಾರಂಭ ಮಾಡಿದ್ದುದು. ಆದರೆ ಅದನ್ನು ಹತ್ತಿಕ್ಕತಕ್ಕಂಥ ಪ್ರಯತ್ನ ಮತ್ತು ಅನೇಕ ಮುಖಂಡರಿಗೆ ಇವತ್ತು ಅವರು ಗಾಯಗೊಂಡು ಆಸ್ಪತ್ರೆಗೆ ಹೋಗತಕ್ಕಂಥ ಕೆಲಸವನ್ನೂ ಕೂಡ ಅವರು ಏನು ಮಾಡಿದ್ದಾರೆ, ನಾನು ಇವತ್ತು ಹೇಳಬೇಕಾಗುತ್ತದೆ.

(ಶ್ರೀ ಜಿ.ಎಸ್. ಶಿವನಂಜಪ್ಪ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಇದೆಲ್ಲಾ ಕೂಡ ಹೊರಬರಬೇಕು ಎಂದರೆ ಸದನ ಸಮಿತಿ ಮಾಡಬೇಕು ಎನ್ನತಕ್ಕಂಥ ಮಾತನ್ನು ಪುನಃ ಕೇಳಿಕೊಂಡು ಇಲ್ಲಿ ಸರ್ಕಾರದ ಪ್ರಚೋದನೆ ಇದೆಯೇ, ಇಲ್ಲವೇ ಎನ್ನತಕ್ಕಂಥಾದ್ದು ಕೂಡ ಗೊತ್ತಾಗುತ್ತದೆ. ಮತ್ತು ಪೋಲೀಸ್‌ರನ್ನು ಏಜೆಂಟ್‌ರನ್ನಾಗಿ ಅವರು ಉಪಯೋಗ ಮಾಡಿಕೊಂಡಿದ್ದಾರೆಯೇ, ಇಲ್ಲವೇ ಎನ್ನುವುದೂ ಕೂಡ ಗೊತ್ತಾಗುತ್ತದೆ. ಅತಿರೇಖದ ವರ್ತನೆಯನ್ನು ಪೋಲೀಸರು ಮಾಡಿದ್ದಾರೆಯೇ

ಅಥವಾ ನಾವು ಏನಾದರೂ ಕಾನೂನು ಬಾಹಿರವಾಗಿ ಅಥವಾ ಎಲ್ಲಿಯಾದರೂ ಕಾನೂನು ಮುರಿದು ಕಾನೂನನ್ನು ನಮ್ಮ ಕೈಯಲ್ಲಿ ತೆಗೆದುಕೊಂಡು ಏನಾದರೂ ವರ್ತನೆ ಮಾಡಿದ್ದೇವಾ ಎನ್ನತಕ್ಕಂಥಾದ್ದೂ ಕೂಡ ಹೊರಬರುತ್ತದೆ. ಅದಕ್ಕೆ ದಯವಿಟ್ಟು, ಮಾನ್ಯ ಸಿಂಧ್ಯಾರವರು ಯಾವಾಗಲೂ ಹೇಳುತ್ತಾರೆ, ನಾನು ಸಾಮಾನ್ಯವಾಗಿ ಜನರಿಗೆ ಅನಾನುಕೂಲ ಆಗತಕ್ಕಂಥ ರೀತಿಯಲ್ಲೇ ನಡೆದುಕೊಳ್ಳುತ್ತೇನೆ ಅಂತ. ಇವತ್ತು ಜನರಿಗೆ ಇವರಿಂದ ಅನಾನುಕೂಲವಾಗಿದೆ ಎನ್ನತಕ್ಕಂಥಾದ್ದು ಕೂಡ ಇವತ್ತು ಜಗಜ್ಜಾಹೀರಾಗಿದೆ. ಏಕೆಂದರೆ ಎಲ್ಲ ಪಕ್ಷಗಳು, ಬಿ.ಜೆ.ಪಿ ಯವರು, ನಮ್ಮ ಪಾರ್ಟಿಯವರು, ಕಮ್ಯುನಿಸ್ಟ್‌ರು ಎಲ್ಲರೂ ಕೂಡ ರಾಜ್ಯದಾದ್ಯಂತ ಒಂದಲ್ಲ ಒಂದು ರೀತಿಯಿಂದ ಅಜಿಟೇಷನ್ ಮಾಡಿದ್ದಾರೆ. ಒಂದಲ್ಲ ಒಂದು ರೀತಿಯಲ್ಲಿ ಪ್ರತಿಭಟನೆ ಮಾಡಿದ್ದಾರೆ. ಇದಕ್ಕೆ ಸಾಮಾನ್ಯ ಜನರ ಸಂಪೂರ್ಣವಾದಂಥ, ಬೆಂಬಲ ಇದೆ; ವಿದ್ಯಾರ್ಥಿಗಳ ಬೆಂಬಲ ಇದೆ, ನೇಕ ಮುಖಂಡರ ಬೆಂಬಲ ಇದೆ. ಅದಕ್ಕಾಗಿ ತಕ್ಷಣದಿಂದಲೇ ತಾವು ಇದನ್ನು ವಿತ್‌ಡ್ರಾ ಮಾಡಿಕೊಳ್ಳಬೇಕು ಮತ್ತು ಸದನ ಸಮಿತಿಗೆ ಒಪ್ಪಿಕೊಳ್ಳಬೇಕು. ಇದು ಎರಡೂ ಕೂಡ, ಲಾಠಿಚಾರ್ಜ್ ಬಗ್ಗೆ ಮತ್ತು ಬಸ್‌ದರ ಬಗ್ಗೆ ಒಂದು ಸಮಿತಿ ವರದಿ ಬಂದಮೇಲೆ ಮುಂದಿನ ಕ್ರಮವನ್ನು ಜರುಗಿಸಬೇಕು ಮತ್ತು ಅಲ್ಲಿಯವರೆಗೆ ಇದನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ನಾವು ಬರೇ ಲಾಠಿಚಾರ್ಜ್‌ದ್ದೇ ಇಷ್ಯೂ ಮಾಡಬೇಕೆಂದು ಮಾಡಿದ್ದೆವು. ಅದಕ್ಕೆ ನಾವು ಪೆಟ್ಟು ತಿಂದರೂ ಚಿಂತೆ ಇಲ್ಲ. ನಮಗೆ ನೋವಾದರೂ ಚಿಂತೆ ಇಲ್ಲ. ಕನಿಷ್ಟಪಕ್ಷ ಈ ರಾಜ್ಯದಲ್ಲಿರತಕ್ಕಂಥ ಜನರಿಗೆ ಸಹಾಯವಾದ್ರೆ ಸಾಕು ಎನ್ನತಕ್ಕಂಥ ದೃಷ್ಟಿಯಿಂದ ಕನಿಷ್ಟ ಈ ಸದನಸಮಿತಿಯನ್ನು ನಾವು ಏನು ಕೇಳುತ್ತಿದ್ದೇವೆ, ಮತ್ತು ಅಲ್ಲಿಯವರೆಗೆ ತಾವು ಇದನ್ನು ವಿತ್‌ಡ್ರಾ ಮಾಡಿಕೊಳ್ಳಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಪ್ರತಿವರ್ಷ ಎಲ್ಲರೂ ಒಂದಾಗಿ, ತಾತ್ವಿಕವಾಗಿ ಅನೇಕ ಭಿನ್ನಾಭಿಪ್ರಾಯಗಳಿದ್ದರೂ ಸಹ ಈ ನಾಡಿನ ಜನರಿಗೆ ಬಂದಿರುವಂಥ ಸಂಕಷ್ಟ ಪಾರು ಮಾಡಬೇಕೆಂದು ಹೇಳಿ, ಈ ನಿಲುವಳಿ ಸೂಚನೆ ಮೂಲಕ ಈ ಸಾರಿಗೆ ದರವನ್ನು ಮನಬಂದಂತೆ ಏರಿಸಿ, ಸುಮಾರು 173 ಕೋಟಿಗೂ ಹೆಚ್ಚಿನ ತೆರಿಗೆಯನ್ನು ಹಾಕಿ, ಶೇಕಡ 25 ರಿಂದ 150ರವರೆಗೂ ಈ ಸಾರಿಗೆ ದರವನ್ನು ಏನು ಜಾಸ್ತಿ ಮಾಡಿದ್ದೀರಿ, ಈ ಬಗ್ಗೆ ನಾವು ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡುತ್ತಾ ಇದ್ದೇವೆ. ಆತ್ಮಸಾಕ್ಷಿ ಎನ್ನುವುದು ಏನಾದರೂ ಆಡಳಿತ ಪಕ್ಷದಲ್ಲಿರುವಂಥ ಶಾಸಕ ಮಿತ್ರರಿಗೆ ಇದ್ದರೆ, ನಿಮ್ಮ ಜೊತೆಯೂ ಚರ್ಚೆ ಮಾಡದೇ, ಈ ಸದನವನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಲೂಟಿ ಆಗುತ್ತಿರುವಂಥ ಇಲಾಖೆಯನ್ನೂ ಸರಿಪಡಿಸುವಂಥ ಯಾವುದೇ ಪ್ರಾಮಾಣಿಕ ಪ್ರಯತ್ನವನ್ನು ಮಾಡದೇ, ಈ ರೀತಿ ಸರ್ವಾಧಿಕಾರಿಯಂತೆ, ಪ್ರಜಾತಂತ್ರ ವ್ಯವಸ್ಥೆ ಬಗ್ಗೆ ಯಾವುದೇ ವಿಶ್ವಾಸವನ್ನು ಇಟ್ಟುಕೊಳ್ಳದೆ ಈ ತೆರಿಗೆಯನ್ನು ಏನು ಜಾಸ್ತಿ ಮಾಡಿದ್ದೀರಿ, ಈ ಬಗ್ಗೆ ನಿಲುವಳಿ ಸೂಚನೆಯನ್ನು ಸನ್ಮಾನ್ಯ ಅಧ್ಯಕ್ಷರೂ ಒಪ್ಪಿಕೊಳ್ಳುತ್ತಾರೆ. ವೋಟಿನ ಸಂದರ್ಭ ಬಂದಾಗ ಆತ್ಮಸಾಕ್ಷಿಗನುಗುಣವಾಗಿ ತಾವು ವೋಟು ಹಾಕಿದರೆ, ಬಹುಶಃ ನೀವೇನು ಬಡಿದಾಡಿ, ಕಚ್ಚಾಡಿ ಸರ್ಕಾರ ಹೀಗೆಯೇ ಮುಂದುವರೆದರೆ ನಾವು ಉಳಿಯುವುದಿಲ್ಲವೆಂದು ಈಗಾಗಲೇ ಮನವರಿಕೆಯಾಗಿದೆಯೋ, ಮಾಜಿ ಮುಖ್ಯಮಂತ್ರಿಗಳು ಮತ್ತು ಹಾಲಿ ಗೌರವಾನ್ವಿತ ಪ್ರಧಾನಿಯವರು ನಿಮ್ಮ ದುರಾಡಳಿತವನ್ನು

ನೋಡಿ, ಬೇಸತ್ತು ನೀವು ಸರಿಯಾದ ರೀತಿ ಆಡಳಿತವನ್ನು ನಡೆಸಿ, ಇಲ್ಲದಿದ್ದರೆ ಜನ ಅಧಿಕಾರದಿಂದ ಇಳಿಸಿ, ಒದ್ದು ಓಡಿಸುತ್ತಾರೆ ಎನ್ನುವಂಥ ಎಚ್ಚರಿಕೆಯನ್ನು ಏನು ಕೊಟ್ಟಿದ್ದಾರೆ ಬಹುಶಃ ಅದಕ್ಕನುಗುಣವಾಗಿ ಇವತ್ತು ಈ ನಿಲುವಳಿ ಸೂಚನೆ ಸಂದರ್ಭದಲ್ಲಿ ಆಕಡೆ ಕುಳಿತಿರುವ ಜನರು, ನಾನು ಜೆ.ಹೆಚ್. ಪಟೇಲರು ಅಥವಾ ದೇವೇಗೌಡರ ಪರ ಅಲ್ಲ. ಈ ನಾಡಿನ ಜನರ ಪರವಾಗಿ ಪ್ರತಿನಿಧಿಯಾಗಿ ಇಲ್ಲಿಗೆ ಬಂದಿದ್ದೇನೆ ಎಂದು ಮತವನ್ನು ಚಲಾವಣೆ ಮಾಡುತ್ತೀರಾ ಎನ್ನುವಂಥ ವಿಶ್ವಾಸದೊಂದಿಗೆ ನಾನು ಈ ನಿಲುವಳಿ ಸೂಚನೆ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇವೆ ಕೆ.ಎಸ್.ಆರ್.ಟಿ.ಸಿ. ಇತ್ತೀಚೆಗೆ ಸೇವಾಮನೋಭಾವನೆಯನ್ನು ಸಂಪೂರ್ಣವಾಗಿ ಮರೆತು ರಾಜಾರೋಷವಾಗಿ ಲೂಟಿ ಮಾಡುತ್ತಿರುವಂಥ, ಜನರನ್ನು ಒಂದು ರೀತಿ ಕುರಿಗಳಂತೆ ಕಾಣುತ್ತಿರುವಂಥ, ಜನರ ರಕ್ತವನ್ನು ಹೀರುವಂಥ ಒಂದು ಸಂಸ್ಥೆಯಾಗಿದೆ. ನಾನು ಪ್ರಾರಂಭದಲ್ಲಿ ಮುಖ್ಯಮಂತ್ರಿಗಳಿಗೆ ಒಂದು ಸಲಹೆಯನ್ನು ಕೊಟ್ಟೆ. ನೀವು ಆಡಳಿತ ಪಕ್ಷ, ನಾವು ವಿರೋಧಪಕ್ಷ ಎಂದು ಎಲ್ಲಾ ಸಂದರ್ಭದಲ್ಲೂ ದಯವಿಟ್ಟು ಭಾವಿಸಬೇಡಿ. ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ವಿದ್ಯುತ ದರವನ್ನು ಜಾಸ್ತಿ ಮಾಡಿದಂಥ ಕಾಲದಲ್ಲಿ, ಅನಿವಾರ್ಯ ಸಂದರ್ಭ ಬಂತು ಎಂಬುದು ಮನವರಿಕೆಯಾದಾಗ.......

ಶ್ರೀ ಹೆಚ್. ಶಿವಪ್ಪ : ಶಾಸಕರು ಎಂದು ಅವರು ಹೇಳಿದ್ದರಿಂದ, ನಾವು ಹೇಳಬೇಕಾಗುತ್ತದೆ.

ವೈಸ್‌ಚೇರ್ಮನ್ : ಮಾನ್ಯ ಶಿವಪ್ಪನವರೇ, ತಾವು ದಯವಿಟ್ಟು ಕುಳಿತುಕೊಳ್ಳಿ, ಅವರು ಯೀಲ್ಡ್ ಆಗಿಲ್ಲ.

ಶ್ರೀ ವಾಟಾಳ್‌ನಾಗರಾಜ್: ಅವರು, ಶಿವಪ್ಪನವರು ಎಂದು ಹೇಳಲಿಲ್ಲ, ಇಡೀ ಶಾಸಕರು ಎಂದು ಹೇಳುತ್ತಿರುವುದು.....

ಶ್ರೀ ಹೆಚ್. ಶಿವಪ್ಪ : ಆತ್ಮಸಾಕ್ಷಿ ಇಲ್ಲ, ಆಕಡೆ ಕೈ ಎತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ವಿರೋಧ ಪಕ್ಷದ ಶಾಸಕರಲ್ಲೂ ಆ ಭಾವನೆ ಬರಬೇಕು ಮತ್ತು ವಿರೋಧ ಪಕ್ಷದ ನಾಯಕರಲ್ಲಿಯೂ ಆ ಭಾವನೆ ಬರಬೇಕು. ಒಳ್ಳೆಯ ಕೆಲಸವನ್ನು ಮಾಡಿದಾಗ, ಮೆಚ್ಚಿಗೆಯನ್ನು ವ್ಯಕ್ತಪಡಿಸುವಂಥ ಭಾವನೆ ನಮ್ಮಲ್ಲಿ ಬರಬೇಕು.

ಶ್ರೀ ವಾಟಾಳ್ ನಾಗರಾಜ್ : ಶಿವಪ್ಪನವರು ಯಾವ ಪಕ್ಷದವರು. ಅವರು ಜನತಾ ದಳವನ್ನು ಸೋಲಿಸಿ, ಗೆದ್ದಿರತಕ್ಕವರು. ಈಗ ಅವರು ಯಾವ ಪಕ್ಷ ಎಂದು ಇನ್ನೂ ತೀರ್ಮಾನವಾಗಿಲ್ಲ.

ವೈಸ್‌ಚೇರ್ಮನ್: ನೀವು ಯಾವ ಪಕ್ಷ ಎಂಬುದನ್ನು ಅವರಿಗೆ ಹೇಳಿ.

ಶ್ರೀ ಹೆಚ್. ಶಿವಪ್ಪ : ನಮ್ಮ ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ನಾನು ಏನು ಎಂದು ಇದುವರೆಗೆ ತಿಳಿದುಕೊಳ್ಳದಿರುವುದನ್ನು ನೋಡಿದರೆ I only pity him. That is all.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಶಿವಪ್ಪನವರ ಬಗ್ಗೆ ಅನುಕಂಪ ಆಗುತ್ತಾ ಇದೆ. ಆದರೆ, ಅವರು ಈಗ ಏನಾಗಿದ್ದಾರೆ ಎಂಬ ಅನುಮಾನ ಬಂದಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏನು ಹೇಳಿದೆ. ಆತ್ಮಸಾಕ್ಷಿ ಎನ್ನುವುದು ಇದ್ದರೆ ಮಾತ್ರ ಎಂದು ಹೇಳಿದೆ. ಇಲ್ಲ ಎಂದರೆ ನಾನು ನಿಮ್ಮನ್ನು ಒತ್ತಾಯ ಮಾಡುವುದಿಲ್ಲ. ನಾನು ಶಿವಪ್ಪನವರಿಗೆ ಒತ್ತಾಯ ಮಾಡಿದ್ದೇನೆಯೇ? ನಾವು ಇದನ್ನು ಸ್ವಲ್ಪ ಸೀರಿಯಸ್ಸಾಗಿ ನೋಡೋಣ. ಸನ್ಮಾನ್ಯ ಅಧ್ಯಕ್ಷರೇ, ರಾಜಕಾರಣಿಗಳು, ಅಧಿಕಾರಿಗಳು ಮತ್ತು ಗುತ್ತಿಗೆದಾರರು ಇವರ ಮುಸುಕಿನ ಗುದ್ದಾಟದಲ್ಲಿ ನಮ್ಮನ್ನು ಆಯ್ಕೆ ಮಾಡಿ ಕಳುಹಿಸದಂಥ, ನಮ್ಮ ಮಾಲೀಕರು ಸುಮಾರು 5 ಕೋಟಿ ಜನರು ಇವತ್ತು ಹಣ್ಣಾಗುತ್ತಿದ್ದಾರೆ, ಸುಸ್ತಾಗುತ್ತಿದ್ದಾರೆ. ಅವರು ಬದುಕುವುದು ಹೇಗೆ ಎಂದು ಚಿಂತಿತರಾಗಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ಆಡಳಿತ ಪಕ್ಷದಲ್ಲಿದ್ದಾಗ ಮನಬಿಚ್ಚಿ ಮಾತನಾಡುವುದು ಕಷ್ಟವಾಗಬಹುದು. ಬಹುಶಃ ಮಾನ್ಯ ನಾಗೇಗೌಡರು ಮಂತ್ರಿಗಳಾಗಿದ್ದರೂ ಸಹ, ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಬಹುದು. ಆಗಲೇ ತಮ್ಮ ದಿಟ್ಟತನವನ್ನು ಜನರು ಮೆಚ್ಚುವುದು. ನಿಮ್ಮ ಮನೆಯವರೂ ಸೇರಿ, ನಿಮ್ಮ ಬಂಧುಬಳಗದವರೂ ಸೇರಿ ನೀವು ಓಡಾಟ ಮಾಡಿದಂಥ ಕಾಲದಲ್ಲಿ ಈ ಸಾರಿಗೆ ದರವನ್ನು ಇಷ್ಟೊಂದು ಜಾಸ್ತಿ ಮಾಡಿರುವುದನ್ನು ಒಪ್ಪುತ್ತಿರೋ ಕಳೆದ 15 ದಿವಸಗಳಿಂದ ನಡೆದಿರುವಂಥ ನಿರಂತರ ಹೋರಾಟದಲ್ಲಿ,ಕರ್ನಾಟಕ ರಾಜ್ಯದ20 ಜಿಲ್ಲೆಗಳಲ್ಲಿ ಸುಮಾರು 140-142 ತಾಲ್ಲೂಕುಗಳಲ್ಲಿ ನಾವು ಶಕ್ತಿಮೀರಿ ಜನಾಭಿಪ್ರಾಯವನ್ನು ಮೂಡಿಸುವಂಥ ಪ್ರಯತ್ನ ಮಾಡಿದ್ದೇವೆ. ಆ ಬಸ್ಸುಗಳು ಈ ಸರ್ಕಾರದ ಆಸ್ತಿ, ನಮ್ಮ ಆಸ್ತಿ ಎಂದು ತಿಳಿದುಕೊಂಡು, ಹಿಂದಿನ ಕಲ್ಚರ್, ಬೇರೆಯವರು ಮಾಡಿದಂತೆ ನಾವು ಬಸ್ಸಿಗೆ ಬೆಂಕಿ ಹಚ್ಚಲಿಲ್ಲ, ಕಾನೂನು ಸುವ್ಯವಸ್ಥೆ ಹದಗೆಡಿಸುವಂಥ ಪ್ರಯತ್ನ ಮಾಡಲಿಲ್ಲ, ಶಾಂತವಾಗಿ ಸತ್ಯಾಗ್ರಹ ಮಾಡಿದೆವು, ಬಸ್ ತಡೆ ಮಾಡಿದೆವು. ಸುಮಾರು 10-12 ಸಾವಿರ ಜನ ಬಂಧನಕ್ಕೆ ಒಳಗಾದೆವು; ಬಿಡುಗಡೆಯಾಯಿತು. ಕಿರುಕುಳ ಅನುಭವಿಸಿದೆವು. ಈಗ ತಾನೆ ನಮ್ಮ ಉತ್ತರಹಳ್ಳಿ ಶಾಸಕರಾದ ಶ್ರೀನಿವಾಸ್‌ರವರ ನೇತೃತ್ವದಲ್ಲಿ, ಕಾರ್ಪೋರೇಟರುಗಳು ಮತ್ತು ಇತರೆಯವರು ನೇರಿದಂತೆ 4-5 ಸಾವಿರ ಜನ ಕಾರ್ಯಕರ್ತರು ಬಸ್ ದರ ಏರಿಕೆ ವಿರುದ್ಧ, ವಿದ್ಯುತ್ ದರ ಏರಿಕೆ ವಿರುದ್ಧ ಹೋರಾಟ ಮಾಡಿ ಬಂಧನಕ್ಕೆ ಒಳಗಾಗಿ ಇವತ್ತು ಇಲ್ಲಿಗೆ ಬಂದಿದ್ದಾರೆ. ನಾನು ಮಾನ್ಯ ಸಿಂಧ್ಯರವರನ್ನು ಕೇಳುತ್ತೇನೆ. ನೀವು ಮಂತ್ರಿ ಎನ್ನುವುದನ್ನು ಒಂದು ಕ್ಷಣ ಮರೆತುಬಿಡಿ. ನಾನು ಒಬ್ಬ ಬಿ.ಜೆ.ಪಿ. ಶಾಸಕ. ನೀವೂ ಕೂಡ ಬಹಳ ಕಷ್ಟದಲ್ಲಿ ಬೆಳೆದುಬಂದವರು. ಕಳೆದ ಒಂದು ವರ್ಷದಲ್ಲಿ ವಿದ್ಯುತ್ ದರ, ಸಾರಿಗೆ ದರ, ಕುಡಿಯುವ ನೀರಿನ ದರ, ವಾಸ ಮಾಡುವಂಥ ಮನೆಗಳ ತೆರಿಗೆ ಇವೆಲ್ಲಾ ಜಾಸ್ತಿ ಮಾಡಿದುದರಿಂದ ಸಾಮಾನ್ಯ ಮತ್ತು ಮಧ್ಯಮವರ್ಗದ ಜನರು,2-3-4 ಸಾವಿರ ರೂಪಾಯಿಗಳ ಸಂಬಳ ತೆಗೆದುಕೊಂಡು ಜೀವನ ನಡೆಸುವಂಥವರೇನಿದ್ದಾರೆ, ಅವರ ಮೇಲೆ, ಒಂದು ತಿಂಗಳಿಗೆ ಸುಮಾರು 600-700 ರೂಪಾಯಿಗಳಿಗೂ ಹೆಚ್ಚು ತೆರಿಗೆ ಭಾರ ಬಿದ್ದಿದೆ. ಅವನು, ಇದನ್ನು ಹೇಗೆ ಸರಿಪಡಿಸಿಕೊಂಡು ಬದುಕುವುದು ಎನ್ನುವುದನ್ನು ಚಿಂತನೆ ಮಾಡಿದ್ದೀರೋ? ಸನ್ಮಾನ್ಯ ಅಧ್ಯಕ್ಷರೇ, ಕಣ್ಣಲ್ಲಿ ನೀರು ಬರುತ್ತದೆ. ಈಗೆ 4-5 ದಿವಸಗಳ ಹಿಂದೆ ನಾನು ನಮ್ಮ ಅನಂತಕುಮಾರ್ ಮತ್ತು ಈಶ್ವರಪ್ಪನವರು, ಟೀ ತೆಗೆದುಕೊಳ್ಳುವುದಕ್ಕಾಗಿ ಹೋಟೆಲಿನ ಹತ್ತಿರ ನಿಂತಿದ್ದೆವು. ಹೋಟೆಲ್ ಸಪ್ಲೈಯರ್ ಬಂದ. ಯಡಿಯೂರಪ್ಪನವರೇ, ವಿಜಯನಗರದಿಂದ ನಾನು ಈ ಕಡೆ ಬರುತ್ತೇನೆ. ಮೊದಲು ಸುಮಾರು 2-25 ಪೈಸೆ ಬಸ್ ಚಾರ್ಜಿಗಾಗಿ ಖರ್ಚಾಗುತ್ತಿತ್ತು, ಆದರೆ, ಈಗ ನಾಲ್ಕು,

ನಾಲ್ಕೂವರೆ ರೂಪಾಯಿಗಳು ಖರ್ಚಾಗುತ್ತದೆ. ಮೊದಲ ವಾರವೇ, ನನ್ನ ಕುಟುಂಬ ಹೇಗೆ ಮುಂದುವರೆಸುವುದು ಎಂದು ಕಣ್ಣೀರು ಹಾಕುತ್ತಿದ್ದಾನೆ. ನಾವೇನು ತಪ್ಪು ಮಾಡಿದ್ದೇವೆ, ನಮ್ಮನ್ನು ಬಿಟ್ಟುಬಿಡಿ. ನೀವೆಲ್ಲಾ ಸೇರಿ ನಮ್ಮನ್ನು ಏಕೆ ಈ ರೀತಿಯಾಗಿ ಸುಲಿಗೆ ಮಾಡುತ್ತಿದ್ದೀರಿ ಎಂದು ಕಣ್ಣೀರು ಹಾಕಿದ. ಮಾನ್ಯ ಸಿಂಧ್ಯರವರೇ, ಈ ರೀತಿಯಾಗಿ ಅಭಿವೃದ್ಧಿ ಕಾರ್ಯಗಳ ಕಡೆ ಗಮನ ಕೊಡದೆ, ಲೂಟಿ ಮಾಡುತ್ತಿರುವಂಥ ಇಲಾಖೆಯನ್ನು ಸರಿಪಡಿಸುವುದಕ್ಕಾಗದೇ ಇದ್ದರೆ, ಯಡಿಯೂರಪ್ಪನವರೇ, ನಾನು ಸುಧಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ, ನಾನು ಇರುವುದಿಲ್ಲವೆಂದು ಹೇಳಿ ರಾಜೀನಾಮೆ ಕೊಟ್ಟು ಹೊರಗೆ ಬನ್ನಿ. ನೀವು ಏನೇನು ಹೇಳಿದ್ದೀರಿ ಎಂದು ಹೇಳುತ್ತೇನೆ. ಅದನ್ನು ಸುಧಾರಣೆ ಮಾಡುವ ಬದಲಾಗಿ; ಖುಷಿ ಬಂದಹಾಗೆ ದರವನ್ನು ಜಾಸ್ತಿ ಮಾಡಿದ್ದೀರಿ ಇದು ತೊಘಲಕ್ ದರ್ಬಾರು ಅಲ್ಲವೇ?

2.00 ಪಿ.ಎಂ.

ಈ ಇಲಾಖೆಯನ್ನು ಸರಿಯಾಗಿ ನಡೆಸುವುದಕ್ಕೆ ಆಗದೇ ಅಲ್ಲಿ ನಡೆಯುತ್ತಿರುವ ಹಗಲು ದರೋಡೆಯನ್ನು ಮುಚ್ಚಿ ಹಾಕಿಬಿಡುವುದಕೋಸ್ಕರ ಶ್ರೀಸಾಮಾನ್ಯ ಮೇಲೆ ಮನ ಬಂದಂತೆ ತೆರಿಗೆಯನ್ನು ಹಾಕುವುದಕ್ಕೆ ಜನ ನಿಮ್ಮನ್ನು ಆಯ್ಕೆ ಮಾಡಿ ಕಳುಹಿಸಿದ್ದಾರೇನು? ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಕಡೆ ಕುಳಿತಿರತಕ್ಕಂಥ ಶಾಸಕರಿಗೆ ಗೌರವ ಇಲ್ಲವೇ ನಾಗೇಗೌಡರೇ? ಅವರು ನನಗೆ ಆತ್ಮೀಯರು, ಪರವಾಗಿಲ್ಲ ನನ್ನ ಮಾತಿಗೆ ಸ್ವಲ್ಪ ಸ್ಪಂದಿಸುತ್ತಾರೆ. ಮಾನ್ಯ ಸಿಂಧ್ಯಾರವರು ಕಲ್ಲು ಬಂಡೆಯಂತೆ ಕುಳಿತಿದ್ದಾರೆ ಆ ಇಲಾಖೆಗೆ ಸಿಕ್ಕಿಕೊಂಡು ಇವರಾದರೂ ಬುದ್ಧಿ ಹೇಳುತ್ತಾರೋ ಏನೋ ಎಂದು ನಾನು ಮಾನ್ಯ ನಾಗೇಗೌಡರಿಗೆ ಹೇಳಿದೆ.

ಶ್ರೀ ಜಿ.ಬಿ. ಶಿವಕುಮಾರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ವಿರೋಧಪಕ್ಷದನಾಯಕರಾಗಿ ಕೆಲಸ ಮಾಡಿದಂತಹವರು. ಹಿರಿಯ ಶಾಸಕರು. ಮಾನ್ಯ ಸಿಂಧ್ಯಾರವರ ಖಾತೆಯ ಬಗ್ಗೆ ಅವರಿಗೆ ಅಪಾರವಾದ ಜ್ಞಾನ ಇದೆ. ಅವರು ಏನು ಹೇಳಿದರೂ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ನಮ್ಮ ಜಿಲ್ಲೆಯವರು ನಾಗೇಗೌಡರು ಅವರು ತಲೆ ಮೇಲೆ ಕೈಇಟ್ಟುಕೊಂಡು ಕುಳಿತಿದ್ದಾರೆ. ಈ ನಾಟಕದಲ್ಲಿ ಕ್ಯಾಚ್ ವರ್ಡ್ ಕೊಡುತ್ತಾರೆ ಯಾವುದೋ ಪಾರ್ಟ್ ಯಾರೋ ಹೇಳಿ ಬಿಟ್ಟು ಡೀವಿಯೇಟ್ ಆಗಿ ಬಿಡುತ್ತದೆ. ಆ ಕ್ಯಾಚ್ ವರ್ಡ್ ಬೇರೆ ಹಳಿ ತಪ್ಪಿದಂತೆ ಇರಲಿ ಎಂದು ಅಷ್ಟೇ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾಗೇಗೌಡರೇ ಎಂದು ಏಕೆ ಪ್ರಸ್ತಾಪ ಮಾಡಿದರು ಅಂದರೆ ಅವರು ಇಲಾಖೆ ಬಗ್ಗೆ ಬಹಳ ಕಳಕಳಿ ಇದೆ, ಅವರು ಕೆಲಸ ಮಾಡುತ್ತಾರೆ ಅದಕ್ಕೆ ಅವರಿಗೆ ಹೇಳುತ್ತಾರೆ. ಅವರು ಯಡಿಯೂರಪ್ಪನವರು ಭಾಷಣ ಮಾಡುವಾಗ ತಲೆಯ ಮೇಲೆ ಏಕೆ ಕೈಇಟ್ಟುಕೊಂಡರು ಅಂದರೆ ನಮ್ಮ ಸರ್ಕಾರದ ಹಣೆಬರಹ ಈ ತರಹ ಆಗಿ ಹೋಗಿದೆ, ಬಸ್ಸುದರ ಏರಿಸಬಾರದಾಗಿತ್ತು, ಬಸ್ಸು ದರ ಏರಿಸಿ ಈ ಪರಿಸ್ಥಿತಿ ಆಯಿತು ಎಂದು ಅವರು ತಲೆಯ ಮೇಲೆ ಕೈ ಬಿಟ್ಟುಕೊಂಡಿದ್ದಾರೆ. ಸುಮ್ಮನೆ ಕುಳಿತಿಲ್ಲ ಅವರು ತಲೆಮೇಲೆ ಕೈಇಟ್ಟುಕೊಂಡು ಈ ಪರಿಸ್ಥಿತಿ ಬಂತಲ್ಲ ಎಂದು ಚಿಂತನೆ ಮಾಡುತ್ತಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ತಾವೂ ಸಹ ಬಹಳ ವರ್ಷಗಳಿಂದ ರಾಜಕೀಯದಲ್ಲಿದ್ದೀರಿ. ನಮ್ಮ ಕೆ.ಎಸ್.ಆರ್.ಟಿ.ಸಿ.ಯನ್ನು ನಾನು ಮಹಮದ್ ಅಲಿ ಕಾಲದಿಂದಲೂ ನೋಡಿಕೊಂಡು ಬರುತ್ತಿದ್ದೇನೆ. ಪ್ರಕಾಶ್ ಅವರು ಇದ್ದರು. ನಮ್ಮ ಮಾನ್ಯ ಸಿಂಧ್ಯಾರವರು ಎರಡನೇ ಸಾರಿ ಬಹಳ ಯಶಸ್ವಿಯಾಗಿ ಸಾರಿಗೆ ಸಚಿವರಾಗಿ ಕೆಲಸ ಮಾಡಿದವರು. ಅವರು ಇವತ್ತು ಇದ್ದಾರೆ. ಸುಮಾರು 15-16 ಸಾರಿ ನಾವು ಸಾರಿಗೆ ದರವನ್ನು 25-30 ವರ್ಷಗಳಲ್ಲಿ ಏರಿಸಿದ್ದೇವೆ. ನಾನೂ ಸಹ ಆ ಸಬ್ ಕಮಿಟಿಯಲ್ಲದ್ದೇವೆ. ಇವತ್ತು ನಾವು ದರವನ್ನು ಏರಿಸುವುದಿಲ್ಲ. ಈ ಸಾರಿಗೆ ಸಂಸ್ಥೆಯನ್ನೇ ನಾವು ಮಾರಿಬಿಡುತ್ತೇವೆ. ಖಾಸಗೀಕರಣಕ್ಕೆ ಬಿಟ್ಟುಬಿಡೋಣ. ಯಾರಾದರೂ ಕೊಂಡುಕೊಳ್ಳಲಿ ಸ್ವಾಮಿ. ಇವೆಲ್ಲವನ್ನೂ ಪರಿಶೀಲನೆ ಮಾಡಿದ್ದೇವೆ. ಇವರು ಹೇಳಿದರು 20 ಜಿಲ್ಲೆಗಳಲ್ಲಿ ಬಹಳ ತೀವ್ರವಾದ ಪ್ರತಿಭಟನೆ ಎಂದು. ಸಾರಿಗೆ ಸಂಸ್ಥೆಯ ಬಸ್ಸು ದರ ಏರಿಸಿದಾಗ ಅತ್ಯಂತ ಕಡಿಮೆ ಪ್ರತಿಭಟನೆ ಆಗಿರುವುದು ಈಗಲೇ.

(ಗೊಂದಲ)

ಅಧ್ಯಕ್ಷರು : ದಯಮಾಡಿ ತಾವೆಲ್ಲರೂ ಕುಳಿತುಕೊಳ್ಳಿ ಅವರು ಹೇಳುತ್ತಾರೆ.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಹೇಳಿದ ಮಾತಿಗೆ ನಮ್ಮಲ್ಲಿ ರೇಕಾರ್ಡ್‌ಗಳು ಇವೆ. ಸಾರಿಗೆ ಸಂಸ್ಥೆಯ ಬಸ್ಸು ದರ ಏರಿಸಿದಾಗ ತೀವ್ರ ಪ್ರತಿಭಟನೆಯನ್ನು ಯಾವಾಗ ಮಾಡಿದರು ಎನ್ನುವುದಕ್ಕೆ ಪೋಲಿಸ್ ಇಲಾಖೆಯಲ್ಲಿ ದಾಖಲೆಗಳು ಇವೆ. ಯಾರು ಬಸ್ಸು ದರ ಹೆಚ್ಚಿಸಿದ್ದಕ್ಕೆ ಪ್ರತಿಭಟನೆ ಮಾಡಿದವರು? ರಾಜಕಾರಣಿಗಳು ಪ್ರಯಾಣಿಕರು ಅಲ್ಲ. ರಾಜಕೀಯ ಲಾಭಕೋಸ್ಕರವಾಗಿ ಪ್ರತಿಭಟನೆ ಮಾಡಿದರು.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೇ, ಜನರ ಪರವಾಗಿ ಇರತಕ್ಕಂಥ ರಾಜಕಾರಣಿಗಳು ಪ್ರತಿಭಟನೆ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು : ಶಿವರಾಮೇಗೌಡರೇ, ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಜನ ನಮ್ಮನ್ನು ಆಯ್ಕೆ ಮಾಡಿದ್ದಾರೆ.

ಅಧ್ಯಕ್ಷರು : ಅಧ್ಯಕ್ಷರ ಅಪ್ಪಣೆ ಇಲ್ಲದೇ ಯಾರೇ ಮಾತನಾಡಿದರೂ ಅದು ರೇಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈಗ ಪ್ರತಿಭಟನೆ ಮಾಡುವವರು ಯಾವಾಗಲೂ ರಾಜಕಾರಣಿಗಳೇ, ಇನ್ನೇನು ದನಗಳು ಮಾಡುತ್ತಾರೇನು? ಎಮ್ಮೆಗಳು ಮಾಡುತ್ತವೆಯೇ? ಹಸುಗಳು ಮಾಡುತ್ತವೆಯೇ?

ರಾಜಕಾರಣಿಗಳೇ ಮಾಡಬೇಕು. ರಾಜಕಾರಣಿಗಳು ಪ್ರತಿಭಟನೆ ಮಾಡತಕ್ಕಂಥಾದ್ದು, ಯಾವಾಗಲೂ ಅನ್ಯಾಯ ನಡೆದಾಗ, ಆಯಾ ಪಕ್ಷದ ರಾಜಕಾರಣಿಗಳೇ ಮಾಡತಕ್ಕಂಥಾದ್ದು ಅದು ಏನು ಅಪರಾಧವೇ? 25 ವರ್ಷಗಳಿಂದ ನಾವು ಮಾಡಿದ್ದೇವೆ. ನಾನು ಏನೋ ತಾವು ಬಹಳ ಅನ್ಯಾಯವಾಗಿದೆ ಎಂದು ಹೇಳುತ್ತೀರಿ ಎಂದು ಅಂದುಕೊಂಡಿದ್ದೆ. ಇದು ಏಕೆ ಈ ತರಹ ಇವತ್ತು ತಾವು ಅಸತ್ಯ ನುಡಿಯುತ್ತಿದ್ದೀರಿ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಬಹಳ ಅರ್ಥ ಗಂಭೀರವಾಗಿ ಮಾತನಾಡಿದ್ದಾರೆ. ಅವರು ಹೇಳಿದರು ರಾಜಕಾರಣಿಗಳೇ ಮಾಡುವುದು ಎಂದು ಹೇಳಿದರು. ರಾಜಕಾರಣಿಗಳೇ ಎಲ್ಲಾ ಚಳುವಳಿಗಳನ್ನು ಕೈಗೆತ್ತಿಕೊಳ್ಳತಕ್ಕಂತ ಪ್ರಮುಖರು. ಚಳುವಳಿಗೆ ಸ್ಪಂದಿಸುತ್ತಾರಲ್ಲಾ ಜನ, ಮೈಸೂರಿನಲ್ಲಿ ಬಿ.ಜೆ.ಪಿ. ಸ್ನೇಹಿತರು ಚಳುವಳಿ ಮಾಡಿದರು ನಾನು ಮೈಸೂರಿನ ನೀರಾವರಿ ಇಲಾಖೆಯ ಕೆಲಸ ನೋಡಲು ಹೋದಾಗ ನಮ್ಮ ಶಾಸಕರು ಜನ ಇದ್ದರು ಆಗ ಎಷ್ಟು ಜನ ಇದ್ದರು ಸ್ವಾಮಿ? 50 ಜನ ಇರಲಿಲ್ಲ. ನಾವು ಪ್ರತಿಭಟನೆ, ಚಳುವಳಿಯಿಂದಲೇ ರಾಜಕಾರಣಕ್ಕೆ ಬಂದಿರುವವರು. ಜನಗಳಿಗೆ ಅರ್ಥವಾಗಿದೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥೆ. ಅದನ್ನು ಅರ್ಥ ಮಾಡಿಕೊಂಡು ಜನ ಅಕ್ಸೆಪ್ಟ್ ಮಾಡಿಕೊಂಡಿದ್ದಾರೆ. ಅಕ್ಸೆಪ್ಟ್ ಮಾಡಿಕೊಳ್ಳದೇ ಇರುವವರು ಯಾರು ಅಂದರೆ ರಾಜಕಾರಣಿಗಳು ಅಷ್ಟೇ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಈ ರೀತಿಯಾದಂತಹ ಉತ್ತರವನ್ನು ಸರ್ಕಾರದ ಪರವಾಗಿ ಮಾನ್ಯ ಸಚಿವರು ಕೊಡುತ್ತಾರೆಂದು ನಾನು ನಿರೀಕ್ಷೆ ಮಾಡಿರಲಿಲ್ಲ. ಇಡೀ ರಾಜ್ಯಾದ್ಯಂತ ತಮಗೂ ಕೂಡ ಗೊತ್ತಿದೆ. ಎಲ್ಲಾ ಹಳ್ಳಿಗಳಲ್ಲಿಯೂ ಕೂಡ ಎಲ್ಲಾ ತಾಲ್ಲೂಕುಗಳಲ್ಲಿ ಕೂಡ ಜನರು ಪ್ರತಿಭಟನೆಯನ್ನು ಸಲ್ಲಿಸಿದ್ದಾರೆ. ಮನವಿಗಳನ್ನು ಕೊಡುವುದರ ಮುಖೇನ ಮತ್ತು ಬಂದ್‌ಗಳನ್ನು ಆಚರಿಸುವುದರ ಮುಖೇನ ರಸ್ತೆಗಳಲ್ಲಿ ಬಸ್ಸುಗಳನ್ನು ತಡೆಯುವುದರ ಮುಖೇನ ಇವತ್ತು ಪ್ರತಿಭಟನೆಯನ್ನು ಮಾಡಲು ಅವರ ನಿರೀಕ್ಷಣೆ ಇರತಕ್ಕಂಥಾದ್ದು ಏನೆಂದರೆ ವಿಧಾನ ಸಭೆ ನಡೆಯುತ್ತಿದೆ. ಹಿಂದೆ ಮುಂದೆ ಮಾಡಿದ್ದಾರೆ. ನಾಳೆ ವಿರೋಧಪಕ್ಷದವರು ಅದನ್ನು ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಸರ್ಕಾರ ಮಣಿಯಬಹುದು ಸರ್ಕಾರ ಮಾಡಿರತಕ್ಕಂಥ ಆಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳಬಹುದು ಎನ್ನುವಂತಹ ನಿರೀಕ್ಷೆಯಲ್ಲಿ ಜನ ಇನ್ನೂ ಇದ್ದಾರೆ. ತಾವು ಏನು ಹೇಳಿದಿರಿ ಬಸ್ಸು ಸುಡಲಿಲ್ಲ ಎನ್ನತಕ್ಕಂಥ ಮಾತು ಹೇಳಿದಿರಿ. ಹಾಗಾದರೆ ತಮ್ಮ ಅರ್ಥ ಏನು ಬಸ್ಸು ಸುಡಿ ಎಂದೇ? ತಮ್ಮ ಮಾತನ್ನು ಜನ ಕೇಳಿದ್ದೇ ಆದರೆ ಬಸ್ಸು ಸುಡುವಂತಹ ಕಾಲ ಸಹ ಬರುತ್ತದೆ. ಒಂದು ಬಸ್ಸಿನ ಬೆಲೆ ಎನು ಎನ್ನುವುದನ್ನು ನಿಮಗಿಂತ ಜಾಸ್ತಿ ಇವತ್ತು ಜನ ಲೆಕ್ಕ ಹಾಕುತ್ತಿದ್ದಾರೆ. ಜನ ಸಂಯಮದಿಂದ ಮುಂದುವರಿಯುತ್ತಿದ್ದಾರೆ ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಾನು ಇನ್ನು ನಾಗೇಗೌಡರ ಹೆಸರನ್ನು ಪ್ರಸ್ತಾಪ ಮಾಡುವುದಿಲ್ಲ. ನಾನೂ ಮಂಡ್ಯ ಜಿಲ್ಲೆಯವನು. ಆ ಹೋರಾಟದ ಕಿಚ್ಚು ಶಿವಕುಮಾರ್ ಮತ್ತು ನಾಗೇಗೌಡರಿಗೆ ಇದೆ. ಇದನ್ನು ಅವರಿಗೆ ಸ್ವಲ್ಪ ಮನವರಿಕೆ ಮಾಡಿದರೆ ಜಾಗ್ರತೆ ಮಾಡಿದರೆ ಮಂಡ್ಯ ಜಿಲ್ಲೆಯವರಪ್ಪಾ ನೀವು ಎಂದು ಹೇಳಿದರೆ ಆಗಿರುವಂತಹ ಈ ಒಂದು ಅಪರಾಧವನ್ನು

ಸರಿಪಡಿಸುವುದರ ಕಡೆ ಬುದ್ಧಿ ಹೇಳಬಹುದು ಎಂದು ನಾನು ನಿಮ್ಮ ಹೆಸರು ಪ್ರಸ್ತಾಪ ಮಾಡಿದೆ. ನನ್ನ ಭಾಷಣ ಮುಗಿಯುವರೆಗೂ ನಾನು ನಿಮ್ಮ ಹೆಸರನ್ನು ಪ್ರಸ್ತಾಪ ಮಾಡುವುದಿಲ್ಲ. ಆದರೆ ಒಂದು ದುಃಖ ತರುವಂತಹ ಪರಿಸ್ಥಿತಿ ಏನೆಂದರೆ ನೀವು ಹೇಳಿದಂಥಾದ್ದು ಒಂದು ಸತ್ಯವಾದ ಮಾತು. ದಯಮಾಡಿ ತಾವು ಒಂದು ಕ್ಷಣ ಯೋಚನೆ ಮಾಡಿ. ಇತ್ತೀಚಿನ ದಿನಗಳಲ್ಲಿ ಯಾರೇ ಇರಬಹುದು ಪ್ರತಿಪಕ್ಷದಲ್ಲಿ ಇರುವಂತಹ ನಾನು ಸೇರಿ ಹೇಳುತ್ತೇನೆ, ಯಾವುದೇ ಹೋರಾಟಗಳನ್ನು ನಾವು ತೆಗೆದು ಕೊಂಡಾಗ ಶ್ರೀ ಸಾಮಾನ್ಯ ಹಿಂದಿನಂತೆ ಸ್ಪಂದಿಸುತ್ತಾ ಇಲ್ಲ. ಬೀದಿಗೆ ಇಳಿಯುತ್ತಿಲ್ಲ ಕಾರಣ ಏನು? ಅವನು ಜನರ ಬಗ್ಗೆ ಈ ವ್ಯವಸ್ಥೆ ಬಗ್ಗೆ ಎಲ್ಲರ ಬಗ್ಗೆ ವಿಶ್ವಾಸವನ್ನು ಕಳೆದುಕೊಂಡಿದ್ದಾನೆ. ಈ ಹೋರಾಟಗಳು ಅವರ ಅಸ್ಥಿತ್ವಕೋಸ್ಕರ. ನಾನು ಎಂ.ಎಲ್.ಎ.ಆಗಿ ಬದುಕಿದ್ದೇನೆ ಎಂದು ತೋರಿಸುವುದಕ್ಕೋಸ್ಕರ. ನೋಡಪ್ಪ, ಕೆ.ಎಸ್.ಆರ್.ಟಿಸಿ ಸಂದರ್ಭ ಬಂದಾಗ ನಾವು ಹೋರಾಟ ಮಾಡಿದ್ದೇವೆ ಎನ್ನುವುದನ್ನು ತೋರಿಸುವುದಕ್ಕೋಸ್ಕರ ಸತ್ಯಾಗ್ರಹ ಮತ್ತು ಚಳುವಳಿ ಆಗುತ್ತಿದೆಯೇ ಹೊರತು ನಾವು ಈ ಜನಗಳ ಪ್ರತಿನಿಧಿಗಳು ಎಂದು ಹೇಳಿ ಈ ಸಂದರ್ಭ ಬಂದಾಗ ನಮಗೆ ನಾವು ಎಲ್ಲಾ ನಮ್ಮ ಸ್ವಂತದ್ದು ಮರೆತು ಹೋರಾಟ ಮಾಡುವಂತಹ ಪ್ರವೃತ್ತಿ ಇವತ್ತು ಕಡಿಮೆ ಆಗುತ್ತಿದೆ. ಜನ ಕಣ್ಣೀರು ಹಾಕುತ್ತಿದ್ದಾರೆ. ನಾಗೇಗೌಡರೇ, ಹೇಳುತ್ತೇನೆ. ಮತ್ತೊಮ್ಮೆ ನಾನುಈ ಸದನದ ಒಳಗಡೆ ಬರುವುದಿಲ್ಲ. ಏಪ್ರಿಲ್ ಒಂದನೇ ತಾರೀಖಿನಿಂದ ಏಪ್ರಿಲ್ ಕೊನೆ ಒಳಗೆ ಕರ್ನಾಟಕ ರಾಜ್ಯದ ಜೈಲುಗಳನ್ನು ಭರ್ತಿ ಮಾಡಿ ನಿಮಗೆ ಎಷ್ಟು ಸಾವಿರ ಜನ ಬೇಕೋ ಅಷ್ಟು ಜರನ್ನು ಜೈಲಿನಲ್ಲಿ ತುಂಬಿಸಿ ಈ ಕೆ.ಎಸ್.ಆರ್.ಟಿ.ಸಿ. ದರವನ್ನು ಇವತ್ತು ನೀವು ವಾಪಸ್ಸು ತೆಗೆದುಕೊಳ್ಳದೇ ಎರಡೂ ಸದನಗಳ ಸದಸ್ಯರ ಸಮಿತಿಯನ್ನು ಮಾಡದೇ ನಮ್ಮ ಅಭಿಪ್ರಾಯಗಳಿಗೆ ಮನ್ನಣೆಯನ್ನು ಕೊಡದೇ ಅಧಿಕಾರದ ಮದದಿಂದ ಹೀಗೆ ಮಾಡುತ್ತೇವೆಂದು ನೀವು ಮುಂದುವರಿಯುವುದಾದರೆ ಲೈವ್ ಟಿ.ವಿ ಇವತ್ತು ತೋರಿಸಬೇಕಾಗಿತ್ತು. ಆ ಹಮ್ಮಿನ ಮಾತು. ಅಧಿಕಾರದ ಮದದ ಮಾತು ಜನರ ಬಗ್ಗೆ ಕಳಕಳಿ ಇಲ್ಲದೇ ನಾವು ಏನು ಮಾಡಿದರೂ ಇನ್ನೂ ಎರಡೂವರೆ ವರ್ಷ ಚುನಾವಣೆ ಇದೆ ನಾವು ಏನು ಮಾಡಿದರೂ ಮರೆತುಬಿಡುತ್ತಾರೆ ಎಂದು ನಾಗೇಗೌಡರ ಧಾಟಿಯ ಮಾತು ರಾಜ್ಯದ ಜನ ಕೇಳಬೇಕಾಗಿತ್ತು. ಕೊನೆಯ ಪಕ್ಷ ಪತ್ರಿಕೆಗಳಲ್ಲಿ ಆದರೂ ಬರೆಯುತ್ತಾರೆಂದು ನಾನು ಪ್ರಸ್ತಾಪ ಮಾಡುತ್ತೇನೆ. ಆ ರೀತಿ ಮಾಡಿ ತೋರಿಸದೇ ಇದ್ದರೆ ರಾಜ್ಯದ ಉದ್ದಗಲಕ್ಕೂ ಹೋರಾಟ ಮಾಡದೇ ಇದ್ದರೆ ಬಹುಶಃ ನಾನಂತೂ ಈ ಸದನಕ್ಕೆ ಮತ್ತೊಮ್ಮೆ ಬರುವುದಿಲ್ಲ. ನೋಡೋಣ. ಹೋಗೋಣ ಜನರ ಹತ್ತಿರ. ನಾಗೇಗೌಡರು ಈ ಮಾತನ್ನು ಹೇಳಿದ್ದಾರೆ. 5 ಕೋಟಿ ಜನರಿಗೆ ಅಪಮಾನ ಮಾಡುವಂತಹ ಹೋರಾಟ ಮಾಡುವುದ್ಕಕೆ ಹಿಂದೆ ಸರಿಯುವಂತಹ ಸಮಾಜ ಇದೆ. ಯಡಿಯೂರಪ್ಪನವರೇ, ಈ ದರ ಏರಿಕೆಯನ್ನು ಒಪ್ಪಿಕೊಂಡಿದ್ದಾರೆ ನೀವು ನಿಮ್ಮ ರಾಜಕೀಯ ತೀಟೆ ತೀರಿಸಿಕೊಳ್ಳುವುದಕ್ಕೋಸ್ಕರ ಈ ಹೋರಾಟ ಮಾಡುತ್ತಿದ್ದೀರಿ ಎಂದು ಏನು ತಾವು ನನ್ನನ್ನು ಅಪಮಾನ ಮಾಡಲಿಲ್ಲ ಈ ರಾಜ್ಯದ ಜನರಿಗೆ ಅಪಮಾನ ಮಾಡುವಂತಹ ಮಾತನ್ನು ತಾವು ಹೇಳಿದ್ದೀರಿ, ಈ ದಾಖಲೆಗಳನ್ನು ತಗೆದುಕೊಂಡು ನಾನು ಜನರ ಮುಂದೆ ಹೋಗುವವನಿದ್ದೇನೆ. ನೋಡೋಣ. ಜನ ಸ್ಪಂದಿಸಲಿಲ್ಲ ಎಂದರೆ ನಾನು ಮತ್ತೊಮ್ಮೆ ಇಲ್ಲಿ ಬಂದು ಕ್ಷಮಾಪಣೆ ಕೇಳುತ್ತೇನೆ. ಜನ ಸ್ಪಂದಿಸಿದರು. ಆಗ ನೀವು ಏನು ಮಾಡುತ್ತೀರಾ ಎಂದು ಹೇಳಿ ಕಾದು ನೋಡೋಣ. ನಾನು

ಕೇಳುತ್ತೇನೆ ಮಾನ್ಯ ಪಿ.ಜಿ.ಆರ್ ಸಿಂಧ್ಯಾರವನ್ನು, ನೀವು ನಿಜವಾಗಿಯೂ ಸಾರಿಗೆ ದರ ಏರಿಸುವಂತಹ ಅಗತ್ಯ ಇದ್ದಿದ್ದರೆ ಎಷ್ಟು ಬೇಕಾದರೂ ಏರಿಸಿ; ಜನ ಆಯ್ಕೆ ಮಾಡಿ ಕಳುಹಿಸಿರುವಂತಹ ಈ ಪವಿತ್ರವಾದ ಈ ಮನೆ, ಇದರ ಬಗ್ಗೆ ವಿಶ್ವಾಸ ಇಲ್ಲ ನಿಮಗೆ?

ಸಾರಿಗೆ ಸಚಿವರಾದ ತಕ್ಷಣ ಅದರ ಪ್ರಗತಿ ಸಮಸ್ಯೆಗಳ ಬಗ್ಗೆ ಕೇಳುವುದಕ್ಕೆ ಜಿಲ್ಲೆಯ ಶಾಸಕರನ್ನು ಕರೆದಂತಹ ಹಿರಿಯ ಸಚಿವರಾದಂತಹ ಪಿ.ಜಿ.ಆರ್. ಸಿಂಧ್ಯಾರವರಿಗೆ ಈ ರೀತಿ ಆಗಿ ಅನಿವಾರ್ಯ ಪ್ರಸಂಗಗಳು ಬಂದಿವೆ ಈ ಕಾರಣಕೋಸ್ಕರ ಸಾರಿಗೆದರವನ್ನು ಜಾಸ್ತಿ ಮಾಡಬೇಕು ಅದಕ್ಕೆ ನಿಮ್ಮ ಸಲಹೆ ಬೇಕು ಎಂದು ಕೇಳುವಂತಹ ಒಂದು ನೈತಿಕ ಜವಾಬ್ದಾರಿ ಇರಲಿಲ್ಲವೇನು? 27ನೇ ತಾರೀಖು ಹೌಸ್‌ಅಡ್ಜರ್ನ್ ಆಗುತ್ತದೆ. ಒಂದನೇ ತಾರೀಖು ರಾತ್ರಿ 12ಗಂಟೆಗೆ ಸಾರಿಗೆ ದರವನ್ನು ಜಾಸ್ತಿ ಮಾಡುತ್ತೀರಿ. ಅಂದರೆ ಸದನ ನಡೆಯುವಂತಹ ಕಾಲದಲ್ಲ ಅದಕ್ಕೆ ಬೇಕಾದ ಎಲ್ಲಾ ಸಿದ್ದತೆಗಳು ಆಗಿದೆ ನಿಮ್ಮ ಇಲಾಖೆಯಲ್ಲಿ, ಆದರೆ ಶಾಸಕರ ವಿಶ್ವಾಸವನ್ನು ನೀವು ತೆಗೆದುಕೊಳ್ಳಲಿಲ್ಲ ಈ ಮನೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವಂತಹ ಪ್ರಯತ್ನ ಆಗಿಲಿಲ್ಲ. ಇಲ್ಲಿ ಚರ್ಚೆ ಆಗಲಿಲ್ಲ. ನೀವು ಸರ್ವಾಧಿಕಾರಿಗಳೇ? ನಿಮಗೆ ಸರಿಸಮಾನವಾಗಿ ಶಾಸಕರು ಇಲ್ಲಿ ಕುಳಿತಿಲ್ಲವೇ? ಯಾವುದೋ ಒಂದು ಕಾರಣಕ್ಕೆ 20 ಜನ ಶಾಸಕರು ಜಾಸ್ತಿ ಇದ್ದೀರಿ ಎನ್ನುವ ಒಂದೇ ಒಂದು ಕಾರಣಕ್ಕೋಸ್ಕರ ಈ ರೀತಿಯ ತೀರ್ಮಾನ ನೀವು ತೆಗೆದುಕೊಂಡಿದ್ದೀರಿ ಎನ್ನುವುದೇ ಅರ್ಥ ಅಂದರೆ ಈ ಮನೆಯನ್ನು ಈ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರನ್ನು ಕನ್‌ವಿನ್ಸ್ ಮಾಡುವಂತಹ ಯಾವುದೇ ಶಕ್ತಿ ನಿಮಗೆ ಇಲ್ಲದ ಕಾರಣ ಇನ್ನೊಂದು ವಾರದಲ್ಲಿ ಬಜೆಟ್ ಅಧಿವೇಶನ ಪ್ರಾರಂಭವಾಗುವುದು ಇತ್ತು. 15ದಿವಸದಲ್ಲಿ ಏನು ಉದ್ಧಾರ ಮಾಡುತ್ತಿದ್ದೀರಿ ನೀವು ಸಾರಿಗೆ ದರವನ್ನು ಜಾಸ್ತಿ ಮಾಡಿ, ಮತ್ತೆ ಇಲ್ಲಿ ಚರ್ಚೆ ಆಗಬಹುದಿತ್ತಲ್ಲಾ. ಹಾಗಾದರೆ ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ವೇದಿಕೆ ಏಕೆ ಬೇಕು? ಪ್ರಜಾವಾಣಿ ಪತ್ರಿಕೆಯನ್ನು ನೀವು ಓದಿ ಏನು ನೀವು ಕಡಿದಿರುವುದು? ಏನು ಸಾಧಿಸಿರುವುದು? ದರ ಏರಿಸಿದರೂ ಸಾರಿಗೆ ಸಂಸ್ಥೆಯಲ್ಲಿ ಹೆಚ್ಚದ ಆದಾಯ. ಪಿ.ಜಿ.ಆರ್. ಸಿಂಧ್ಯಾರವರು ಉತ್ತರ ಕೊಡಲಿ. ಪ್ರತಿನಿತ್ಯ ಹಿಂದೆ ಎಷ್ಟು ಇತ್ತು ಏರಿಕೆ ದರ ಏರಿಸಿದ ಮೇಲೆ ಈಗ ಎಷ್ಟು ಆಗಿದೆ? ಸುವಿಹಾರ ಬಸ್ಸಿನಲ್ಲಿ ಪ್ರಯಾಣ ದರ ಶೇಕಡ 40ರಷ್ಟು, ಪುಷ್ಪಕ್ ಬಸ್ಸುಗಳಲ್ಲಿ ಶೇಕಡ 15ರಷ್ಟು ದರ ಹೆಚ್ಚಾಗಿದೆ. ಸೆಮಿ ಲಗ್ಜುರಿ ದರಗಳು ಏರಿದ್ದು ಪರಿಣಾಮ ಈ ವಾಹನಗಳಲ್ಲಿ ಪ್ರಯಾಣಿಸುವವರ ಸಂಖ್ಯೆ ಇಳಿಮುಖವಾಗುತ್ತಿದೆ. ಪ್ರಜಾವಾಣಿ ಲೇಖನ ಓದಿ ನಿಮಗೆ ತಿಳಿಯುತ್ತೆ. ಏನಾಯಿತು ರಾತ್ರೋರಾತ್ರಿ ನೀವು ಏರಿಸಿದ್ದರಿಂದ? ಯಾರೋ ಒಬ್ಬ ಬಡವ ಹುಬ್ಬಳ್ಳಿಯಿಂದ ನೇರವಾಗಿ ಬೆಂಗಳೂರಿಗೆ ಟಿಕೆಟ್ ತೆಗೆದುಕೊಂಡಿದ್ದರೆ ನೀವು ಕೇಳುತ್ತಿರಲಿಲ್ಲ. 12 ಗಂಟೆಯಲ್ಲಿ ಅವನು ಹೆಚ್ಚಿನ ದರದ ಟಿಕೆಟ್ ತೆಗೆದುಕೊಳ್ಳುವಂತಹ ಸಂದರ್ಭ ಬಂದಾಗ ಹೊಸ ದರ ಜಾರಿಗೆ ಬಂತು, ಎಂದು ಹೇಳಿ ಅವನ ಜೇಬಿನಲ್ಲಿ ದುಡ್ಡು ಇಲ್ಲದೇ ಅಲ್ಲಿ ಇಲ್ಲಿ ಭಿಕ್ಷೆ ಬೇಡಿ ದುಡ್ಡು ಇಲ್ಲದೇ ಬಸ್ಸಿನಿಂದ ಕೆಳಗೆ ಇಳಿದನಲ್ಲಾ ನಾಗೇಗೌಡರೇ, ಇವತ್ತು ನಮ್ಮ ನಿಮ್ಮ ಮಕ್ಕಳು ಎರಡು ಹೊತ್ತು ಊಟ ಮಾಡುತ್ತಾರೆ ಜೇಬಿನಲ್ಲಿ ಕಾಸು ಇರಬಹುದು. ರೈತರ ಮಗ ಯಾರು ಸಾರಿಗೆ ಬಸ್ಸಿನಲ್ಲಿ ಓಡಾಡುತ್ತಾನೆ ಸಿಂಧ್ಯಾರವರೇ, ಅವನ ಜೇಬಿನಲ್ಲಿ ದುಡ್ಡು ಇದೆಯೇ ಇಲ್ಲವೇ ಎನ್ನುವಂತಹ ಪ್ರಾಮಾಣಿಕ ಪರಿಸ್ಥಿತಿಯನ್ನು ತಿಳಿದುಕೊಳ್ಳುವಂತಹ ಪ್ರಯತ್ನ ಮಾಡಿದ್ದೀರಾ? ಬಡವನ ತಲೆ

ಹೊಡೆದು ತೆರಿಗೆ ಜಾಸ್ತಿ ಮಾಡಿ ಎರಡು ಸಾವಿರ ಹೊಸ ಬಸ್ಸುಗಳನ್ನು ಖರೀದಿ ಮಾಡಲು ನೀವು ಬೇಕಾ? ನೀವು ಹೇಳಲಿಲ್ಲ ಹುಡ್ಕೋದಿಂದ ಸಾಲ ತೆಗೆದುಕೊಂಡು ಒಂದು ಸಾವಿರ ಬಸ್ಸುಗಳನ್ನು ಖರೀದಿ ಮಾಡುತ್ತೇನೆ ಎಂದು ನೀವು ಹೇಳಲಿಲ್ಲ ನೂರುದಿವಸದಲ್ಲಿ ಈ ಸಾರಿಗೆ ಸಂಸ್ಥೆಯನ್ನು ರಿಪೇರಿ ಮಾಡುತ್ತೇನೆ ಇಲ್ಲಿದಿದ್ದರೆ ರಾಜೀನಾಮೆ ಕೊಟ್ಟು ಮನಗೆ ಹೋಗುತ್ತೇನೆ ಎಂದು ಏನು ರಿಪೇರಿ ಮಾಡಿದಿರಿ? ಏನು ಕ್ರಮ ತೆಗೆದುಕೊಂಡಿರಿ? ನೀವು ಹೇಳಿದ್ದೀರಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಕ್ಯಾನ್ಸರ್‌ಗಿಂತಲೂ ಭಯಾನಕವಾಗಿರುವ ಏಡ್ಸ್ ರೋಗ ಬಂದಿದೆ ಎಂದು ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ದಾವಣಗೆರೆಯಲ್ಲಿ ಎಲ್ಲಾ ಶಾಸಕರ ಮಿತ್ರರ ಜೊತೆ ಭಾಷಣ ಮಾಡುವಂತಹ ಕಾಲದಲ್ಲಿ ನೀವು ಹೇಳಿರುವ ಮಾತು. ಇಲ್ಲಾ ಎಂದು ಹೇಳುತ್ತೀರಾ? ಸಾರಿಗೆ ಸಂಸ್ಥೆಯಲ್ಲಿ ಭಯೋತ್ಪಾದಕರು ಹಾಗೂ ಕ್ರಿಮಿನಲ್‌ಗಳು ಇದ್ದಾರೆ ಎಂದು ಎಲ್ಲಿ ಹೇಳಿದಿರಿ? ವಿಧಾನ ಪರಿಷತ್ತಿನಲ್ಲಿ ಮಾನ್ಯ ಶಂಕರಮೂರ್ತಿಯವರು ಕೇಳಿದ ಪ್ರಶ್ನೆಗೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳಿದಿರಿ. ಇನ್ನು ಆರು ತಿಂಗಳಲ್ಲಿ......

(ಗೊಂದಲ)

ಚೇರ್ಮನ್ : ರೇಕಾರ್ಡ್ ಮಾಡಬೇಡಿ, ತಾವು ಏನು ಮಾತನಾಡಿದರೂ ರೇಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಅವರು ಹೇಳುವುದು ಸರಿ ಇದೆ. ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ರಾಜ್ಯದ ಜನರಲ್ಲಿ ನಾನು ಬೇಡುತ್ತೇನೆ. ರಾಜ್ಯದ ಜನರಲ್ಲಿ ಪ್ರಾರ್ಥನೆ ಮಾಡುತ್ತೇನೆ.50 ವರ್ಷಗಳಲ್ಲಿ ಬಹುಪಾಲು ಅವರು ಇವರೂ ಸೇರಿ ನಿಮ್ಮನ್ನು ಈ ದುಸ್ಥಿತಿಗೆ ತಂದರು. ಈಗಲಾದರೂ ಬದಲಾವಣೆ ಮಾಡಿ. ಜನತೆಗೆ ನಂಬಿಸಿ ದ್ರೋಹ ಮಾಡಿ ಈ ರೀತಿ ದುಸ್ಥಿತಿಯಲ್ಲಿರುವಂತಹ ಈ ಸಮಾಜಕ್ಕೆ ಈ ನಾಡಿನ ಜನತೆಗೆ ನಾನು ಕರೆ ಕೊಡುತ್ತೇನೆ. ನೀವು ಏನು ಮಾಡಿದಿರಿ ಎಂದು ಸಿಂಧ್ಯಾರವರು ಉತ್ತರ ಕೊಡಬಹುದು ನೀವು ಏರಿಸಲಿಲ್ಲವೇ? ಕಾಂಗ್ರೆಸ್‌ನವರು ನೀವೇನೂ ಮಾಡಲಿಲ್ಲವೇ ಎಂದು? ಅದು ಉತ್ತರ ಅಲ್ಲ. ಅದಕ್ಕಾಗಿ ಕಾಂಗ್ರೆಸ್‌ನವರನ್ನು ಬಿಟ್ಟು ಜನತಾದಳವನ್ನು ಜನ ಅಧಿಕಾರಕ್ಕೆ ತಂದರಾ? ನಾವು ಈ ಸಾಧನೆ ಮಾಡಿದ್ದೇವೆ. ಈ ಬದಲಾವಣೆಯನ್ನು ತಂದಿದ್ದೇವೆ. ನಾವು ಹೆಂಡದ ದೊರೆಗಳ ಗ್ರಾನೈಟ್ ದೊರೆಗಳ ನೆಲಗಳ್ಳರ ಏಜೆಂಟ್‌ಗಳು ಆಗುವುದಿಲ್ಲ. ಅವರು ಮಾಡಿರುವಂತಹ ಹಣವನ್ನು ಸರ್ಕಾರದ ಖಜಾನೆಗೆ ತುಂಬಿ ಬದಲಾವಣೆಯನ್ನು ತಂದಿದ್ದೇವೆ. ಆದರೂ ಅನಿವಾರ್ಯವಾಗಿ ಈ ತೆರಿಗೆಯನ್ನು ಜಾಸ್ತಿ ಮಾಡಬೇಕಾಯಿತು. ಈ ಬಗ್ಗೆ ಚರ್ಚೆ ಆಗಬಹುದಿತ್ತಲ್ಲಾ ಏಕೆ ಮಾಡಲಿಲ್ಲ? ಮಾಡಿ ಎಂದು ಕೇಳುವಂತಹ ಅಧಿಕಾರ ನನಗೆ ಇಲ್ಲವೇ? ನಮ್ಮ ಹಿಂದಿನ ಮುಖ್ಯಮಂತ್ರಿಗಳು ಹಾಲಿ ಪ್ರಧಾನ ಮಂತ್ರಿಗಳು ಹೇಳಿದರು. ನಾವು ಉಳ್ಳವರ ಜೇಬಿಗೆ ಕೈ ಹಾಕುವುದಿಲ್ಲ. ಎಂದು ಹಾಗಾದರೆ ಈಗ ಯಾರ ಜೇಬಿಗೆ ಕೈ ಹಾಕಿದ್ದೀರಿ? ಬಹುಶಃ ಅವರು ಬಿಟ್ಟು ಡೆಲ್ಲಿಗೆ ಹೋದ ಮೇಲೆ ಗೊತ್ತಾಯಿತು ನಾನು ಬಿಟ್ಟು ಹೋಗಿರುವಂತಹ ನನ್ನ ಬಳಗ ನನ್ನ ಮಿತ್ರರು ಉಳ್ಳವರ ಜೇಬಿಗೆ ಕೈ ಹಾಕದೆ ನಮಗೆ ಅಧಿಕಾರ ಕೊಟ್ಟ ಬಡವರ ಜೇಬಿಗೆ ಕೈ ಹಾಕುತ್ತಿದ್ದಾರೆ

ಎನ್ನುವುದಕ್ಕೋಸ್ಕರವೇ ಮುಂದಿನ ತಿಂಗಳು 4-5 ದಿವಸ ನಿಮ್ಮ ಇಲಾಖೆಯಲ್ಲಿ ಏನೇನು ಹಾಳು ಬಿದ್ದು ಹೋಗಿದೆ ಕೇಂದ್ರ ಸರ್ಕಾರದ ಹಣ ಬಂದಿರುವಂತಹ ಯೋಜನೆಗಳು ನೆಗೆದು ಬಿದ್ದು ಹೋಗಿದೆ ಅದನ್ನು ಪರಿಶೀಲನೆ ಮಾಡಲು ನಾನೇ ಬರಬೇಕು ಎಂದು ಈ ದೇಶದ ಪ್ರಧಾನಿ ಈ ದೇಶದ ಇತಿಹಾಸದಲ್ಲಿ ಮೊದಲ ಭಾರಿಗೆ ಹೇಳುವಂತಹ ಒಂದು ಪರಿಸ್ಥಿತಿ ಇವತ್ತು ನಿಮಗೆ ಇದೆ ಎಂದು ಹೇಳುವುದಾದರೆ ನಿಮ್ಮ ಆಡಳಿತ ವೈಖರಿಗೆ ಇದಕ್ಕಿಂತ ಉದಾಹರಣೆ ಬೇಕೆ ಸ್ವಾಮಿ? ನಾನು ಹೇಳುತ್ತಿದ್ದೆ ಮಾನ್ಯ ಶಂಕರಮೂರ್ತಿಯವರ ಪ್ರಶ್ನೆಗೆ ಉತ್ತರ ಕೊಟ್ಟಿರುವುದು. ಅದನ್ನು ತಾವು ಇಲ್ಲ ಎಂದು ಹೇಳಲು ಆಗುವುದಿಲ್ಲ. ಇನ್ನು ಆರು ತಿಂಗಳ ಒಳಗಾಗಿ ಸಾರಿಗೆ ಹಾಗೂ ಮೋಟಾರು ವಾಹನಗಳ ಇಲಾಖೆಯಲ್ಲಿ ಕಣ್ಣಿಗೆ ಕಾಣುವಂತಹ ಸಾಧನೆ ಸುಧಾರಣೆ ಮಾಡದೇ ಹೋದರೆ ನಾನು ಇಲಾಖೆಯ ಮಂತ್ರಿಯಾಗಿ ಮುಂದುವರಿಯುವುದಿಲ್ಲ ಎಂದಿದ್ದರು. ದಯಮಾಡಿ ತಾವು ರಾಜೀನಾಮೆ ಕೊಡಿ. ಏಕೆಂದರೆ ತಾವು ಸುಧಾರಣೆ ಮಾಡಿಲ್ಲ. ಭಯೋತ್ಪಾದಕರು ಮತ್ತು ಕಿರಮಿನಲ್‌ಗಳು ಇದ್ದಾರೆಂದು ಹೇಳಿದಂತಹ ಪಿಜಿಆರ್ ಸಿಂಧ್ಯಾ ಅವರ ಮೇಲೆ ಕ್ರಮ ತೆಗೆದುಕೊಳ್ಳುವಂತಹ ಶಕ್ತಿ ನಿಮಗೆ ಬರಲಿಲ್ಲ. ಕ್ಯಾನ್ಸರ್ ಇದೆ ಭಯಾನಕವಾದ ಏಡ್ಸ್ ರೋಗ ಇದೆ ಎಂದು ಹೇಳಿ ಆ ರೋಗಕ್ಕೆ ಮದ್ದು ಹುಡುಕುವಂತಹ ಶಕ್ತಿ ನಿಮ್ಮ ಸರ್ಕಾರಕ್ಕೆ ಇಲ್ಲ. ಅದಕ್ಕಾಗಿ ನಾನು ಕೇಳುತ್ತಿದ್ದೇನೆ ಬೇಷರತ್ತಾಗಿ ಈ ಇಲಾಖೆಯನ್ನು ಸರಿಯಾಗಿ ನಿರ್ವಹಣೆ ಮಾಡಲು ಆಗಲಿಲ್ಲ ಎಂದು ಕ್ಷಮಾಪಣೆ ಕೇಳಿ ರಾಜೀನಾಮೆ ಕೊಟ್ಟು ಹೋಗಿ ಎಂದು ನಾನು ಹೇಳುತ್ತಿದ್ದೇನೆ.

ಇನ್ನೇನು ಹೇಳಿದರು ಸಾರಿಗೆ ಸಂಸ್ಥೆಯಲ್ಲಿ ಹೆಗ್ಗಣಗಳು ಇವೆ. ಆರ್‌ಟಿಓ ಕಛೇರಿಗಲ್ಲಿ ಯಮ ಕಿಂಕರರು ಇದ್ದಾರೆ. ಸುಧಾರಣೆ ಏನು ಸ್ವಾಮಿ? ಕೋರಮಂಗಲದಲ್ಲಿ ಇರುವ ಕ್ರೀಡಾ ಸಮುಚ್ಚಯದಲ್ಲಿ ಕಟ್ಟಿರುವಂತಹ 5 ಮನೆಗಳನ್ನು ಕೊಂಡುಕೊಳ್ಳುವುದಕ್ಕೆ ಒಂದು ಮನೆಗೆ 23 ಲಕ್ಷದಂತೆ 69 ಸಾವಿರದಂತೆ ಕೊಡಲು ಹೊರಟ್ಟಿದ್ದೀರಿ. ಯಾರು ಇರುತ್ತಾರೆ, ಯಾರಿಗೆ ಈ ಬಂಗಲೆ? ಯಾರು ನಿಮಗೆ ಅಧಿಕಾರ ಕೊಟ್ಟರು? ಗೆಸ್ಟ್ ಹೌಸ್‌ಗಳು ಇಲ್ಲವೇ? ಇವೆ ನಾನು ಅಡ್ರಸ್ಸ್‌ಗಳು ಕೊಡುತ್ತೇನೆ. ಲಗ್ಜುರಿ ಕಾರುಗಳು ಇಲ್ಲವೆ? ಏಕೆ ಯಾರ ಹೆಂಡತಿ ಮಕ್ಕಳು ಓಡಾಡುವುದಕ್ಕೋಸ್ಕರ? ಲೂಟಿ ಆಗುತ್ತಿದೆ ಸುಲಿಗೆ ಆಗುತ್ತಿದೆ? ನಷ್ಟವಾಗುತ್ತಿದೆ ನಿಮ್ಮ ಅಧಿಕಾರಿಗಳು ಮೋಜು ಮಾಡಿಕೊಂಡು ಕಾರಿನಲ್ಲಿ ಓಡಾಡಬೇಕು ಬಂಗಲೆಯಲ್ಲಿರಬೇಕು. ನಿಮಗೆ ಕೋರಮಂಗಲದಲ್ಲಿ ಮನೆ ಬೇಕು ಒಂದುಕಾಲೂ ಕೋಟಿ ಖರ್ಚು ಮಾಡಿ. ನಿಮ್ಮ ಆಡಳಿತದ ವೈಖರಿಗೆ ಧಿಕ್ಕಾರ ಎಂದು ಹೇಳುವುದಕ್ಕೆ ನಾನು ಇಚ್ಛೆ ಪಡುತ್ತೇನೆ. ಮುಂದೆ ಬಂದು ಹೇಳುತ್ತಾರೆ ಕೆ.ಎಸ್.ಆರ್.ಟಿ.ಸಿ. ಸಂಸ್ಥೆ ಇದೇ ರೀತಿ ಮುಂದುವರೆದರೆ ಇನ್ನು 6 ತಿಂಗಳು ಮುಳುಗಿ ಹೋಗುತ್ತದೆ ಎಂದು ಶಾಸಕರ ಎದುರಿನಲ್ಲಿ ದಾವಣಗೆರೆಯಲ್ಲಿ ತಾವು ಮಾಡಿದಂತಹ ಬಾಷಣವಿದು. ಈ ಸಂಸ್ಥೆಯನ್ನು ಸುಧಾರಿಸಲು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇನೆ. ಫಲಿತಾಂಶ ದೊರೆತಿಲ್ಲ ದೊರೆಯುವ ಭರವಸೆಯೂ ಇಲ್ಲ. ಅಂತ ಯಾರು ಇದನ್ನು ಹೇಳಿದ್ದು, ಮಾನ್ಯ ಸಿಂಧ್ಯಾರವರು! ಇದಕ್ಕೆಲ್ಲಾ ಕಾರಣ ಈ ಸಂಸ್ಥೆಯಲ್ಲಿರುವ ಅಶಿಸ್ತು ಅಪ್ರಾಮಾಣಿಕತೆ, ಅದಕ್ಷತೆ ಟಿಕೆಟ್ ಹಣ ವಸೂಲಿಯಲ್ಲಿ ವಂಚನೆ ಕಾರಣ ಈ ಮಾತನ್ನು ಯಡಿಯೂರಪ್ಪ ಹೇಳುತ್ತಿಲ್ಲ ಸಾರಿಗೆ ಸಚಿವರಾದ ಪಿಜಿಆರ್ ಸಿಂಧ್ಯಾರರವರೇ ಹೇಳಿದ್ದು ಏನು ರಿಪೇರಿ ಮಾಡಿದ್ದೀರಾ? " ರಾಜ್ಯ ಸಾರಿಗೆ ಸಂಸ್ಥೆಯಲ್ಲಿ

ಸುಧಾರಣೆಗೆ ನಿಷ್ಠೂರವಾಗಿ ತೆಗೆದುಕೊಂಡ ಕಾರ್ಯಕ್ರಮಗಳನ್ನು ಸಹಿಸದ ಕಾರ್ಮಿಕ ಮುಖಂಡರು ನನ್ನ ಕುಟುಂಬದ ಸದಸ್ಯರಿಗೆ, ಹಾಗು ನನಗೆ ಜೀವ ಬೆದರಿಕೆ ಹಾಕಿದರು". ಎಂದು ಗೃಹಖಾತೆ ಕಾರ್ಯದರ್ಶಿಯವರಿಗೆ, ಜೆ.ಎಚ್. ಪಟೇಲರಿಗೆ ಮನವಿ. ಯಾವ ರಾಜ್ಯದಲ್ಲಿ ಒಂದು ಸರ್ಕಾರದಲ್ಲಿ ತನ್ನ ಸಚಿವನಿಗೆ ರಕ್ಷಣೆ ಕೊಡುವಂತಹ ಯೋಗ್ಯತೆ ಇಲ್ಲ. ಅದು ನಿಜ ಆಗಿದ್ದರೆ ಒಂದು ಕ್ಷಣ ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ನಿಮಗೆ ನೈತಿಕ ಹಕ್ಕು ಇಲ್ಲ ಕಾರ್ಮಿಕರ ಜೊತ ಆತ್ಮೀಯ ಸಂಬಂಧ ಬೆಳೆಸಬೇಕಾಗಿತ್ತು. ಯಾರು ಹುಚ್ಚು ಹುಚ್ಚಾಗಿ ನಡೆದುಕೊಳ್ಳುತ್ತಾರೋ ಅವರನ್ನು ಕರೆದು ಮನವೊಲಿಸಬೇಕಾಗಿತ್ತು. ಸಮಾಜದ ಋಣ ತಿಂದು ಇಲ್ಲಿ ಕೆಲಸ ಮಾಡುತ್ತಿದ್ದೀರಿ, ಪ್ರಾಮಾಣಿಕವಾಗಿ ತಮ್ಮ ಕೆಲಸ ಮಾಡಿ ಎಂದು ಹೇಳಬೇಕಾಗಿತ್ತು. ಕೆ.ಎಸ್.ಆರ್.ಟಿ.ಸಿ ಖಾತೆ ಮಂತ್ರಿಯಾಗಿ ಅನುಭವ ಪಡೆದ ನಿಮ್ಮ ಕೈಯಲ್ಲಿ ಈಗ ಆಗಲಿಲ್ಲವೆಂದರೆ ಹೇಗೆ ಮಂತ್ರಿಯಾಗಿ ತಾವು ಮುಂದುವರಿಯುತ್ತೀರಿ? ಅಲ್ಲಿ ಅಧ್ಯಕ್ಷ ಮತ್ತು ಆಡಳಿತ ನಿರ್ದೇಶಕರಾಗಿದ್ದ ಶ್ರೀ ಪಿ ಡಿ ಶೆಣೈ ಅವರನ್ನು ಏಕೆ ವರ್ಗಾವಣೆ ಮಾಡಿದಿರಿ? ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ, ಅವರು ಯೋಗ್ಯ ವ್ಯಕ್ತಿಗಳೆಂದು ಹೇಳಿರಲಿಲ್ಲವೇ? ಟೈರುಗಳನ್ನು ಕೊಳ್ಳದೆ ಲೆಕ್ಕ ಮಾಡುವುದನ್ನು ವಿರೋಧ ಮಾಡಿದರು, ಟೈರುಗಳನ್ನು ಕೊಂಡು ಟೈರ್ ಬದಲಾಯಿಸದೆ ಒಳಗೆ ಮಾರುವುದನ್ನು ಪ್ರತಿಭಟನೆ ಮಾಡಿದರು. ಸ್ಪೇರ್ ಪಾರ್ಟ್ಸ್ ತಂದು ಹಳೇ ಸ್ಪೇರ್ ಪಾರ್ಟ್ಸ್ ಹಾಕಿ, ಒಳ್ಳೆ ಸ್ಪೇರ್ ಪಾರ್ಟ್ಸ್ ನ್ನು ಮಾರುವುದನ್ನು ಪ್ರತಿಭಟನೆ ಮಾಡಿದರು. 6 ತಿಂಗಳುಗಳಲ್ಲಿ ಧಿಟ್ಟ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ತೀವ್ರವಾದ ತಪಾಸಣೆ ಜೊತೆಗೆ ಪ್ರತಿದಿನ, ಆದಾಯದ ಪರಿಶೀಲನೆ ನಡೆಸಿದ್ದರಿಂದ2 ಕೋಟಿ 15 ಲಕ್ಷ ರೂಪಾಯಿ ಆದಾಯವಾಗಲಿಲ್ಲವೇ? ಕೊಡಲೇನು ವಿವರವನ್ನು? ಅವರನ್ನು ಏಕೆ ಕಳುಹಿಸಿದಿರಿ? ಅಡ್ಜಸ್ಟ್‌ಮೆಂಟ್ ಮಾಡಿಕೊಳ್ಳುವುದಕ್ಕೆ ಬರಲಿಲ್ಲ ಅಧಿಕಾರಿಗಳು ಅವರ ಪಾಡಿಗೆ ಅವರು ಕೆಲಸ ಮಾಡುವುದಕ್ಕೆ ಬಿಡಿ. ಆಗ ಇಲಾಖೆ ಚೆನ್ನಾಗಿ ನಡೆಯುತ್ತದೆ. ಎಲ್ಲದಕ್ಕೂ ಪ್ರವೇಶ; ನನಗೆ ಎಷ್ಟು ಸಿಗುತ್ತದೆ? ನನ್ನ ಇಲಾಖೆಯಲ್ಲಿ ಫೇಕ್ ಟಿಕೇಟ್‌ಗಳಿಂದ ದುರುಪಯೋಗವಾಗುತ್ತಿಲ್ಲವೆಂದು ಎದೆ ಮುಟ್ಟಿಕೊಂಡು ಧೈರ್ಯವಾಗಿ ಹೇಳುತ್ತೀರೋ? ಪ್ರತಿ ದಿವಸ ಇಲಾಖೆಗೆ ಬರತಕ್ಕಂಥ ಹಣದಲ್ಲಿ 90 ಪರ್‌ಸೆಂಟ್‌ನಷ್ಟು ಬಡ ಬೋರೇಗೌಡನು ಕೊಡುವ ತೆರಿಗೆ ಹಣದಿಂದ ಬರುತ್ತಿದೆ. ಹುಚ್ಚು ಮುಂಡೆ ಮದುವೆಯಲ್ಲಿ ಉಂಡವನೇ ಜಾಣ ಎನ್ನುವ ರೀತಿಯಲ್ಲಿ ಇದಾಗಿದೆ. ಇಲಾಖೆಯನ್ನು ಸರಿಪಡಿಸಬೇಕೆಂಬ ನೈತಿಕ ಸ್ಥೈರ್ಯ ಇಲ್ಲ. ಸಾರಿಗೆ ಇಲಾಖೆ ಮತ್ತು ಗೃಹ ಇಲಾಖೆ ಸಚಿವರಾಗಿದ್ದು ಒಬ್ಬ ಜವಾಬ್ದಾರಿ ಇರುವಂಥ ಮತ್ತು ಅನುಭವ ಇರುವಂಥ ನಿಮ್ಮ ಅಧ್ಯಕ್ಷತೆಯಲ್ಲಿ ಸಾರಿಗೆ ಇಲಾಖೆ ಸುಧಾರಣೆ ಮಾಡುವ ಬಗ್ಗೆ ಸಲಹೆ ಮಾಡಲು ಒಂದು ಸಮಿತಿಯನ್ನು ರಚಿಸಲಾಗಿತ್ತು, ಆ ಸಮಿತಿಯ ಅಧ್ಯಕ್ಷರಾಗಿದ್ದ ತಾವು ಒಂದು ವರದಿಯನ್ನು ಕೊಟ್ಟಿದ್ದೀರಿ. ಆ ವರದಿಯಲ್ಲಿ ಪ್ರಮುಖವಾಗಿ ತಾವು ಏನು ಹೇಳಿದ್ದೀರಿ? ಹೈಕೋರ್ಟ್‌ನ ರಿಟೈರ್ಡ್ ಜಡ್ಜ್ ಮತ್ತು ಟ್ರಾನ್ಸ್‌ಪೋರ್ಟ್ ವಿಷಯದಲ್ಲಿ ಎಕ್ಸ್‌ಪರ್ಟ್ ಆಗಿರುವವರನ್ನೊಳಗೊಂಡಂತೆ ಒಂದು ಸಮಿತಿ ಮಾಡಿ. ಅವರ ಸಲಹೆ ಮೇಲೆ ಸಾರಿಗೆ ದರವನ್ನು ಹೆಚ್ಚು ಮಾಡಬಹುದೆಂದು ಹೇಳಲಾಗಿದೆ. ಆ ಸಮಿತಿಯನ್ನು ನೇಮಕ ಮಾಡಿದಿರಾ? ಅವರಿಂದ ವರದಿ ತೆಗೆದುಕೊಂಡಿರಾ? ಕಂಡಕ್ಟರುಗಳು ಲೂಟಿ ಮಾಡುತ್ತಿದ್ದಾರೆ, ವ್ಯವಸ್ಥೆ ಬದಲಾವಣೆ ಆಗಬೇಕೆಂದು ಹೇಳಿದ್ದಿರಿ, ಆ ಬಗ್ಗೆ ತಾವು ಏನು

ಮಾಡಿದ್ದೀರಾ? ಏನಾದರೂ ಮಾಡಿದ್ದರೆ ಅದರಿಂದ ಆಗಿರುವಂಥ ಪರಿಣಾಮಗಳೇನು? ಸಮಿತಿಗೆ ಯಾವ ಹೈಕೋರ್ಟ್ ಜಡ್ಜ್‌ನ್ನು ನೇಮಕ ಮಾಡಿದ್ದೀರೆಂದು ನಮಗೆ ಗೊತ್ತಾಗಬೇಕಲ್ಲಾ; ಸಾರಿಗೆ ಸಂಸ್ಥೆಯಲ್ಲಿ ಎಲ್ಲಿ ಸೋರಿ ಹೋಗುತ್ತಿದೆ? ಅದನ್ನು ಹೇಗೆ ತಡೆಗಟ್ಟಬೇಕು ಎಂಬ ಬಗ್ಗೆ ಎಲ್ಲಾ ಶಾಸಕರುಗಳನ್ನು ಕರೆದು ಸಲಹೆ ತೆಗೆದುಕೊಳ್ಳಬೇಕಾಗಿತ್ತಲ್ಲಾ? ಇದೇನು ನಿಮ್ಮ ಮನೆ ವ್ಯವಹಾರವೇನು? ಫೇಕ್ ಟಿಕೇಟ್‌ಗಳು ಇವತು ಉಪಯೋಗ ಆಗುತ್ತಿವೆ, ಸ್ಪೇರ್ ಪಾರ್ಟ್ಸ್ ಖರೀದಿಯಲ್ಲಿ ಲೂಟಿ ನಡೆಯುತ್ತಿದೆ. ಬಸ್‌ಗಳು ರಿಪೇರಿಯಾಗುವುದಿಲ್ಲ, 20 ರಿಂದ 25 ಪರ್‌ಸೆಂಟ್ ಬಸ್‌ಗಳು ಕೆಟ್ಟು ನಿಂತಿರುತ್ತವೆ. ಸಮಯಕ್ಕೆ ಸರಿಯಾಗಿ ಬಸ್‌ಗಳು ಓಡುವುದಿಲ್ಲ. ಬಸ್ ಒಳಗೆ 50 ಜನ, ಬಸ್ ಟಾಪ್‌ನ ಮೇಲೆ 50 ಜನ ಪ್ರಯಾಣ ಮಾಡುತ್ತಿದ್ದರೂ ಸಾರಿಗೆ ಸಂಸ್ಥೆ ನಷ್ಟದಲ್ಲಿ ನಡೆಯುತ್ತಿದೆ. ಅದೇ ಪ್ರೈವೇಟ್‌ನವರು ವರ್ಷದಲ್ಲಿ ಮೂರು ಹೊಸ ಬಸ್‌ಗಳನ್ನು ಖರೀದಿ ಮಾಡಿ ಲಾಭದಲ್ಲಿ ಓಡಿಸುತ್ತಿದ್ದಾರೆ. ಅಂದರೆ, ನಾನು ಇದನ್ನು ಖಾಸಗೀಕರಣ ಮಾಡಿ ಎಂದು ಹೇಳುವುದಿಲ್ಲ. ನೀವು ಸಹ ಖಾಸಗೀಕರಣ ಮಾಡುವುದಕ್ಕೆ ಒಪ್ಪುವುದಿಲ್ಲ. ಇದುವರೆಗೆ ಬಹಳ ಫ್ಯಾಕ್ಟರಿಗಳನ್ನು ಮತ್ತು ಅದರ ಸುತ್ತಮುತ್ತ ಇರುವ ಜಮೀನುಗಳನ್ನೆಲ್ಲಾ ಮಾರಾಟ ಮಾಡಿ ಆಯಿತು. ಸರಿಯಾಗಿ ನಡೆಸಿ. ನಡೆಸುವುದಕ್ಕೆ ಆಗದೇ ಇದ್ದರೆ ರಾಜೀನಾಮೆ ಕೊಟ್ಟು ಹೊರಗೆ ಹೋಗಿ. ಯಾರಾದರೂ ಸರಿಯಾಗಿ ನಡೆಸುವುದಕ್ಕೆ ತಯಾರಿದ್ದರೆ ಅವರಿಗೆ ವಹಿಸಿಕೊಡಿ. ಬೆಂಗಳೂರಿನ ಸಾರಿಗೆ ವ್ಯವಸ್ಥೆಯನ್ನು ನಾವು ನಡೆಸಿ ಪ್ರತಿ ತಿಂಗಳು ಒಂದು ಕೋಟಿ ರೂಪಾಯಿಯನ್ನು ಲಾಭವಾಗಿ ಕೊಡುತ್ತೇವೆಂದು ಬಹಳ ಜನ ಮುಂದೆ ಬಂದಿದ್ದರು. ಯಾರು ಬಂದಿದ್ದರು ಎಂಬ ಬಗ್ಗೆ ದಾಖಲೆಯನ್ನು ತಮಗೆ ಕೊಡಲಾ? ಸಂಸ್ಥೆಯನ್ನು ಸರಿ ಮಾಡುವ ಬಗ್ಗೆ ಕಳಕಳಿ ಇಲ್ಲ, ಪ್ರಾಮಾಣಿಕತೆ ಇಲ್ಲ, ನಿಮಗೆ ಬಿಡುವು ಇಲ್ಲ, ಅಲ್ಲಿ ಪ್ರಾಮಾಣಿಕ ಅಧಿಕಾರಿಗಳನ್ನು ಹಾಕಬೇಕೆಂಬ ಇಚ್ಛೆ ಇಲ್ಲ. ಡ್ರೈವರುಗಳಿಗೆ ಕಂಡಕ್ಟರುಗಳು ಸರಿಯಾಗಿ ಕೆಲಸ ಮಾಡುವುದಕ್ಕೆ ಬೇಕಾದ ಸವಲತ್ತುಗಳನ್ನು ಒದಗಿಸಿಕೊಟ್ಟರೆ, ಅವರು ಏಕೆ ಆಕ್ರೋಶ ವ್ಯಕ್ತಪಡಿಸುತ್ತಾರೆ? ಏಕೆ ಅವರು ಬೇಜಾರು ಮಾಡಿಕೊಳ್ಳುತ್ತಾರೆ? ಬಸ್ ಡಿಪೋದಲ್ಲಿರುವ ಒಬ್ಬ ಅಧಿಕಾರಿ ಲಕ್ಷಗಟ್ಟಲೇ ಹಣ ಹೊಡೆಯುತ್ತಿದ್ದರೆ, ಆಗ ಡ್ರೈವರ್ ಮತ್ತು ಕಂಡಕ್ಟರುಗಳು ಸಹ ನಾವು ಎಷ್ಟು ಹೊಡೆಯಬೇಕೆಂಬ ಬಗ್ಗೆ ಯೋಚನೆ ಮಾಡುತ್ತಾರೆ. ನಿಮ್ಮ ಅಧಿಕಾರಿಗಳು ಸರಿಯಾಗಿದ್ದರೆ ಲೂಟಿ ಮಾಡುವುದನ್ನು ನಿಲ್ಲಿಸಿದರೆ ಇತರೆ ನೌಕರರೂ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾರೆ. ಪಿ.ಜಿ.ಆರ್ ಸಿಂಧ್ಯಾ ಅವರು ತಮ್ಮ ಅಧಿಕಾರಿಗಳೊಡನೆ ಅನಿರೀಕ್ಷಿತವಾಗಿ ಬಸ್‌ಗಳನ್ನು ತಪಾಸಣೆ ಮಾಡಿ ಯಾರು ತಪ್ಪು ಮಾಡುತ್ತಿದ್ದಾರೋ ಅವರುಗಳನ್ನು ಮನೆಗೆ ಕಳುಹಿಸುವ ಕೆಲಸವನ್ನು ಮಾಡಬೇಕು. ಸರ್ಕಾರಿ ನೌಕರರುಗಳನ್ನು ಮತ್ತು ಕಂಡಕ್ಟರುಗಳನ್ನು ಡ್ರೈವರುಗಳನ್ನು ಸಾಕುವುದಕ್ಕೆ ಆ ಸಂಸ್ಥೆ ಇದೆಯೇನು? ಇದು ಯಾವುದನ್ನು ಸರಿಪಡಿಸುವ ಕೆಲಸವನ್ನು ಮಾಡದ ಮನ ಬಂದಂತೆ ಆಡಳಿತವನ್ನು ನಡೆಸುವಂಥ ಒಂದು ಪ್ರಯತ್ನವನ್ನು ಇವತ್ತು ಈ ರಾಜ್ಯದಲ್ಲಿ ಆಗುತ್ತಿದೆ. ಕೋಟಾ ಪರ್ಮಿಟ್‌ಗಳ ಜಾಲ ನಡೆಯುತ್ತಿದೆ, ಅದನ್ನು ಸರಿಪಡಿಸುವುದಕ್ಕೆ ನಿಮ್ಮ ಕೈಯಲ್ಲಿ ಆಗಲಿಲ್ಲ. ಕಾಂಟ್ರಾಕ್ಟ್ ಕ್ಯಾರಿಯೇಜ್‌ಗಳನ್ನು ನಿಲ್ಲಿಸಿ ರಾಷ್ಟ್ರೀಕರಣ ಮಾಡಿದ ಮಾರ್ಗಗಳಲ್ಲಿ ಇವತ್ತು ರಾಜಾರೋಷವಾಗಿ ಟೂರಿಸ್ಟ್ ವೆಹಿಕಲ್‌ಗಳು ಓಡುತ್ತಿವೆ. ಅದನ್ನು ಸರಿ ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಆಗಲಿಲ್ಲ. ಹೊರ ರಾಜ್ಯದಲ್ಲಿ ರಿಜಿಸ್ಟ್ರೇಷನ್ ಮಾಡಿಸಿರುವ ವೆಹಿಕಲ್‌ಗಳು ನಕಲಿ ಪರ್ಮಿಟ್ ಮೇಲೆ ನಮ್ಮ ರಾಜ್ಯದಲ್ಲಿ

ಓಡಾಡುತ್ತಿದ್ದರೂ ಅವುಗಳನ್ನು ತಪಾಸಣೆ ಮಾಡುವ ಕೆಲಸ ಆಗಲಿಲ್ಲ. 1988ರ ಮೋಟಾರ್ ವಾಹನ ಕಾಯಿದೆಯ ನಿಯಮ 64ರ ಪ್ರಕಾರ ರಾಷ್ಟ್ರೀಕೃತ ಹೆದ್ದಾರಿಗಳಲ್ಲಿ ಕಳ್ಳತನದಿಂದ ಮತ್ತು ಬೇರೆ ಬೇರೆ ರೀತಿಯಲ್ಲಿ ಸಂಚರಿಸುವ ವಾಹನಗಳ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡು ಎಷ್ಟು ವಾಹನಗಳನ್ನು ಸೀಸ್ ಮಾಡಿದ್ದೀರಿ? ನೀವು ಮತ್ತು ನಿಮ್ಮ ಅಧಿಕಾರಿಗಳು ನನ್ನ ಜೊತೆ ಬಂದರೆ ನಾನು ಎಲ್ಲಾ ತೋರಿಸುತ್ತೇನೆ. ಸುಮ್ಮನೆ ಸಿಂಧ್ಯಾ ಅವರನ್ನು ಟೀಕೆ ಮಾಡಬೇಕೆಂಬ ಉದ್ದೇಶದಿಂದ ನಾನು ಹೇಳುತ್ತಿಲ್ಲ. ನೀವು ರಾಜೀನಾಮೆ ಕೊಟ್ಟು ಬೇರೆಯವರು ಅಲ್ಲಿ ಬಂದು ಕುಳಿತರೆ ನನಗೇನು ಸಮಾಧಾನವಾ? ಒಂದು ತಿಂಗಳು ಎರಡು ತಿಂಗಳು ತಪಾಸಣೆ ಕೆಲಸವನ್ನು ಮಾಡಿ. ಅದಕ್ಕೆ ನಿಮ್ಮನ್ನು ಯಾರು ಹೊಡೆಯುವುದಕ್ಕೆ ಬರುತ್ತಾರೆ? ಯಾರು ನಿಮ್ಮನ್ನು ಕೊಲೆ ಮಾಡುವುದಕ್ಕೆ ಬರುತ್ತಾರೆ? ನೀವು ಪ್ರಾಮಾಣಿಕರಾಗಿದ್ದರೆ ನಿಮ್ಮ ಬೆಂಬಲಕ್ಕೆ ಈ ಸದನ ಮತ್ತು ಈ ನಾಡಿನ ಜನರು ಇಲ್ಲವೇನು? ಯಾರು ನಿಮ್ಮನ್ನು ಬೆದರಿಸುವವರು?

ಶ್ರೀ ಎನ್.ರಾಜಣ್ಣ : ಮಾನ್ಯ ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ರಿಸೈನ್ ಮಾಡಿ ಇವರನ್ನು ಒಂದು ತಿಂಗಳು ಮಿನಿಸ್ಟರ್ ಮಾಡಿ. ಆಗ ಅವರು ಸೆಟ್‌ರೈಡ್ ಮಾಡುತ್ತಾರೋ ನೋಡೋಣ.

(ಗೊಂದಲ)

ವೈಸ್ ಛೇರ್ಮನ್ : ನನ್ನ ಪರ್ಮಿಷನ್ ಇಲ್ಲದೆ ಮಾತನಾಡಿದರೆ ರೆಕಾರ್ಡ್‌ಗೆ ಹೋಗುವುದಿಲ್ಲ. ನೀವು ಹೇಗೆ ನಿಂತುಕೊಂಡು ಮಾತನಾಡಿದರೆ, ಅವರು ಯಾವಾಗ ಮಾತನಾಡಿ ಪೂರೈಸುವುದು?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಪಿ ಜಿ ಆರ್ ಸಿಂಧ್ಯಾ ಅಂಥವರು ಹಿರಿಯರು ಸಾರಿಗೆ ಸಚಿವರಾಗಿದ್ದಾರೆ. ಕೆ. ಎಸ್.ಆರ್.ಟಿ.ಸಿ ಬಸ್‌ಗಳಿಗೆ ಕವಚವನ್ನು ಕಟ್ಟುವುದಕ್ಕೆ ಹಾಸನದಲ್ಲಿರುವ ಮತ್ತು ಹುಬ್ಬಳ್ಳಿಯಲ್ಲಿರುವ ಹಾಗೂ ಕಿಂಕೋ ಸಂಸ್ಥೆಗೆ ಅವಕಾಶ ಇಲ್ಲವೇನು ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಬಾಡಿ ಕಟ್ಟುವ ಕೆಲಸವನ್ನು ಖಾಸಗಿಯವರಿಗೆ ಏಕೆ ಕೊಡುತ್ತೀರಿ? ಇದರಿಂದ ಯಾರು ಯಾರಿಗೆ ಎಷ್ಟೆಷ್ಟು ಕಮಿಷನ್ ಬರುತ್ತದೆ? ಚಾಸ್ಸಿಗಳನ್ನು ತಂದು ನಿಮ್ಮ ಸಂಸ್ಥೆಗಳ ಮೂಲಕವೇ ಬಾಡಿಗಳನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲವೇ? ನಮ್ಮಲ್ಲಿ ಪರಿಣಿತರು ಇಲ್ಲವೇ? ಎಲ್ಲಿಯವರೆಗೆ ಈ ನಾಚಿಕೆಗೆಟ್ಟ ವ್ಯವಸ್ಥೆ? ಸರ್ಕಾರಿ ಕಾರುಗಳನ್ನು ರಿಪೇರಿ ಮಾಡುತ್ತಿದ್ದ ಕೆ.ಎಸ್.ಆರ್.ಟಿ.ಸಿ ಯನ್ನು ಬದಲಾಯಿಸಿ ಯಾರೋ ಪ್ರೈವೇಟ್‌ನವರಿಗೆ ಕೊಟ್ಟು ಲೂಟಿ ಮಾಡುವಂಥ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಗೆ ಧಿಕ್ಕಾರವೆಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ನಾನು ಈ ಸಮಿತಿಯಲ್ಲಿ ಇದ್ದಾಗ ಕೆ.ಎಸ್.ಆರ್.ಟಿ.ಸಿ.ಗೆ ಹೋಗಿ ಬಂದಿದ್ದೇನೆ. ಎಷ್ಟು ಚೆನ್ನಾಗಿ ಅವರು ಬಾಡಿ ಬಿಲ್ಡ್ ಮಾಡುತ್ತಿದ್ದರು ಅಲ್ಲಿ ಪರಿಣಿತರು ಇಲ್ಲವೇ? ಅವರ ಪರಿಣಿತೆಯನ್ನು ಉಪಯೋಗ ಮಾಡಿಕೊಳ್ಳುವುದಕ್ಕಾಗುವುದಿಲ್ಲವೇ? ಆಮೇಲೆ ಬಿ ಟಿ ಎಸ್‌ಗೆ 400 ಖಾಸಗಿ ಬಸ್‌ಗಳನ್ನು ಬಾಡಿಗೆಗೆ ಪಡೆದು ಓಡಿಸುತ್ತೇನೆಂದು ತಾವು ಹೇಳಿದ್ದೀರಿ, ಅದನ್ನು ಏಕೆ ನಿಲ್ಲಿಸಿದಿರಿ? ಅದಕ್ಕೆ ಯಾರ ಪ್ರಭಾವ? ವಿ ಆರ್‌ಎಲ್‌ನವರು ಬಸ್ ನಡೆಸುತ್ತಿದ್ದಾರೆ. ಇವತ್ತಲ್ಲ ನಾಳೆ ನಾವು ಅಲ್ಲಿ ಕುಳಿತುಕೊಳ್ಳುವುದಕ್ಕೆ ಕಾಲ ಹತ್ತಿರ ಬರುತ್ತಿದೆ.

(ಗೊಂದಲ)

ಶ್ರೀ ಬಿ.ಎನ್.ಬಚ್ಚೇಗೌಡ : ಮಾನ್ಯ ಯಡಿಯೂರಪ್ಪನವರು ರಾತ್ರಿ ಕನಸು ಕಾಣುವ ಬದಲು ಹಗಲು ಕನಸು ಕಾಣುತ್ತಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ :40 ಜನ ಎಂ ಪಿ ಗಳಿದ್ದವರು ರಾಷ್ಟ್ರದಲ್ಲಿ ಪ್ರಧಾನಿಯಾಗಿರುವಾಗ ರಾಜ್ಯದಲ್ಲಿ 40 ಜನ ಶಾಸಕರುಗಳು ಇರುವ ಪಕ್ಷವು ರಾಜ್ಯದಲ್ಲಿ ಆಡಳಿತ ಮಾಡುವುದಕ್ಕೆ ಆಗುವುದಿಲ್ಲವೇ?

ಶ್ರೀ ಎಸ್. ಕೃಷ್ಣಪ್ಪ : ಅದು ಖಂಡಿತಾ ಸಾಧ್ಯವಿಲ್ಲ. ಈ ಹಿಂದೆ ಎಷ್ಟು ಜನ ಇದ್ದು ಪ್ರಧಾನ ಮಂತ್ರಿಯಾಗಿ ಎಲ್ಲಿಗೆ ಹೋದಿರಿ ಎಂಬುದನ್ನು ತಾವು ಯೋಚನೆ ಮಾಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಬಚ್ಚೇಗೌಡರು ಬೆಂಗಳೂರಿನಲ್ಲೂ ಇರುತ್ತಾರೆ, ದೆಹಲಿಗೂ ಹೋಗುತ್ತಿರುತ್ತಾರೆ. ಪಂಜಾಬ್‌ನಲ್ಲಿ ಏನಾಯಿತು? ಬಾಂಬೆಯಲ್ಲಿ ಏನಾಯಿತು? ದೆಹಲಿಯಲ್ಲಿ ಏನಾಯಿತು? ಲೋಕ ಸಭೆಯ ಮತ್ತು ರಾಜಸ್ಥಾನ, ಮಧ್ಯಪ್ರದೇಶದ ಬೈ-ಎಲೆಕ್ಷನ್‌ನಲ್ಲಿ ಏನಾಯಿತು? ಅಲ್ಲಿ ಬಹಳ ವರ್ಷಗಳ ಕಾಲ ಕಾಂಗ್ರೆಸ್‌ನವರು ಇದ್ದ ಸ್ಥಾನಗಳು ಯಾರ ಪಾಲಾಯಿತು? ನಾನು ನಿಮಗೆ ಇಷ್ಟೇ ಹೇಳುವುದು, ಈ ಮಾತು-ಹೋರಾಟ ಬೇಡ. ಯಾರು ಎಲ್ಲಿ ಇರಬೇಕೆಂಬ ಬಗ್ಗೆ ತೀರ್ಮಾನ ಮಾಡುವ ಮಾಲೀಕರು ಹೊರಗಡೆ ಇದ್ದಾರೆ.40 ಜನ ಮಾತ್ರ ಇರುವ ಪಕ್ಷದವರು ಯಾವ ಕಾರಣಕ್ಕೂ ಸರ್ಕಾರದಲ್ಲಿ ಕುಳಿತುಕೊಳ್ಳತಕ್ಕಂಥ ಕೆಟ್ಟ ದಿವಸಗಳು ಬರಬಾರದೆಂದು ನಾನು ಭಗವಂತನಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

2.30 ಪಿ.ಎಂ

ಶ್ರೀ ಎಂ.ಪಿ. ಪ್ರಕಾಶ್ : ದೆಹಲಿಯಲ್ಲಿ ಬಸ್ ದರವನ್ನು ಏರಿಸುವುದರ ಬಗ್ಗೆ ಇಷ್ಟೇ ಪ್ರತಿಭಟನೆ ಮಾಡಿದರೂ ಬೆಲೆಯನ್ನು ಇಳಿಸುವುದಿಲ್ಲವೆಂದು ಪ್ರತಿಪಾದನೆ ಮಾಡಿರುವುದು ನಮ್ಮ ಸರ್ಕಾರವೋ ಅಥವಾ ತಮ್ಮ ಸರ್ಕಾರವೋ?

ಶ್ರೀ ಬಿ.ಎಸ್.ಯಡಿಯೂರಪ್ಪ : ಸನ್ಮಾನ್ಯ ಸಾರಿಗೆ ಸಚಿವರಿಗೆ ಮತ್ತು ಕೆ.ಎಸ್.ಆರ್.ಟಿ.ಸಿ ಅಧಿಕಾರಿಗಳಿಗೆ ಈ ಮೂಲಕ ಸಲಹೆ ಕೊಡುತ್ತೇನೆ. ರಾಜಸ್ಥಾನದಲ್ಲಿ ನಮ್ಮ ಸರ್ಕಾರ ಇದೆ ತಾನೇ? ಅಲ್ಲಿ ನಾವು ಬಸ್‌ಗಳನ್ನು ಓಡಿಸುತ್ತಿದ್ದೇವೆ ತಾನೇ? ಅಲ್ಲಿ ನಾವು ಏನು ಪಾಲಿಸಿ ಮಾಡಿದ್ದೇವೆ ನಮ್ಮ ಇನ್‌ವೆಸ್ಟ್‌ಮೆಂಟ್ ಮೇಲೆ ಬರುವ ಒಟ್ಟು ಲಾಭದಲ್ಲಿ 50 ಪರ್ಸೆಂಟ್ ಸಂಸ್ಥೆಗೆ ಕೊಟ್ಟು ಉಳಿದ 50 ಪರ್ಸೆಂಟ್ ಲಾಭವನ್ನು ಆ ಸಂಸ್ಥೆಯಲ್ಲಿ ಕೆಲಸ ಮಾಡತಕ್ಕಂತಹ ನೌಕರರುಗಳಿಗೆ ಹಂಚುವ ಒಂದು ಹೊಸ ವ್ಯವಸ್ಥೆಯನ್ನು ಮಾಡಿದ್ದೇವೆ. ಇದರ ಬಗ್ಗೆ "ಇಂಡಿಯಾ ಟುಡೇ" ದಲ್ಲಿ ಬಂದಿರುವ ವರದಿಯನ್ನು ಓದಿ ನೋಡಿ, ಆಮೇಲೆ ಸಾರಿಗೆ ಸಂಸ್ಥೆಗೆ ಸಂಬಂಧಪಟ್ಟಂತೆ ಇರುವ ಕ್ಯಾಂಟೀನುಗಳು,

ಅಂಗಡಿಗಳು, ಮಳಿಗೆಗಳು ಮುಂತಾದವುಗಳನ್ನು ಕೊಡುವಾಗ ಯಾರ ಜೊತೆಯಲ್ಲೂ ಹೊಂದಾಣಿಕೆ ಮಾಡಿಕೊಳ್ಳದೆ ಬಹಿರಂಗ ಹರಾಜು ಮೂಲಕ ಕೊಡಿ. ಇದರಿಂದ ವರ್ಷಕ್ಕೆ ಎರಡು ಕೋಟಿ ರೂಪಾಯಿಗಳು ಹೆಚ್ಚುವರಿ ಆದಾಯ ಸಂಸ್ಥೆಗೆ ಬರುತ್ತದೆ. ಇದನ್ನು ಸರಿಮಾಡಬೇಕು ಎನ್ನುವ ಕಳಕಳಿ ಇದ್ದರೆ, ಸರಿ ಮಾಡಿ. ಇಲ್ಲ ಯಡಿಯೂರಪ್ಪನವರೇ, ಇದು ನಾಲ್ಕು ದಿನದ ಸಂತೆ, ಇವರನ್ನು ಕಟ್ಟಿಕೊಂಡು ನಾನು ಏನು ರಿಪೇರಿ ಮಾಡುವುದು ಹಾಳಾಗಿ ಹೋದರೆ ಹೋಗಲಿ ಎಂದು ನೀವು ತೀರ್ಮಾನ ಮಾಡಿದ್ದರೆ ನನ್ನದು ಏನೂ ಅಭ್ಯಂತರ ಇಲ್ಲ. ಸುಧಾರಣೆ ಮಾಡಬೇಕು ಎನ್ನುವುದಾದರೆ ನಾನು ಈ ಸಲಹೆಯನ್ನು ಕೊಡುತ್ತಾ ಇದ್ದೇನೆ. ನಮ್ಮಲ್ಲಿ ಕೆಲವರು ಹೇಳುತ್ತಾರೆ ಯಾರನ್ನಾದರೂ ಹಾಳು ಮಾಡಬೇಕು, ಎನ್ನುವುದಾದರೆ ಒಂದು ಹಳೆ ಲಾರಿ ಕೊಡಿಸಿ ಎಂದು. ಹಾಗೆ ನಿಮ್ಮನ್ನು ಮುಗಿಸುವುದಕ್ಕಾಗಿಯೇ ಈ ಕೆ.ಎಸ್.ಆರ್.ಟಿ.ಸಿ ಖಾತೆಯನ್ನು ನಿಮಗೆ ಕೊಟ್ಟಿದ್ದಾರೆ. ಅದು ಅವರಿಗೆ ಗೊತ್ತಿಲ್ಲದಿದ್ದರೆ ನಾನು ಏನು ಮಾಡಲಿ? ನೀವು ಅದನ್ನು ಒಪ್ಪಿಕೊಂಡು ದಡ್ಡರಾಗಿ ಇಲ್ಲಿ ಕುಳಿತು ಅನುಭವಿಸುತ್ತಾ ಇದ್ದೀರಿ. ಅದಕ್ಕೆ ನಾನು ಏನು ಮಾಡುವುದಕ್ಕೆ ಆಗುತ್ತದೆ? ಈಗಲೂ ಕಾಲ ಮೀರಿಲ್ಲ ಅದಕ್ಕಾಗಿ ರಾಜೀನಾಮೆ ಕೊಡಿ ಎಂದು ನಾನು ಮೊದಲೇ ಒತ್ತಾಯ ಮಾಡಿದ್ದೆ. ಇನ್ನು ಸ್ವಲ್ಪ ದಿನ ಬಿಟ್ಟರೆ ಬೇರೆ ಯಾವುದಾದರೂ ನಿಮಗೆ ಒಳ್ಳೆಯ ಖಾತೆ ಸಿಗಬಹುದು. ಇಲ್ಲೇ ಇದ್ದುಕೊಂಡು ಸುಮ್ಮನೆ ಜನರ ಶಾಪ, ಕಾರ್ಮಿಕರ ಶಾಪ ಏಕೆ? ಏಕೆ ಈ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡು ಒದ್ದಾಡುತ್ತಾ ಇದ್ದೀರಿ? ನೀವು ಬಹಳ ಬುದ್ಧಿವಂತರು ಎಂದು ಇಷ್ಟು ದಿವಸ ನಾನು ತಿಳಿದುಕೊಂಡಿದ್ದೆ. ಆದರೆ ಇನ್ನೂ ನಿಮಗೆ ಬುದ್ಧಿ ಬಂದಿಲ್ಲವಲ್ಲಾ ಎಂದು ನನಗೆ ದುಃಖ ಆಗುತ್ತಾ ಇದೆ. ಆಮೇಲೆ ವಿದ್ಯಾರ್ಥಿಗಳಿಗೆ ಕೊಡುವ 33 ಪರ್ಸೆಂಟ್ ಅಷ್ಟು ಪಾಸ್‌ಗಳ ಬಗ್ಗೆ ಮಾತನಾಡುತ್ತೀರಿ. ಆ33 ಪರ್ಸೆಂಟ್‌ನ ಸರ್ಕಾರ ತುಂಬಿಕೊಡುವುದಿಲ್ಲವೇ? ಏಕೆ ಮಾತು ಎತ್ತಿದರೆ ವಿದ್ಯಾರ್ಥಿಗಳ ಪಾಸ್ ಬಗ್ಗೆ ಮಾತಾಡುತ್ತೀರಿ 1995-96ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ಪಾಸ್ ಕೊಟ್ಟಿರುವ ಬಾಬಿಗಾಗಿ 43 ಕೋಟಿ ರೂಪಾಯಿಗಳನ್ನು ಸಬ್ಸಿಡಿಯಾಗಿ ಸರ್ಕಾರ ಕೊಟ್ಟಿದೆ. ಎಷ್ಟು ಹೊತ್ತು ಯಾರು ಮಾತಾಡಿದರು ಎನ್ನುವ ಪೈಪೋಟಿ ಇಲ್ಲಿ ಮಾಡುವಂಥದ್ದಲ್ಲ. ಅದರ ಅಗತ್ಯವೂ ಇಲ್ಲ. ನಾನು ತಮ್ಮಲ್ಲಿ ಇಷ್ಟೇ ವಿನಂತಿ ಮಾಡುತ್ತೇನೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗಿರುವ ಪ್ರಕಾರ ಮಧ್ಯಾಹ್ನದ ಹೊತ್ತು ಅಧಿವೇಶನಕ್ಕೆ ಬಿಡುವು ಕೊಡದೆ ಯಾರೂ ಊಟ ಮಾಡದೆ ಜನರ ಬಗ್ಗೆ ಕೆಲಸ ಮಾಡಬೇಕು. ಹೊರಗಿನ ಜನರು ಊಟ ಇಲ್ಲದೆ ಸಾಯುತ್ತಾ ಇರುವಾಗ ನಾವು ಸ್ವಲ್ಪ ಹೊತ್ತು ಊಟ ಇಲ್ಲದೆ ಹಸಿದು ಕೊಂಡು ಇರೋಣ. ಮಾನ್ಯ ಅಧ್ಯಕ್ಷರೆ, ನಾನು ಎರಡು ಮೂರು ವಿಷಯಗಳನ್ನು ಒತ್ತಾಯ ಮಾಡಿದ್ದೇನೆ. ಅದರಲ್ಲ ಒಂದನೆಯದು ಮೊದಲಿದ್ದ ಬಸ್ ದರವನ್ನೇ ಮುಂದುವರಿಸಬೇಕು ಹಾಗೂ ಈ ಬಗ್ಗೆ ಸಲಹೆ ಮಾಡುವ ಸಲುವಾಗಿ ಒಂದು ಸದನ ಸಮಿತಿಯನ್ನು ಮಾಡಬೇಕು. ಆ ಸಮಿತಿಗೆ ಎರಡು ತಿಂಗಳ ಸಮಯವನ್ನು ಕೊಟ್ಟರೆ ಎಲ್ಲಾ ವಿಷಯವನ್ನು ಪರಿಶೀಲಿಸಿ ಹಣ ಎಲ್ಲಿ ಸೋರಿ ಹೋಗುತ್ತದೆ ಎಂಬ ಬಗ್ಗೆ ಮಾಹಿತಿಯನ್ನು ಕೊಡುತ್ತೇವೆ. ನಂತರ ಅನಿವಾರ್ಯವಾಗಿ ಎಷ್ಟು ದರವನ್ನು ಏರಿಸಬೇಕಾಗುತ್ತದೆಯೇ ಅದನ್ನು ಒಪ್ಪಿಕೊಳ್ಳುವುದಕ್ಕೆ ನಾವು ಸಿದ್ಧರಿದ್ದೇವೆ. ಇದರಲ್ಲಿ ನಾವು ಯಾವುದೇ ರಾಜಕಾರಣವನ್ನು ಮಾಡುತ್ತಿಲ್ಲ. ಆಮೇಲೆ ಬಸ್‌ದರ ಏರಿಸಿರುವುದರ ವಿರುದ್ಧ ಪ್ರತಿಭಟನೆ ಮಾಡಿದಂತಹ ಸಂದರ್ಭದಲ್ಲಿ ಯಡಿಯೂರಪ್ಪ,

ಎಸ್.ಪಿ, ಎಂ ಎಲ್.ಎ ಮತ್ತು ಎಂ ಎಲ್ ಸಿ ಗಳು ಅರೆಸ್ಟ್ ಆದರು. ನಂತರ ಬಿಡುಗಡೆ ಆದರು. ಆದರೆ ಕೆಲವು ಬಡಪಾಯಿಗಳು ಪ್ರತಿಭಟನೆಯನ್ನು ಮಾಡಿದಾಗ ಅವರನ್ನು ಜೈಲಿಗೆ ಕಳುಹಿಸಿಬಿಟ್ಟಿದ್ದಾರೆ. ಹೋಂ ಮಿನಿಸ್ಟರ್ ಬೇರೆ ಸರ್ಕಾರ ಬೇರೆ ಎಂದು ನಾನು ಅಂದು ಕೊಂಡಿಲ್ಲ, ಆದ್ದರಿಂದ ಆ ಬಡಪಾಯಿಗಳನ್ನು ಕೂಡಲೇ ಬಿಡುಗಡೆ ಮಾಡಿ. ನಿಮ್ಮಿಂದ ಈ ಇಲಾಖೆ ನಡೆಸುವುದಕ್ಕೆ ಆಗುವುದಿಲ್ಲ. ನೂರು ದಿವಸದಲ್ಲಿ ಈ ಇಲಾಖೆಯನ್ನು ಸರಿಮಾಡುತ್ತೇನೆ ಎಂದು ಟೈಂ ತೆಗೆದುಕೊಂಡಿದ್ದೆ. ಅದರ ಪ್ರಕಾರ ಆಗದೇ ಇರುವುದರಿಂದ ತಾವು ರಾಜೀನಾಮೆ ಕೊಟ್ಟು ನಿರ್ಗಮಿಸಬೇಕೆಂದು ನಾನು ಒತ್ತಾಯವನ್ನು ಮಾಡಿದ್ದೇನೆ. ನಾವು ಇರುವುದು 40 ಜನ ನಮಗೆ ಅಷ್ಟೊಂದು ಜನ ಬೆಂಬಲ ಇಲ್ಲ. ವೋಟ್ ಆನ್ ವೋಟ್‌ನಿಂದ ನಮ್ಮ ರಾಮದಾಸರು ಮತ್ತು ನಮ್ಮ ಗೌಡರು ಗೆದ್ದಿದ್ದಾರೆ. ಆದರೆ ನಿಮಗೆ ಹೇಗೆ ಗೆಲ್ಲಬೇಕು ಎಂಬುದು ಗೊತ್ತಿದೆ. ಆದರೆ ತಮಗೆ ಒಂದು ಕೇಳುತ್ತೇನೆ ಬೆಳಗಾಂ ಜಿಲ್ಲೆಯ ಸವದತ್ತಿಯಲ್ಲಿ ಎಸ್.ಎಸ್.ಪಾಟೀಲ್ ಪದಕಿ ಅವರ ತಂದೆಯವರು ಕಾಂಗ್ರೆಸ್‌ನಲ್ಲಿ ಎಂ.ಎಲ್.ಎ. ಆಗಿದ್ದರು. ಅವರು ಬಿ.ಜೆ.ಪಿ ಸೇರಿ 15 ದಿವಸ ಆಯಿತು. ಅವರು ಬಸ್ ದರ ಏರಿಕೆ ವಿರುದ್ಧ ನಡೆದ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದಕ್ಕೆ ಅವರನ್ನು ಮತ್ತು ಸತ್ಯಾಗ್ರಹದಲ್ಲಿ ಭಾಗವಹಿಸಿದ ಎಲ್ಲರನ್ನೂ ಮೂರು ದಿವಸ ಹಿಂಡಲಗಾ ಜೈಲ್‌ನಲ್ಲಿ ಹಾಕಿದ್ದೀರಿ. ಅವರ ಬದಲು ಯಡಿಯೂರಪ್ಪನವರನ್ನು ಹಾಕಬೇಕಾಗಿತ್ತು, ಅನಂತಕುಮಾರ್‌ರವರನ್ನು ಹಾಕಬೇಕಾಗಿತ್ತು. ಜೈಲನ್ನು ಭರ್ತಿ ಮಾಡುವ ಬಗ್ಗೆ ನಮ್ಮದು ಏನು ವಿರೋಧ ಇರಲಿಲ್ಲ. ನಾವು ಹೋರಾಟ ಮಾಡಿದಾಗ ನಮ್ಮನ್ನು ಬಿಟ್ಟು ಕಾಫಿ ಕುಡಿಸಿ ಕಳುಹಿಸಿ ಎಂದು ನಾವು ಹೇಳುವುದಕ್ಕೆ ಆಗುತ್ತದೆಯೇ? ಅದು ಬಿಟ್ಟು ಯಡಿಯೂರಪ್ಪನವರಿಗೆ ಒಂದು, ಅನಂತಕುಮಾರ್‌ಗೆ ಒಂದು, ಈಶ್ವರಪ್ಪನವರಿಗೆ ಒಂದು, ಮತ್ತು ಬಡವನಿಗೆ ಒಂದು ಟ್ರೀಟ್‌ಮೆಂಟ್ ಏಕೆ? ಏನು ಉದ್ದೇಶ?

(ಸಭಾಧ್ಯಕ್ಷರು ಶ್ರೀ ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಎಸ್.ಎಸ್. ಪಾಟೀಲ್ ಪದಕಿ ನೇತೃತ್ವದಲ್ಲಿ ನಡೆದ ಸತ್ಯಾಗ್ರಹ ಸಂದರ್ಭದಲ್ಲಿ ಅವರ ಜೊತೆಗೆ 118 ಜನರನ್ನು ಸೇರಿಸಿ ಹಿಂಡಲಗಾ ಜೈಲಿನಲ್ಲಿ ಮೂರು ದಿವಸ ಕೊಳೆಸಿದರು. ಅವರುಗಳಲ್ಲಿ 21 ಜನ ಮಹಿಳೆಯರು. ಅದೇ ರೀತಿ ಬಳ್ಳಾರಿಯಲ್ಲಿ ಸತ್ಯಾಗ್ರಹ ಮಾಡಿದಂತಹವರ ಮೇಲೆ ಐ ಪಿ ಸಿ 143, 147, 148 ಮತ್ತು 341 ರ ಪ್ರಕಾರ ಕೇಸ್ ಹಾಕಿದ್ದಾರೆ. ಮತ್ತೆ ಬಿಜಾಪುರ, ಬಾಗಲಕೋಟೆ, ಗುಳ್ಳೇದಗುಡ್ಡ, ಅಮೀನ್‌ಗಡ, ಮತ್ತು ಗೂಡೂರಿನಲ್ಲಿ ನಡೆಸಿದಂತಹ ಸತ್ಯಾಗ್ರಹಿಗಳ ಮೇಲೆ ಐ ಪಿ ಸಿ 141, 147, 149 ಮತ್ತು 341 ರ ಪ್ರಕಾರ ಕೇಸ್ ಹಾಕಿ ಅವರುಗಳನ್ನು ಬಂಧನ ಮಾಡಿ ಹಿಂಡಲಗ ಜೈಲಿಗೂ ಕಳುಹಿಸಿದರು. ಈ ರೀತಿ ಹೋರಾಟ ಮಾಡಿದವರನ್ನು ಬಂಧನ ಮಾಡಿ ಜೈಲಿಗೆ ಕಳುಹಿಸಿದರೆ ಬಿ ಜೆ ಪಿ ಯವರ ಬಲ ಕುಗ್ಗಿ ಅದರಿಂದ ಹೋರಾಟ ನಿಲ್ಲಬಹುದೆಂದು ಅವರು ತಿಳಿದುಕೊಂಡಿರಬಹುದು. ಎಂ ಪಿ ಪ್ರಕಾಶ್, ಪಿ ಜಿ ಆರ್ ಸಿಂಧ್ಯಾ ಅಂಥವರು ಲೋಕ ನಾಯಕರಾದ ಜಯಪ್ರಕಾಶ್ ನಾರಾಯಣ್‌ರವರ ನೇತತೃತ್ವದಲ್ಲಿ ತುರ್ತು ಪರಿಸ್ಥಿತಿಯ ಸಮಯದಲ್ಲಿ ಜೈಲಿನಲ್ಲಿ ಇದ್ದವರು ಅಲ್ಲವಾ? ಅಂತವರಾದ ನೀವು ಅಧಿಕರಕ್ಕೆ ಬಂದಾಗ ನಾವುಗಳು ಶಾಂತ ರೀತಿಯಲ್ಲಿ ನಮ್ಮ ಒಂದು ಪ್ರತಿಭಟನೆಯನ್ನು

ವ್ಯಕ್ತಪಡಿಸಿದರೆ ಅದರ ವಿರುದ್ಧ ಕೇಸ್‌ಗಳನ್ನು ಹಾಕಿ ಜೈಲಿನಲ್ಲಿ ಕೊಳೆಸುವಂತಹ ಒಂದು ಪ್ರಯತ್ನ ಮಾಡಿದ್ದೀರಲ್ಲಾ? ಈ ಶಾಪ ನಿಮಗೆ ತಟ್ಟುವುದಲ್ಲವೇ? ಮಾನ್ಯ ಅಧ್ಯಕ್ಷರ, ಆಗಲೇ ತಾವು ಹೊರಗಡೆ ಹೋಗಿದ್ದಾಗ ನಾಗೇಗೌಡರು ಒಂದು ಮಾತನ್ನು ಹೇಳಿದರು, ಈ ಮಾತನ್ನು ಹೇಳುವುದಕ್ಕೆ ನಾಗೇಗೌಡರಿಗೆ ಏನು ದುರ್ಬುದ್ಧಿ ಬಂತು ಎಂದು ತಾವು ಪಶ್ಚಾತ್ತಾಪ ಪಡುತ್ತಿದ್ದರೋ ಏನೋ ಗೊತ್ತಿಲ್ಲ. ಅವರು ಏನು ಹೇಳಿದರು ಅಂದರೆ ಯಡಿಯೂರಪ್ಪನವರೇ ಈ ಸತ್ಯಾಗ್ರಹಕ್ಕೆ ಬೆಂಬಲವೇ ಇರಲಿಲ್ಲ, ಬರೀ 50, 100 ಜನ ಮಾತ್ರ ಇದ್ದರು ಎಂದು ಹೇಳಿದರು. ಅದಕ್ಕೆ ನಾನು ಹೇಳಿದ್ದೇನೆ, ಎಪ್ರಿಲ್ ಒಂದನೇ ತಾರೀಖಿನಿಂದ ಏಪ್ರಿಲ್ ಕೊನೆಯವರೆಗೆ ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕಂತಹ ಎಲ್ಲಾ ಜೈಲುಗಳನ್ನು ಭರ್ತಿ ಮಾಡಿ ಆಮೇಲೆ ಇಲ್ಲಿಗೆ ಬರುತ್ತೇನೆ. ನಂತರ ಏನು ಮಾಡೋಣ ಎಂದು ಚರ್ಚೆ ಮಾಡೋಣ. ಇದು ಆಗಬಾರದು ಯಡಿಯೂರಪ್ಪನವರೇ ಅಂದರೆ ಬೇಷರತ್ತಾಗಿ ಏರಿಸಿರುವ ಸಾರಿಗೆ ದರವನ್ನು ವಾಪಸ್ ತೆಗೆದುಕೊಳ್ಳಿ ಮತ್ತು ಎರಡು ಸದನದ ಸದಸ್ಯರನ್ನು ಒಳಗೊಂಡ ಒಂದು ಸಮಿತಿಯನ್ನು ಮಾಡಿ ಆ ಸಮಿತಿಗೆ ಎರಡು ತಿಂಗಳ ಸಮಯ ಕೊಡಿ. ಯಾವ ಕಾರಣಕ್ಕಾಗಿ ಸಾರಿಗೆ ದರವನ್ನು ಏರಿಸಬೇಕೋ? ಎಷ್ಟು ಹೆಚ್ಚು ಮಾಡಬೇಕೋ? ಬೇರೆ ಬೇರೆ ರಾಜ್ಯದಲ್ಲಿ ಏನು ಮಾಡಿದ್ದಾರೆ ಎಂಬುದನ್ನೆಲ್ಲಾ ತಿಳಿದುಕೊಂಡು ಚರ್ಚೆ ಮಾಡಿ ಅನಿವಾರ್ಯವಾಗಿ ದರವನ್ನು ಜಾಸ್ತಿ ಮಾಡಬೇಕಾಗಿ ಬಂದರೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಾನು ಹೇಳುವುದೇನೆಂದರೆ ಈಗಿರುವಂತಹ ಪರಿಸ್ಥಿತಿಯಲ್ಲಿ ಸೋರಿ ಹೋಗುವುದನ್ನು ತಡೆದರೆ, ಪ್ರಾಮಾಣಿಕ ಅಧಿಕಾರಿಗಳನ್ನು ಅಲ್ಲಿ ಬಿಟ್ಟರೆ, ಸರ್ಕಾರದ ಹಸ್ತಕ್ಷೇಪವನ್ನು ಕೈಬಿಟ್ಟರೆ, ಕಾರ್ಮಿಕರ ಜೊತೆಯಲ್ಲಿ ಆತ್ಮೀಯ ಸಂಬಂಧ ಬೆಳೆಸಿದರೆ ಸಂಸ್ಥೆಯನ್ನು ಲಾಭದಾಯಕವಾಗಿ ನಡೆಸುವುದಕ್ಕೆ ಆಗದೇ ಇದ್ದರೂ ಲಾಸ್ ಇಲ್ಲದೆ ನಡೆಸಬಹುದೆಂದು ನನ್ನ ಸ್ಪಷ್ಟವಾದ ಅಭಿಪ್ರಾಯ.

ಈ ಸಮಯದಲ್ಲಿ ಹೆಚ್ಚು ಹೊತ್ತು ಈ ವಿಷಯ ಕುರಿತು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಂಥ ತಮಗೆ ಅಭಿನಂದಿಸುತ್ತೇನೆ. ಅನೇಕ ವಿಷಯಗಳ ಬಗ್ಗೆ ಅನೇಕ ಜನ ಸದಸ್ಯರು ಮಾತನಾಡುವವರಿದ್ದಾರೆ. ನಾವು ಎಷ್ಟು ಸಮಯ ಮಾತನಾಡಿದ್ದೇವೆಂದು ಮುಖ್ಯವಲ್ಲ. ನಾನು ಪ್ರಾರಂಭದಲ್ಲಿಯೇ ಮಾನ್ಯ ಮುಖ್ಯಮಂತ್ರಿಯವರಿಗೆ ಒಂದು ಸಲಹೆಯನ್ನು ಕೊಟ್ಟಿದ್ದೆ. ನಿಮಗೆ ಈಗಾಗಲೇ ತಪ್ಪು ಆಗಿದೆ ಎಂದು ಮನವರಿಕೆ ಆಗಿದೆ. ತಪ್ಪು ಆಗಿದೆ ಎಂದು ನಿಮಗೆ ಅನ್ನಿಸಿದೆ. ಆದ್ದರಿಂದ ನಿಮ್ಮ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳಿ. ಎರಡೂ ಸದನಗಳ ಸದಸ್ಯರ ಒಂದು ಸಮಿತಿಯನ್ನು ಮಾಡಿ ಅದರಲ್ಲಿ ಚರ್ಚೆ ಮಾಡೋಣ, ನಾಳೆಯ ದಿನಗಳಲ್ಲಿ ನಾವು ಅಲ್ಲಿರಬಹುದು, ನೀವು ಇಲ್ಲಿರಬಹುದು. ಒಟ್ಟಿನಲ್ಲಿ ಜನರ ಆಶೀರ್ವಾದಗಳು ಬೇಕು. ಸರಕಾರ ನಡೆಯಬೇಕೆಂದರೆ ತೆರಿಗೆ ಹಾಕಬೇಕು. ಆದರೆ ಎಷ್ಟು ಹಾಕಬೇಕೆಂಬುದು ಮುಖ್ಯ. ಆದರೆ ಪರಿಸ್ಥಿತಿಗಳ ಬಗ್ಗೆ ಚರ್ಚೆ ಮಾಡಿ ಅದನ್ನು ನಿರ್ಧರಿಸಬೇಕು. ಅದು ನಿಮ್ಮ ದೃಷ್ಟಿಯಿಂದ ಒಳ್ಳೆಯದು. ಇಲ್ಲವಾದರೆ ಯಡಿಯೂರಪ್ಪನವರೇ, ನಾವು ಈಗಾಗಲೇ ಗಂಟುಮೂಟೆ ಕಟ್ಟಿಕೊಂಡು ರೆಡಿಯಾಗಿದ್ದೇವೆ. ನಾವು ಮನೆಗೆ ಹೋಗಲು ಸಿದ್ಧರಾಗಿದ್ದೇವೆಂದು ಹೇಳಿದರೆ ನಾವು ಚಳುವಳಿ ಮಾಡುತ್ತೇವೆ. ನಾವು ಅಗತ್ಯ ಕಂಡು ಬಂದರೆ ಬಸ್‌ಗಳಿಗೆ ಬೆಂಕಿ ಹಚ್ಚಬೇಕೇ? ಹಚ್ಚಬೇಕೆಂದರೆ ಬೆಂಕಿ ಹಚ್ಚುತ್ತೇವೆ. ಈ ಸದನದಲ್ಲಿ ಹೇಳುತ್ತೇನೆ. ಮಾನ್ಯ ನಾಗೇಗೌಡರು ಜನರು ಶಾಂತ ರೀತಿಯಲ್ಲಿದ್ದಾರೆ, ಅವರಿಂದ ಚಳುವಳಿ ಮುಂತಾಗಿ ಏನೂ

ಇಲ್ಲ, ಅಂದರೆ ಬೆಂಕಿ ಹಚ್ಚಿದರೆ ಒಳ್ಳೆಯದೆಂಬ ಅಭಿಪ್ರಾಯವೇ? ಕೈಮುಗಿದು ಧರಣಿ ಕುಳಿತು ಶಾಂತವಾಗಿ ಪೋಲೀಸರು ಬಂದ ತಕ್ಷಣ ಗೌರವದಿಂದ ನಾವು ಬಂಧನಕ್ಕೊಳಗಾದೆವು. ಇದು ಬಿಜೆಪಿ ಕಲ್ಚರ್. ಹಿಂದಿನ ಕಲ್ಚರ್ ಇತ್ತಲ್ಲಾ ಚಳುವಳಿ ಅಂದರೆ ಬೆಂಕಿ ಹಚ್ಚುವುದು.... ಅದರಿಂದಲೇ ನಿಮಗೆ ಬುದ್ಧಿ ಬರುವುದಾದರೆ ನಾವು ಅದಕ್ಕೂ ಸಿದ್ಧರಿದ್ದೇವೆ. ರಾಜ್ಯದ ಜನರೂ ಸಿದ್ದರಿದ್ದಾರೆ. ಈ ಸದನದಲ್ಲಿ ಸಾಯಂಕಾಲದ ಒಳಗಡೆ ಈ ತೀರ್ಮಾನವನ್ನು ತೆಗೆದುಕೊಳ್ಳದೆ ಇದ್ದರೆ ಜನರು ರಸ್ತೆಯಲ್ಲಿ ನಿಮ್ಮನ್ನು ಓಡಾಡಲು ಬಿಡದ ರೀತಿಯಲ್ಲಿ ಚಳುವಳಿ ಮಾಡಿ ತೋರಿಸುತ್ತೇವೆ. ಈ ಮಾತುಗಳನ್ನು ಸನ್ಮಾನ್ಯ ಹಿರಿಯ ಸಚಿವರಾದ ನಾಗೇಗೌಡರಲ್ಲಿ ಹೇಳುತ್ತಾ, ಮಾನ್ಯ ಅಧ್ಯಕ್ಷರು ಇವೊತ್ತು ನಮಗೆ ಊಟದ ವ್ಯವಸ್ಥೆಯನ್ನು ಇಲ್ಲಿ ಮಾಡಬೇಕು. ಇದೊಂದು ಇತಿಹಾಸ ಈ ಸದನದಲ್ಲಿ ಒಂದು ತೀರ್ಮಾನ ಆಗುವುದಕ್ಕಿಂತ ಮುಂಚೆ ಹೊರಗಡೆ ನಾವಂತೂ ಹೋಗುವುದಿಲ್ಲ. ಅದು ರಾತ್ರಿ ಆಗಬಹುದು, ನಾಲ್ಕು ದಿವಸಗಳೇ ಆಗಬಹುದು. ಬಹುಶಃ ಅಂಥ ಹೋರಾಟವನ್ನು ನಾವು ಮಾಡಿಲ್ಲ. ಆದರೆ ಈವೊತ್ತು ಈ ಭಂಡ ಸರಕಾರ ಎಂದು ನಾನು ಹೇಳುವುದಕ್ಕೆ ಇಷ್ಟಪಡದಿದ್ದರೂ ಏನೋ ಒಂದು ತರಹದ ಅಧಿಕಾರದ ಮದ ಇನ್ನೂ ಎರಡೂವರೆ ವರ್ಷಗಳಿವೆ, ಏನು ಮಾಡಿದರೂ ನಡೆಯುತ್ತದೆ ಎನ್ನುವ ಭ್ರಮೆ ನಿಮ್ಮಲ್ಲಿ ಇರಬಹುದು. ನಾವು ವಿರೋಧ ಪಕ್ಷದವರು ನಿಮಗೆ ಬುದ್ಧಿ ಕಲಿಸುವುದಕ್ಕೆ ಏನು ಮಾಡಬಹುದೆಂದು ನೀವು ಕಿವಿಯಲ್ಲಿ ಬಂದು ಹೇಳಬಹುದು. ಇಲ್ಲ ಯಡಿಯೂರಪ್ಪನವರೇ, ನೀವು ಹೇಳುವುದು ಸರಿ ಇದೆ. ನಾವು ಆಡಳಿತಪಕ್ಷದಲ್ಲಿದ್ದೇವೆ, ನಾವು ಅವರಿಗೆ ಹೇಳಿದ್ದೇವೆ, ಅವರಿಗೆ ಬುದ್ಧಿ ಬಂದಿಲ್ಲ ನಮ್ಮ ಸ್ಥಿತಿಯು ಹದೆಗಟ್ಟು ಹೋಗಿದೆ. ನಾಳೆ ಚುನಾವಣೆಗೆ ಹೋದರೆ ಇನ್ನು ನಮ್ಮ ಕಥೆ ಇದೆ. ನೀವು ಹೇಳುವುದರಲ್ಲಿ ಅರ್ಥವಿದೆ ಎಂದು ನಮಗೆ ಕಿವಿಯಲ್ಲಿ ಪೂರ್ಣವಾಗಿ ವಾಪಸ್ ತೆಗೆದುಕೊಳ್ಳಲು ಏನು ಮಾಡಬೇಕೋ ಅದನ್ನು ಮಾಡಲು ಸಿದ್ದರಿದ್ದೇವೆ. ಅಧ್ಯಕ್ಷರೂ ಕೂಡ ನಮಗೆ ಸಲಹೆ ಕೊಡಬೇಕು. ನೀವು ಆ ಪೀಠದಲ್ಲಿದ್ದರೂ ಸಹ .

ಅಧ್ಯಕ್ಷರು : ಅವರು ಹಿಂತೆಗೆದುಕೊಳ್ಳುತ್ತಾರೋ ಇಲ್ಲವೋ. ಆದರೆ ನನಗೆ ಒಂದು ಸೂಚನೆಯನ್ನು ಕೊಟ್ಟು ಬಿಟ್ಟರು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ತಮಗೆ ಏನು ಸೂಚನೆ ಕೊಟ್ಟಿದ್ದೇನೆ ಅಂದರೆ, ನಾನು ತಮ್ಮಲ್ಲಿ ಒಂದು ಬೇಡಿಕೆ ಮತ್ತು ಪ್ರಾರ್ಥನೆ ಮಾಡುವುದೇನೆಂದರೆ.

ಅಧ್ಯಕ್ಷರು : ತಾವು ಊಟದ ವ್ಯವಸ್ಥೆ ಮಾಡಬೇಕೆಂದು ಹೇಳಿದ್ದೀರಲ್ಲಾ, ಅದನ್ನೇ ನಾನು ಹೇಳಿದ್ದುದು. ಇಂಗ್ಲೀಷನಲ್ಲಿ ಒಂದು ಗಾದೆ ಮಾತು ಇದೆ " Coming events cast their shadow in advance" ಹಾಗೆಯೇ ನೀವು ನನಗೆ ಸೂಚನೆ ಕೊಟ್ಟು ಬಿಟ್ಟಿದ್ದೀರಿ. ಅವರು ಏನು ಮಾಡುತ್ತಾರೋ ಗೊತ್ತಿಲ್ಲ. ಈಗ ನಾನೂ ತಯಾರಾಗಿರಬೇಕಾಗಿದೆಯಷ್ಟೇ....

ಶ್ರೀ ಬಿ.ಎಸ್.ಯಡಿಯೂರಪ್ಪ : ನೀವು ನಮಗೆ ರಕ್ಷಣೆ ಕೊಡುತ್ತೀರಿ ಎಂದು ನಮಗೆ ಗೊತ್ತಿದೆ. ನಮ್ಮನ್ನು ನೀವು ತಬ್ಬಲಿಗಳಾಗಿ ಬಿಟ್ಟು ಹೋಗುವುದಿಲ್ಲವೆಂದು ಗೊತ್ತಿದೆ. ನಮಗೆ ಬೇಕಾದ ವ್ಯವಸ್ಥೆ ಮಾಡುವಿರೆಂಬ ವಿಶ್ವಾಸವೂ ಇದೆ. ಆದ್ದರಿಂದ ದಯಮಾಡಿ ಎರಡೂ ಮನೆಯ ಸಮಿತಿಯೊಂದು

ಆಗುವುದರಿಂದ ಈ ಸಮಸ್ಯೆಯು ಬಗೆಹರಿಯಬಹುದು. ಇಲ್ಲ ಅಂದರೆ ಇನ್ನೊಂದು ಸಲಹೆಯನ್ನು ಕೊಟ್ಟಿದ್ದೆ, ತಾವು ಕೇಳಿರಬಹುದು. ನನಗೆ ಗೊತ್ತಿದೆ ಆತ್ಮಸಾಕ್ಷಿಗೆ ಅನುಗುಣವಾಗಿ ಈಗ ಆಗಿರುವ ಅನ್ಯಾಯಕ್ಕೆ ಕಳಕಳಿ ಇರುವಂತಹ ನನ್ನ ಆತ್ಮೀಯ ಸ್ನೇಹಿತರು ಜನತಾದಳದೊಳಗೆ ಇದ್ದಾರೆ, ಆ ಶಾಸಕರು ಅಲ್ಲಿದ್ದಾರೆ ಎಂಬುದರ ಬಗ್ಗೆ ನನಗೆ ವಿಶ್ವಾಸವಿದೆ. ನಿಮಗೆ ಈಗಾಗಲೇ ಮನವರಿಕೆಯಾಗಿದೆ ಎಂದು ನಾನು ಅಂದುಕೊಂಡಿದ್ದೇನೆ. ಆದ್ದರಿಂದ ನಿಲುವಳಿ ಸೂಚನೆ ಮೂಲಕ ಪೂರ್ಣ ಚರ್ಚೆ ಮಾಡಲು ಒಪ್ಪಿಗೆ ಕೊಟ್ಟು ಅವಕಾಶ ಮಾಡಿಕೊಡಿ. ಓಟ್ ಆಗುವಂಥ ಕಾಲದಲ್ಲಿ ಬಹುಶಃ ಇವೊತ್ತು ನಾಳೆಯೋ ಸಿಂಧ್ಯಾರವರ ರಾಜೀನಾಮೆಯನ್ನು ಕೇಳಿದ್ದೇವೆ... ಬಹುಶಃ ನೀವೆಲ್ಲರೂ ಮನೆಗೆ ಹೋಗುವ ಪರಿಸ್ಥಿತಿಯು ಬರಬಹುದು.... ನಿಲುವಳಿ ಸೂಚನೆ ಅಂದರೆ ಇದನ್ನೇನೂ ತಮಾಷೆಗಾಗಿ ಮಾಡಿಲ್ಲ. ಮೊದಲ ಬಾರಿಗೆ ಏನೇನೂ ವ್ಯತ್ಯಾಸಗಳಿದ್ದವರೆಲ್ಲಾ ಒಂದಾಗಿ ಜನರ ಹಿತದೃಷ್ಟಿಯಿಂದ ಈ ನಿಲುವಳಿ ಸೂಚನೆಯನ್ನ ನಾವು ಮಂಡನೆ ಮಾಡಿದ್ದೇವೆ. ನಿಮಗೆ ಆತ್ಮಸಾಕ್ಷಿ ಎನ್ನುವಂಥಾದ್ದು ಇದ್ದರೆ ಓಟ ಮಾಡುವಂಥ ಕಾಲದಲ್ಲಿ ನೀವೆಲ್ಲರೂ ಅಲ್ಲೇ ಇದ್ದು ನಮ್ಮ ಪರವಾಗಿ ಕೈ ಎತ್ತಿ ಈ ಕೆಟ್ಟ ಸರಕಾರವನ್ನು ಕಿತ್ತು ಹಾಕಲು ಆ ಕಡೆಯಲ್ಲಿರುವ ತಾವುಗಳು ನಮ್ಮೊಂದಿಗೆ ಸಹಕರಿಸಬೇಕೆಂದು ಕೇಳಿಕೊಡು ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಊಟಕ್ಕೆ ವಿರಾಮ ಕೊಡುವುದಿಲ್ಲವೇ?

ಅಧ್ಯಕ್ಷರು : ಈ ಕುರಿತಾದ ತೀರ್ಮಾನವನ್ನು ನೀವೇ ಮಾಡಿದವರು ನಿನ್ನೆ. ನಾನೂ ಕೂಡ ಊಟಕ್ಕೆ ಹೋಗಿಲ್ಲ. ನಾನು ಡಾಕ್ಟರ್ ಹತ್ತಿರ ಹೋಗಿದ್ದೆ...

ಶ್ರೀ ವಾಟಾಳ್ ನಾಗರಾಜ್ : ತಾವುಗಳು ಎಲ್ಲಿ ಹೋಗಿದ್ದೀರಿ ಎಂದು ನಾನು ಪ್ರಶ್ನೆ ಮಾಡುತ್ತಾ ಇಲ್ಲ

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈ ಕಡೆಯಿರುವಂಥ ಸದಸ್ಯರು ಬರುವ ದಿನಗಳಲ್ಲಿ ಅನೇಕ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ. ದಯಮಾಡಿ ಸಾಯಂಕಾಲ ತಡ ಮಾಡಿದರೆ ನಮ್ಮ ಪತ್ರಿಕಾ ಸ್ನೇಹಿತರಿಗೆ ತೊಂದರೆಯಾಗುತ್ತದೆ. ನಾವು ಈಗಾಗಲೇ ಬಿಎಸಿ ಯಲ್ಲಿ ತೀರ್ಮಾನ ಮಾಡಿದ್ದೇವೆ. 10 ಗಂಟೆ ಇಂದ 6-30ರ ವರೆಗೂ ಪ್ರತಿನಿತ್ಯವೂ ಕುಳಿತುಕೊಳ್ಳಬೇಕು. ಊಟಕ್ಕೆ ಬೇಕಾದರೆ ಸದಸ್ಯರು ಹೋಗಿ, ಬಂದು ಮಾಡಬಹುದು. ಬಿಎಸಿ ಯಲ್ಲಿ ಏನು ತೀರ್ಮಾನವಾಗಿದೆ ಅದರ ಪ್ರಕಾರ ತಾವು ಸಹಕಾರ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ನಾನು ಸಂಪೂರ್ಣವಾಗಿ ತಮ್ಮ ಮಾತನ್ನು ಅನುಮೋದನೆ ಮಾಡುತ್ತೇನೆ. ಹಾಗೆಯೇ ಅದರಂತೆ ನಡೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಒಂದು ಮನವಿ.

ಶ್ರೀ ಎಸ್. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಒಂದು ಮಾತನ್ನು ಹೇಳಿದರು. ಅವರು ಒಂದು ಆಸ್ಪರ್ಶನನ್ನೂ ಚೇಯರ್ ಮೇಲೆ ಹಾಕಿದ್ದಾರೆಂದು ಅನ್ನಿಸುತ್ತಿದೆ. ಅದು ಕಡತದಲ್ಲಿ ಹೋಗಬಾರದು

ಏಕೆಂದರೆ ಅವರು ಅಧ್ಯಕ್ಷರು ಎಲ್ಲಿ ಹೋಗಿದ್ದಾರೆ ಎನ್ನುವುದನ್ನು ನಾನು ತನಿಖೆ ಮಾಡುವುದಿಲ್ಲ ಎಂಬ ರೀತಿಯಲ್ಲಿ ಹೇಳಿದರು.

ಅಧ್ಯಕ್ಷರು : ಅದೇನೂ ಇಲ್ಲ ಬಿಡಿ. ನನ್ನ ಮೇಲೆ ಆ ತರಹದ ಅನುಮಾನ ಅವರಿಗೆ ಯಾರಿಗೂ ಇಲ್ಲ. ತೀರಾ ಮಡಿವಂತಿಕೆ ಏಕೆ? ಬಿಡಿ.. ನಿಮಗೆ ಏನಾದರೂ ಇದ್ದರೆ ಬನ್ನಿ, ಆ ಮೇಲೆ ಪರಿಹಾರದ ಮಾಡಿಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಆಕಸ್ಮಾತ್ ನಾನು ನಿಮ್ಮ ಮೇಲೆ ಕೆಟ್ಟ ಮಾತನ್ನು ಹೇಳಿದರೂ ಯಾರೂ ಅದನ್ನು ನಂಬುವುದಿಲ್ಲ. ಅವರು ಏಕೋ ಸುಮ್ಮನೇ ಇಲ್ಲದೇ ಇದ್ದುದನ್ನು ಉಪಯೋಗಿಸಿಕೊಂಡು ಮಾತನಾಡುತ್ತಾ ಇದ್ದಾರೆ. ಅದು ಸರಿಯಲ್ಲ. ಒಂದು ಮನವಿ ಏನೆಂದರೆ, ನಿನ್ನೆ ನಾವು ಈ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದೇವೆ. ಯಡಿಯೂರಪ್ಪನವರು ತೀರ್ಮಾನಕ್ಕೆ ಬದ್ಧರೆಂದು ಹೇಳುತ್ತಾರೆ, ಅದರ ಬಗ್ಗೆ ನಮ್ಮದೇನೂ ತಕರಾರು ಇಲ್ಲ.

ಅಧ್ಯಕ್ಷರು : ಈಗ ಮೊದಲು ಬಸ್‌ನ ವಿಚಾರಕ್ಕೆ ಬಂದುಬಿಡಿ. ಪ್ರಯಾಣವಾದ ಮೇಲೆ ಊಟವಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ವಾಟಾಳ್‌ರವರು ಆಗಲೇ ಹೋಗಿ ಊಟ ಮಾಡಿಕೊಂಡು ಬಂದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅವರು ಇದೇ ತರಹ ಎಲ್ಲರ ಮೇಲೂ ಆಪಾದನೆ ಮಾಡಿಕೊಂಡು ಬರುತ್ತಾರೆ. ಬಿಜೆಪಿಯವರು ಇದೇ ರೀತಿಯಲ್ಲಿ ಆಪಾದನೆ ಮಾಡುತ್ತಾ ಇರುತ್ತಾರೆ.

ಶ್ರೀ ಕೆ.ಎಸ್.ಈಶ್ವರಪ್ಪ : ಬಿಜೆಪಿ ಯವರು ಪ್ರಾಮಾಣಿಕವಾಗಿ ಹೋರಾಟವನ್ನು ಮಾಡಿಕೊಂಡು ಬಂದಿರುವುದು ಅವರಿಗೂ ಗೊತ್ತು.

ಅಧ್ಯಕ್ಷರು : ಈಗ ನೀವು ಎಲ್ಲರೂ ಒಟ್ಟಾಗಿ ನಿಲುವಳಿ ಸೂಚನೆಯನ್ನು ತಂದಿದ್ದೀರಿ. ಹಾಗಾಗಿ ಅದನ್ನೆಲ್ಲಾ ಪ್ರಸ್ತಾಪ ಮಾಡುವ ಹಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನನ್ನ ಅಭ್ಯಂತರವೇನೂ ಇಲ್ಲ. ಆದರೆ ಅನೇಕ ಜನರು ನೀವೇನು ಹೊಸ ರೂಲ್ಸ್ ಮಾಡಿದ್ದೀರಾ ಎಂದು ಕೇಳುತ್ತಾರೆ. ಪರಿಸ್ಥಿತಿಯೂ ಕೂಡ ಸ್ವಲ್ಪ ಹದಗೆಟ್ಟಿದೆಯಾದ ಕಾರಣ ಅವಕಾಶ ಕೊಟ್ಟರೆ ಸ್ವಲ್ಪ ಮುಂದಕ್ಕೆ ಹಾಕಬಹುದು. ಅರ್ಧಗಂಟೆಯಾದರೂ ಮುಂದಕ್ಕೆ ಹಾಕಿ.. ನಾನು ಮಾತನಾಡಲು ಸಿದ್ಧನಿದ್ದೇನೆ...

ಅಧ್ಯಕ್ಷರು : ಇಲ್ಲ, ತಾವು ಮುಂದುವರಿಸಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಬಿಎಸಿ ತೀರ್ಮಾನಕ್ಕೆ ಒಂದು ಮಹತ್ವ ಇದೆ. ಅಲ್ಲಿ ತೆಗೆದುಕೊಂಡಂಥ ತೀರ್ಮಾನವನ್ನು ಇಲ್ಲಿ ಕಟ್ಟುನಿಟ್ಟಾಗಿ ಜಾರಿಗೆ ಬರಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಯಡಿಯೂರಪ್ಪನವರ ಬಗ್ಗೆ ಕರುಣೆ ಇಲ್ಲದೇ ಇರುವ ಹೃದಯ ಅವರಿಗೆ ಇದೆ. ಅದು ನನಗೆ ಗೊತ್ತು. ಖರ್ಗೆಯವರು ಮೌನ ಸೂಚಿಸುತ್ತಿದ್ದಾರೆಂದರೆ ಆಗಬಹುದು ಎಂದು. ಪತ್ರಿಕಾಕರ್ತರಿಗೆ ಅರ್ಧಘಂಟೆ ಅವಕಾಶ ಕೊಟ್ಟರೆ ಊಡ ಮಾಡಲು ಅನುಕೂಲವಾಗುತ್ತದೆ.

ಅಧ್ಯಕ್ಷರು : ಪತ್ರಕರ್ತರಿಗೆ ಇದೇ ಊಟ. ನೀವು ಜೋರು ಜೋರಾಗಿ ಮಾತನಾಡಿದರೆ ಅವರಿಗೆ ಊಟಕ್ಕಿಂತ ಹೆಚ್ಚು ಸಂತೋಷವಾಗುತ್ತದೆ. ತಾವು ಮುಂದುವರೆಸಿ....

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಬರೆಯುವುದಕ್ಕೆ ಶಕ್ತಿ ಬೇಕಲ್ಲಾ ಸ್ವಾಮಿ. ಬಸ್ ದರ ಏರಿಕೆಯನ್ನು ಬಹುಶಃ ಯಾರೂ ಒಪ್ಪಲಾರರು. ಅದರಲ್ಲಿಯೂ ದರ ಏರಿಸಿದ ವಿಧಾನ ಏನಿದೆಯಲ್ಲಾ ಅದು ಅತ್ಯಂತ ಅನಾಗರೀಕವಾದಂಥ ವಿಧಾನ. ಅವರು ವೈಜ್ಞಾನಿಕವಾದಂಥ ವಿಧಾನವನ್ನು ಅನುಸರಿಸಿಲ್ಲ. ನಾವು ನಾಲ್ಕು ವರ್ಷಗಳಿಂದ ಬಸ್ ದರವನ್ನು ಏರಿಸಿಲ್ಲವೆಂದು ಒಂದೇ ಉತ್ತರವನ್ನು ಹೇಳುತ್ತಿದ್ದಾರೆ. ಆ ಕಾರಣಕ್ಕಾಗಿ ಬಸ್ ದರವನ್ನು ಏರಿಸುತ್ತಿದ್ದೇವೆಂದು ಹೇಳುತ್ತಿದ್ದಾರೆ. ಇದು ಸರಿಯಾದುದಲ್ಲ. ಏಕಾಏಕಿ ಬಸ್‌ದರವನ್ನು ಏರಿಸ ಬೇಕಾದರೆ ಶಾಸನಸಭೆಯು ನಡೆಯುತ್ತಾ ಇದ್ದಂಥ ಸಂದರ್ಭದಲ್ಲಿ ಶಾಸನಸಭೆಗೆ ಮನವರಿಕೆ ಮಾಡಬಹುದಾಗಿತ್ತು. ಇವೊತ್ತು ನಾವೇನು ಚರ್ಚೆ ಮಾಡುತ್ತಿದ್ದೇವೆ, ಸರಕಾರದವರು ಉತ್ತರಿಸಲು ಏನು ತಯಾರಾಗಿದ್ದಾರೆ ಅದನ್ನು ಇಲ್ಲಿ ಮಂಡಿಸಬಹುದಾಗಿತ್ತು. ಈ ಕಾರಣಗಳಿಂದಾಗಿ ಅನಿವಾರ್ಯವಾಗಿ ನಾವು ಬಸ್ ದರವನ್ನು ಏರಿಸುತ್ತಾ ಇದ್ದೇವೆಂದು ಹೇಳಬಹುದಾಗಿತ್ತು. ನೀವು ಆ ನೀತಿಯನ್ನು ಅನುಸರಿಸದೆ ಶಾಸನಸಭೆಗೆ ಅಪಚಾರವನ್ನು ಮಾಡಿದ್ದೀರಿ, ಶಾಸಕರಿಗೆ ಅಪಚಾರ ಮಾಡಿದ್ದೀರಿ. ಒಂದು ರೀತಿಯಲ್ಲಿ ನಿಲುವಳಿ ಸೂಚನೆಗಿಂತಲೂ ಹೆಚ್ಚಾಗಿ ಹಕ್ಕುಚ್ಯುತಿಯೂ ಆಗುತ್ತದೆ. ಮಾನ್ಯ ಸಾರಿಗೆ ಮಂತ್ರಿಗಳ ಮೇಲೆ ಹಕ್ಕುಚ್ಯುತಿಯನ್ನು ತಂದು, ಅದರ ನಿರ್ಣಯವನ್ನು ಮಂಡಿಸಿ, ಸಾರಿಗೆ ಸಚಿವರಿಂದ ಸ್ಪಷ್ಟವಾಗಿ ರಾಜೀನಾಮೆಯನ್ನು ಕೊಡಿ ಎಂದು ಇಡೀ ಸದನ ಕೇಳಬೇಕಾಗುತ್ತದೆ. ಆ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಈಗ ನಮ್ಮ ಮುಂದೆ ಇರತಕ್ಕಂತಹ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ದಿವಾಳಿಯಾಗಿದೆ ಸಾರಿಗೆ ಸಂಸ್ಥೆ ಒಂದು ಕಡೆ ಸಾರಿಗೆ ಸಂಸ್ಥೆಯನ್ನು ಹೊತ್ತಿರತಕ್ಕಂತಹ ಸಚಿವರು ಒಂದು ಕಡೆ ಸಾರಿಗೆ ಸಂಸ್ಥೆಯ ಕಾರ್ಮಿಕ ವರ್ಗ ಒಂದು ಕಡೆ. ಈ ಸಂಸ್ಥೆಗೆ ತಗಲಿರುವ ರೋಗ ಒಂದು ಕಡೆ. ಯಾವ ವೈದ್ಯರೂ ಸಹ ವಾಸಿ ಮಾಡದೇ ಇರತಕ್ಕಂತಹ ಬಹಳ ಕೆಟ್ಟ ರೋಗ ಈ ಸಂಸ್ಥೆಗೆ ತಗುಲಿದೆ. ಇವತ್ತು ಇದನ್ನು ಸರಿಪಡಿಸಬೇಕಾದರೆ ಜವಾಬ್ದಾರಿಯುತವಾದಂತಹ ಸರಕಾರ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಪ್ರಯತ್ನ ಎಂದರೆ ಬಸ್ ದರವನ್ನು ಏರಿಸುವುದು ಅಲ್ಲ. ತಮಗೆ ಗೊತ್ತಿರುವ ಹಾಗ ಕಾರ್ಮಿಕ ವರ್ಗಕ್ಕೂ ಸಚಿವರಿಗೂ ಬಹಳ ಅಂತರ ಇದೆ. ಈ ಅಂತರವನ್ನು ಸರಿಪಡಿಸತಕ್ಕಂತಹ ವ್ಯವಸ್ಥೆ ಸರಕಾರದಲ್ಲಿ ಇಲ್ಲ. ಕಾರ್ಮಿಕ ವರ್ಗ ಚಳುವಳಿ ಮಾಡುತ್ತಾರೆ ನಿಜ, ಹೋರಾಟ ಮಾಡುತ್ತೇವೆ ನಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಹೇಳುತ್ತೇವೆ ಸರಕಾರವನ್ನು ಹಿಗ್ಗಾಮುಗ್ಗಾ ಬಯ್ಯುತ್ತೇವೆ. ಕೆಲವು ಪದಗಳನ್ನು ವಿಚಿತ್ರವಾದ ರೂಪದಲ್ಲಿ ಬಳಸಿ ಬಯ್ಯುತ್ತೇವೆ. ಆದರೆ ಸರಕಾರ ನಡೆಸತಕ್ಕಂತಹವರು ಅದನ್ನು ವೈಯಕ್ತಿಕವಾಗಿ ಪರಿಗಣನೆ

ಮಾಡದೆ ಕಾರ್ಮಿಕ ಮುಖಂಡರುಗಳನ್ನು ಕರೆಸಿ ಅವರ ಬೇಡಿಕೆಗಳೇನು ಎನ್ನುವುದನ್ನು ಮಾತುಕತೆಯಾಡುವ ಮೂಲಕ ಆ ಸೌಜನ್ಯವನ್ನೂ ಸರಕಾರ ತೋರಿಸಿಲ್ಲ. ನಾನು ಒಂದು ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ಕಾರ್ಮಿಕರ ಸಂಘಟನೆ ಮತ್ತು ಸಚಿವರು ಕುಳಿತು ಸಮಾಲೋಚನೆ ಮಾಡಬೇಕಾಗುತ್ತದೆ. ಯಾವುದೇ ಸಂಸ್ಥೆಯಲ್ಲಿ ಇದ್ದದೇ ಇರತಕ್ಕಂತಹ ಪರಿಸ್ಥಿತಿ ಏನು ನಿರ್ಮಾಣವಾಗಿದೆ ಇದನ್ನು ಸರಿಪಡಿಸುವುದಕ್ಕೆ ಕೂಡಲೇ ಮಾನ್ಯ ಮುಖ್ಯಮಂತ್ರಿಗಳು ತಾವು ಮಧ್ಯಸ್ಥಿಕೆ ವಹಿಸಿ ಕಾರ್ಮಿಕರ ಮುಖಂಡರುಗಳನ್ನು ಕರೆಸಿ ಒಂದು ಕಡೆ ಸಾರಿಗೆ ಸಚಿವರನ್ನು ಕೂರಿಸಿಕೊಂಡು ಆ ಸಂಸ್ಥೆಯ ಪರಿಸ್ಥಿತಿಯನ್ನು ಸರಿಪಡಿಸಬೇಕಾದದ್ದು ಅವರ ಆದ್ಯ ಕರ್ತವ್ಯ. ಅದನ್ನು ಬಿಟ್ಟು ಸಾರಿಗೆ ಸಚಿವರು ಕಾರ್ಮಿಕರೆಲ್ಲಾ ಒಂದು ರೀತಿಯ ಭಯೋತ್ಪಾದಕರು ಅವರಿಂದಾಗಿ ನನಗೆ ಭಯ ಒದಗುತ್ತಿದೆ. ನನಗೆ ರಕ್ಷಣೆ ಕೊಡಬೇಕೆನ್ನುವ ಧಾಟಿಯನ್ನು ಅವರು ಬಿಡಬೇಕು. ಕಾರ್ಮಿಕರು ಬೇರೆಯಲ್ಲ, ಸಾರಿಗೆ ಸಂಸ್ಥೆ ಬೇರೆಯಲ್ಲ. ಸರಕಾರ ಬೇರೆಯಲ್ಲ. ಸರಕಾರ ಕುಳಿತು ಮಾತನಾಡುವ ವ್ಯವಸ್ಥೆಯಲ್ಲಿ ಅವರು ಹೋಗಬೇಕಾಗಿತ್ತು ಸಾರಿಗೆ ಸಂಸ್ಥೆಯ ಕಾರ್ಮಿಕ ವರ್ಗ ಒಂದು ಉನ್ನತವಾದಂತಹ ಸಂಸ್ಥೆಯನ್ನು ಅಲ್ಲಿ ಕಟ್ಟಿದ್ದಾರೆ ಇವತ್ತು ನಾನು ಅನಂತ ಸುಬ್ಬರಾವ್ ಅವರನ್ನು ಮೆಚ್ಚುತ್ತೇನೆ. ಅವರ ವಾದವೇನೇ ಇರಬಹುದು ಅವರ ಬಗ್ಗೆ ಟೀಕೆಗಳು ಏನೇ ಇರಬಹುದು ಸಂಘಟನೆ ಮಾಡಿದ ಶಕ್ತಿ ಇದೆ. ಇವತ್ತು ಸಿ ಪಿ ಐ ನವರು ಮಾಡಿದ್ದಾರೆ ಅಲ್ಲಿ ಅದನ್ನು ಬೆಂಬಲಿಸಿದ್ದಾರೆ ಅಲ್ಲಿ ಅನ್ಯಾಯ ನಡೆದಿದೆ ಎನ್ನುವುದನ್ನು ಸಿಪಿಎಂ ನವರು ಬೆಂಬಲಿಸಿದ್ದಾರೆ. ಹಿಂದೆ ಅವರ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಮಾನ್ಯ ಎಂ. ಎಸ್. ಕೃಷ್ಣನ್‌ರವರು, ಸೂರ್ಯನಾರಾಯಣರಾವ್‌ರವರು ಇದ್ದರು. ಎಡಪಂಥೀಯ ಸದಸ್ಯ ಶ್ರೀರಾಮರೆಡ್ಡಿಯವರು ಈಗ ಇಲ್ಲಿ ಇದ್ದಾರೆ. ಆ ಜನ ಬೆವರನ್ನು ಸುರಿಸಿದ್ದಾರೆ. ತ್ಯಾಗ ಮಾಡಿದ್ದಾರೆ ದುಡಿದಿದ್ದಾರೆ. ಸಭೆ ಸಮಾರಂಭಗಳಲ್ಲಿ ಸರಕಾರವನ್ನು ಕುರಿತು ಮಾತನಾಡುವಾಗ ಮಡಿವಂತಿಕೆ ಬಿಟ್ಟು ಗ್ರಾಮ್ಯವಾಗಿ ಮಂತ್ರಿಗಳನ್ನು ಬೈದಿರಬಹುದು. ಅದನ್ನೇ ದೊಡ್ಡದನ್ನಾಗಿ ಮಾಡಿ ಇಡೀ ಸಂಸ್ಥೆಯನ್ನು ನಷ್ಟದ ಅಂಚಿಗೆ ತೆಗೆದುಕೊಂಡು ಹೋಗುವುದು ಸರಿಯಾದ ಮಾರ್ಗವಲ್ಲ. ಸಾರಿಗೆ ಸಂಸ್ಥೆಯ ನೌಕರ ವರ್ಗವನ್ನು ನೌಕರರ ಶಕ್ತಿಯನ್ನು ಮೊಟಕು ಮಾಡಬೇಕೆಂದು ಮುಟ್ಟುಗೋಲು ಮಾಡಬೇಕೆಂದು 4 ವಿಭಾಗವನ್ನು ಮಾಡುವುದಕ್ಕೆ ಹೊರಟಿದ್ದಾರೆ ಮತ್ತು ಇದರ ಜೊತೆಗೆ ಖಾಸಗೀಕರಣಕ್ಕೆ ಒಲವನ್ನು ತೋರಿಸುತ್ತಿದ್ದಾರೆ. ಇದು ಒಳ್ಳೆಯ ನೀತಿಯಲ್ಲ. ಇದು ಅತ್ಯಂತ ಅಪಾಯಕಾರಿ ಬೆಳವಣಿಗೆ. ಈ ಅಪಾಯಕಾರಿ ಬೆಳವಣಿಗೆಗೆ ರಾಜ್ಯ ಸರಕಾರ ಸಾರಿಗೆ ಸಚಿವರು ಅದಕ್ಕೆ ಒಂದು ಅನುಕೂಲವನ್ನು ಮಾಡಬಾರದು ಎನ್ನುವುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಮಾನ್ಯ ನಾಗೇಗೌಡರೇ ಒಂದು ಮಾತನ್ನು ನಾನು ಅತ್ಯಂತ ನೋವಿನಿಂದ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಯಾರೂ ಚಳುವಳಿ ಮಾಡಿಲ್ಲ? ನಮ್ಮ ರಾಜ್ಯದಲ್ಲಿ ನಡೆಯತಕ್ಕಂತಹ ಚಳುವಳಿಗಳ ವಿಧಾನಗಳೇ ಬೇರೆ. ಆ ಚಳುವಳಿಯ ಪ್ರತಿಫಲವನ್ನು ಚುನಾವಣಾ ಸಂದರ್ಭದಲ್ಲಿ ಅವರು ತೋರಿಸುತ್ತಾರೆ. ಆ ಮೊದಲೇ ಪ್ರಚಾರ ಮಾಡಿಕೊಂಡು ಬೀದಿಗೆ ಇಳಿದು ಸಾವಿರಾರು ಬಸ್‌ಗಳನ್ನು ಸುಟ್ಟು ರಸ್ತೆ ನಿಲ್ಲಿಸತಕ್ಕಂತಹ ಪರಿಸ್ಥಿತಿಗೆ ಅವರು ಹೋಗುವುದಿಲ್ಲ. ಚುನಾವಣಾ ಸಂದರ್ಭದಲ್ಲಿ ಕರ್ನಾಟಕ ರಾಜ್ಯದ ಜನ ತಮಗೆ ಆಗಿರತಕ್ಕಂತಹ ಅನ್ಯಾಯಕ್ಕೆ ಪ್ರತಿಕ್ರಿಯೆ ತೋರಿಸುತ್ತಾರೆ. ಇವತ್ತು ಮೌನವಾಗಿ ಯಾತನೆ ಪಡುತ್ತಿದ್ದಾರೆ. ಬಸ್ ದರ ಏರಿಕೆಯನ್ನು ಒಂದು

ರೀತಿಯಲ್ಲಿ ಮೌನ ಯಾತನೆಯನ್ನಾಗಿ ಅನುಭವಿಸುತ್ತಿದ್ದಾರೆ. ಈ ಸಂಸ್ಥೆಯನ್ನು ಸರಿಪಡಿಸಿದ್ದರೆ ಅಲ್ಲಿರತಕ್ಕಂತಹ ಭ್ರಷ್ಟಾಚಾರವನ್ನು ತೆಗೆದಿದ್ದರೆ ಅಲ್ಲಿರತಕ್ಕಂತಹ ಅಧಿಕಾರಿಗಳ ಸಂಖ್ಯೆಯನ್ನು ಕನಿಷ್ಠ 50 ಪರ್ಸೆಂಟ್ ಕಡಿಮೆ ಮಾಡಬೇಕು. ಆ ಮೂಲಕ ಭ್ರಷ್ಟಾಚಾರವನ್ನು ತಪ್ಪಿಸಬೇಕು. ಕನಿಷ್ಟ 10 ವರ್ಷಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಎಷ್ಟು ಭ್ರಷ್ಟಾಚಾರ ಲೂಟಿಯಾಗಿದೆ ಎನ್ನುವುದನ್ನು ಸಮಗ್ರವಾಗಿ ತನಿಖೆ ಮಾಡಿದರೆ ಎಷ್ಟು ದಿವಾಳಿಯಾಗಿದೆ ಎನ್ನುವುದು ಹೊರಗೆ ಬರುತ್ತದೆ. ಈ ತನಿಖೆಯಾದರೆ ಯಾವ್ಯಾವ ಕಾಲದಲ್ಲಿ ಅನ್ಯಾಯ ನಡೆದಿದೆ ಎಷ್ಟೆಷ್ಟು ಭ್ರಷ್ಟಾಚಾರ ಲೂಟಿಯಾಗಿದೆ ಎಷ್ಟು ದಿವಾಳಿಯಾಗಿದೆ ಎನ್ನುವುದು ಹೊರಗಡೆ ಬರುತ್ತದೆ. ಸರಕಾರ ನೇರವಾಗಿ ಈ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. 10,00 ಬಸ್‌ಗಳು ಲೆಕ್ಕಕ್ಕೆ, ಅದರಲ್ಲಿ 4000 ಬಸ್‌ಗಳು ಕೆಟ್ಟು ನಿಂತಿದೆ. ಇದುವರೆಗೆ ಆ 4000 ಬಸ್‌ಗಳನ್ನು ರಿಪೇರಿ ಮಾಡತಕ್ಕಂತಹ ವ್ಯವಧಾನ ಸರಕಾರಕ್ಕೆ ಇವತ್ತು ಇಲ್ಲ. ಅದರ ಬಗ್ಗೆ ಚಿಂತನೆ ಸಹ ಇಲ್ಲ. ಒಂದು ಕಡೆ ಬ್ರೇಕ್ ಹಾಳಾದ ಬಸ್‌ಗಳು ಮತ್ತೊಂದು ಕಡೆ ಬೇಜವಾಬ್ದಾರಿಯುತವಾದ ಬಸ್‌ಗಳು ಮತ್ತೊಂದು ಕಡೆ ಹೊಗೆ ಉಗುಳಿ ಜನರನ್ನು ಕೊಲ್ಲುವ ಬಸ್‌ಗಳು ಇವೆ. ಅಪಘಾತದಲ್ಲಿ ಮೊದಲನೇ ಸ್ಥಾನ ಪಡೆದಿರುವುದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ. ಈ ವ್ಯವಸ್ಥೆಯನ್ನು ಸರಿಪಡಿಸುವ ಬದಲು ಜನರ ಮೇಲೆ ತೆರಿಗೆಯನ್ನು ಹಾಕಿರುವುದು ಸರಿಯಲ್ಲ. ಮಾನ್ಯ ಸಿಂಧ್ಯಾರವರು ಪ್ರಪ್ರಥಮವಾಗಿ ಸಾರಿಗೆ ಸಂಸ್ಥೆಯ ಸಚಿವರಾದಾಗ ಒಂದು ಒಳ್ಳೆಯ ರೀತಿಯಲ್ಲಿ ಸಾರಿಗೆ ಸಂಸ್ಥೆಯ ಮೇಲೆ ಅಪಾರವಾದ ನಂಬಿಕೆ ಗೌರವ ಸಾರಿಗೆ ಸಂಸ್ಥೆಯನ್ನು ಬೆಳೆಸುವ ಶಕ್ತಿ ಅವರಲ್ಲಿ ಇತ್ತು. ಈ ಕಡೆ ವಿರೋಧ ಪಕ್ಷದಲ್ಲಿದ್ದಾಗ ಉಪ ನಾಯಕರಾಗಿದ್ದಾಗ ಸಾರಿಗೆ ಸಂಸ್ಥೆಯನ್ನು ಸರಿಪಡಿಸಬೇಕೆಂಬ ಬಗ್ಗೆ ಒಂದು ದೊಡ್ಡ ಚರ್ಚೆ ಇಲ್ಲಿ ಆದಾಗ ಸಮಿತಿ ರಚನೆಯಾಯಿತು. ಆ ಸಮಿತಿಗೆ ನಾವೆಲ್ಲರೂ ಸೇರಿ ಅವರನ್ನೇ ಅಧ್ಯಕ್ಷರನ್ನಾಗಿ ಮಾಡಿದ್ದೆವು. ಅವತ್ತು ಅವರ ನಿಲುವು ಧೋರಣೆ ಬೇರೆ ಇತ್ತು. ಸಾರಿಗೆ ಸಂಸ್ಥೆಯ ಬಗ್ಗೆ ತಿಳಿಯಲು ಇಡೀ ದೇಶದ ಉದ್ದಗಲಕ್ಕೂ ಸುತ್ತಿ ಸಾರಿಗೆ ಸಂಸ್ಥೆಯಲ್ಲಿ ಹೊಸ ವಿಧಾನವನ್ನು ಬೆಳೆಸಬೇಕೆಂದು ಒಂದು ರಾಮನ ಅವತಾರವಾಗಿದ್ದರು. ಸಾರಿಗೆ ಸಂಸ್ಥೆಯ ಬಗ್ಗೆ ಅಷ್ಟು ಪ್ರಾಮಾಣಿಕ ಚಿಂತನೆ ಇದ್ದಂತಹ ವ್ಯಕ್ತಿ ಸಾರಿಗೆ ಸಚಿವರಾದ ನಂತರ ನಾನು ದುರ್ಯೋಧನ ಎಂದು ಹೇಳಿಕೊಳ್ಳುತ್ತಿದ್ದಾರೆಂದು ನಾನು ಕೇಳಿದ್ದೆ. ಈ ಮಾತನ್ನು ಅವರೇ ಹೇಳಿದ್ದಾರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ತಮ್ಮನ್ನು ಡಿಸ್ಟರ್ಬ್ ಮಾಡುತ್ತಿಲ್ಲ. ಚರ್ಚೆಗೆ ಲಘು ವಾತಾವರಣ ಬರಲಿ ಎಂದು ಹೇಳುತ್ತಿದ್ದೇನೆ. ಕಲಾ ಭವನದ ಕಾಲೇಜಿನ ವಿದ್ಯಾರ್ಥಿಗಳ ಫಂಕ್ಷನ್ ಇತ್ತು. ಕಲಾ ಕಾಲೇಜಿನ ವಿದ್ಯಾರ್ಥಿಗಳು ನಾನು ಬರುವುದಿಲ್ಲವೆಂದು ತಿಳಿದಿದ್ದರು. ನಾನು ನನ್ನ ಕ್ಷೇತ್ರದಲ್ಲಿ ಮದುವೆಗೆ ಹೋಗಿ ಬರುವುದು ತಡವಾಯಿತು. ನಾನು ಬರುವುದಿಲ್ಲವೆಂದು ಕಾರ್ಯಕ್ರಮ ಪ್ರಾರಂಭ ಮಾಡಬೇಕೆಂದು ಇದ್ದರು. ಆಗ ನಾನು ಹೋದೆ ಆಗ ಅಲ್ಲಿದ್ದ ನನಗೆ ಬೇಕಾಗಿರುವ ಕೆಲವು ಸ್ನೇಹಿತರುಗಳು ನೀವು ಎಲ್ಲಿ ಅಡಗಿ ಕುಳಿತಿದ್ದಿರಿ ಎಂದು ತಮಾಷೆ ಮಾಡಿದರು. ಬಸ್ ದರ ಜಾಸ್ತಿಯಾಗಿ ಮಾಡಿದ್ದೀರಿ ಎಂದು ತಾವು ಅಡಗಿ ಕುಳಿತಿದ್ದೀರಿ ಎಂದು ನಾವು ತಿಳಿದುಕೊಂಡೆವು ಎಂದು ನನ್ನ ಸ್ನೇಹಿತರು ಅನೌಪಚಾರಿಕವಾಗಿ ತಮಾಷೆ ಮಾಡಿದರು. ಆಗ ನಾನು ಅಲ್ಲಪ್ಪಾ ವೈಶಂಪಾಯನ ಸರೋವರದಲ್ಲಿ ಹೋಗಿ ದುರ್ಯೋಧನ ಅಡಗಿ ಕುಳಿತಿದ್ದನಲ್ಲಾ, ಹಾಗೆ; ಎಂದು ಹೇಳಿ. ಬಸ್ ದರ

ಏರಿಸಿರುವುದು ನಿಜ, ಮಾಡಿರುವುದು ನಿಜ, ಆದ್ದರಿಂದ ನಾನು ನೇರವಾಗಿ ಇಲ್ಲಿಯೇ ಇರುತ್ತೇನೆ ಎಂದು ಆ ಕಂಟೆಕ್ಸ್ಟ್‌ನಲ್ಲಿ ಹೇಳಿದ್ದೇನೆಯೇ ಹೊರತು ಬೇರೆ ಯಾವ ದೃಷ್ಟಿಯಿಂದ ಅಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ಹೇಳಿದ್ದುದು ಏನೆಂದರೆ ತಾವು ಬರುವುದಕ್ಕಿಂತ ಮುಂಚೆ ಹೇಳಿದ್ದೀರಿ, ಈ ಸಾರಿಗೆಸಂಸ್ಥೆಗೆ ರಾಮನ ಅವತಾರವನ್ನು ನೀವು ಮಾಡಿದ್ದೀರಿ. ನೀವು ಈಗ ದುರ್ಯೋಧನ ಎನ್ನುವುದಕ್ಕಿಂತಲೂ ಹೆಚ್ಚಾಗಿ ದುಶ್ಯಸನ ಪಾತ್ರವನ್ನು ಮಾಡಲು ಹೊರಟಿದ್ದಿರಿ. ತಾವು ನಾಗರಿಕರನ್ನು ದ್ರೌಪದಿಯನ್ನಾಗಿ ಮಾಡಿ ನಾಗರೀಕರ ಸೀರೆಯನ್ನು ಸೆಳೆಯತಕ್ಕಂಥ ದುಶ್ಯಾಸನನ ಸ್ಥಾನದಲ್ಲಿ ಈ ಬಸ್ ದರವನ್ನು ಏರಿಕೆ ಮಾಡಿದ್ದೀರಿ; ಅದು ನಿಮಗೆ ಬಹಳ ಶಾಪವಾಗಿ ತಟ್ಟುತ್ತದೆ ಎನ್ನತಕ್ಕಂಥ ಮಾತು. ಇದು ನನ್ನ ಸ್ಪಷ್ಟ ಅಭಿಪ್ರಾಯವೂ ಕೂಡ. ಇವೊತ್ತು, ಈ ಒಂದು ಪರಿಸ್ಥಿತಿಯಲ್ಲಿ ತಾವು ಇದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾವು ದುಶ್ಯಾಸನ ಎನ್ನುವುದು, ನೀವು ರಾವಣ ಎನ್ನುವುದು, ಅವರು ದುರ್ಯೋಧನ ಎನ್ನುವುದು, ಅದರ ಬದಲು ಯಾವುದಾದರೂ ಒಂದನ್ನು ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಅವರು ಮೊದಲು ಸಾರಿಗೆ ಸಚಿವರಾಗಿದ್ದಾಗ ರಾಮ; ಈಗ ಅವರು ಹೇಳಿಕೊಂಡ ಹಾಗೆ ದುರ್ಯೋಧನ, ನಾನು ಹೇಳುವುದು ಅದೂ ಅಲ್ಲ, ಅವರು ದುಶ್ಯಾಸನ ಒಂದು. ಅವರು ಬಸ್ ದರ ಏರಿಕೆ ಮಾಡಿ ದುಶ್ಯಾಸನ ಆದರು. ಯಾರಿಗೆ ? ಇಲ್ಲಿ ಇಡೀ ರಾಜ್ಯದ ಜನತೆ ದ್ರೌಪದಿ. ಆ ದ್ರೌಪದಿಯ ಸೀರೆಯನ್ನು ಸೆಳೆಯತಕ್ಕವನು ದುಶ್ಯಾಸನ. ಆ ಪಾತ್ರ ತಮಗೆ ಅತ್ಯಂತ ಅಪ್ಯಾಯಮಾನವಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಆ ದುಶ್ಯಾಸನನಿಗೆ ಏನು ಆಯಿತೋ ಅದು ನಿಮಗೆ ಆಗುವುದು ಬೇಡ ಎನ್ನುವುದು ನಮ್ಮ ಅಪೇಕ್ಷೆ. ಆದರೆ ಆಗಲೇ ಬೇಕು ಎಂದು ನೀವು ನಿರ್ಧಾರ ಮಾಡಿದರೆ ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ.

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಪ್ರತಿಭಟನೆಯ ನೆವದಲ್ಲಿ ಬಹಳ ಜನ ಉತ್ತರಕುಮಾರರು ಹುಟ್ಟಿದ್ದಾರೆ. ಆದ್ದರಿಂದ ಬಹಳ ಕಷ್ಟ. ಈ ಗ್ರಹಣ ಆಗುವಾಗ ವಾಪಸ್ಸು ಹೋದರು.

ಶ್ರೀ ವಾಟಾಳ್ ನಾಗರಾಜ್ : ಬೃಹನ್ನಳೆ ಹೆಂಗಸಲ್ಲ, ಬೃಹನ್ನಳೆಯ ವೇಷದಲ್ಲಿ ವೀರಾಧಿವೀರ ಅರ್ಜುನನಿದ್ದನು. ಯಾವ ಸಂದರ್ಭದಲ್ಲಿ ಬೃಹನ್ನಳೆ ಆಗಬೇಕು, ಹಾಗೆ ಬೃಹನ್ನಳೆ ಆಗುವುದು ಅರ್ಜುನನನ್ನು ಬಿಟ್ಟು ಬೇರೆಯಾರಿಂದಲೂ ಸಾಧ್ಯವಿಲ್ಲ.

ಅಧ್ಯಕ್ಷರು : ಉತ್ತರ ಕುಮಾರನ ಪ್ರಸ್ತಾಪ ಆದಮೇಲೆ ನಾವು ಈಗ ವಿರಾಟ-ಪರ್ವಕ್ಕೆ ಬಂದಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಈ ಉತ್ತರಕುಮಾರ ಯಾರು ಎನ್ನತಕ್ಕಂಥದ್ದು ಅಂದರೆ ಉತ್ತರಕುಮಾರ ಒಬ್ಬನೇ ಉತ್ತರಕುಮಾರನು ಸಹ ಅರ್ಜುನನ ಸಾರಥಿಯಾಗಿದ್ದ. ಅದನ್ನು ತಾವು ನೆನೆಯಬೇಕು. ಅರ್ಜುನನಂಥವನು ಉತ್ತರಕುಮಾರನನ್ನು ಸಾರಥಿಯಾಗಿ ಇಟ್ಟುಕೊಳ್ಳಬೇಕಾದರೆ ಅಂಥ ಒಂದು ಶಕ್ತಿ ಬೇಕಲ್ಲಾ? ಆದ್ದರಿಂದ ಪ್ರಕಾಶ್ ಅವರು ಬರಿ ಉತ್ತರಕುಮಾರ ಎಂದರೆ ಸಾಕಾಗುವುದಿಲ್ಲ.

ಅಧ್ಯಕ್ಷರು : ತಾವು ಎಂಥ ತಪ್ಪು ಮಾಡಿದ್ದಿರಿ ಎಂದರೆ ನೀವೇ ಉತ್ತರ ಕುಮಾರರು ಎಂದು ಒಪ್ಪಿಕೊಂಡಹಾಗೆ ಆಯಿತು. ಅವರು ಉತ್ತರಕುಮಾರ ಎಂದಾಗ ಅದನ್ನು ಸಮರ್ಥನೆ ಮಾಡಿ ನೀವು ಉತ್ತರಕುಮಾರರು ಎಂದು ಒಪ್ಪಿಕೊಂಡಹಾಗೆ ಆಯಿತು ನೀವು ಉತ್ತರ ಕುಮಾರರೇ? ಮತ್ತೆ ಆ ವಿಷಯವೇಕೆ?

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳುವುದು, ಅವರು ಯಾರನ್ನಾದರೂ ಕುರಿತು ಹೇಳಿರಲಿ, ಆದರೆ ಅದು ಅಪಮಾನವಾಗುವಂತೆ ಆಗಬಾರದು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ನಾನು ಎಂದಿಗೂ ಉತ್ತರ ಕುಮಾರನಾಗಲು ಸಾಧ್ಯವಿಲ್ಲ.

ಅಧ್ಯಕ್ಷರು : ಇದನ್ನು ನೀವು ನಿರಾಕರಣೆ ಮಾಡಲಿಲ್ಲ ಎಂಬ ಬೇಸರ ಆಯಿತು.

ಶ್ರೀ ವಾಟಾಳ್ ನಾಗರಾಜ್ : ಇಲ್ಲ ಇಲ್ಲ, ನಾನು ತಪ್ಪಾಗಿ ಭಾವಿಸಿದ್ದರೆ ತಾವುಗಳು ಸರಿಮಾಡಲು ಸೂಚಿಸುತ್ತೀರಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಅವರಿಗಾದರೆ ಸೂಕ್ತವಾದ ಸಮಯದಲ್ಲಿ ಉತ್ತರವನ್ನು ಸರಿಪಡಿಸಿಕೊಂಡು ಉತ್ತರ ಹೇಳುವಂತೆ ಅವರಿಗೆ ಸಹಾಯ ಮಾಡುತ್ತೀರೋ ಹಾಗೆಯೇ ನಮಗೂ ಸಹ ಸಹಾಯ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಇವೊತ್ತಿನ ಪರಿಸ್ಥಿತಿಯಲ್ಲಿ ನಮ್ಮ ಈ ಸಾರಿಗೆ ಸಂಸ್ಥೆಯ ಬಸ್ಸಿನಲ್ಲಿ "ಜೇಬುಗಳ್ಳರಿದ್ದಾರೆ ಎಚ್ಚರಿಕೆ" ಎಂದು ಹಾಕಿರುತ್ತೀರಿ. ಅಂದರೆ ಕಳ್ಳರಿದ್ದಾರೆ, ಎಚ್ಚರಿಕೆಯಿಂದ ಇರಿ ಎಂದು ಹಾಕುತ್ತೀರಿ. ಅಂದರೆ ನಾವೆಲ್ಲರೂ ಎಚ್ಚರದಿಂದ ಇರಬೇಕೆಂಬ ಅರ್ಥ. ಯಾರು ಜೇಬುಗಳ್ಳರಿದ್ದಾರೆ ಎಂದು ಹಾಕಿದ್ದಾರೋ ಅವರೇ ಕಳ್ಳರಾಗಿದ್ದಾರೆ. ಅವರೇ ಲೂಟಿ ಮಾಡುತ್ತಿದ್ದಾರೆ. ರಾತ್ರಿ 12 ಗಂಟೆಗೆ ಜನ ಮಲಗಿರುವ ಸಂದರ್ಭದಲ್ಲಿ ಈ ದೇಶಕ್ಕೆ 1947 ಆಗಸ್ಟ್ 15ಕ್ಕೆ ಸ್ವಾತಂತ್ರ್ಯ ಬಂದರೆ, ಇವರು ರಾತ್ರಿ 12 ಗಂಟೆಗೆ 12ನೇ ತಾರೀಖಿನಂದು ಜನರ ಮೇಲೆ ತೆರಿಗೆ ಹಾಕಿ ಅವರ ತಲೆಯನ್ನು ಬಡೆದಿದ್ದಾರೆ. ತಾವು ಏನು ಜೇಬುಗಳ್ಳರೆಂದು ಬರೆದಿದ್ದೀರಿ ಆ ನಾಮಫಲಕವನ್ನು ಬಸ್ಸಿನಿಂದ ತೆಗೆದು ನೀವೇ ಹಾಕಿಕೊಳ್ಳಿ. ಈ ಗೌರವದ ಪದವನ್ನು ನೀವೇ ಇಟ್ಟುಕೊಳ್ಳಿ. ಬೆಳಿಗ್ಗೆ ಎದ್ದ ತಕ್ಷಣ ಜನರ ಮೇಲೆ ಹೊರಲಾರದ ತೆರಿಗೆಯ ಹೊರೆಯನ್ನು ಹಾಕಿ ಬಹಿರಂಗವಾದ ಜೇಬುಗಳ್ಳತನ ಮಾಡುತ್ತಾ ಇದ್ದೀರಿ. ಇದು ಹಗಲ ದರೋಡೆಯಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : "ಜೇಬುಗಳ್ಳರಿದ್ದಾರೆ ಎಚ್ಚರಿಕೆ" ಎಂಬ ಪದ ಏನು ಇದೆ

ಆದರೆ ಅದರ ಅರ್ಥ ಏನೆಂದರೆ ಜೇಬುಗಳ್ಳರೇ ನಾವು ದರೋಡೆಕೋರರು ಬರುತ್ತಾ ಇದ್ದೇವೆ ಎಚ್ಚರಿಕೆ ಎಂದು ಹಾಕಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಾನು ತಮಗೆ ಹೇಳುತ್ತೇನೆ, ಇದು ಹಾಸ್ಯಾಸ್ಪದವಾಗಿರಬಹುದು. ಆದರೆ ವಾಸ್ತವ ಸ್ಥಿತಿ ಸ್ಪಷ್ಟ. ಜೇಬುಗಳ್ಳರ ಸ್ಥಾನದಲ್ಲಿ ತಾವು ಇದ್ದಿರಿ. ರಾಜ್ಯದ ಜನತೆಯ ಜೇಬುಗಳ್ಳುತನವನ್ನು ಅಧಿಕೃತವಾಗಿ ಕಳ್ಳತನ ಮಾಡತಕ್ಕಂಥ ಕೆಲಸಕ್ಕೆ ತಾವು ನೇರವಾಗಿ ಕೈಹಾಕಿದ್ದೀರಿ. ಇದು ನಿಮಗೆ ಒಪ್ಪಿಗೆಯಾಗಿದೆಯೇ? ತಾವು ಹೇಳುತ್ತೀರಿ, ತಾವು ನಾನಾ ರಾಜ್ಯದ್ಯಾದಂತ ಸುತ್ತಿ, ದೇಶದಾದ್ಯಂತ ಸುತ್ತಿ ನಿಮ್ಮ ಬಸ್ ದರವನ್ನು ಜಾಸ್ತಿ ಮಾಡತಕ್ಕಂಥದ್ದು ಒಂದೇ ಒಂದು ಕಾರಣವೇ? ಅದನ್ನು ಬಿಟ್ಟು ಬೇರೆ ದೃಷ್ಟಿಯಲ್ಲಿ ಹೋಗತಕ್ಕ ವ್ಯವಸ್ಥೆ ತಮಗೆ ಇರಲಿಲ್ಲವೇ? ಎನ್ನುವ ಮಾತನ್ನು ಹೇಳುತ್ತೇನೆ. ಈ ಸಂದರ್ಭದಲ್ಲಿ ನನ್ನಗನಿಸುತ್ತದೆ, ಚಳುವಳಿಗಳು ನಡೆಯುತ್ತವೆ, ಹೀಗೆ ನಡೆಯುವಾಗ ಮೊನ್ನೆ ಅಪರೂಪಕ್ಕೆ ಕಾಂಗ್ರೆಸ್‌ನವರು ಹೋರಾಟ ಮಾಡಿದ್ದರು. ಅವರು ಯಾವತ್ತೂ ಬೀದಿಗೆ ಇಳಿದಿರಲಿಲ್ಲ ಅದು ನನಗೆ ಸಂತೋಷವಾಯಿತು. ಈಗ ಅವರಿಗೆ ಲಾಠಿ ಚಾರ್ಜ್ ಎಂದರೆ ಏನು, ಟಿಯರ್ ಗ್ಯಾಸ್ ಎಂದರೆ ಏನು ಎನ್ನುವ ಅನುಭವವಾಯಿತು. ಆಗ ನನಗೆ ಸಂತೋಷವಾಯಿತು. ಖರ್ಗೆಯವರು ಏಟು ತಿಂದರು ಎಂದು ಸಂತೋಷವಾಗಲಿಲ್ಲ. ಆದರೆ ಅವರಿಗೆ ಚಳುವಳಿಯ ಅನುಭವವಾದದ್ದರಿಂದ ನನಗೆ ಸಂತೋಷವಾಯಿತು. ಒಂದು ಕಾಲದಲ್ಲಿ ಹೋರಾಟ ಅಂದರೆ ಕಾಂಗ್ರೆಸ್‌ನವರು ಬೀದಿಗೆ ಬರುತ್ತಿರಲಿಲ್ಲ. ಒಂದು ರೀತಿಯಾಗಿ ಸುಖದ ಸುಪತ್ತಿಗೆಯ ಮೇಲೆ ಕುಳಿತಿದ್ದೇವೆ ಎನ್ನುವ ಭಾವನೆ ಅವರಲ್ಲಿ ಇತ್ತು. ಮೊನ್ನೆ ಶ್ರೀ ಧರ್ಮಸಿಂಗ್ ಅವರು ಅಧ್ಯಕ್ಷರಾದ ಮೇಲೆ ಅವರಿಗೆ ಚಳುವಳಿ ಮಾಡಬೇಕು, ಚಳುವಳಿಯ ಮಾರ್ಗವನ್ನು ಅವರು ಕಮ್ಯುನಿಸ್ಟ್‌ರ ತರಹ, ಚಳುವಳಿಗಾರರ ತರಹ ಇವರೂ ಬೀದಿಗೆ ಬಂದರು. ಆದರೆ ಅಲ್ಲಿ ಬಂದಂಥಜನರು ಯಾರು? ಈ ರಾಜ್ಯದ ಗೃಹಮಂತ್ರಿಗಳಾಗಿದ್ದಂಥವರು, ಈ ರಾಜ್ಯದ ಮುಖಂಡರಾಗಿರುವಂಥವರಾದ ಶ್ರೀ ಖರ್ಗೆ,ರಾಮಲಿಂಗಾರೆಡ್ಡಿ ಶ್ರೀ ಧರ್ಮಸಿಂಗ್ ಶ್ರೀ ಚಂದ್ರಶೇಖರ್ ಮೂರ್ತಿ ಇವರುಗಳು ನಮ್ಮ ಪೋಲಿಸ್‌ರಿಗೆ ಯಾರ ಮುಖಗಳು ಎಂದು ಗೊತ್ತಾಗುವುದಿಲ್ಲವೆ? ಈ ರಾಜ್ಯದಲ್ಲಿ ಇದ್ದವರು. ಅದರಲ್ಲೂ ಶ್ರೀ ಜಾಫರ್ ಷರಿಫ್ ಅವರ ಮುಖವನ್ನು ನೋಡಿಯೇ ಇಲ್ಲವೆ? ಚಂದ್ರಶೇಖರ್‌ಮೂರ್ತಿ ಅವರು ಯಾರು? ಪಾರ್ಲಿಮೆಂಟ್ ಸದಸ್ಯರಾಗಿ, ಕೇಂದ್ರ ಸಚಿವರಾಗಿದ್ದಾಗ ಅವರ ಹಿಂದೆ-ಮುಂದೆ ವಿಮಾನ ನಿಲ್ದಾಣದಲ್ಲಿ ಓಡಾಡುತ್ತಿದ್ದ ಈ ಪೋಲಿಸರಿಗೆ ಈಗ ಅವರು ಯಾರು ಎಂದು ಯೋಚಿಸುವ ತಲೆಯೇ ಇಲ್ಲವೇ? ಇವತ ತಲೆ ಕೆಟ್ಟು ಹೋಗಿದೆಯೇ? ಏನು ಆಗಿದೆ ನಮ್ಮ ರಾಜ್ಯದ ಪೋಲಿಸರಿಗೆ? ಇವರ ಹಣೆಬರಹ ಅತ್ಯಂತ ಶೋಚನೀಯವಾಗಿದೆ.. ನಮ್ಮ ರಾಜ್ಯದಲ್ಲಿ ಎಂದೂ ಈ ರೀತಿಯ ಪೋಲಿಸ್ ಇರಲಿಲ್ಲ, ಅಲ್ಲಿ ಎಷ್ಟು ಜನ ಪೋಲಿಸರು ಬಂದಿದ್ದರು? ಗೊತ್ತೇ? ಸುಮಾರು ಹತ್ತುಸಾವಿರ ಜನ ಚಳುವಳಿಗಾರರು ಬಂದಿದ್ದರು ಅಂದುಕೊಳ್ಳೋಣ. ಕೆ.ಆರ್. ವೃತ್ತದಲ್ಲಿ ಈ ಕಬ್ಬಿಣದ ಸಲಾಕಿಗಳನ್ನು ಅಡ್ಡ ಇಟ್ಟಿದ್ದರು. ಅಂದರೆ ಏನೋ ಭಾರಿ ವಿಧಾನಸೌಧಕ್ಕೆ ಯಾರೋ ಬಾಂಬ್ ಇಡಬಹುದು, ಧಾಳಿ ಮಾಡಬಹುದು ಎನ್ನುವ ದೃಷ್ಟಿಯಲ್ಲಿ ಈ ವ್ಯವಸ್ಥೆ ಮಾಡಿದ್ದರು. ಮೆರವಣಿಗೆಗೆ ಎಷ್ಟು ಜನ ಪೋಲಿಸರು

ಬಂದಿದ್ದರು ಎಂದರೆ ಮಾನ್ಯ ಅಧ್ಯಕ್ಷರೇ, ಎರಡು ಸಾವಿರ ಪೋಲಿಸರು ಇದ್ದಿರಬಹುದೆಂದು ನನಗನ್ನಿಸುತ್ತದೆ. ಅದೂ ಅಲ್ಲದೆ ನೀರು ಹೊಡೆಯತಕ್ಕಂಥ ಜಲ ಯಂತ್ರ ತೆಗೆದುಕೊಂಡು ಬಂದು, ಅದಕ್ಕೆ ನೀರಿನ ಫಿರಂಗಿ ಎನ್ನುತ್ತಾರೆ. ಇದರ ಪ್ರಯೋಗ ಮಾಡಿಕೊಳ್ಳಲು ಈ ಚಳುವಳಿಯನ್ನು ಉಪಯೋಗಿಸಿಕೊಳ್ಳಬೇಕಾಗಿತ್ತೇ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಧರ್ಮಸಿಂಗ್‌ರು ಹೋಮ್ ಮಿನಿಷ್ಟರ್‌ರಾಗಿದ್ದಾಗ ಅದನ್ನು ತಂದರು.

ಶ್ರೀ ವಾಟಾಳ್ ನಾಗರಾಜ್ : ಧರ್ಮಸಿಂಗ್‌ರವರು ತಂದರು ನಿಜ ಆದರೆ ಅದರ ಪ್ರಯೋಜನ ಇಲ್ಲ ಎಂದು ಹಾಗೆಯೇ ಇಟ್ಟುಕೊಂಡರು. ಆದರೆ ಅದರ ಪ್ರಯೋಗವನ್ನು ಈಗ ಇವರ ಮೇಲೆ ಮಾಡುವುದೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದರ ಪ್ರಯೋಗ ಮೊದಲು ನಮ್ಮ ಮೇಲಾಗಿತ್ತು. ರಾಜಭವನದ ಹತ್ತಿರ.......

ಶ್ರೀ ವಾಟಾಳ್ ನಾಗರಾಜ್ : ರಾಜಭವನದ ಹತ್ತಿರ ಚಳುವಳಿಯಲ್ಲಿದ್ದ ಆ ಹೆಣ್ಣುಮಕ್ಕಳ ಮೇಲೆ ನೀರು ಹಾಕಿದರು ಎಲ್ಲಾ ನಿಜ. ಅವೊತ್ತು ನಡೆದಂತಹ ಕೃತ್ಯ, ಮಾಡಿದ ಲಾಠಿ ಚಾರ್ಜ್ ಸರಿಯೇ? ತಾವು ಗೃಹ ಮಂತ್ರಿಗಳಾಗಿದ್ದಿರಿ. ಇವತ್ತು ಯಾವ ಅಧಿಕಾರಿಗಳ ಮೇಲೆ ನೀವು ಏನು ಕ್ರಮ ತೆಗೆದುಕೊಂಡಿದ್ದಿರಿ? ಪೋಲಿಸ್ ಕಮಿಷನರ್‌ನ್ನು ಕರೆದು ಏಕೆ ಹೀಗೆ ಮಾಡಿದ್ದೀರಿ ಎಂದು ಕೇಳಿದ್ದೀರೋ? ನಮ್ಮ ಪೋಲಿಸ್ ಕಮಿಷನರ್ ಬಿಡಿ, ಏನು ಸಾರ್, ಹೇಗಿದ್ದರು, ಎಂಟು ಜನ ಬಂದರು, ಮೂರು ಜನ ಬಂದರು, ಒಂದು ರೀತಿಯ ಸ್ಟೈಲ್‌ನಲ್ಲಿ ಮಾತನಾಡಿಬಿಡುತ್ತಾರೆ. ಈಗ ನಮ್ಮ ಬೆಂಗಳೂರು ಸಿಟಿ ಪೋಲೀಸ್ ಕಮೀಷನರ್‌ನ್ನು ತಾವು ನೋಡಿದ್ದೀರಿ. ಅವರಿಗೆ ಏನು ಗೊತ್ತೇ ಆಗುವುದಿಲ್ಲ. ಯಾರು ಮಂತ್ರಿಗಳಾಗಿದ್ದರು? ಯಾರು ಹೋರಾಟ ಮಾಡಿದರು? ಯಾರು ಮುಖಂಡರು? ಯಾರು? ಅವೇನೂ ಗೊತ್ತಿಲ್ಲ. ಏನು ಪರಿಸ್ಥಿತಿ? ಇವತ್ತಿನ ಪರಿಸ್ಥಿತಿಯೇನು? ನಿಮಗೆ ಲಾ ಛಾರ್ಜ್ ಮಾಡುವ ಪರಿಸ್ಥಿತಿ ಏನು ನಿರ್ಮಾಣವಾಗಿತ್ತು? ಹೇಳಿ. ಯಾರಾದರೂ ಹೊಡೆದರೇ? ಖರ್ಗೆಯವರು ಕಲ್ಲು ಹೊಡೆಯುವುದಕ್ಕೆ ಹೋಗುತ್ತಾರೆಯೇ? ಧರ್ಮಸಿಂಗ್? ಆ ಹೆಣ್ಣು ಮಕ್ಕಳು. ಚಂದ್ರಶೇಖರ್‌ಮೂರ್ತಿ. ಸ್ವಾಮಿ ಆ ಚಂದ್ರಶೇಖರ್‌ಮೂರ್ತಿಗೆ ಹೊಡೆಯುತ್ತಿರುವುದು ನೋಡಿ. ಸುಮಾರು 15-20 ಜನ ಪೋಲೀಸರುಗಳ ಮಧ್ಯೆ ಚಂದ್ರಶೇಖರ್‌ಮೂರ್ತಿ. ಪೋಲೀಸ್‌ನವರಿಗೆ ಏನೆಂದರೆ ಎಲ್ಲರಿಗೂ ಒಂದೇ ಬಾಣ. ಅದಕ್ಕೆ ಬೇರೆ ವಿಧಿವಿಧಾನಗಳು ಇಲ್ಲವೇ? ನಮ್ಮ ಮುಖ್ಯಮಂತ್ರಿಗಳು ಹೇಳುತ್ತಾರೆ, ಏನೋ 17-19 ನೇ ಶತಮಾನದ್ದು, ರಾಜ-ರಾಜರು ಯುದ್ಧ ಮಾಡುತ್ತಿದ್ದರು. ಏನು ಇದು? ನನಗನಿಸುತ್ತದ, ಈ ದೇಶಕ್ಕೆ ಬೆಂಕಿ ಬಿದ್ದರೂ ನಮ್ಮ ಮುಖ್ಯಮಂತ್ರಿಗಳು ಆರಾಮವಾಗಿ ಕುಳಿತಿರುತ್ತಾರೆ. ಇದು ನನಗೆ ಅರ್ಥವಾಗಲಿಲ್ಲ. ಇದನ್ನು ಚಿಂತನೆ ಮಾಡಿ ಮೊದಲು ಈ ರಾಜ್ಯದಲ್ಲಿ ನನ್ನ ಸರ್ಕಾರ ಮಾಡಿರುವುದಕ್ಕೆ ಬಹಿರಂಗ ಕ್ಷಮಾಪಣೆ ಕೇಳುತ್ತೇನೆ ಎಂದು ಹೇಳಬೇಕಾಗಿತ್ತು. ಇದು ಮುಖ್ಯಮಂತ್ರಿಗಳ ಮೊದಲು ಕರ್ತವ್ಯ. ನನ್ನ ಪೋಲೀಸ್, ನನ್ನ ಇಲಾಖೆ, ಕಾಂಗ್ರೆಸ್ ಮುಖಂಡರು ಮೆರವಣಿಗೆ ಬಂದಾಗ ಅವರ ಮೇಲೆ ಕ್ಷಮಾಪಣೆ ಕೇಳುತ್ತೇನೆ ಎಂದು ಹೇಳಬೇಕಾಗಿತ್ತು. ಅದೆಲ್ಲಾ ಇತಿಹಾಸಕ್ಕೆ

ಹೊರಟುಹೋಯಿತು. ವರ್ಗಾವರ್ಗಿಯಲ್ಲಿ ಇಡೀ ರಾಜ್ಯ ಜನತೆಗೆ ಏನು ಅನ್ಯಾಯವಾಗಿದೆ ಎಂದು ಗೊತ್ತಾದಾಗ ಕೇಳಿದರು. ನನ್ನ ರಾಜ್ಯಸರ್ಕಾರ ತಪ್ಪುಮಾಡಿದೆ. ನನ್ನ ರಾಜ್ಯಸರ್ಕಾರ ಅನ್ಯಾಯಮಾಡಿದೆ. ಅದಕ್ಕೆ ನಾನು ಸಾರ್ವಜನಿಕವಾಗಿ ಕ್ಷಮಾಪಣೆಯನ್ನು ಕೇಳುತ್ತೇನೆ ಎಂದು ಕೇಳಿದಂಥ ವೀರೇಂದ್ರ ಪಾಟೀಲರನ್ನು ಇವತ್ತು ನಾವು ಇತಿಹಾಸದಲ್ಲಿ ನೆನೆಸಿಕೊಳ್ಳಬೇಕಾಗುತ್ತದೆ. ನೀವು ಹೇಳಬಹುದಾಗಿತ್ತು ಒಬ್ಬ ಅಧಿಕಾರಿಯನ್ನು ನೀವು ವಜಾ ಮಾಡಿದಿರೋ ಒಬ್ಬ ಅಧಿಕಾರಿಯನ್ನು ನೀವು ಸಸ್ಪೆಂಡ್ ಮಾಡಿದಿರಾ? ಏನು ಮಾಡಿದ್ದೀರಿ ಹೇಳಿ. ಅವತ್ತು ನಡೆದ ಘಟನೆಯ ಬಗ್ಗೆ ಸಮಗ್ರನ್ಯಾಯಾಂಗ ತನಿಖೆ ಆಗಬೇಕು. ಆಗಲೇಬೇಕು ಎಂದು ಇವತ್ತು ನಾನು ಹೇಳುತ್ತಿದ್ದೇನೆ. ಇದು ಸರಿಯಾದ ನೀತಿ ಅಲ್ಲ ಇವತ್ತು ನನಗೆ ನೋವಾಗಿದೆ. ಧರ್ಮಸಿಂಗ್‌ರವರು ಇವತ್ತು ಇಲ್ಲಿ ಕುಳಿತು ಕೊಳ್ಳುವುದಕ್ಕಾಗುವುದಿಲ್ಲ. ಅವರ ಕಾಲಿನ ಪರಿಸ್ಥಿತಿ ಆ ರೀತಿ ಇದೆ. ಆ ನೂಕಾಟದಲ್ಲಿ ಕೆಳಗೆ ಬಿದ್ದು ಕಾಲಿಗೆ ನೋವಾಗಿದೆ. ಅವರದು ಬಹಳ ದೊಡ್ಡ ವ್ಯಕ್ತಿತ್ವ. ತಮಗೆ ಗೊತ್ತಿದೆ. ನಾವೆಲ್ಲರೂ ಸದನದಲ್ಲಿ ಅವರ ಬಗ್ಗೆ ಅಪಾರವಾದ ಗೌರವವನ್ನು ಇಟ್ಟುಕೊಂಡಿರುವವರು. ಎಂದೂ ಅವರು ಗೃಹಮಂತ್ರಿಗಳಾಗಿದ್ದಾಗ ಇಂಥ ಪರಿಸ್ಥಿತಿ ನಡೆದಿದ್ದು ನಾನು ನೋಡಿರಲಿಲ್ಲ. ಮುಖಂಡರುಗಳ ಮೇಲೆ ಹೊಡೆಸಿರುವುದು ಏತಕ್ಕೆ? ಕಾರಣವೇನು? ಯಾವ ಕಾರಣ? ಇದು ಪೋಲೀಸ್ ಮಾಡುವ ವ್ಯವಸ್ಥೆ. ಅಲ್ಲಿ ಒಂದು ಕಡೆ ನಿರ್ಮಾಪಕನ ಕೊಲೆಯಾಗುತ್ತದೆ. ಯಾರೂ ಕೇಳುವವರು ಇಲ್ಲ. ರಕ್ಷಣೆ ಇಲ್ಲ, ಈ ರಾಜ್ಯದಲ್ಲಿ ಬೆಂಗಳೂರಿಗೆ ರಕ್ಷಣೆ ಇಲ್ಲ. ಮಾಜಿ ಮಂತ್ರಿ ಜೀವಿಜಿಯರವರ ಮೇಲೆ ಹೊಡೆಯುತ್ತಾರೆ. ಅಮಾಯಕರು, ಯಾರು ಅವರು? ಜೀವಿಜಿಯರವರು ಈ ರಾಜ್ಯದ ಒಬ್ಬ ಮಂತ್ರಿಯಾಗಿದ್ದವರು. ಮಂತ್ರಿಗಳಿಗೇ ರಕ್ಷಣೆ ಇಲ್ಲ. ನಿರ್ಮಾಪಕರಿಗೆ ರಕ್ಷಣೆ ಇಲ್ಲ. ಜನಸಾಮಾನ್ಯರಿಗೆ ರಕ್ಷಣೆ ಇಲ್ಲ. ಬಸ್ ದರ ಏರಿಕೆ ಮಾಡಿದ್ದು ಸರಿಯಲ್ಲ ಎಂದರೆ ಇವತ್ತು ನೀವು ಲಾಠಿ ಚಾರ್ಜ್ ಮಾಡುತ್ತೀರಿ. ಈ ಪರಿಸ್ಥಿತಿ ನಿರ್ಮಾಣವಾದರೆ ಗತಿಯೇನು? ನಾಳೆ ಯಾವ ರೀತಿ ಇದನ್ನು ಸರಿಪಡಿಸುತ್ತೀರಿ? ನಾನು ತಮಗೆ ಹೇಳುತ್ತಿದ್ದೇನೆ, ಈ ಜೀವಿಜಿಯರವರ ಮೇಲೆ ಆಗಿರುವ ಘಟನೆ ಬಗ್ಗೆ ಈ ಸಂದರ್ಭದಲ್ಲಿ ಸುದೀರ್ಘವಾಗಿ ನಾನು ಹೇಳದಿದ್ದರೂ ಇದು ಇಡೀ ರಾಜ್ಯದ ಜನ ತಲೆತಗ್ಗಿಸುವಂಥ ವಿಚಾರ. ಇಡೀ ಸರ್ಕಾರ ತಲೆತಗ್ಗಿಸುವ ವಿಚಾರ. ಈ ಬಗ್ಗೆ ಇಷ್ಟೊತ್ತಿಗಾಗಲೇ ತನಿಖೆಯನ್ನು ನೇಮಕ ಮಾಡಬೇಕಾಗಿತ್ತು. ಎಲ್ಲಿ ಮಾಡಿದ್ದೀರಿ ತನಿಖೆಯನ್ನು? ಮಾಡಿ ಮಾಡಿದ್ದೀರಿ ಯಾರು ಎಂದು ಗೊತ್ತಾಯಿತೇನು ನಿಮಗೆ. ಯಾರೋ ನಾಲ್ಕು ಜನರನ್ನು ಕೆಲಸಕ್ಕೆ ಬಾರದೆ ಇರುವವರನ್ನು ಹಿಡಿದುಕೊಂಡು ಬಂದು ಅವರನ್ನು ಹಿಡಿದಿದ್ದೇವೆ ಎಂದು ಹೇಳುತ್ತೀರಿ. ಇದೊಂದು ದೊಡ್ಡ ಜಾಲ ಬೆಂಗಳೂರಿನಲ್ಲಿ ನಡೆಯುತ್ತಿದೆ. ಪೋಲೀಸನವರು ಎಚ್ಚರವಾಗಿಲ್ಲ. ಸಂಪೂರ್ಣವಾಗಿ ಪೋಲೀಸ್ ಆಡಳಿತ ವಿಫಲವಾಗಿದೆ. ಚಳುವಳಿಗಾರರ ಮೇಲೆ ಲಾಠಿ ಛಾರ್ಜ್ ಮಾಡುವುದಲ್ಲ. ಇದು ಒಳ್ಳೆಯ ನಿದರ್ಶನವಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಮತ್ತೊಂದು ಸಂದರ್ಭದಲ್ಲಿ ಆ ಜೀವಿಜಯವರ ಬಗ್ಗೆ ಚರ್ಚೆಗೆ ಮಾನ್ಯ ಅಧ್ಯಕ್ಷರನ್ನು ಕೇಳುತ್ತೇನೆ. ಇವತ್ತು ಕಣ್ಣೀರು ಇಡಬೇಕು. ನಿಮಗೆ ಗೌರವ ಇದ್ದರೆ ಸರ್ಕಾರ ರಾಜೀನಾಮೆ ಕೊಡಬೇಕು ಇವತ್ತಿನ ದಿನ. ಜೀವಿಜಯರವರಿಗೆ ಆಗಿರುವ ಹಿನ್ನೆಲೆಯಲ್ಲಿ ನಮ್ಮ ಸರ್ಕಾರದಲ್ಲಿ ಕಾನೂನು ಸುವ್ಯವಸ್ಥೆ ಕುಸಿದುಬಿದ್ದು ಹೋಗಿದೆ. ನಮ್ಮ ಸರ್ಕಾರ ಇವತ್ತು ಇಲ್ಲ. ನಮ್ಮ ಸರ್ಕಾರ ಸತ್ತಿದೆ ಎಂದು ಹೇಳಿ ಇವತ್ತು ರಾಜೀನಾಮೆ ಕೊಡಬೇಕಾಗಿತ್ತು. ಏನು ಪರಿಸ್ಥಿತಿ ಇವತ್ತು.

ಕಾಲೇಜು ನಡೆಸಿದವರು ಯಾರು? ಎಂಥವರು ಕಾಲೇಜಿಗೆ ಬರತಕ್ಕಂಥವರು. ಯಾವ ಊರಿನವರು? ಅದೊಂದು ಭಯೋತ್ಪಾದಕ ಸ್ಥಳವಾಗಿದೆ. ಅವರು ಭಾರಿ ದೊಡ್ಡ ಮನುಷ್ಯನಾಗಿರಬಹುದು. ಯಾರೇ ಇರಬಹುದು. ಇದು ಒಳ್ಳೆಯದಲ್ಲ. ಇವತ್ತು ಈ ಬಗ್ಗೆ ತಾವ್ಯಾರಾದರೂ ಹೋಗಿ ಜೀವಿಜಿಯರವರ ಮನೆಗೆ ಹೋಗಿ ನಿಮಗೇನಾಯಿತು ಎಂದು ಕೇಳಿದ್ದೀರೋ? ಅದಕ್ಕಾಗಿ ನಿಮ್ಮ ಉತ್ತರವೇನು? ಸರ್ಕಾರದ ನಿರ್ಧಾರವೇನು? ಆ ದೃಷ್ಟಿಯಲ್ಲಿ ನಾನು ಇವತ್ತು ನೇರವಾಗಿ ಹೇಳುತ್ತಿದ್ದೇನೆ. ಸರ್ಕಾರ ಚಳುವಳಿಗಾರರ ಮೇಲೆ ಲಾಠಿಛಾರ್ಜ್ ಮಾಡುವುದು ಇದು ಒಳ್ಳೆಯದಲ್ಲ. ಅದಕ್ಕೆ ಮಾನ್ಯ ಸಿಂಧ್ಯಾರವರೇ, ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ, ನೀವು ಏರಿಸಿರುವ ಬಸ್ ದರ ವೈಜ್ಞಾನಿಕವಾಗಿಲ್ಲ ಪ್ರಾಮಾಣಿಕವಾಗಿಲ್ಲ. ನಿಮ್ಮ ಹೇಳಿಕೆಗಳನ್ನು ನೋಡಿದೆ. ನಾಲ್ಕು ವರ್ಷದಿಂದ ಏರಿಸಿಲ್ಲ. ಅದಕ್ಕೋಸ್ಕರ ಏರಿಸುತ್ತೇವೆ ಏನ್ನುವ ಮಾತು. ಅದಲ್ಲ. ಈ ಕೂಡಲೇ ನೀವು ಈ ಸದನದಲ್ಲಿ ಹೇಳಬೇಕು. ನಾನು ಬಹಿರಂಗವಾಗಿ ಬಸ್ ದರ ಏರಿಕೆಯನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ ಎಂದು ಹೇಳಬೇಕು. ಹೇಳದಿದ್ದರೆ ನಾವು ನೀವು ಹೇಳುವವರೆಗೂ ಈ ಸದನದಲ್ಲಿ ಪ್ರಜಾಸತ್ತಾತ್ಮಕವಾದ, ಸದನದಲ್ಲಿ ಏನು ನಡೆಸಬೇಕು, ಆ ರೀತಿಯ ಪ್ರತಿಭಟನೆಯನ್ನು ನಾವು ಮಾಡಿಯೇ ಮಾಡುತ್ತೇವೆ. ಅದರಲ್ಲೇನೂ ಅನುಮಾನವಿಲ್ಲ. ಇದು ಸ್ಪಷ್ಟ. ಆ ದೃಷ್ಟಿಯಿಂದ ತಮಗೆ ನೇರವಾಗಿ ಹೇಳುತ್ತಿದ್ದೇನೆ, ಅದನ್ನು ಹಿಂತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರೆ ಇದು ರಾಜ್ಯದ ಜನತೆಗೆ ನೀವು ಮಾಡಿದಂಥ ದ್ರೋಹ. ರಾಜ್ಯದ ಜನತೆಗೆ ಮಾಡಿದಂಥ ಅನ್ಯಾಯ. ಈ ಅನ್ಯಾಯವನ್ನು ನೀವು ಸರಿಪಡಿಸುವುದಿಲ್ಲ ಎಂದು ಹೇಳಿದರೆ ನಾವು ಸ್ಪಷ್ಟವಾಗಿ ನಿಮ್ಮ ರಾಜ್ಯಸರ್ಕಾರವನ್ನೇ ರಾಜೀನಾಮೆ ಕೊಡಬೇಕು ಎಂದು ಹೇಳಿ ಸತ್ಯಾಗ್ರಹವನ್ನು ಈ ಸದನದಲ್ಲಿ ಮಾಡುತ್ತೇವೆ. ನೀವು ಹೇಳಬಹುದು, ಜನ ಯಾರೂ ಬೀದಿಗೆ ಬಂದಿಲ್ಲ ಎಂದು ನಿಜ. ಬೀದಿಗೆ ಬಂದಿಲ್ಲ.ಬರುತ್ತಾರೆ ಜನ. ಬರುವುದಿಲ್ಲ ಎಂದು ತಿಳಿದುಕೊಳ್ಳಬೇಡಿ, ಖಂಡಿತಾ ಬರುತ್ತಾರೆ. ಬರತಕ್ಕಂಥ ಕಾಲ ಇದೆ. ನಾವೆಲ್ಲರೂ ನಾಳೆ ವಿರೋಧಪಕ್ಷದವರಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಎಲ್ಲಾ ಪಕ್ಷದವರೂ ಸಹ ಇದನ್ನು ಒಂದು ಪಕ್ಷದ ಚಳುವಳಿಯನ್ನಾಗಿ ಮಾಡುವುದು ಬೇಡ. ನಾವೆಲ್ಲಾ ಒಟ್ಟಿಗೆ ಸೇರೋಣ. ಇಡೀ ಕರ್ನಾಟಕ ರಾಜ್ಯದಲ್ಲಿ ಒಂದೇ ವೇದಿಕೆಯಡಿ ಈ ಚಳುವಳಿ ನಿಮ್ಮ ಸರ್ಕಾರವನ್ನು ತೆಗೆಯುವುದಕ್ಕೆ ಈ ಚಳುವಳಿಯೇ ಮುಂದಾಗಬೇಕು. ಅದಕ್ಕಾಗಿ ಯಾರು ಬೇಕಾದರೂ ಮುಖಂಡರಾಗಲಿ. ಕಾಂಗ್ರೆಸ್ ಆಗಬಹುದು, ಬಿಜೆಪಿ ಆಗಬಹುದು. ನಾವಾಗಬಹುದು, ಕಮ್ಯುನಿಸ್ಟ್‌ರು ಆಗಬಹುದು, ರೈತ ಸಂಘ ಆಗಬಹುದು. ಯಾವುದೇ ಪಕ್ಷದವರು ಆಗಿರಲಿ. ನಾವು ಈ ವಿಚಾರದಲ್ಲಿ ಇಡೀ ನಮ್ಮ ಎಲ್ಲಾ ವಿರೋಧಪಕ್ಷದವರನ್ನು ಕಳಕಳಿಯಿಂದ ಮನವಿ ಮಾಡುತ್ತೇನೆ. ನಾಳೆ ಸೇರಬೇಕು. ಇದಕ್ಕೊಂದು ವೇದಿಕೆ ಮಾಡಬೇಕು. ಈ ಒಂದು ವೇದಿಕೆಯಲ್ಲಿ ಎಲ್ಲರೂ ನಿಂತು ಇಡೀ ಚಾಮರಾಜನಗರದಿಂದ ಬೀದರ್‌ನವರೆಗೂ ಇಡೀ ಕರ್ನಾಟಕದ ಮೂಲೆಮೂಲೆಗೂ ನಿಮ್ಮ ಸರ್ಕಾರ ಬೆಲೆ ಏರಿಕೆ ಮಾಡಿರುವುದು, ದರ ಏರಿಕೆ ಮಾಡಿರುವುದನ್ನು ವಿರೋಧಿಸಿ ನಿಮ್ಮ ಸರ್ಕಾರ ರಾಜೀನಾಮೆ ಕೊಡಬೇಕು ಎಂದು ಚಳುವಳಿ ಮಾಡಬೇಕಾಗುತ್ತದೆ. ಗೋಲೀಬಾರ್ ಮಾಡುತ್ತೀರಾ? ಮಾಡಿಸಿರಿ. ಏನು ಮಾಡಿಸಬೇಕೋ ಮಾಡಿಸಿ. ನಿಮ್ಮಲ್ಲಿದೆ. ನಾವೆಲ್ಲಾ ತಯಾರಾಗಿದ್ದೇವೆ. ಈ ತೀರ್ಮಾನಕ್ಕೆ ನಾಳೆ ವಿರೋಧಪಕ್ಷದ ನಾಯಕರಾದ

ಶ್ರೀಮಾನ ಖರ್ಗೆಯವರಿಗೆ ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ, ನಾಳೆ ನೀವು ಸಭೆ ಕರೆಯಿರಿ. ಸಭೆಯಲ್ಲಿ ತೀರ್ಮಾನ ಮಾಡೋಣ. ನಿಮ್ಮ ಜೊತೆಯಲ್ಲಿ ನಾನೂ ಇರುತ್ತೇನೆ. ನಾವೆಲ್ಲರೂ ಇದರಲ್ಲಿ ಪಕ್ಷವನ್ನು ಮರೆತು ಇದನ್ನು ಗೆಲ್ಲಬೇಕು. ಈ ಸಮಸ್ಯೆ ಬಗ್ಗೆ ನಮ್ಮ ಹೋರಾಟ ಇಡೀ ರಾಜ್ಯಾದ್ಯಂತ ನಡೆಯಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈ ನಿಲುವಳಿ ಸೂಚನೆಗೆ ತಾವು ಒಪ್ಪಿಗೆಯನ್ನು ಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಶ್ರೀ ರಾಮರೆಡ್ಡಿಯವರೇ, ನಾವು 12-30 ಗಂಟೆಗೆ ಇದನ್ನು ಪ್ರಾರಂಭ ಮಾಡಿದ್ದೇವೆ. ಎರಡುಮುಕ್ಕಾಲು ಗಂಟೆ ಚರ್ಚೆ ಆಗಿದೆ. ಈಗ ಎಲ್ಲರೂ ಮಾತನಾಡಿದ್ದಾರೆ. ಸಾಧ್ಯವಾದಷ್ಟು ಮಟ್ಟಿಗೆ ಸಂಕ್ಷಿಪ್ತವಾಗಿರಿ. ಮತ್ತೆ ರಿಪಿಟೇಷನ್ ಆಗುವುದು ಬೇಡ. ತಾವು ಮಾತನಾಡಲಿಕ್ಕೆ ನಾನು ಕಡಿವಾಣ ಹಾಕುವುದಿಲ್ಲ. ಈ ಎರಡೂ ಅಂಶವನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತನಾಡಿ.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ಈ ಬಸ್ ದರಗಳ ಏರಿಕೆ ಬಗ್ಗೆ ಈಗಾಗಲೇ ನಿಲುವಳಿ ಸೂಚನೆಯನ್ನು ಮಂಡಿಸಿರುವ ವಿರೋಧಪಕ್ಷದ ಮುಖಂಡರುಗಳು ಮತ್ತೆ ಈಗಾಗಲೇ ಮಾತನಾಡಿರುವವರೆಲ್ಲಾ ಹಲವಾರು ವಿಷಯಗಳನ್ನು ಹೇಳಿದ್ದಾರೆ. ನಾನು ಮತ್ತೆ ಅದೇ ವಿಷಯಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈ ರಾಜ್ಯಸರ್ಕಾರಕ್ಕೆ ಈ ಸಾರ್ವಜನಿಕ ಕ್ಷೇತ್ರದ ಬಗ್ಗೆ ಇರುವ ಒಂದು ಧೋರಣೆ ಏನಿದೆ, ಅದರ ಪ್ರತಿಫಲವೇ ಬಸ್ ದರಗಳನ್ನು ಏರಿಕೆ ಮಾಡುತ್ತಿರುವಂಥದ್ದು. ನಿನ್ನೆ ಸನ್ಮಾನ್ಯ ಉಪಮುಖ್ಯಮಂತ್ರಿಗಳು ಆ ಬಜೆಟ್‌ನ್ನು ಮಂಡನೆ ಮಾಡುವಾಗ ಡಿಸ್-ಇನ್‌ವೆಸ್ಟ್‌ಮೆಂಟ್ ಬಗ್ಗೆ ಒಂದು ಪದವನ್ನು ಹೇಳಿದ್ದಾರೆ. ಬಹುಶಃ ಸಾರ್ವಜನಿಕ ಕ್ಷೇತ್ರಗಳನ್ನೆಲ್ಲಾ ಸಂಪೂರ್ಣವಾಗಿ ಮುಚ್ಚಿ ಎಲ್ಲವನ್ನೂ ಖಾಸಗಿಯವರಿಗೆ ಕೊಡುವ ಒಂದು ಪ್ರಯತ್ನದಲ್ಲಿ ಈ ರಾಜ್ಯಸರ್ಕಾರ ಇದೆ. ಆ ಕಾರಣಕ್ಕೋಸ್ಕರವೇ ಈ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ದರಗಳನ್ನು ಏರಿಕೆ ಮಾಡಿರುವುದೂ ಕೂಡ ಒಂದು ಪ್ರಮುಖವಾದ ಅಂಶ ಎಂದು ಹೇಳತಕ್ಕಂಥದ್ದು ನಾನು ಸರ್ಕಾರದ ಧೋರಣೆಯ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಏಕೆಂದು ಹೇಳಿದರೆ ಈ ಸಾರ್ವಜನಿಕ ಕ್ಷೇತ್ರಗಳೆಲ್ಲ ನಷ್ಟದಲ್ಲಿ ನಡೆಯುತ್ತವೆ. ಇದನ್ನು ನಡೆಸಲಿಕ್ಕೆ ಆಗುವುದಿಲ್ಲ ಎನ್ನತಕ್ಕ ಒಂದು ವಾತಾವರಣವನ್ನು ಇಡೀ ರಾಜ್ಯದಲ್ಲಿ ಸೃಷ್ಟಿ ಮಾಡಿ ಈ ಸಾರ್ವಜನಿಕ ಕ್ಷೇತ್ರಗಳನ್ನು ಮುಚ್ಚಬೇಕು, ಕೈತೊಳೆದುಕೊಳ್ಳಬೇಕು ಎಂದು ಹೇಳತಕ್ಕದ್ದು. ಜವಾಬ್ದಾರಿಯಿಂದ ಕಳಚಿಕೊಳ್ಳಬೇಕು ಎಂದು ಹೇಳತಕ್ಕದ್ದು. ಸಾರ್ವಜನಿಕ ಕ್ಷೇತ್ರ ಇರತಕ್ಕದ್ದು ಏಕೆ? ರಾಜ್ಯದ ಕೆಲವು ಪ್ರಮುಖವಾದಂತಹ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗಿರತಕ್ಕದ್ದು ಒಂದು ಅನಿವಾರ್ಯತೆ ಇದೆ. ಹಾಗಾಗಿ ಎಲ್ಲಾ ರಾಜ್ಯ ಸರ್ಕಾರಗಳೂ ಸಾರ್ವಜನಿಕರಿಗೆ ಅನುಕೂಲ ಆಗತಕ್ಕ ಹಲವಾರು ಕ್ಷೇತ್ರಗಳಲ್ಲಿ ನೇರವಾಗಿ ಮಧ್ಯೆ ಪ್ರವೇಶ ಮಾಡತಕ್ಕದ್ದು, ಜನತೆಯಿಂದ ಆಯ್ಕೆ ಆಗಿರತಕ್ಕ ಯಾವುದೇ ಒಂದು ಸರ್ಕಾರದ ಪ್ರಥಮ ಜವಾಬ್ದಾರಿ. ಆ ಕಾರಣಕ್ಕಾಗಿ ಸಾಮಾಜಿಕ ಹೊಣೆಗಾರಿಕೆಯನ್ನು ನಿರ್ವಹಿಸತಕ್ಕ ಯಾವುದೇ ಒಂದು ರಾಜ್ಯ ಸರ್ಕಾರ ಸಾರ್ವಜನಿಕರಿಗೆ ಅದರಲ್ಲೂ ಸಾಮಾನ್ಯ ಜನರಿಗೆ ಅನುಕೂಲ ಆಗತಕ್ಕ ಹಲವಾರು ಕ್ಷೇತ್ರಗಳನ್ನು ತಾನೇ ನೇರವಾಗಿ ಅದನ್ನು ಬೆಳೆಸಿ ಕಟ್ಟಿ, ಅದರಿಂದ ಸಾಮಾನ್ಯ ಜನರಿಗೆ ಪ್ರಯೋಜನ ಆಗುವ ರೀತಿಯ

ಕಾರಣಕ್ಕೋಸ್ಕರ ಹಲವಾರು ಕ್ಷೇತ್ರಗಳನ್ನು ಸರ್ಕಾರ ರಚನೆ ಮಾಡತಕ್ಕದ್ದು. ಆ ಕ್ಷೇತ್ರದಲ್ಲಿ ರಸ್ತೆ ಸಾರಿಗೆ ಸಂಸ್ಥೆ ಕೂಡ ಒಂದು. ಹಿಂದೆ ರಸ್ತೆ ಸಾರಿಗೆ ಸಂಸ್ಥೆಯನ್ನು ಪ್ರಾರಂಭ ಮಾಡಬೇಕಾದರೆ ಸಾಮಾಜಿಕ ಹೊಣೆಗಾರಿಕೆ ಇದ್ದಂತಹ ಸರ್ಕಾರ ಅಂದು ಬಡ ಜನರಿಗೆ ಕಡಿಮೆ ದರದಲ್ಲಿ ಸಾರಿಗೆ ವ್ಯವಸ್ಥೆಯನ್ನು ದೊರಕಿಸಬೇಕು ಎನ್ನುವ ಕಾರಣಕ್ಕೋಸ್ಕರ ಸಾರಿಗೆ ಸಂಸ್ಥೆಯನ್ನು ಹುಟ್ಟು ಹಾಕಿತ್ತು. ಇವತ್ತಿನ ಸರ್ಕಾರ ಯಾವ ದಿಸೆಯಲ್ಲಿ ಆಲೋಚನೆ ಮಾಡುತ್ತಿದೆ ಎಂದು ಹೇಳಿದರೆ ಸಾಮಾಜಿಕ ಹೊಣೆಗಾರಿಕೆಯಿಂದ ತಪ್ಪಿಸಿಕೊಂಡು ಅದನ್ನು ಖಾಸಗಿಯವರಿಗೆ ಕೊಡಬೇಕು ಎಂದು ಆಲೋಚನೆ ಮಾಡುತ್ತಿದೆ. ಖಾಸಗಿಯವರಿಗೆ ಕೊಟ್ಟಾದ ಮೇಲೆ ಯಾರಿಗೆ ಶಕ್ತಿ ಇದೆಯೋ ಯಾರು ಹಣವಂತರು ಇದ್ದಾರೋ ಅವರು ಮಾತ್ರ ಸಾರಿಗೆಯಲ್ಲಿ ಪ್ರಯಾಣ ಮಾಡಲಿಕ್ಕೆ ಅನುಕೂಲ ಆಗತಕ್ಕ ರೀತಿಯಲ್ಲಿ ಮಾಡತಕ್ಕದ್ದು. ಈ ಒಂದು ಉದ್ದೇಶದಿಂದ ಈ ರೀತಿ ಮಾಡಿದ್ದಾರೆ. ಇದಂತೂ ಸ್ಪಷ್ಟ. ಸಾರಿಗೆ ಸಚಿವರು ಎಷ್ಟೋ ಸಂದರ್ಭದಲ್ಲಿ ಖಾಸಗೀಕರಣ ನಾನು ಮಾಡುವುದಿಲ್ಲ ಎಂದು ಹೇಳಿದರೂ ಕೂಡ ಖಾಸಗೀಕರಣಕ್ಕೆ ಪ್ರಥಮ ಹಂತವಾಗಿ ಈ ಒಂದು ಕಾರ್ಯವನ್ನು ಅವರು ಪ್ರಾರಂಭ ಮಾಡಿದ್ದಾರೆ. ಎರಡನೆಯ ಅಂಶ ಈ ಸಾರಿಗೆ ಸಂಸ್ಥೆಯಲ್ಲಿ ದರಗಳನ್ನು ಏರಿಸುವುದರ ಮುಖಾಂತರ ಈ ಸಂಸ್ಥೆಯನ್ನು ಉಳಿಸಬಹುದು ಎನ್ನುವ ಅಭಿಪ್ರಾಯ ಸರ್ಕಾರಕ್ಕೆ ಇದ್ದರೆ ಅದು ಬಹಳ ತಪ್ಪು. ಸಾರಿಗೆ ಸಂಸ್ಥೆಯಲ್ಲಿ ನಡೆಯುತ್ತಿರತಕ್ಕಂಥ ಹಲವಾರು ಲೋಪದೋಷಗಳ ಬಗ್ಗೆ ಈಗಾಗಲೇ ಮಾತನಾಡಿರತಕ್ಕ ಮುಖಂಡರುಗಳು ಹೇಳಿದ್ದಾರೆ ನಾನು ಮತ್ತೆ ಅದನ್ನು ಹೇಳುವುದಿಲ್ಲ. ಆ ಸಾರಿಗೆ ಸಂಸ್ಥೆಯಲ್ಲಿ ನಡೆಯುತ್ತಿರತಕ್ಕ ಅವ್ಯವಹಾರಗಳನ್ನು ಸರ್ಕಾರಕ್ಕೆ ಏನಾದರೂ ಶಕ್ತಿ ಇದ್ದು ತಡೆಗಟ್ಟಿದರೆ ಬಸ್‌ನ ದರವನ್ನು ಹೆಚ್ಚಿಸತಕ್ಕ ಅವಶ್ಯಕತೆ ಈ ಸರ್ಕಾರಕ್ಕೆ ಇಲ್ಲವೇ ಇಲ್ಲ. ಆದರೆ ಸಾರಿಗೆ ಸಂಸ್ಥೆಯಲ್ಲಿ ನಡೆಯುತ್ತಿರತಕ್ಕ ಅವ್ಯವಹಾರಗಳನ್ನು ತಡೆಗಟ್ಟುವುದರ ಬದಲು ಸಾಮಾನ್ಯ ಮನುಷ್ಯನಿಗೆ ಹೊರೆ ಹಾಕಲಿಕ್ಕೆ ಇವತ್ತು ಸರ್ಕಾರ ಪ್ರಯತ್ನ ಮಾಡುತ್ತಾ ಇರತಕ್ಕದ್ದು ಬಹಳ ಖಂಡನೀಯವಾದುದು. ಸರ್ಕಾರ ಏನು ಹೇಳುತ್ತದೆ. ಬೆಲೆ ಏರಿಕೆ ಅನಿವಾರ್ಯ ಆಗಿದೆ ಹಾಗಾಗಿ ಬೆಲೆ ಏರಿಕೆ ಮಾಡುತ್ತಿದ್ದೇವೆ ಎಂಬ ಪ್ರಾಮಾಣಿಕವಾದ ಅನಿಸಿಕೆ ಸರ್ಕಾರಕ್ಕೆ ಇದ್ದಿದ್ದರೆ ಕಳೆದ ತಿಂಗಳು 27ನೇ ತಾರೀಖಿನವರೆಗೆ ಸದನ ನಡೆದಿದೆ. ಮತ್ತೆ ಈ ತಿಂಗಳು 17ನೇ ತಾರೀಖಿಗೆ ಸದನ ಪ್ರಾರಂಭವಾಗುತ್ತಿತ್ತು. ಪ್ರಾಮಾಣಿಕವಾದ ಕಾಳಜಿ, ಕಳಕಳಿ ಸರ್ಕಾರಕ್ಕೆ ಇದ್ದಿದ್ದರೆ ಈ ಸದನದ ಮುಂದೆ ಆ ವಿಷಯವನ್ನು ತರಬೇಕಾಗಿತ್ತು. ಏಕೆಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸನಸಭೆ ಪ್ರಮುಖವಾದಂತಹ ಸ್ಥಾನ ಆಗಿರತಕ್ಕ ಕಾರಣಕ್ಕೋಸ್ಕ ಜನರ ಪ್ರತಿನಿಧಿಗಳು ಇಲ್ಲಿ ಇರುವ ಕಾರಣಕ್ಕೋಸ್ಕರ, ಸರ್ಕಾರ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಬೆಲೆ ಕೊಡುವುದೇ ಆಗಿದ್ದರೆ ಬಹುಶಃ ಈ ಸದನದಲ್ಲಿ ಚರ್ಚೆ ಮಾಡತಕ್ಕ ಸಂದರ್ಭದಲ್ಲಿ ಸರ್ಕಾರಕ್ಕೆ ಇರತಕ್ಕ ಕಷ್ಟವನ್ನು ಹೇಳಬೇಕಾಗಿತ್ತು. ಸಾರಿಗೆ ಸಂಸ್ಥೆಯಲ್ಲಿನ ಸಮಸ್ಯೆಗಳನ್ನು ಹೇಳಿ ದರಗಳನ್ನು ಏರಿಕೆ ಮಾಡತಕ್ಕದ್ದು ಅನಿವಾರ್ಯವೆಂದು ಆಗಿದ್ದರೆ ಇಡೀ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ದರಗಳನ್ನು ಹೆಚ್ಚಿಗೆ ಮಾಡಬಹುದಾಗಿತ್ತು. ಆದರೆ ರಾತ್ರೋ ರಾತ್ರಿ ಯಾರೋ ಹೇಳಿದ ಹಾಗೆ, ಯಾರದೋ ಮನೆಯಲ್ಲಿ ಗುಟ್ಟಾಗಿ ದರಗಳನ್ನು ಏರಿಸಿರತಕ್ಕದ್ದು ಯಾವುದೇ ಒಂದು ಪ್ರಜಾಪ್ರಭುತ್ವ ಮಾದರಿಯಲ್ಲಿ ಆಯ್ಕೆ

ಇದಂತಹ ಸರ್ಕಾರ ಮಾಡತಕ್ಕ ಕೆಲಸ ಅಲ್ಲ. ಮೂರನೆಯದು ಸಾರಿಗೆ ಸಂಸ್ಥೆಯಲ್ಲಿ ಆಗುತ್ತಿರತಕ್ಕ ವಿಚಾರ. ಇವತ್ತ ಸಾರಿಗೆ ಸಂಸ್ಥೆ ಬೇರೆ ಶ್ರೀಮಂತ ವರ್ಗದವರು ಮತ್ತು ಅದಕ್ಕಿಂತ ಮೇಲ್ಪಟ್ಟ ವರ್ಗದವರು ಬಸ್‌ನಲ್ಲಿ ಓಡಾಡುವುದಿಲ್ಲ. ಸಾಮಾನ್ಯ ಜನರು ಓಡಾಡುತ್ತಾರೆ. ಸಾಮಾನ್ಯ ಜನರು ಓಡಾಟ ಮಾಡತಕ್ಕ ಬಸ್‌ನ ಪ್ರಯಾಣ ದರವನ್ನು ಹೆಚ್ಚಿಸಿದ್ದೀರಿ. ಆದರೆ ಇವತ್ತ ಖಾಸಗಿ ಬಸ್‌ಗಳಿಗೆ ಪರವಾನಗಿ ಕೊಡುತ್ತೀರಿ. ಸಾರಿಗೆಸಂಸ್ಥೆಯಲ್ಲಿ ನಷ್ಟ ಆಗಿದೆ ಎಂದು ಹೇಳುತ್ತೀರಿ. ಹಾಗಾದರೆ ಏಕೆ ಪರವಾನಗಿಯನ್ನು ಕೊಡುತ್ತೀರಿ? ಖಾಸಗಿ ಬಸ್‌ಗಳು ಲಾಭದಲ್ಲಿ ನಡೆಯುವುದಕ್ಕೆ ಏನು ಕಾರಣ ? ಸಾರಿಗೆ ಸಂಸ್ಥೆಗಳ ಬಸ್ ನಷ್ಟದಲ್ಲಿ ನಡೆಯುವುದಕ್ಕೆ ಏನು ಕಾರಣ? ಖಾಸಗಿ ಬಸ್‌ನ ಡ್ರೈವರ್ ಕಂಡಕ್ಟರ್‌ಗಳು ಹಣ ಹೊಡೆಯುವುದಿಲ್ಲವೇ? ಬರೇ ರಸ್ತೆ ಸಾರಿಗೆ ಸಂಸ್ಥೆಯ ಕಂಡಕ್ಟರ್ ಮಾತ್ರ ಹಣ ಹೊಡೆಯುತ್ತಾರಾ? ಅವರೂ ದುಡ್ಡು ಹೊಡೆಯುತ್ತಾರೆ, ಇವರೂ ದುಡ್ಡು ಹೊಡೆಯುತ್ತಾರೆ. ಆದರೆ ಹಣ ಹೊಡೆಯುವರ ನಿಯಂತ್ರಣ ಮಾಡತಕ್ಕ ವಿಧಾನವನ್ನು ಏನಾದರೂ ಕಂಡು ಹಿಡಿದಿದ್ದೀರೋ? ಒಂದೇ ಒಂದು ಉದಾಹರಣೆಯನ್ನು ತಮಗೆ ಹೇಳುತ್ತೇನೆ. ಇವತ್ತ ಒಬ್ಬ ಡ್ರೈವರ್ ಮತ್ತು ಕಂಡಕ್ಟರ್ ಬಸ್ ಅನ್ನು ಡಿಪೋದಿಂದ ಹೊರ ತರಬೇಕಾದರೆ ಐದು ಕಡೆ ಲಂಚ ಕೊಡಬೇಕು. ಬಸ್ ಡಿಪೋದಿಂದ ರೂಟಿಗೆ ತೆಗೆದುಕೊಂಡು ಹೋಗಬೇಕಾದರೆ ಅಲ್ಲಿರತಕ್ಕ ಫೋರ್‌ಮನ್‌ಗೆ ಹಣ ಕೊಡಬೇಕು. ಇಲ್ಲದಿದ್ದರೆ ಅವನು ಯಾವುದೋ ಕೆಟ್ಟು ಹೋಗಿರತಕ್ಕ, ಕಂಡೀಷನ್‌ನಲ್ಲಿ ಇರದೇ ಇರತಕ್ಕ ಬಸ್ ಅನ್ನು ಕೊಡುತ್ತಾನೆ. ಅವನಿಗೆ25 ರೂಪಾಯಿ ಕೊಟ್ಟರೆ ಸರಿಯಾಗಿ ಇರತಕ್ಕ ಬಸ್ ಅನ್ನು ಕೊಡುತ್ತಾನೆ. ನಂತರ ಡೀಸೆಲ್ ತುಂಬಿಸಿಕೊಳ್ಳಬೇಕು. ಡೀಸೆಲ್ ತುಂಬಿಕೊಡುತ್ತಾನಲ್ಲಾ ಆಗ ಅವನಿಗೆ ಐದು ರೂಪಾಯಿ ಕೊಡಬೇಕು. ಇಲ್ಲದಿದ್ದರೆ ಅವನು ಬೇಗ ಡೀಸೆಲ್ ಹಾಕುವುದಿಲ್ಲ. ಆಮೇಲೆ ಡಿಪೋ ಮ್ಯಾನೇಜರ್‌ಗೆ ಇಷ್ಟು ಅಂತ ಹಣ ಕೊಡಬೇಕು. ಇಲ್ಲವೆದರೆ ಆತ ರೂಟ್ ಬದಲಾವಣೆ ಮಾಡುತ್ತಾನೆ. ಅದಾದ ಮೇಲೆ ಟಿ.ಸಿ.ಗೆ ಹಣ ಕೊಡಬೇಕು. ಪ್ರತಿ ಒಂದು ಬಸ್ ಸ್ಟ್ಯಾಂಡಿನಲ್ಲಿ ಟಿ.ಸಿ.ಗಳಿಗೆ ಕಡ್ಡಾಯವಾಗಿ ಐದು ರೂಪಾಯಿ ಕೊಡಲೇ ಬೇಕು. ಈ ಎಲ್ಲಾ ಅವ್ಯವಸ್ಥೆ ಇರತಕ್ಕಂಥದ್ದು ಮಾನ್ಯ ಸಾರಿಗೆ ಮಂತ್ರಿಗಳಿಗೆ ಗೊತ್ತಿದೆ. ಇದನ್ನು ಯಾವುದನ್ನೂ ತಡೆ ಹಿಡಿಯದೆ, ಬೇರೆ ಹಲವಾರು ರೀತಿಯ ವಿಚಾರಗಳೂ ಇದೆ. ಡೀಸೆಲ್ ಕಳ್ಳತನವಾಗುತ್ತದೆ, ಸ್ಪೇರ್‌ಪಾರ್ಟ್ಸ್ ಕಳ್ಳತನ ಆಗುತ್ತದೆ. ಎಲ್ಲವೂ ದುರುಪಯೋಗ ಆಗುತ್ತದೆ. ಅದರ ಬಗ್ಗೆ ಯಾವುದೇ ಕಠಿಣ ಕ್ರಮ ತೆಗೆದುಕೊಳ್ಳದೆ ಬಸ್‌ನ ದರಗಳನ್ನು ಏರಿಕೆ ಮಾಡಿದರೆ ಮಾತ್ರ ಸಾರಿಗೆ ಸಂಸ್ಥೆ ಉಳಿಯುತ್ತದೆ ಎಂದು ಹೇಳತಕ್ಕ ಧೋರಣೆ ಸರಿಯಲ್ಲ. ಇವತ್ತು ಏನು ಆಗಿದೆ ಎಂದರೆ ಬಂಡವಾಳ ಶಾಹಿ ವ್ಯವಸ್ಥೆಯಲ್ಲಿ ಬೆಲೆ ಏರಿಕೆ ಒಂದು ಅನಿವಾರ್ಯತೆ ಆಗಿದೆ, ಅನಿಷ್ಟದ ಕೂಸಾಗಿ ಇವತ್ತು ನಾವು ನೋಡುತ್ತಿದ್ದೇವೆ. ಎಲ್ಲಾ ದರಗಳನ್ನು ಏರಿಸುತ್ತಾ ಹೋಗತಕ್ಕದ್ದು, ಕಡಿಮೆ ಮಾಡತಕ್ಕ ಧೋರಣೆ ಯಾವುದೇ ಸರ್ಕಾರಕ್ಕೆ ಇಲ್ಲ. ಎಲ್ಲಾ ಬೆಲೆಗಳನ್ನು ಹೆಚ್ಚಿಗೆ ಮಾಡುತ್ತಾ ಹೋಗತಕ್ಕದ್ದು. ಬೆಲೆಗಳನ್ನು ಹೆಚ್ಚು ಮಾಡುವದರಿಂದ ನಿಮಗೆ ಯಾವ ರೀತಿ ಪ್ರಯೋಜನ ಆಗುತ್ತದೆ? ಇವತ್ತು ಕನಿಷ್ಟ ಎಂದು ಹೇಳಿದರೆ ಮೂರು ರೂಪಾಯಿ ಇದ್ದ ಛಾರ್ಜನ್ನು 3ರಿಂದ ಐದು ರೂಪಾಯಿವರೆಗೆ ಏರಿಕೆ ಮಾಡಿದ್ದೀರಿ. 35 ಪರ್ಸೆಂಟ್‌ನಿಂದ 150 ಪರ್ಸೆಂಟ್‌ಗೆ ಏರಿಸಿದ್ದೀರಿ. ಮಾನ್ಯ ಸಿಂಧ್ಯಾರವರಿಗೆ ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ನೀವು ಬಸ್ ದರವನ್ನು ಏರಿಕೆ ಮಾಡುವುದರಿಂದ

ಲಾಭ ಬರುತ್ತದೆ ಎಂದು ಏನಾದರೂ ಅಂದುಕೊಂಡಿದ್ದರೆ ಅದು ತಪ್ಪು. ಹೊರೆ ಆದಾಗ ಸಾಮಾನ್ಯ ಮನುಷ್ಯ ಬಸ್ ಛಾರ್ಜ್ ಕೊಡುವುದಿಲ್ಲ. ಅವನೂ ಕೂಡ ಕಳ್ಳತನ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾನೆ. ಟಿಕೆಟ್ ತೆಗೆದುಕೊಳ್ಳುವುದಿಲ್ಲ. ಖಂಡಿತವಾಗಿ ಸಾರಿಗೆ ಸಂಸ್ಥೆಗೆ ನಷ್ಟ ಆಗುತ್ತದೆ. ಏಕೆಂದು ನಾನು ಹೇಳುತ್ತೇನೆ. ಇವತ್ತು ಒಬ್ಬ ಕೃಷಿ ಕಾರ್ಮಿಕರ ಕೂಲಿ 20 ರೂಪಾಯಿ. ಆತ 40 ಕಿಲೋ ಮೀಟರ್‌ನಿಂದ ತಾಲ್ಲೂಕು ಹೆಡ್‌ಕ್ವಾರ್ಟರ್‌ಗೆ ಕೂಲಿಗೆ ಬರಬೇಕು. ಎರಡು ಸಾರಿ ಬರಬೇಕು ಎಂದಾಗ ಆತ 3-4 ರೂಪಾಯಿ ಛಾರ್ಜ್ ಎರಡು ಬಾರಿ ಕೊಡುವುದಕ್ಕೆ ಹೇಗೆ ಸಾಧ್ಯ? ಆತ ಬಸ್ ಛಾರ್ಜ್ ಕೊಡದೇ ಕಂಡಕ್ಟರ್ ಜೇಬಿಗೆ ಎರಡು ರೂಪಾಯಿ ಕೊಟ್ಟು ಟಿಕೆಟ್ ತೆಗೆದುಕೊಳ್ಳದೇ ಬರುತ್ತಾನೆ. ಆಗ ಸಾರಿಗೆ ಸಂಸ್ಥೆಗೆ ನಷ್ಟ ಆಗುತ್ತದೆ. ಈ ರೀತಿಯ ನಷ್ಟದ ಪರಿಸ್ಥಿತಿಯನ್ನು ನಾವು ಕಾಣತಕ್ಕದ್ದು. ಇನ್ನೊಂದು ವಿಚಾರ. ಇವತ್ತು ಸಾರಿಗೆ ಸಂಸ್ಥೆ ಸರಿಯಾಗಿ ನಡೆಯಬೇಕಾದರೆ ಕಾರ್ಮಿಕರ ಮತ್ತು ಸಾರಿಗೆ ಸಂಸ್ಥೆಯಲ್ಲಿರತಕ್ಕ ಆಡಳಿತ ವರ್ಗದವರಲ್ಲಿ ಹೊಂದಾಣಿಕೆ ಇಲ್ಲದೇ ಇದ್ದರೆ ಸಾರಿಗೆ ಸಂಸ್ಥೆ ಸರಿಯಾಗಿ ನಡೆಯುವುದಿಲ್ಲ. ಇವತ್ತು ಕಾರ್ಮಿಕರ ಮತ್ತು ಆಡಳಿತ ವರ್ಗದವರ ಸಂಬಂಧ ಹದಗೆಟ್ಟಿದೆ. ಅದನ್ನು ಸರಿಪಡಿಸದೇ ಸಾರಿಗೆ ಸಂಸ್ಥೆಯನ್ನು ಉತ್ತಮ ಪಡಿಸುವುದಕ್ಕೆ ಸಾಧ್ಯ ಇಲ್ಲ. ಇವತ್ತು ಸಾರಿಗೆ ಸಂಸ್ಥೆಯಲ್ಲಿ ಹಲವಾರು ಲೋಪದೋಷಗಳು ಇವೆ. ಕಾರ್ಮಿಕರ ಬಗ್ಗೆ ತಮ್ಮ ಧೋರಣೆ ಬದಲಾವಣೆ ಮಾಡಿ. ಯಾರೋ ಕೆಲವರು ಕೆಟ್ಟವರು ಇರುವ ಕಾರಣಕ್ಕೋಸ್ಕರ ಇಡೀ ಕಾರ್ಮಿಕರೇ ಸರಿ ಇಲ್ಲ, ಕಾರ್ಮಿಕರೆಲ್ಲಾ ಕಳ್ಳರು, ಅವರು ಕ್ರಿಮಿನಲ್ಸ್ ಎಂದು ಹೇಳತಕ್ಕದ್ದು ಏನು ಇದೆ, ಅದು ನಿಮಗೆ ಶೋಭೆ ತರತಕ್ಕ ವಿಷಯ ಆಗಿಲ್ಲ. ನೀವು ಈ ರೀತಿ ಹೇಳಿದ ತಕ್ಷಣ ಕಾರ್ಮಿಕರಿಗೆ ನಿಮ್ಮ ಮೇಲೆ ನಂಬಿಕೆ ಹೋಗುತ್ತದೆ. ಅವರ ಮೇಲೆ ನಿಮ್ಮ ನಂಬಿಕೆ ಹೋಗುತ್ತದೆ. ನಂಬಿಕೆ ಹೋದರೆ ಸಂಸ್ಥೆಯನ್ನು ನಡೆಸುವುದ್ಯಕೆ ಖಂಡಿತವಾಗಿಯೂ ಕೂಡ ಸಾಧ್ಯ ಇಲ್ಲ. ಸಾಮಾಜಿಕ ಹೊಣೆಗಾರಿಕೆ ಬಗ್ಗೆ ಮಾತನಾಡ ತಕ್ಕ ಸರ್ಕಾರ, ಈ ಒಂದು ಸಾಮಾಜಿಕ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳತಕ್ಕ ಪ್ರಯತ್ನ ಖಂಡಿತವಾಗಿಯೂ ಅದು ಆಗಬಾರದು. ಬೇರೆ ಬೇರೆ ರಾಜ್ಯಗಳಲ್ಲಿ ಸಾರಿಗೆ ವ್ಯವಸ್ಥೆ ಹೇಗಿದೆ? ಅವರು ಹೇಗೆ ಲಾಭ ಮಾಡುತ್ತಾರೆ? ಬರೇ ದರಗಳನ್ನು ಹೆಚ್ಚು ಮಾಡುವುದರಿಂದ ಲಾಭ ಮಾಡುತ್ತಾರಾ ಅಥವಾ ಸಂಸ್ಥೆಯಲ್ಲಿರತಕ್ಕ ಸಮಸ್ಯೆಗಳನ್ನು ಪರಿಹಾರ ಮಾಡಿ ಲಾಭ ಮಾಡುತ್ತಾರಾ ಎನ್ನತಕ್ಕ ಪ್ರಶ್ನೆಯನ್ನು ಕೂಡ ಅಭ್ಯಾಸ ಮಾಡಬೇಕಾಗಿದೆ. ಹಾಗೆ ಅಭ್ಯಾಸ ಮಾಡಿ ಅನಿವಾರ್ಯ ಆದರೆ ದರಗಳನ್ನು ಹೆಚ್ಚಿಸ ತಕ್ಕ ಸಾಹಸಕ್ಕೆ ಕೈ ಹಾಕಬೇಕಾಗಿದೆ.ಆದರೆ ಇವತ್ತು ಜನತಾ ದಳ ಸರ್ಕಾರಕ್ಕೆ ನಾನು ಹೇಳುತ್ತಿದ್ದೇನೆ. ನೀವು ಅಧಿಕಾರಕ್ಕೆ ಬಂದ ಮೇಲೆ ಎಲ್ಲಾ ದರಗಳನ್ನು ಹೆಚ್ಚು ಮಾಡಿದ್ದೀರಿ. ನೀವು ರಾಜಕೀಯವಾಗಿ ಆದರೂ ಆಲೋಚನೆ ಮಾಡಿ. ರಾಜಕೀಯ ಭವಿಷ್ಯದ ಬಗ್ಗೆ ಚಿಂತೆ ಮಾಡಿ. ನಮ್ಮ ಮಾನ್ಯ ನಾಗೇಗೌಡರಿಗೆ ಅದರ ಬಗ್ಗೆ ಚಿಂತೆ ಇಲ್ಲ. ನೀವು ಕರೆಂಟ್ ಛಾರ್ಜ್ ಜಾಸ್ತಿ ಮಾಡಿದಿರಿ. ನೀರಿನ ದರ ಹೆಚ್ಚು ಮಾಡಿದಿರಿ ಕೆ.ಎಸ್.ಆರ್.ಟಿ.ಸಿ ರೇಟ್ ಜಾಸ್ತಿ ಮಾಡಿದಿರಿ. ನೀವು ರಾಜಕೀಯವಾಗಿ ಆಲೋಚನೆ ಮಾಡಿ. ಹಿಂದಿನ ಸರ್ಕಾರದ ಧೋರಣೆ ಸರಿ ಇಲ್ಲ ಎಂದು ಹೇಳಿ ಜನತೆ ನಿಮಗೆ ಅಧಿಕಾರ ಕೊಟ್ಟರು.ಅವರು ನಿಮಗೆ ಕೊಟ್ಟ ಜವಾಬ್ದಾರಿಯನ್ನು ಕೂಡ ನೀವು ಮರೆತಿದ್ದೀರಿ. ಅವರು ನಾಲ್ಕು ವರ್ಷದಿಂದ ಬಸ್ ಛಾರ್ಜ್ ಜಾಸ್ತಿ ಮಾಡಿಲ್ಲ ಅದಕ್ಕೋಸ್ಕರವಾಗಿ ನಾವು ಜಾಸ್ತಿ ಮಾಡಿದ್ದೇವೆ ಎಂದು ಹೇಳಿದಿರಿ.

ಯಾರೋ ಮಾಡಿದಂತಹ ತಪ್ಪುಗಳನ್ನು ನೀವು ಏಕೆ ಮಾಡಲಿಕ್ಕೆ ಮುಂದಾಗುತ್ತೀರಿ? ಹಾಗಾದರೆ ಜನ ನಿಮಗೆ ಏಕೆ ಅಧಿಕಾರ ಕೊಡಬೇಕಾಗಿತ್ತು? ಅವರು ಮಾಡಿದಂತಹ ತಪ್ಪಿಗೆ ಇವತ್ತು ಜನ ಅಧಿಕಾರವನ್ನು ಅವರಿಗೆ ನಿರಾಕರಿಸಿದರು. ಅದೇ ತಪ್ಪನ್ನು ನೀವು ಮಾಡಿದರೆ ನಿಮ್ಮದು ಕೂಡ ಅದೇ ಗತಿಗೆ ಬರುತ್ತದೆ. ರಾಜಕೀಯ ನಿರುದ್ಯೋಗಿಗಳು ಆಗಬಹುದು. ಇದೇ ಸ್ಥಿತಿಯನ್ನು ಮುಂದುವರೆಸಿದರೆ ನೀವು ರಾಜಕೀಯ ನಿರುದ್ಯೋಗಿಗಳು ಆಗುತ್ತೀರಿ. ರಾಜಕೀಯ ಜವಾಬ್ದಾರಿಯಿಂದಲಾದರೂ ನೀವು ಆಲೋಚನೆ ಮಾಡಿ. ಇವತ್ತು ನೀವು ಹೇಳುತ್ತೀರಿ, ಇಡೀ ರಾಜ್ಯದ ಜನತೆ ಪ್ರತಿಭಟನೆ ಮಾಡಲಿಲ್ಲ ಎಂದು ಹೇಳುತ್ತೀರಿ.

3.30 ಪಿ.ಎಂ

ಯಾವ್ಯಾವ ಸಂದರ್ಭದಲ್ಲಿ ಪ್ರತಿಭಟನೆ ಮಾಡಬೇಕು ಎಂಬುದು ಅವರಿಗೆ ಗೊತ್ತಿದೆ, ಮಾಡುತ್ತಾರೆ. ಆ ಕಾರಣಕ್ಕಾಗಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ದರಗಳನ್ನು ಹೆಚ್ಚು ಮಾಡಿರುವುದು ಸಾಮಾನ್ಯ ಜನರಿಗೆ ನೀವು ಮಾಡಿರುವ ದ್ರೋಹ. ಅವರ ಮೇಲೆ ಹಾಕಿರುವ ಹೊರೆ. ಇನ್ನೊಂದು, ಜನ ಪ್ರತಿನಿಧಿಗಳಿಗೆ ಪ್ರಜಾಪ್ರಭುತ್ವಕ್ಕೆ ನೀವು ಅವಮಾನ ಮಾಡಿದ್ದೀರಿ. ಸದನದಲ್ಲಿ ಚರ್ಚೆ ಮಾಡಲು ಅವಕಾಶ ಇದ್ದೂ ಅದನ್ನು ಮಾಡದೆ ಏಕಾಏಕಿ ದರಗಳನ್ನು ಹೆಚ್ಚಿಸಿದ್ದೀರಿ. ಇದನ್ನು ರದ್ದು ಮಾಡಬೇಕು. ಸದನ ಸಮಿತಿ ರಚಿಸುತ್ತೀರೋ ಅಥವಾ ಇನ್ನೇನಾದರೂ ರಚಿಸುತ್ತೀರೋ ಅದು ನಿಮಗೆ ಬಿಟ್ಟಿದ್ದುದು. ನಾನಂತೂ ಸದನ ಸಮಿತಿ ರಚಿಸಿ ಎಂದು ಕೇಳುತ್ತಿದ್ದೇನೆ. ಇದನ್ನು ಪರಿಷ್ಕರಿಸಿ ಯಾವುದಾದರೂ ಕ್ರಮವನ್ನು ಸರ್ಕಾರ ತೆಗೆದುಕೊಳ್ಳದೆ ಹೋದರೆ ಖಂಡಿತವಾಗಿ ಇಲ್ಲಿ ನಿಮಗೆ ಪ್ರತಿಭಟನೆ ಬರುತ್ತದೆ; ಆಚೆಕಡೆ ಪ್ರತಿಭಟನೆ ಬರುತ್ತದೆ. ರಾಜಕೀಯ ಜವಾಬ್ದಾರಿಯಿಂದ ನೀವು ಆಲೋಚಿಸಬೇಕೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

+ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಅಧ್ಯಕ್ಷರೇ, ಸಾರಿಗೆ ದರವನ್ನು 35 ಪರ್ಸೆಂಟ್‌ನಿಂದ 150 ಪರ್ಸೆಂಟ್‌ಗೆ ಏರಿಸಿದ್ದಕ್ಕೆ ನಿಲುವಳಿ ಸೂಚನೆ ತಂದಿದ್ದು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತಾ, ಸಾರಿಗೆ ದರವನ್ನು ಹೆಚ್ಚು ಮಾಡುವುದರ ಮೂಲಕ ಸಾರಿಗೆ ಸಂಸ್ಥೆ ಸುಧಾರಣೆ ಮಾಡುವುದಕ್ಕೆ ಸಾಧ್ಯವೇ? ಇದೇ ಕಡೆಯ ಬಾರಿಯಾಗಿ ಸರ್ಕಾರ ಹೆಚ್ಚು ಮಾಡುವುದು? ಇನ್ನೆಂದೂ ಹೆಚ್ಚಿಸದೆ ಇಡೀ ಸಾರಿಗೆ ಸಂಸ್ಥೆಯನ್ನು ಸುಧಾರಣೆ ಮಾಡಿ ಅದಕ್ಕೆ ಕಾಯಕಲ್ಪ ಮಾಡುತ್ತೇವೆಂಬ ತೀರ್ಮಾನ ಇದ್ದರೆ ಅದನ್ನಾದರೂ ಹೇಳಬೇಕು. ಆದರೆ ಬಹಳ ಮುಖ್ಯವಾದದ್ದು ಸರ್ಕಾರಿ ಸ್ವಾಮ್ಯದ ಯಾವುದೇ ಸಂಸ್ಥೆ ಸೇವಾ ಮನೋಭಾವನೆಯಿಂದ, ಹಾಗೆ ಸೇವೆ ಮಾಡುವಾಗ ಯಾವ್ಯಾವ ಲೋಪದೋಷಗಳಾಗಿವೆ ಎಂದು ತಾವು ಗಂಭೀರವಾಗಿ ಯೋಚಿಸಬೇಕು. ನಷ್ಟಕ್ಕೆ ಜನರೇ ಹೊಣೆಗಾರರೇ? ನಷ್ಟಕ್ಕೆ ಜನರಲ್ಲ ಹೊಣೆಗಾರರು ಆಡಳಿತ ವ್ಯವಸ್ಥೆಯೇ ಹೊಣೆಗಾರರು. ಉದಾಹರಣೆಗೆ ನಾನು ಒಮ್ಮೆ ರಾತ್ರಿ 8 ಗಂಟೆಗೆ ಲಕ್ಸುರಿ ಬಸ್‌ನಲ್ಲಿ ಬಂದೆ, ಆ ಬಸ್‌ನಲ್ಲಿದ್ದವರು 5 ಜನ, ಆ ಬಸ್ ಹೊರಡುವ ಮುಂಚೆ ಸರ್ಕಾರಿ ವಾಹನಕ್ಕೆ ಬರುವ ಎಲ್ಲಾ ಜನರನ್ನು ತಡೆದು ಸರ್ಕಾರಿ ಬಸ್‌ಗಿಂತ, 3, 5 ರೂ ಕಡಿಮೆ ಬಹಳ ವ್ಯವಸ್ಥಿತ ಬಸ್‌ನಲ್ಲಿ ಕರೆದುಕೊಂಡು ಹೋಗುತ್ತಿದ್ದೇವೆ ಎಂದು ಎಲ್ಲಾ

ಪ್ಯಾಸೆಂಜರನ್ನು ಕರೆದುಕೊಂಡುಹೋದರು. ಆದರೆ ಒಂದು ನಿಯಮಾವಳಿ ಇದೆ. 3 ಜನ ಇರಲಿ 5 ಜನ ಇರಲಿ, 10 ಗಂಟೆ ರಾತ್ರಿ ಹೊರಡಬೇಕು ಅಂದರೆ ಹೊರಡಬೇಕು. ಅದಕ್ಕೆ ಯಾರು ಹೊಣೆಗಾರರು? ಬರೀ ಐದು ಜನರನ್ನು ಒಂದು ಬಸ್ಸು ಸಾರಿಗೆ ವ್ಯವಸ್ಥೆ ಮೂಲಕ ಕರೆದುಕೊಂಡು ಬಂದರೆ ಅದಕ್ಕೆ ಯಾರು ಹೊಣೆಗಾರರು? ಇದರ ಸುಧಾರಣೆಯನ್ನು ಗಂಭೀರವಾಗಿ ತಾವು ಪರಿಗಣಿಸಬೇಕು. ಎರಡನೆಯದು, ತಾವು ಮಂತ್ರಿಯಾದಾಗ ಅನುಭವದ ಆಧಾರದ ಮೇಲೆ ಸುಧಾರಣೆ ಮಾಡುತ್ತೀರಿ, ಸಾರಿಗೆ ವ್ಯವಸ್ಥೆ ವಿಸ್ತರಿಸಿ ಅದರಲ್ಲೂ ಗ್ರಾಮೀಣ ಪ್ರೇದಶದಲ್ಲಿ ವಿಸ್ತರಿಸುವ ಮೂಲಕ ಸುಧಾರಣೆ ಮಾಡುತ್ತಾರೆಂಬ ಆಶಾಭಾವನೆ ಇತ್ತು. ಆದರೆ ತಾವು ಸುಧಾರಣೆ ಮಾಡ ಹೊರಟಾಗ ಸಂಬಂಧಪಟ್ಟ ಸಚಿವರು ಮತ್ತು ಕಾರ್ಮಿಕರ ನಡುವೆ ವ್ಯತ್ಯಾಸ ಬರತಕ್ಕ ವಿಚಾರ ಸೃಷ್ಟಿಯಾದಾಗ ನಮಗೆ ಯಾವುದೇ ಕಾರಣಕ್ಕೂ ಇದು ಸುಧಾರಣೆಯಾಗಲು ಸಾಧ್ಯವಿಲ್ಲವೆಂಬ ತೀರ್ಮಾನಕ್ಕೆ ನಾವು ಬಂದಿದ್ದೇವೆ. ಆದ್ದರಿಂದ ಕಾರ್ಮಿಕರು ಹಾಗೂ ಸಾರಿಗೆ ಸಚಿವರ ಮಧ್ಯೆ ಬಾಂಧವ್ಯ ಸುಧಾರಿಸಬೇಕು. ಮೂರನೆಯದು, ಭ್ರಷ್ಟಾಚಾರ ತಡೆಯವುದನ್ನು ಜವಾಬ್ದಾರಿಯಿಂದ ನೀವು ನಿರ್ವಹಿಸಬೇಕು. ಇದ್ಯಾವುದನ್ನೂ ಮಾಡದೆ ಬಡವರ ಜೇಬಿಗೆ ಕೈಹಾಕುವ ಕೆಲಸ ನಿಲ್ಲಿಸಿ. ಈಗೇನು ಹೆಚ್ಚಿಸಿದ್ದೀರಿ ಅದನ್ನು ವಾಪಸ್ ಪಡೆದು ಸದನ ಸಮಿತಿ ಮಾಡುವ ಮೂಲಕ ಏನೇನು ಸುಧಾರಣೆ ತರಬಹುದು ಎಷ್ಟನ್ನು ಮಾಡಿದರೆ ಸಾರಿಗೆ ಸುಧಾರಣೆ ಮಾಡಲಿಕ್ಕೆ ಸಾಧ್ಯ. ಎಂದೆಂದೂ ಇಂತಹ ಸಮಸ್ಯೆ ಸೃಷ್ಟಿಯಾಗದಂತೆ ಕೊನೆಗೆ ಖಾಸಗೀಕರಣಕ್ಕೆ ಹೋಗುವಂತಾಗಬಾರದು. ಖಾಸಗಿ ರಂಗಕ್ಕೆ ವಹಿಸಿದರೆ ಏನಾಗುತ್ತದೆಂಬುದಕ್ಕೆ ಖೋಡೇಸ್ ಒಬ್ಬ ಸಾಕು, ಸಹಕಾರಿ ವಲಯದಲ್ಲಿದ್ದ ಒಂದು ಕಾರ್ಖಾನೆ ಖೋಡೇಸ್ ಹಸ್ತಕ್ಷೇಪ ಆದನಂತರ ಇಡೀ ವ್ಯವಸ್ತೆ ನಾಶವಾಗಿಹೋಯಿತು, ಎರಡು ವರ್ಷದಿಂದ ಆ ಪ್ರದೇಶದ ರೈತರು ನಾಶ, ಯಾವುದೇ ಕ್ರಮ ತೆಗೆದುಕೊಳ್ಳದ ನಿಷ್ಕ್ರಿಯೆ ಇರತಕ್ಕ ಸರ್ಕಾರ ಆಯಿತು. ಆದ್ದರಿಂದ ಖಾಸಗಿಕರಣದ ಜೊತೆಯಲ್ಲಿ ಸರ್ಕಾರ ಬಸ್‌ಗಳೂ ಇದ್ದರೆ ಸುಧಾರಣೆ ಮಾಡಲು ಸಾಧ್ಯ. ಚಳುವಳಿ ನಮ್ಮ ಮೂಲಭೂತವಾದ ಹಕ್ಕು. ಚಳುವಳಿ ಮಾಡುವವರ ವಿರುದ್ಧ ಹಿಂಸಾತ್ಮಕ ಕ್ರಮ ಜರುಗಿಸಿ ಹತ್ತಿಕ್ಕುವ ಕ್ರಮವನ್ನು ನೀವು ದಯವಿಟ್ಟು ಬಿಡಬೇಕು. ಒಂದು ಸಾರಿ ಮಾನ್ಯ ಮುಖ್ಯಮಂತ್ರಿಗಳು ಒಂದು ಸಭೆಯಲ್ಲಿ ಹೇಳಿದ್ದರು, ನಮ್ಮ ಕಾಲದಲ್ಲಿ ವಿಚಾರದ ಮೇಲೆ ನಾವು ಚಳುವಳಿ ಮಾಡುತ್ತಿದ್ದೆವು, ಜೈಲಿಗೆ ಹೋಗುತ್ತಿದ್ದೆವು, ಇಂದು ಎಲ್ಲಾ ಪಕ್ಷಗಳು, ರಾಜಕಾರಣಿಗಳು ಹಾಗೆ ಚಳುವಳಿ ಮಾಡುವುದಿಲ್ಲ ವೈಚಾರಿಕ ಹೋರಾಟ ಮಾಡುವುದಿಲ್ಲ, ಅದಿಲ್ಲದಿದ್ದರೆ ರಾಜಕಾರಣದಲ್ಲಿ ಬದಲಾವಣೆಯಾಗುವುದಿಲ್ಲ ಎಂದು ಹೇಳಿದರು. ಅಂತಹ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಅಹಿಂಸಾತ್ಮಕ ಮಾರ್ಗದಲ್ಲಿ ಚಳುವಳಿ ಮಾಡುತ್ತಿದ್ದವರ ಮೇಲೆ ಲಾಠಿ ಚಾರ್ಜ್, ನೀರಿನ ಫಿರಂಗಿ ಬಳಸಬಾರದು. ಚಳುವಳಿ ಯಾವರೀತಿ ಮಾಡಬೇಕೆಂದು ಸರ್ಕಾರ ಕೆಲವು ರೀತಿಗಳನ್ನಾದರೂ ಹೇಳಿಕೊಟ್ಟರೆ ಆ ರೀತಿಯಲ್ಲಿ ಮಾಡುತ್ತೇವೆ. ಚಳುವಳಿ ನಮ್ಮ ಮೂಲಭೂತವಾದ ಹಕ್ಕು. ಅದನ್ನು ಗೌರವಿಸಬೇಕು ಸರ್ಕಾರ ಏನು ಸಾರಿಗೆ ದರ ಜಾಸ್ತಿ ಮಾಡಿದೆ ಅದನ್ನು ವಾಪಸ್ ಪಡೆದು ಸದನ ಸಮಿತಿ ಮಾಡುವ ಮೂಲಕ ಇವತ್ತು ಸಮಸ್ಯೆ ಬಗೆಹರಿಸಬೇಕು. ಇಲ್ಲದಿದ್ದರೆ ವಾಟಾಳ್ ನಾಗರಾಜ್‌ರು ಹೇಳಿದಂತೆ

ಬಹಿರಂಗವಾಗಿ ಚಳುವಳಿ ನಡೆದಾಗ ಅದನ್ನು ಎದುರಿಸಬೇಕಾದ ಪರಿಸ್ಥಿತಿ ಸರ್ಕಾರಕ್ಕೆ ಬರುತ್ತದೆ. ದಯವಿಟ್ಟು ಇದನ್ನು ಗಂಭೀರವಾಗಿ ಪರಿಶೀಲಿಸಬೇಕೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

+ ಶ್ರೀ ಬಿ. ಮುನಿಯಪ್ಪ (ಗಾಂಧಿನಗರ) : ಅಧ್ಯಕ್ಷರೇ, ಕರ್ನಾಟಕ ಸರ್ಕಾರ ಸಾರಿಗೆ ದರ ಹೆಚ್ಚಿಸಿರುವುದನ್ನು ವಾಪಸ್ ಪಡೆಯಬೇಕೆಂದು ನಿಲುವಳಿ ಸೂಚನೆ ತಂದಿರುವುದಕ್ಕೆ ಅನುಮತಿ ಕೊಡಬೇಕೆಂದು ಮಾತನಾಡುತ್ತಿದ್ದೇವೆ, ಇವತ್ತು ಸಾಕಷ್ಟು ವಿಚಾರಗಳು ಪ್ರಸ್ತಾಪವಾಗಿದ್ದರೂ, ಸಾಧಾರಣವಾಗಿ ಬೆಂಗಳೂರಿನಲ್ಲಿ ಅಥವಾ ರಾಜ್ಯದಲ್ಲಿ ಯಾವ ಬಸ್ಸೂ ಖಾಲಿ ಓಡಾಡುವುದನ್ನು ನೋಡಲಿಕ್ಕೆ ಸಾಧ್ಯವಿಲ್ಲ. ಬೆಂಗಳೂರಿನಲ್ಲಂತೂ 50 ಜನರಿರಬೇಕಾದ ಕಡೆ 75-80 ಜನ ಪ್ರಯಾಣಿಸುತ್ತಾರೆ ಆದರೂ ಸಾರಿಗೆ ಸಂಸ್ಥೆಯಲ್ಲಿ ಅಪಾರ ನಷ್ಟ ತೋರಿಸುವ ಪರಿಸ್ಥಿತಿ ಇದ್ದರೆ ಅದಕ್ಕೆ ಕಾರಣವನ್ನು ಹುಡುಕಬೇಕಾಗಿದೆ. ಮಾನ್ಯ ಸಿಂಧ್ಯಾ ಅವರು ಯಾವ ಇಲಾಖೆಯಲ್ಲಿ ಕೆಲಸ ಮಾಡಿದರೂ ಅಲ್ಲಿ ಒಳ್ಳೆಯ ಗುಣಮಟ್ಟ ತರಲು ಪ್ರಾಮಾಣಿಕವಾಗಿ ಶ್ರಮಿಸಿದ್ದಾರೆ. ಸಾರಿಗೆ ಸಂಸ್ಥೆಯಲ್ಲಿ ಸೋರಿಕೆಯಾಗುತ್ತಿದ್ದುದನ್ನು ತಪ್ಪಿಸುವಲ್ಲಿ ಅವರು ಏಕೆ ಯಶಸ್ವಿಯಾಗಲಿಲ್ಲವೆಂಬ ಪ್ರಶ್ನೆ ನನಗಿದೆ. ಅಲ್ಲಿನ ಕಾರ್ಮಿಕರಿಗೂ ಇಲಾಖೆ ಸಚಿವರಿಗೂ ಅಧಿಕಾರಿಗಳಿಗೂ ಭಿನ್ನಾಭಿಪ್ರಾಯಗಳಿರುವುದನ್ನು ಪತ್ರಿಕೆಗಳಲ್ಲಿ ನಾವು ಓದುತ್ತಿದ್ದೇವೆ. ಇವತ್ತು 35,60, 70 ಪರ್ಸೆಂಟ್ ಹೆಚ್ಚಿಸಿರುವ ಬೆಲೆಯಿಂದ ಜನಸಾಮಾನ್ಯರು ಬೆಂಗಳೂರಿನಲ್ಲಿ ಸಾವಿರ ರೂ ಸಂಬಳ ಪಡೆದು ಖಾಸಗಿ ಅಥವಾ ಸರ್ಕಾರಿ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ತಿಂಗಳಿಗೆ ಬಸ್ ದರಕ್ಕಾಗಿ 200,400 ರೂ ಖರ್ಚಾಗುತ್ತದೆ. ಉಳಿದ ಹಣದಲ್ಲಿ ಅವರು ಕುಟುಂಬ ನಡೆಸಬೇಕು. ಮನಬಿಚ್ಚಿ ಆಡಳಿತ ನಡೆಸುವ ಸರ್ಕಾರ ಇಲ್ಲಿ ಮಾತನಾಡುವಾಗ, ಮಾನ್ಯ ನಾಗೇಗೌಡರು ಈ ಹೋರಾಟ ಕೇವಲ ರಾಜಕೀಯ ಪಕ್ಷಗಳ ನಾಯಕರ ಹೋರಾಟ ಎಂದು ಹೇಳಿದರು. ಅದು ಖಂಡಿತಾ ನಿಜ. ಜನಸಾಮಾನ್ಯರ ಬೆಂಬಲವಿಲ್ಲವೆನ್ನುವುದು ನಿಜವಲ್ಲ. ಜನಸಾಮಾನ್ಯರು ಈ ಹೋರಾಟದಲ್ಲಿ ಬಂದು ಭಾಗವಹಿಸಿ ಬಸ್ ದರವನ್ನು 5-10 ನಯಾ ಪೈಸೆಯಷ್ಟು ಪಶ್ಚಿಮ ಬಂಗಾಳದಲ್ಲೋ, ಕೇರಳದಲ್ಲೋ, ತಮಿಳುನಾಡಿನಲ್ಲೋ ಹೆಚ್ಚು ಮಾಡಿದ್ದರೆ ಅಲ್ಲಿ ಮಂತ್ರಿಗಳು ಹೊರಗಡೆ ಬರುವುದಕ್ಕಾಗುವುದಿಲ್ಲ. ಸಾರಿಗೆ ವ್ಯವಸ್ಥೆ ವಿರುದ್ಧದ ಹೋರಾಟಕ್ಕೆ ಅಲ್ಲಿನ ಜನರು ಬರುತ್ತಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಅದರಲ್ಲೂ ಬೆಂಗಳೂರು ನಗರದಲ್ಲಿ ನಾವು ಎಷ್ಟೋ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾಗೇಗೌಡರಿಗೆ ಚಳುವಳಿಯಾಗಿದೆಯೆಂದು ಯಾವಾಗ ಗೊತ್ತಾಗುತ್ತದೆಂದರೆ ಹತ್ತು ಬಸ್ಸುಗಳನ್ನು ಸುಟ್ಟು ಹಾಕಿ ಅವರನ್ನು ಮನೆಯೊಳಗಿಂದ ಹೊರಗಡೆ ಬಾರದಂತೆ ಮಾಡಿದ್ದರೆ ಮತ್ತು ಅವರ ಕಾರಿಗೆ ಕಲ್ಲು ಹೊಡೆದಿದ್ದರೆ ತೀವ್ರವಾಗಿ ಚಳುವಳಿ ನಡೆದಿದೆಯೆಂದು ಅಂದುಕೊಳ್ಳುತ್ತಿದ್ದರು. ನಾವು ಮೆರವಣಿಗೆಯಲ್ಲಿ ಶಾಂತಿಯುತವಾಗಿ ಬಂದು ನಾವೇ ಹೊಡೆಸಿಕೊಂಡು ಹೋಗುವಾಗ ಅದೆಂತಹ ಚಳುವಳಿ ಎಂದು ಅವರಿಗೆ ಅನ್ನಿಸಿದೆ.

ಶ್ರೀ ಬಿ. ಮುನಿಯಪ್ಪ : ನಾನು ತಿಳಿದುಕೊಂಡಿರುವಂತೆ, ಸಾರಿಗೆ ಸಂಸ್ಥೆ ಬಗ್ಗೆ ಇವೊತ್ತು ಬೆಂಗಳೂರು ನಗರದಲ್ಲಿ ಯಾವುದೇ ಚಳುವಳಿ ಆಗಬೇಕಾದರೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಮಂಡ್ಯಕ್ಕೆ ಬಂದು ಅಲ್ಲಿರುವ ಮಾದೇಗೌಡರಿಗೆ ಸ್ವಲ್ಪ ತೀವ್ರವಾಗಿ ಚಳುವಳಿ ಮಾಡಬೇಕೆಂದು ಹೇಳಬೇಕಾಗುತ್ತದೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಇವರಿಗೆ ಚಳುವಳಿ ಮಾಡಿ ಅಭ್ಯಾಸವಿಲ್ಲ. ಬರೀ ಮಂತ್ರಿಯಾಗಿ ಕೆಲಸ ಮಾಡಿ ಅಭ್ಯಾಸವಿದೆ. ಅವರು ಅಪರೂಪಕ್ಕೆ ಚಳುವಳಿ ಮಾಡುವುದಕ್ಕೆ ಹೋದರೆ ಹೊಡೆಯದೆ ಇನ್ನೇನು ಮಾಡುತ್ತಾರೆ?

ಶ್ರೀ ಬಿ. ಮುನಿಯಪ್ಪ : ಬೆಂಗಳೂರು ನಗರದಲ್ಲಿ ವಿದ್ಯುಚ್ಛಕ್ತಿ ದರ ಹೆಚ್ಚಾದಾಗ ಎಲ್ಲಾ ರಾಜಕೀಯ ಪಕ್ಷಗಳ ಸಂಘಟನೆಗಳು ಬೀದಿಗಿಳಿದು ಹೋರಾಟ ಮಾಡುವಾಗ, ಹೋರಾಟವನ್ನು ನಮ್ಮ ಪಕ್ಷ ಹಾಗೂ ಹಲವಾರು ಪಕ್ಷಗಳು ಮಾಡಿವೆ. ಬೆಂಗಳೂರಿನಲ್ಲಿ ರಾಜಕೀಯ ಪಕ್ಷಗಳು ಮಾಡುವ ಹೋರಾಟಕ್ಕೆ ಯಾವುದೇ ಸಾರ್ವಜನಿಕರು ಇವೊತ್ತಿನವರೆವಿಗೂ ಬಂದು ಪಾಲ್ಗೊಂಡಿಲ್ಲ. ಹೋರಾಟಕ್ಕೆ ಆ ಪಕ್ಷದ ಕಾರ್ಯಕರ್ತರು, ಹಿಂಬಾಲಕರು ಬರುತ್ತಾರೆ. ಆದರೆ, ಅದಕ್ಕೆ ಜನರ ವಿರೋಧವಿಲ್ಲವೆಂದು ನಾವು ತಿಳಿಯುವುದಕ್ಕಾಗುವುದಿಲ್ಲ. ಉದಾಹರಣೆಗೆ ಬೆಂಗಳೂರು ನಗರದಲ್ಲಿ ರೆವಿನ್ಯೂ ನಿವೇಶನಗಳಲ್ಲಿ ಕಟ್ಟಿರುವಂಥ ಮನೆಗಳನ್ನೆಲ್ಲಾ ಸಕ್ರಮಗೊಳಿಸಬೇಕೆಂದು ನಾವು ಹೋರಾಟ ಮಾಡಿದೆವು. ಆಗ ರೆವಿನ್ಯೂ ಸೈಟ್‌ಗಳಲ್ಲಿ ಮನೆ ಕಟ್ಟಿಕೊಂಡಿರುವವರು ನಮ್ಮ ಹೋರಾಟದಲ್ಲಿ ಪಾಲ್ಗೊಂಡಿಲ್ಲ. ನಮ್ಮದು ರೆವಿನ್ಯೂ ಸೈಟ್ಸ್ ಅಲ್ಲದಿದ್ದರೂ ನಾವು ವಿಧಾನಸಭೆಯಲ್ಲಿ ಧರಣಿ ಮಾಡಿ ಹೋರಾಟ ಮಾಡುವಂಥ ಕೆಲಸ ಮಾಡಿದ್ದೇವೆ. ಆ ಹಿನ್ನೆಲೆಯಲ್ಲಿ ಇವೊತ್ತು ಸಾರಿಗೆ ಸಂಸ್ಥೆಯಲ್ಲಾಗುತ್ತಿರುವ ನಷ್ಟವನ್ನು ತಡೆಗಟ್ಟಿ ಅದು ಲಾಭದಾಯಕವಾಗುವಂತೆ ನೋಡಿಕೊಳ್ಳಬೇಕು ಮತ್ತು ಸಾರಿಗೆ ಸಂಸ್ಥೆಯಲ್ಲಿ ಪ್ರತಿ ತಿಂಗಳು ಆಗತಕ್ಕಂಥ ನಷ್ಟವೇನಿದೆ, ನಾನು ಕೆಲವು ವರ್ಷಗಳ ಹಿಂದೆ ಪತ್ರಿಕೆಗಳಲ್ಲಿ ಓದಿದ್ದೆ. ಏನೆಂದರೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಟಿಕೇಟ್‌ಗಳನ್ನು ವೇಲೂರಿನಲ್ಲಿ ಮುದ್ರಿಸುತ್ತಿದ್ದಾಗ ಪೋಲೀಸರು ಹಿಡಿದರೆಂಬ ಒಂದು ಸುದ್ದಿ ಓದಿದೆ. ಆದರೆ, ವೇಲೂರಿನಲ್ಲಿ ಯಾರು ಟಿಕೇಟ್‌ಗಳನ್ನು ಮುದ್ರಿಸಿದರು? ಆ ಕೇಸ್ ಏನಾಗಿದೆ ಎಂಬ ಬಗ್ಗೆ ಇವೊತ್ತಿನವರೆವಿಗೂ ಆ ಕುರಿತ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದುವುದಕ್ಕಾಗಿಲ್ಲ. ಆ ರೀತಿ ಸಾರಿಗೆ ಸಂಸ್ಥೆಯ ಟಿಕೇಟ್‌ಗಳನ್ನು ಡೂಪ್ಲಿಕೇಟ್ ಆಗಿ ಪ್ರಿಂಟ್ ಮಾಡುವಂಥ ವ್ಯವಸ್ಥೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಇದೆಯೆಂದು ನಾವೆಲ್ಲರೂ ತಿಳಿದುಕೊಂಡಿದ್ದೇವೆ. ಸಾರಿಗೆ ಸಂಸ್ಥೆಯಲ್ಲಿ ಈ ರೀತಿ ಹಣ ಸೋರಿ ಹೋಗುವುದನ್ನು ತಡೆಗಟ್ಟಬೇಕು. ಈಗಾಗಲೇ ಹಲವಾರು ಮಾನ್ಯ ಸದಸ್ಯರುಗಳು ಸಾಕಷ್ಟು ವಿಷಯಗಳನ್ನು ಪ್ರಸ್ತಾಪಿಸಿದ್ದು ಬಸ್ ದರ ಏರಿಕೆಯಿಂದ ಜನ ಸಾಮಾನ್ಯರ ಮೇಲೆ ಅದರಲ್ಲೂ ಮುಖ್ಯವಾಗಿ ಹಳ್ಳಿಗಾಡಿನ ಜನರ ಮೇಲೆ ಹೆಚ್ಚು ಪರಿಣಾಮ ಬೀಳುತ್ತದಾದ್ದರಿಂದ ಸರ್ಕಾರ ಇದನ್ನು ಪ್ರತಿಷ್ಠೆಯ ವಿಷಯವನ್ನಾಗಿ ತೆಗೆದುಕೊಳ್ಳದೆ ಈ ಸಂಬಂಧ ಎಲ್ಲಾ ಪಕ್ಷಗಳ ನಾಯಕರುಗಳನ್ನು ಕರೆದು ಚರ್ಚಿಸಿ ಹೆಚ್ಚಿಸಿರುವ ದರವನ್ನು ಹಿಂತೆಗೆದುಕೊಂಡರೆ ಮುಂದಿನ ಹಂತದಲ್ಲಿ ಆಗತಕ್ಕಂಥ ಹೋರಾಟಗಳಿಂದ ಜನಸಾಮಾನ್ಯರಿಗಾಗುವ ತೊಂದರೆಗಳನ್ನು ತಡೆಗಟ್ಟಲು ಸಾಧ್ಯವೆನ್ನುವುದನ್ನು ನಾನು ಮಾನ್ಯ ಮಂತ್ರಿಗಳಲ್ಲಿ ಹಾಗೂ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಮಾನ್ಯ ಸಚಿವರಾದ ಸಿಂಧ್ಯಾರವರ ಮೇಲೆ ದಬ್ಬಾಳಿಕೆಯಿಂದ ಅವರಿಗೆ ಸಾರಿಗೆ ಖಾತೆ ಕೊಟ್ಟು ಅವರ ಮೇಲೆ ಗೂಬೆ ಕೂರಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಂಬ ಸಂಗತಿಗಳೇನಿವೆ ಅದನ್ನೆಲ್ಲಾ ನಾನು ನಂಬುವುದಿಲ್ಲ; ಸಿಂಧ್ಯಾರವರು ಬಹಳ ಬುದ್ಧಿವಂತರಿದ್ದಾರೆ. ಅವರು ಯಾವುದೇ ಕೆಲಸ ತೆಗೆದುಕೊಂಡರೂ ಕೂಡ ಪ್ರಾಮಾಣಿಕವಾಗಿ ಅದನ್ನು ನಿರ್ವಹಿಸಿ ಹೆಸರುಗಳಿಸುವ ಶಕ್ತಿ ಅವರಿಗಿದೆ. ಇವೊತ್ತು ಸಾರಿಗೆ

ಸಂಸ್ಥೆಯಲ್ಲಾಗಿರುವ ಅನ್ಯಾಯಗಳನ್ನು ತಡೆಗಟ್ಟಿದಾಗ ಅವರ ಪ್ರಾಣಕ್ಕೆ ಭಯವಿದೆ ಎನ್ನುವಂಥ ಹೇಳಿಕೆಗಳೆಲ್ಲವೂ ಬಂದವು, ಆದರೆ, ಯಾರು ಏನೂ ಮಾಡಲು ಸಾಧ್ಯವಿಲ್ಲ. ಅವರು ಪ್ರಾಮಾಣಿಕವಾಗಿ ಕೆಲಸ ಮಾಡುವಾಗ ಕರ್ನಾಟಕದ ಜನತೆ ಅವರ ಹಿಂದೆ ಇರುತ್ತಾರೆಂದು ಹೇಳಿ, ಸರ್ಕಾರ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಇದೇ ಸಂದರ್ಭದಲ್ಲಿ ಸಾರಿಗೆ ಸಂಸ್ಥೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೂ ಹಾಗೂ ಆಡಳಿತ ವರ್ಗದವರ ಮಧ್ಯೆ ಒಂದು ಒಪ್ಪಂದವೇರ್ಪಟ್ಟು, ಆ ಒಪ್ಪಂದ ಹಲವಾರು ವರ್ಷಗಳಿಂದ ಜಾರಿಗೆ ಬಂದಿಲ್ಲ. ಅಲ್ಲಿನ ಕಾರ್ಮಿಕರು ನಿಷ್ಠೆಯಿಂದ ಕೆಲಸ ಮಾಡಬೇಕಾದರೆ ಅವರ ಹಾಗೂ ಆಡಳಿತ ವರ್ಗದ ನಡುವೆ ಆಗಿರುವ ಒಪ್ಪಂದವನ್ನು ಜಾರಿಗೆ ತಂದು ಅವರುಗಳು ಉತ್ಸಾಹದಿಂದ ಕೆಲಸ ಮಾಡುವಂಥ ರೀತಿಯಲ್ಲಿ ಅವರ ಯೋಗಕ್ಷೇಮವನ್ನು ಸರ್ಕಾರ ನೋಡಿಕೊಳ್ಳಬೇಕು. ಆದಕಾರಣ, ಎಲ್ಲಾ ಪಕ್ಷದ ನಾಯಕರುಗಳನ್ನು ಕರೆದು ಜಾರಿಗೆ ತಂದಿರುವ ಬಸ್‌ದರ ಏರಿಕೆಯನ್ನು ವಾಪಸ್ಸು ತೆಗೆದುಕೊಂಡು ಈ ದಿಸೆಯಲ್ಲಿ ಸರ್ಕಾರ ಒಳ್ಳೆಯ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ನಮ್ಮ ಸರ್ಕಾರದ ಸಾರಿಗೆ ನೀತಿ ಮತ್ತು ಸಾರಿಗೆ ಇಲಾಖೆ ಬಗ್ಗೆ ಸದನದಲ್ಲಿ ಚರ್ಚೆಯಾಗುತ್ತಿರುವುದನ್ನು ಕಂಡು ನನಗಂತೂ ತುಂಬಾ ಸಂತೋಷವಾಗಿದೆ. ಕಾರಣವೇನೆಂದರೆ, ಈ ಚರ್ಚೆಯಲ್ಲಿ ಭಾಗವಹಿಸಿರತಕ್ಕಂಥ ಎಲ್ಲಾ ಮುಖಂಡರುಗಳೂ ಸಹ ಕೆಲವು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದು, ಆ ಸಲಹೆಗಳನ್ನು ನಾನು ಆಡಳಿತದಲ್ಲಿ ಕಾರ್ಯಾಚರಣೆ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಈ ಸಂದರ್ಭದಲ್ಲಿ ಸರ್ಕಾರದ ಮುಂದೆ 3-4 ಬೇಡಿಕೆಗಳನ್ನಿಟ್ಟಿರುವ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ವಿರೋಧ ಪಕ್ಷದ ಸದಸ್ಯರಾದ ಮುನಿಯಪ್ಪರವರನ್ನು ಹೊರತುಪಡಿಸಿ ಯಡಿಯೂರಪ್ಪನವರು, ವಾಟಾಳ್ ನಾಗರಾಜ್, ಜಿ.ವಿ.ಶ್ರೀರಾಮರೆಡ್ಡಿ ಹಾಗೂ ಕೆ.ಎಸ್. ಪುಟ್ಟಣ್ಣಯ್ಯನವರುಗಳು ಮಾತನಾಡಿ ಸಿಂಧ್ಯಾರವರು ರಾಜ್ಯದ ಜನತೆಗೆ ದೊಡ್ಡ ದ್ರೋಹವೆಸ ಗಿರುವುದರಿಂದ ಅವರು ರಾಜೀನಾಮೆ ಕೊಡಬೇಕೆಂದು ಹೇಳಿದ್ದಾರೆ. ನನಗೆ ಗೊತ್ತಿರುವಂತೆ ನಾನು ಈ ಇಲಾಖೆಯನ್ನು ವಹಿಸಿಕೊಂಡ ನಂತರ ಅಥವಾ ನಮ್ಮ ಸರ್ಕಾರ ಕಳೆದ ಎರಡೂವರೆ ವರ್ಷಗಳಲ್ಲಿ ಅಧಿಕಾರದಲ್ಲಿದ್ದಂಥ ಸಮಯದಲ್ಲಿ ರಾಜ್ಯದಲ್ಲಿ ಸಾರಿಗೆ ಇಲಾಖೆಯಲ್ಲಿನ ವಿಚಾರದಲ್ಲಿ ಅಂತಹ ಜನ ದ್ರೋಹದ ಯಾವುದೇ ಕೆಲಸವನ್ನೂ ಸಹ ನಾನು ಮಾಡುವುದಕ್ಕೆ ಹೋಗಿಲ್ಲ. ನಾವು ಇಲ್ಲಿ ಬಂದಿರುವುದು ಆಡಳಿತ ನಡೆಸಿ ಸುಧಾರಣೆ ಮಾಡುವುದಕ್ಕೇ ಹೊರತು ರಾಜೀನಾಮೆ ಕೊಡುವುದಕ್ಕಲ್ಲವೆಂಬುದನ್ನು ಸ್ಪಷ್ಟಪಡಿಸಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಗ ಕೊಡುತ್ತೇನೆಂದು ಹೇಳಿ ಈಗ ಮತ್ತೆ ಕೊಡುವುದಕ್ಕೆ ಬಂದಿಲ್ಲವೆಂದು ಏನರ್ಥ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾವು ಇಲ್ಲಿಗೆ ಬಂದಿರುವ ಉದ್ದೇಶ ಆಡಳಿತ ನಡೆಸಿ ಆಡಳಿತದಲ್ಲಿ ಸುಧಾರಣೆ ತಂದು ಜನರಿಗೆ ಸ್ಪಂದಿಸಬೇಕೆನ್ನುವ ದೃಷ್ಟಿಯಿಂದ ಜನರು ನಮಗೆ ಮತ ಕೊಟ್ಟು

ಕಳುಹಿಸಿದ್ದಾರೆ. ಅಥವಾ ನನ್ನ ಕೈಯಲ್ಲಿ ಸಾರಿಗೆ ಇಲಾಖೆಯ ಆಡಳಿತವನ್ನು ನಿರ್ವಹಿಸುವುದಕ್ಕೆ ಸಾಧ್ಯವಿಲ್ಲವೆನ್ನುವ ಭಾವನೆ ನನ್ನ ಆತ್ಮಕ್ಕೆ ಬಂದಿದ್ದರೆ ನಾನು ಒಂದು ನಿಮಿಷವೂ ಸಹ ಇಲ್ಲಿರುತ್ತಿರಲಿಲ್ಲವೆಂಬ ಮಾತನ್ನು ಆತ್ಮಸಾಕ್ಷಿಯಾಗಿ ಹೇಳುತ್ತಿದ್ದೇನೆ. ನಾನು ಈ ಕುರಿತು ಬಹಳ ಯೋಚಿಸಿದ್ದೇನೆ. ಮತ್ತು ನಮ್ಮ ಸರ್ಕಾರದಲ್ಲಿರುವ ನಾವೆಲ್ಲರೂ ತೆಗೆದುಕೊಂಡಿರುವ ಕ್ರಮಗಳೇನಿವೆ, ಆ ಕ್ರಮಗಳು ಜನರ ದೃಷ್ಟಿಯಿಂದ ಸರಿಯೇ, ಇಲ್ಲವೇ ಎಂಬುದರ ಬಗ್ಗೆ ಬಹಳ ದೀರ್ಘವಾಗಿ ಆಲೋಚಿಸಿದ್ದೇವೆ. ನಾನು ಮಾಡುತ್ತಿರುವುದು ತಪ್ಪೆಂದು ನನಗೇನಾದರೂ ಕಿಂಚಿತ್ ಅನಿಸಿದ್ದರೆ ನಾನು ಇಲ್ಲಿ ಇರುತ್ತಿರಲಿಲ್ಲ, ಖಂಡಿತವಾಗಿಯೂ ಇರುತ್ತಿರಲಿಲ್ಲ. ಮಾನ್ಯ ಶ್ರೀ ಜೆ.ಹೆಚ್. ಪಟೇಲರು ಮುಖ್ಯಮಂತ್ರಿಗಳಾದಂಥ ಸಂದರ್ಭದಲ್ಲಿ ಆಗ ಮಲ್ಲಿಕಾರ್ಜುನ ಖರ್ಗೆಯವರು 'ಸಿಂಧ್ಯಾರವರೇ, ನಿಮ್ಮನ್ನು ರಾಜಕೀಯವಾಗಿ ಮುಗಿಸುವುದಕ್ಕೆ ನಿಮಗೆ ಸಾರಿಗೆ ಇಲಾಖೆ ಕೊಟ್ಟಿದ್ದಾರೆ, ಆದಕಾರಣ, ನಿಮ್ಮನ್ನು ಗೃಹ ಇಲಾಖೆಯಿಂದ ಡಿಫೋಟ್ ಮಾಡಿದ್ದಾರೆ ಎಂದು ಹೇಳಿದಾಗ ನಾನು 'ಇಲ್ಲ, ನಾನು ಎಂಟನೇ ಸ್ಥಾನದಲ್ಲಿದ್ದೆ ಈಗ ಐದನೇ ಸ್ಥಾನಕ್ಕೆ ಬಂದಿದ್ದೇನೆ. ಮುಂದೆಯೂ ಹೀಗೆಯೇ ಹೋಗುತ್ತೇನೆ. ಹಾಗೆ ನಾನು ಹೋಗುವುದಕ್ಕೆ ಇದು ನನಗೆ ಕಾರಣವಾಗಿದೆ ಎನ್ನುವುದನ್ನೂ ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಅಂತೂ ಆ ಆಸೆಯನ್ನು ಇಟ್ಟುಕೊಂಡಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅದು ತಪ್ಪೇನೂ ಇಲ್ಲ, ಇರಲೇಬೇಕು, ಅದು ನಿಮಗೂ ಇದೆ ನನಗೂ ಇದೆ.

ಅಧ್ಯಕ್ಷರು : ಹೀಗೆ ಎಂದರೆ ಇಲ್ಲಿಗೆ ಬರುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೆ.ಎಸ್.ಆರ್.ಟಿ.ಸಿ ಕೆಡುವವರೆಗೂ ಅವರು ಆ ಸ್ಥಾನ ಬಿಡುವುದಿಲ್ಲ. ಇವರು ಅದನ್ನು ಕೆಡಿಸುವವರೆಗೂ ಮುಖ್ಯಮಂತ್ರಿಯವರು ಅವರನ್ನು ಅಲ್ಲಿಂದ ತೆಗೆಯುವುದಿಲ್ಲವೆಂಬ ವಿಚಾರ ಖಂಡಿತವಾಯಿತು.

ಅಧ್ಯಕ್ಷರು : ನಾನು ಹೇಳಿದ್ದನ್ನು ತಾವು ಕೇಳಿಸಿಕೊಳ್ಳಲಿಲ್ಲ. ತಾವು ಮಾತನಾಡುತ್ತಾ ಹೀಗೆ ಬರುತ್ತೇನೆಂದು ಹೇಳಿದಿರಲ್ಲಾ, ಹಾಗಾದರೆ ಇಲ್ಲಿಗೆ ಬರುತ್ತೀರೋ ಎಂದು ಕೇಳಿದೆ.

ಶ್ರೀ ಪಿ.ಜಿ.ಆರ್ ಸಿಂಧ್ಯಾ : ಇಲ್ಲ, ನೀವೇ ಅಲ್ಲಿರಬೇಕು.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಒಬ್ಬರನ್ನು ಹೊರತುಪಡಿಸಿ ಆ ಸ್ಥಾನವನ್ನು ಬೇರಾರೂ ಒಪ್ಪುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಣ್ಣು ಎಲ್ಲಿದೆಯೆಂದರೆ, ಅತ್ತ ಕಡೆಯೇ ಇದೆ. ಅವರು ಮೇಲೆ ಬರುವುದಿಲ್ಲ, ಏಕೆಂದರೆ ಸ್ಟೆಪ್ ಹತ್ತಬೇಕಲ್ಲಾ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಅಲ್ಲಿ ಕುಳಿತಿರುವುದರಿಂದಲೇ ನಾವು ಸ್ವಲ್ಪ ಉತ್ಸಾಹದಿಂದ ಒಂದು ಚೂರು ಕೆಲಸ ಮಾಡುತ್ತಿದ್ದೇವೆ. ನಾವು ಅಲ್ಲಿ ಬರುವವರೆಗೂ ನೀವು ಅಲ್ಲಿಯೇ ಇರಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೆಡಿಸುವ ತನಕ ನಾನು ಬಿಡುವುದಿಲ್ಲವೆಂಬುದು ಅವರ ವಾದ. ಸಂಪೂರ್ಣ ಹಾಳು ಮಾಡಿಯೇ ನಾನು ಈ ಇಲಾಖೆಯನ್ನು ಬಿಡುವುದಾಗಿ ಹೇಳಿದ್ದಾರೆ, ಹಾಗೇ ಮಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇದರಲ್ಲಿ ರಾಜಕೀಯ ಪಿತೂರಿ ಇದೆಯೆಂದಲ್ಲ. ಮೊದಲನೇ ಬಾರಿ ಮಾನ್ಯ ದೇವೇಗೌಡರು ರಾಜ್ಯದ ಮುಖ್ಯಮಂತ್ರಿಗಳಾದ ಸಂದರ್ಭದಲ್ಲಿ ನನ್ನನ್ನು ಖಾಸಗಿಯಾಗಿ ಕರೆದು ಮಾತನಾಡುವಾಗ ಸಾರಿಗೆ ಇಲಾಖೆಯನ್ನು ನೀವೇ ನಿರ್ವಹಿಸಬೇಕೆಂಬ ವಿಚಾರವನ್ನು ಪ್ರಸ್ತಾಪಿಸಿದ್ದರು. ನನ್ನಂತಹ ಬಹಳಷ್ಟು ಜನರು, ನಮ್ಮ ಚುನಾಯಿತ ಪ್ರತಿನಿಧಿಗಳು, ಸಹೋದ್ಯೋಗಿಗಳು, ನಮ್ಮ ಶಾಸಕಾಂಗ ಪಕ್ಷದ ಸದಸ್ಯರುಗಳೆಲ್ಲರೂ ಸಹ ಸಾರಿಗೆ ಖಾತೆಯನ್ನು ಸಿಂಧ್ಯಾರವರು ವಹಿಸಿಕೊಂಡು ನಿರ್ವಹಿಸಿದ ನಂತರ ಬಹಳ ಚೆನ್ನಾಗಿ ಕೆಲಸ ಮಾಡುತ್ತಾರೆಂಬ ಆಸೆ ಇಟ್ಟುಕೊಂಡಿದ್ದಾರೆ. ನಮ್ಮ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ನನ್ನನ್ನು ಖಾಸಗಿಯಾಗಿ ಕರೆಸಿ 'ಈ ಸಂಸ್ಥೆ ಬಹಳ ಕೆಟ್ಟು ಹೋಗಿದೆ, ನಮ್ಮ ಸರ್ಕಾರಕ್ಕೆ ಎರಡು ಇಲಾಖೆಗಳಿಂದ ಅಂದರೆ ಒಂದು ಕೆ.ಇ.ಬಿ. ಮತ್ತೊಂದು ಕೆ.ಎಸ್.ಆರ್.ಟಿ.ಸಿ.ಯಿಂದ ಕೆಟ್ಟ ಹೆಸರು ಬರುತ್ತಿರುವುದರಿಂದ, ನೀವು ಈ ಇಲಾಖೆ ವಹಿಸಿಕೊಂಡು ಸಂಸ್ಥೆಯನ್ನು ಸರಿಪಡಿಸಬೇಕು ಇಲ್ಲದಿದ್ದರೆ ನಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆಂದು. ಕೆಟ್ಟು ಹೋಗಿರುವ ಸಂಸ್ಥೆಯನ್ನು ಮತ್ತೆ ಸರಿಪಡಿಸಬೇಕೆಂಬ ದೃಷ್ಟಿಯಿಂದ ನನಗೆ ಈ ಇಲಾಖೆಯನ್ನು ವಹಿಸಿಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಕೆ.ಎಸ್.ಆರ್.ಟಿ.ಸಿ. ಕೆಡಿಸಿ ನಾನು ಕೆಇಬಿ ಕೆಡಿಸುತ್ತೇನೆಂದು....

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಆದುದರಿಂದ, ಸಂಸ್ಥೆಯನ್ನು ಸರಿಪಡಿಸಲು ನಾನು ಹೊರಟಿದ್ದೇನೆ. ನನಗೆ ಇವೊತ್ತು ಸಂತೋಷವಾಗಿರುವುದೇನೆಂದರೆ, ನಿಜವಾಗಿಯೂ ನಾನು ವಿರೋಧ ಪಕ್ಷದ ನಾಯಕರನ್ನು ಹಾಗೂ ಮಾನ್ಯ ಹಿರಿಯ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರನ್ನು ಮತ್ತು ಇತರೇ ಮುಖಂಡರುಗಳನ್ನು ಅಭಿನಂದಿಸುತ್ತೇನೆ. ಏಕೆಂದರೆ, ಈ ರಾಜ್ಯದಲ್ಲಿ ಬಹಳ ಮಹತ್ವವಾಗಿರುವ ಸುಮಾರು 1,200 ಕೋಟಿ ರೂಪಾಯಿಗಳಷ್ಟು ವಾರ್ಷಿಕ ವ್ಯವಹಾರ ನಡೆಸುತ್ತಿರುವ ಸಂಸ್ಥೆಯಲ್ಲಿ ಸುಮಾರು ಎಪ್ಪತ್ತು ಸಾವಿರಕ್ಕೂ ಹೆಚ್ಚು ಸಂಖ್ಯೆಯ ಕಾರ್ಮಿಕರು ಮತ್ತು ಕಾರ್ಮಿಕ ಕುಟುಂಬಗಳು ಕೆಲಸ ಮಾಡುತ್ತಿವೆ. ಅಲ್ಲದೆ, ಪ್ರತಿ ದಿವಸ ಸುಮಾರು 73 ಸಾವಿರದಿಂದ 80 ಲಕ್ಷ ಸಂಖ್ಯೆಯಷ್ಟು ಪ್ರಯಾಣಿಕರು ಪ್ರಯಾಣಿಸತಕ್ಕ ಅದರಲ್ಲೂ ಬಹಳ ಮುಖ್ಯವಾಗಿ ಸಾರ್ವಜನಿಕ ರಂಗದಲ್ಲಿರತಕ್ಕ ಈ ಸಂಸ್ಥೆ ಬಗ್ಗೆ ಇಷ್ಟೊಂದು ದೀರ್ಘವಾಗಿ, ಶಾಂತವಾಗಿ ಮಾತನಾಡಿ ಸರ್ಕಾರದ ಕಷ್ಟವೇನು; ಸಾರಿಗೆ ಸಂಸ್ಥೆಯನ್ನು ಹೇಗೆ ಉಳಿಸಬೇಕು ಎನ್ನುವ ಬಗ್ಗೆ ಚಿಂತನೆ ಮಾಡಲು ಒಳ್ಳೆಯ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಅವುಗಳನ್ನೆಲ್ಲಾ ನಾನು ಸ್ವೀಕಾರ ಮಾಡುತ್ತೇನೆ.

ಶ್ರೀ ಎ. ರುಕ್ಮಯ್ಯಪೂಜಾರಿ : ನಾವು ರಾಜೀನಾಮೆ ಕೊಡಿಯೆಂದು ಹೇಳುತ್ತೇವೆ; ಅದನ್ನು ಸ್ವೀಕಾರ ಮಾಡುತ್ತೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ರಾಜೀನಾಮೆ ಕೊಡುವುದಿದ್ದರೆ ಇಲ್ಲೇಕೆ ನಿಂತುಕೊಳ್ಳುತ್ತಿದ್ದೆ? ಸದನದ ಸಮಿತಿಯಲ್ಲಿ ತಾವೂ, ಪಾಟಾಳ್ ನಾಗರಾಜ್, ನಾವೆಲ್ಲರೂ ಒಟ್ಟಿಗೆ ಕೆಲಸ ಮಾಡಿರತಕ್ಕವರು. ಇಲ್ಲಿರುವ ಆಂತರಿಕ ಸಮಸ್ಯೆಯೇನು ಎಂಬುದು ನಮಗೆ ನಿಮಗೆ ಗೊತ್ತಿರತಕ್ಕದ್ದಾಗಿದೆ. ಆತ್ಮವಂಚನೆ ಮಾಡಿಕೊಂಡು ಏನೋ ಒಂದು ಉತ್ತರವನ್ನು ಕೊಡಬೇಕು ಎಂದು ನಾನು ಪ್ರಯತ್ನ ಮಾಡುತ್ತಿಲ್ಲ. ಈ ಸಂಸ್ಥೆಯನ್ನು ಖಾಸಗಿಯವರಿಗೆ ಕೊಡಬೇಕು ಎಂಬ ಉದ್ದೇಶ ಸರ್ಕಾರಕ್ಕೆ ಖಂಡಿತವಾಗಿಯೂ ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಬಿ.ಟಿ.ಎಸ್. ಕೆ.ಎಸ್.ಆರ್.ಟಿ.ಸಿ.ಯನ್ನು ಖಾಸಗಿಯವರಿಗೆ ಕೊಡಲು ನಾವು ತಯಾರಾಗಿಲ್ಲ. ರಾಷ್ಟ್ರದಲ್ಲಿರುವ ಸಾರ್ವಜನಿಕ ವಲಯಗಳ ಬಗ್ಗೆ ನಮ್ಮ ಧೋರಣೆಯೇನು ಎಂಬ ಬಗ್ಗೆ ನಾವು ಮತ್ತೆ ಮತ್ತೆ ಪುನರ್‌ವಿಮರ್ಶೆ ಮಾಡಿಕೊಳ್ಳಬೇಕಾಗುತ್ತದೆ. ವಾಚಕರವಾಣಿಯಲ್ಲಿ ಖಾಸಗೀಕರಣವನ್ನೇಕೆ ಮಾಡಬಾರದು ಎಂಬ ಬಗ್ಗೆ ಪತ್ರಿಕೆಗಳಲ್ಲಿ ಓದುತ್ತೇವೆ. ಮಾನ್ಯ ಯಡಿಯೂರಪ್ಪನವರು ಮಾತನಾಡುತ್ತಾ ಬಿ.ಟಿ.ಎಸ್.ನ್ನು ಖಾಸಗಿಯವರು ತೆಗೆದುಕೊಂಡು ಸರ್ಕಾರಕ್ಕೆ ಒಂದೂವರೆ ಕೋಟಿ ರೂಪಾಯಿಗಳನ್ನು ಕೊಡಲು ತಯಾರಾಗಿದ್ದಾರೆಂದು ಹೇಳಿದ್ದಾರೆ. ಆದರೆ ಆಂತರಿಕವಾಗಿ ಏನಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಆ ರೀತಿ ಕೊಡಲು ಯಾರೂ ಮುಂದ ಬಂದಿಲ್ಲ. ತಮ್ಮ ಪಕ್ಷದಲ್ಲಿ ಸಾರಿಗೆ ಮಂತ್ರಿಗಳಾಗಿ ಕೆಲಸ ಕೊಡಲು ಯಾರೂ ಮುಂದೆ ಬಂದಿಲ್ಲ. ತಮ್ಮ ಪಕ್ಷದಲ್ಲಿ ಸಾರಿಗೆ ಮಂತ್ರಿಗಳಾಗಿ ಕೆಲಸ ಮಾಡಿರುವ ಮೂರ್‍ನಾಕು ಜನರಿದ್ದಾರೆ. ಅವರೊಂದಿಗೆ ಸಹ ತಾವು ಸಮಾಲೋಚನೆ ಮಾಡಿ. ಮೊಯ್ಲಿಯವರ ಕಾಲದಲ್ಲಿ ಸದನದ ಸಮಿತಿಯಲ್ಲಿ ಕೆಲಸ ಮಾಡಿದಂಥ ಅನೇಕ ಸದಸ್ಯರು ಈ ಸಭೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಎರಡೂ ಕಡೆಗಳಲ್ಲಿದ್ದಾರೆ. ನಾವು ಆತ್ಮವಂಚನೆ ಮಾಡಿಕೊಳ್ಳದೆ ಈ ಸಂಸ್ಥೆಯನ್ನು ಉಳಿಸಿಕೊಳ್ಳಲು ಹೇಗೆ ಸಾಧ್ಯ ಎನ್ನುವ ಬಗ್ಗೆ ಮೊದಲು ವಿಚಾರ ಮಾಡೋಣ. ಇದು ಸಾರ್ವಜನಿಕ ವಲಯದಲ್ಲಿ ಇರತಕ್ಕಂಥ ಸಂಸ್ಥೆ. ಯಾರೇ ಖಾಸಗಿಯವರು ಈ ರಂಗಕ್ಕೆ ಬಂದು ಇಷ್ಟೊಂದು ಸೌಕರ್ಯಗಳನ್ನು ಕೊಡಲು ಆಗುವುದಿಲ್ಲ ಎಂಬುದನ್ನು ನಾವು ಮನವರಿಕೆ ಮಾಡಿಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಆಡಳಿತ ಪಕ್ಷದ, ವಿರೋಧ ಪಕ್ಷದ ಮಾನ್ಯ ಸದಸ್ಯರೆಲ್ಲರಿಗೆ ಕೆಲವು ವಿಚಾರವನ್ನು ಗಮನಕ್ಕೆ ತರಬಯಸುತ್ತೇನೆ. ನಾನು ಬಹಳ ಹಿಂದಿನ ಮಾಹಿತಿಯನ್ನು ತೆಗೆದುಕೊಳ್ಳಲು ಹೋಗುವುದಿಲ್ಲ. ಸಾರಿಗೆ ಸಂಸ್ಥೆಯ ಇವತ್ತಿನ ಹಣಕಾಸಿನ ಪರಿಸ್ಥಿತಿಯೇನು ಎಂಬ ಬಗ್ಗೆ ಮೊದಲು ವಿವೇಚನೆ ಮಾಡೋಣ. ಈ ಸಂಸ್ಥೆಯಲ್ಲಿ ಇಂದು ಹತ್ತು ಸಾವಿರದಿಂದ ಹನ್ನೊಂದು ಸಾವಿರ ವಾಹನಗಳು ಇದೆ. ಅದರಲ್ಲಿ ಸುಮಾರು ಎರಡೂವರೆ ಸಾವಿರ ವಾಹನಗಳು ಏಳೂವರೆ ಲಕ್ಷ ಕಿಲೋಮೀಟರ್‌ಗಿಂತ ಜಾಸ್ತಿ ಓಡಿದ್ದಾವೆ. ಮತ್ತು ಅವೆಲ್ಲವೂ ಓಡಿಸದಿರುವ ಕಂಡಮ್ ಆಗಿರುವ ಸ್ಥಿತಿಯಲ್ಲಿದೆ. ಮೋಟಾರ್ ವೆಹಿಕಲ್ ಇಲಾಖೆಯವರು ಅವುಗಳಿಗೆ ಫಿಟ್‌ನೆಸ್ ಸರ್ಟಿಫಿಕೇಟ್ ಕೊಡುವುದು ತಪ್ಪೋ, ಸರಿಯೋ ಎಂದು ವಿಚಾರ ಮಾಡುವ ಪರಿಸ್ಥಿತಿಗೆ ಸಾರಿಗೆ ಸಂಸ್ಥೆ ತಲುಪಿದೆ. ಇದಕ್ಕೆ ನಾವೊಬ್ಬರೇ ಕಾರಣವೆಂದು ಹೇಳುತ್ತಿಲ್ಲ. ಅನೇಕ ಕಾರಣಗಳಿವೆ. ದಿವಂಗತ ದೇವರಾಜ್‌ಅರಸುರವರು ಮುಖ್ಯಮಂತ್ರಿಗಳಾಗುವುದಕ್ಕೆ ಮೊದಲು ಸಾರಿಗೆ ಸಚಿವರಾಗಿದ್ದರು. ಮಹಮದ್ ಅಲಿರವರಿಗಿಂತ ಮೊದಲು ಅವರು ಒಳ್ಳೆಯ ಆಡಳಿತವನ್ನು ಕೊಟ್ಟು ಆಗ ಕೆ.ಎಸ್.ಆರ್.ಟಿ.ಸಿ. ಯಲ್ಲಿ ಲಾಭವನ್ನು ಮಾಡಿದ್ದರು. ಶ್ರೀಮಾನ್ ವೀರೇಂದ್ರಪಾಟೀಲರು ಸಾರಿಗೆ ಸಂಸ್ಥೆಯ ಸಚಿವರಾಗಿದ್ದರು. ಮಾನ್ಯ ಗುಂಡೂರಾವ್‌ರವರೂ ಸಹ ಇದರ ಸಚಿವರಾಗಿದ್ದರು.

ಅಧ್ಯಕ್ಷರು : ತಮ್ಮ ವಾದದ ಸುರಳಿಯೇನೆಂದು ಈಗ ಗೊತ್ತಾಗುತ್ತಿದೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವರು ಗುಂಡೂರಾಯರು, ದೇವರಾಜ್‌ಅರಸುರವರು ವೀರೇಂದ್ರಪಾಟೀಲರು ಎಲ್ಲರ ಬಗ್ಗೆ ಹೇಳುತ್ತಿರಬೇಕಾದರೆ ಅದಕ್ಕಾಗಿ ಆ ಇಲಾಖೆಯನ್ನು ಬಿಡುವುದಿಲ್ಲವೆಂದು ಹೇಳುತ್ತಿದ್ದಾರೆ. ಅಲ್ಲಿ ಇಷ್ಟೊಂದು ನಷ್ಟವಾಗುತ್ತಿದ್ದರೂ ಸೋರಿಕೆಯಾಗುತ್ತಿದ್ದರೂ, ಇಷ್ಟೊಂದು ತೊಂದರೆಗಳಿದ್ದರೂ ಆ ಇಲಾಖೆಯನ್ನು ಏಕೆ ಬಿಡುವುದಿಲ್ಲವೆಂದರೆ, ಒಂದು ವೇಳೆ ಬಿಟ್ಟರೆ ಆ ಸ್ಥಾನವೆಲ್ಲಿ ಹೋಗಿಬಿಡುತ್ತದೋ ಎಂದು ಇದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ : ಇವರಿಗಿರುವ ಮುಂದಾಲೋಚನೆಯ ಜೊತೆಗೆ ಕೆ.ಎಸ್.ಆರ್.ಟಿ.ಸಿ.ಯ ರಿಪೇರಿಯಾದರೆ ಒಳ್ಳೆಯದು;

ಶ್ರೀ ಪಿ.ಜಿ.ಆರ್. ಸಿಂಧ್ಯ : ಖಂಡಿತವಾಗಿ ಆಗುತ್ತದೆ. ಮಾನ್ಯ ಅಧ್ಯಕ್ಷರೇ, ನಾವು ನೀವು ವಿದ್ಯಾರ್ಥಿ ದಿಸೆಯಿಂದ ಹೋರಾಟಗಳಲ್ಲಿ ಬಹಳವಾಗಿ ಭಾಗವಹಿಸಿಕೊಂಡು ಬಂದಿದ್ದೇವೆ. ನನಗೆ ಗೊತ್ತಿರುವಂತೆ ನಮ್ಮ ಪಕ್ಷದಲ್ಲೇ ಮಾಜಿ ಸಾರಿಗೆ ಸಚಿವರುಗಳಾದ ಶ್ರೀ ಎಂ.ಪಿ. ಪ್ರಕಾಶ್ ಮತ್ತು ಶ್ರೀ ಸಿದ್ದರಾಮಯ್ಯ ನವರು ಇದ್ದಾರೆ. ಅವರ ಸರತಿ ಮುಗಿಯಬೇಕು.

ಶ್ರೀ ವಾಟಾಳ್ ನಾಗರಾಜ್ : ಇನ್ನು ಎಷ್ಟು ವರ್ಷವಾಗುತ್ತದೆ ಈ ಸರತಿಗಳು ಮುಗಿಯಲು?

ಅಧ್ಯಕ್ಷರು : ಅವರು ಯಾವಾಗಲಾದರೂ ಮುಗಿಸಿಕೊಳ್ಳಲಿ, ಆದರೆ ಅವರು ಅಲ್ಲಿಗೇ ನಿಂತುಬಿಡುತ್ತಾರೆ ಮುಂದೆ ಹೇಳುವುದಿಲ್ಲವೆಂದು ತಿಳಿದಿದ್ದೆ, ಆದರೆ ನನಗೆ ಈಗ ನೆಮ್ಮದಿಯಾಯಿತು.

ಶ್ರೀ ಬಿ.ಎಸ್.ಯಡಿಯೂರಪ್ಪ : ಈ ಸರತಿಗಳೆಲ್ಲಾ ಮುಗಿಯುವುದರಲ್ಲಿ ಜನರ ಗತಿಯೇನಾಗಬೇಕು?

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ದೇವರಾಜ್ ಅರಸುರವರು ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಒಮ್ಮೆ ಲಾಭ ಮಾಡಿದ್ದರು. 1984-85ರಲ್ಲಿ ಒಂದು ಸಾರಿ ಲಾಭ ಮಾಡತಕ್ಕ ಹಂತದ ಹತ್ತಿರಕ್ಕೆ ಬಂದಿತ್ತು. ಅನಂತರ 1990-91ರಲ್ಲಿ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಸುಮಾರು ಒಂದೂವರೆ ಕೋಟಿ ರೂಪಾಯಿಗಳ ಲಾಭ ಮಾಡತಕ್ಕ ಆ ಮೂರು ಪ್ರಸಂಗಗಳನ್ನು ಬಿಟ್ಟರೆ ಉಳಿದ ಯಾವುದೇ ಸಂದರ್ಭದಲ್ಲೂ ಸಾರಿಗೆ ಸಂಸ್ಥೆ ಲಾಭವನ್ನು ಮಾಡಿಲ್ಲ. ಸಾರಿಗೆ ಸಂಸ್ಥೆ ಲಾಭ ಮಾಡಬೇಕು ಎನ್ನತಕ್ಕ ಉದ್ದೇಶ ಸರಕಾರಕ್ಕೆ ಖಂಡಿತವಾಗಿ ಸಹ ಇಲ್ಲ. ಲಾಭವೂ ಆಗಬಾರದು ನಷ್ಟವೂ ಆಗಬಾರದು ಸರಿದೂಗಿಸಿಕೊಂಡು ಹೋಗಬೇಕು ಎನ್ನುವುದೇ ಸರ್ಕಾರದ ಸಾರಿಗೆ ನೀತಿಯಾಗಿದೆ. ಈ ಸಂಸ್ಥೆಯಲ್ಲಿ ಬಹಳ ಒಳ್ಳೆಯ ಕಾರ್ಮಿಕರು ಇದ್ದಾರೆ. ನಮ್ಮಲ್ಲಿರುವಷ್ಟು ಒಳ್ಳೆಯ ಕುಶಲ ಕಾರ್ಮಿಕರು ಇಡೀ ರಾಷ್ಟ್ರದ ಯಾವುದೇ ಸಾರಿಗೆ ಸಂಸ್ಥೆಯಲ್ಲಿ ಇಲ್ಲವೆಂದು ಭಾವಿಸಿದ್ದೇನೆ. ಅಲ್ಲಿರುವ ನೌಕರ ಮುಖಂಡರುಗಳಿಗೆ ನನ್ನ ಮೇಲೆ ಜಿಗುಪ್ಸೆ ಇರಬಹುದು, ಅವರು ಮಾಡಿರುವ ಧೋರಣೆಗಳ ಬಗ್ಗೆ ಭಿನ್ನಾಬಿಪ್ರಾಯವಿರಬಹುದು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದು ಇದ್ದೇ ಇರುತ್ತದೆ. ಕಾರ್ಮಿಕರನ್ನು ಎಂದೂ ನಾನು ದೂಷಣೆ ಮಾಡಿಲ್ಲ. ಸಾರ್ವಜನಿಕ ವಲಯದಲ್ಲಿ ಸಾರಿಗೆ ಸಂಸ್ಥೆ ಇರಬೇಕು, ಅದರ ಆರೋಗ್ಯ ಚೆನ್ನಾಗಿರಬೇಕು ಎನ್ನುವುದೇ ನನ್ನ ಉದ್ದೇಶ.ಮಾನ್ಯ ಖರ್ಗೆಯವರು ಸಾರ್ವಜನಿಕವಾಗಿ

ಮತ್ತು ತಮ್ಮ ಪಕ್ಷದಲ್ಲಿ ಒಂದು ವಿಚಾರವನ್ನು ಹೇಳಿದ್ದೀರಿ. ಸಾರಿಗೆ ಸಂಸ್ಥೆಯನ್ನು ವಿಭಜನೆ ಮಾಡಲು ನಮ್ಮ ಸ್ವಾಗತವಿದೆ, ಆದರೆ ಇದನ್ನು ಖಾಸಗೀಕರಣ ಮಾಡುವ ಉದ್ದೇಶ ಸರ್ಕಾರಕ್ಕಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಸಾರಿಗೆ ರಾಷ್ಟ್ರೀಕರಣವಾಗಿರುವ ಒಂಭತ್ತು ಜಿಲ್ಲೆಗಳಾದ ಗುಲ್ಬರ್ಗಾ, ಬೀದರ್, ರಾಯಚೂರು, ಬಿಜಾಪುರ, ಬೆಳಗಾಂ, ಉತ್ತರಕನ್ನಡ, ಬಳ್ಳಾರಿ, ಧಾರವಾಡ ಮತ್ತು ಹಾಸನಗಳಲ್ಲಿ ಸಾರಿಗೆ ಸಂಸ್ಥೆಯನ್ನು ಮತ್ತಷ್ಟು ಶಕ್ತಿಯುತವಾಗಿ ಮಾಡಬೇಕು, ಆ ಜಿಲ್ಲೆಯಲ್ಲಿರುವ ಪ್ರತಿಯೊಂದು ಹಳ್ಳಿಗೂ ಬೆಳಿಗ್ಗೆ ಮತ್ತು ಸಂಜೆ ಕನಿಷ್ಟ ಪಕ್ಷ ಒಂದು ಬಸ್ಸು ಆದರೂ ಹೋಗಬೇಕು ಎನ್ನತಕ್ಕ ದೃಷ್ಟಿಯನ್ನಿಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ. ಆದರೆ ಉಳಿದಿರುವ ಹತ್ತು ಜಿಲ್ಲೆಗಳಾದ ಮಂಡ್ಯ, ಕೋಲಾರ, ಬೆಂಗಳೂರು ಗ್ರಾಮಾಂತರ, ಮೈಸೂರು ಮುಂತಾದ ಕಡೆಗಳಲ್ಲಿ ಖಾಸಗಿ ವಲಯದವರು ಮುಂದೆ ಬಂದರೆ ಅವರಿಗೆ ಅವಕಾಶವನ್ನು ಕೊಡಬೇಕು ಎನ್ನುವುದು ನಮ್ಮ ಸರ್ಕಾರದ ನಿರ್ಧಾರವಾಗಿದೆ. ಹಾಗೆಂದು ಸಾರಿಗೆ ಸಂಸ್ಥೆಯನ್ನು ಮಾರಾಟ ಮಾಡಲು ಹೊರಟಿದ್ದಾರೆ ಎನ್ನತಕ್ಕ ಉದ್ದೇಶಕ್ಕೆ ತಾವೆಂದೂ ಯೋಚನೆ ಮಾಡಬೇಡಿ. ಈ ಸಂಸ್ಥೆಯನ್ನು ಆರೋಗ್ಯಕರವಾಗಿ ಮಾಡಬೇಕು ಎನ್ನತಕ್ಕ ಉದ್ದೇಶವನ್ನು ನಾವು ಇಟ್ಟುಕೊಂಡಿದ್ದೇವೆ. ಯಾರೋ ಆಡಳಿತದಲ್ಲಿದ್ದಾಗ, ಯಾವುದೋ ಪಕ್ಷ ಆಡಳಿತದಲ್ಲಿದ್ದಾಗ ಹೀಗಾಯಿತು ಎಂದು ಹೇಳಿ ಬೇರೆಯವರ ಮೇಲೆ ಜವಾಬ್ದಾರಿಯನ್ನು ಹೊರಿಸಲು ನಾನು ತಯಾರಿಲ್ಲ. ನಾವೆಲ್ಲರೂ ಸೇರಿದರೆ ಮಾತ್ರ ಈ ಸಂಸ್ಥೆಯನ್ನು ಸರಿಮಾಡಲು ಸಾಧ್ಯವಾಗುವುದು. ನನ್ನೊಬ್ಬನಿಂದ ಅದನ್ನು ಮಾಡಲು ಆಗುವುದಿಲ್ಲ. 1986ರಲ್ಲಿ 530 ಶೆಡ್ಯೂಲ್‌ಗಳನ್ನು ಹೆಚ್ಚು ಮಾಡಿದ್ದಾರೆ. 1988ರಲ್ಲಿ,475, 1989-90ರಲ್ಲಿ 260 ಶೆಡ್ಯೂಲ್‌ಗಳನ್ನು ಜಾಸ್ತಿ ಮಾಡಿದ್ದಾರೆ. 1990-91ರಲ್ಲಿ 120 ಶೆಡ್ಯೂಲ್‌ಗಳನ್ನು ಕಡಿಮೆ ಮಾಡಿದ್ದಾರೆ. 91-92ರಲ್ಲಿ 500, 92-93ರಲ್ಲಿ, 93-94ರಲ್ಲಿ 220, 1994-95ರಲ್ಲಿ 199 ಹೆಚ್ಚು ಶೆಡ್ಯೂಲ್ ಮಾಡಿದ್ದಾರೆ. ಯಾವ ರೀತಿಯಲ್ಲಿ ಪ್ರಯಾಣಿಕರ ಸಂಖ್ಯೆ ಜಾಸ್ತಿಯಾಗುತ್ತಿದೆಯೋ ಆ ಪ್ರಮಾಣದಲ್ಲಿ ಬಸ್ಸುಗಳ ಸಂಖ್ಯೆಯನ್ನು, ಶೆಡ್ಯೂಲ್‌ಗಳ ಸಂಖ್ಯೆಯನ್ನು, ಟ್ರಿಪ್‌ಗಳ ಸಂಖ್ಯೆಯನ್ನು ಜಾಸ್ತಿ ಮಾಡುವುದಕ್ಕೆ ಆಗುವುದಿಲ್ಲವೆಂದು ಈ ರೀತಿ ಅಂಕಿಅಂಶಗಳನ್ನು ಕೊಡುತ್ತಿದ್ದೇನೆ. ನಾವು ಕೆ.ಎಸ್.ಆರ್.ಟಿ.ಸಿ ಗೆ ಹೊಸದಾಗಿ ಎಷ್ಟು ಬಸ್ಸುಗಳನ್ನು ಸೇರಿಸಿದ್ದೇವೆ ಎಂಬ ಬಗ್ಗೆ ಮಾಹಿತಿ ನೀಡುವುದಾದರೆ, 1994-95ರಲ್ಲಿ 800, 1993-94ರಲ್ಲಿ 1000, 1992-93ರಲ್ಲಿ 660, 1991-92ರಲ್ಲಿ 860 ಅದರ ಹಿಂದಿನ ವರ್ಷದಲ್ಲಿ 900 ಹೊಸ ಬಸ್ಸುಗಳನ್ನು ಸೇರಿಸಿದ್ದೇವೆ.

4.00 ಪಿ.ಎಂ

ಇವತ್ತು ಅನೇಕ ಶಾಸಕ ಮಿತ್ರರೂ ಕೂಡ ಹೋದ ಕಡೆಯಲ್ಲೆಲ್ಲಾ ಹೊಸ ಬಸ್ಸುಗಳ ಬೇಡಿಕೆಯನ್ನು ಇಡುತ್ತಿದ್ದಾರೆ. ಇವತ್ತು ವಿಧಾನ ಪರಿಷತ್ತಿನಲ್ಲಿ ಜನರು ಬಸ್ಸುಗಳ ಮೇಲೆ ಪ್ರಯಾಣ ಮಾಡುತ್ತಾರೆ, ಅದಕ್ಕೆ ಇದೇ ಕಾರಣವೆಂದು ಚರ್ಚೆಯಾಯಿತು. ನಾನೇಕೆ ಇದನ್ನೆಲ್ಲಾ ಹೇಳುತ್ತಿದ್ದೇನೆ ಎಂದರೆ ಇವತ್ತು ಒಂದು ನಿರ್ದಿಷ್ಟವಾಗಿ ಸಾರಿಗೆ ಸಂಸ್ಥೆಯ ಬಗ್ಗೆ, ನಮ್ಮ ಸರ್ಕಾರದ ನೀತಿ ಏನಿದೆ, ಯಾವ ರೀತಿ ಇದನ್ನು ಬೆಳೆಸಬೇಕು ಎಂಬ ಬಗ್ಗೆ ನಾವು ಗಮನವನ್ನು ಹರಿಸುತ್ತಿದ್ದೇವೆ. ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಏನಿದೆ, ಆ ಕಡೆಗೆ ನಾವು ಗಮನ ಕೊಡುವುದಕ್ಕೆ ಆಗಿಲ್ಲ. ನೂರಾರು ಡಿಪೋಗಳು

ಇವೆ, 107ನೇ ಡಿಪೋ ಇವತ್ತು ಮುಧೋಳದಲ್ಲಿ ಪ್ರಾರಂಭ ಮಾಡಿದ್ದೇವೆ. 175 ತಾಲ್ಲೂಕುಗಳಿವೆ. ಮಂಡ್ಯ ಜಿಲ್ಲೆಯಲ್ಲೂ ಸಹಿತ ರಾಷ್ಟ್ರೀಕರಣ ಆಗದೇ ಇರತಕ್ಕಂತಹ ಪ್ರದೇಶಗಳಲ್ಲೂ ಸಹಿತ ನಮಗೆ ಹಳ್ಳಿಗಳಿಗೆ ಬಸ್ಸುಗಳನ್ನು ಕೊಡಿ ಎಂದು ಕೇಳುತ್ತಾರೆ. ಬೆಳಿಗ್ಗೆ ಒಂದು ಬಸ್ಸು ಬೇಕು, ಸಾಯಂಕಾಲ ಒಂದು ಬಸ್ಸು ಬೇಕು ಎಂದು ಕೇಳುತ್ತಾರೆ. ಇದರಿಂದಾಗಿ ನಾವು ಖಾಸಗಿಯವರಿಗೆ ನಡೆಸಿ ಎಂದು ಹೇಳಿದಾಗ ಅವರು ಪರ್ಮಿಟ್ ತೆಗೆದುಕೊಳ್ಳುತ್ತಾರೆ, ಆದರೆ ಓಡಿಸುವುದಿಲ್ಲ. ನಾವು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ನಾನು ಪ್ರಾಕ್ಟಿಕಲ್ ಆಗಿ ಇರತಕ್ಕ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಯಾರೇ ಅಧಿಕಾರದಲ್ಲಿರಲಿ, ನಾವು ಮಾಡಿರತಕ್ಕಂತಹ ತಪ್ಪುಗಳೂ ಇವೆ. ಕಳೆದ 10 ವರ್ಷಗಳಲ್ಲಿ ಸಾರಿಗೆ ಸಂಸ್ಥೆಗೆ 9 ಜನ ಎಂ.ಡಿ.ಗಳನ್ನು ನಾವು ನೇಮಕ ಮಾಡಿದ್ದೇವೆ. 1987ರಲ್ಲಿ ಪಿ.ಪಿ. ಪ್ರಭು, 1988ರಲ್ಲಿ ಮುತ್ತಣ್ಣ, 1990ರಲ್ಲಿ, ಪಿ.ಡಿ.ಶಣೈ, 1991ರಲ್ಲಿ ಕೋದಂಡರಾಮಯ್ಯ, 1992ರಲ್ಲಿ (ಲೇಟ್) ಧನಶೇಖರನ್, 1992ರಲ್ಲಿ ಆರೋರಾ, 1993ರಲ್ಲಿ ಗೋಪಾಲ ರೆಡ್ಡಿ, 1994ರಲ್ಲಿ ಪಿ.ಡಿ.ಶಣೈ, 1996ರಿಂದ ಗೋಕುಲ್ ರಾಮ್ ಅವರು ಎಂ.ಡಿ.ಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹೀಗೆ ಎಲ್ಲಾ ಸರ್ಕಾರಗಳು ಪ್ರತಿ ವರ್ಷವೂ ಅಲ್ಲಿಯ ಎಂ.ಡಿ.ಯನ್ನು ಬದಲಾಯಿಸುತ್ತಲೇ ಬಂದಿವೆ. ಬಿ.ಜೆ.ಪಿ ಯವರು ನಾಳೆ ಆಡಳಿತ ನಡೆಸುವವರು, ಕಾಂಗ್ರೆಸ್‌ನವರು ಆಡಳಿತ ನಡೆಸಿರುವವರು, ಇಬ್ಬರೂ ಇದನ್ನು ಗಮನಿಸಬೇಕು. ಸಾರಿಗೆ ಮಂತ್ರಿಗಳಾಗಲೀ ಅಥವಾ ಅಲ್ಲಿರತಕ್ಕಂತಹ ಅಧ್ಯಕ್ಷರಿಗಾಗಲೀ ಆಡಳಿತಾತ್ಮಕವಾಗಿ ಇರತಕ್ಕ ವಿಚಾರಗಳಲ್ಲಿ, ರೋಡ್ ಟ್ರಾನ್ಸ್‌ಪೋರ್ಟ್ ಆಕ್ಟ್ ಪ್ರಕಾರ ಆಗಲೀ ಅಥವಾ ಮೋಟಾರ್ ವೆಹಿಕಲ್ಸ್ ಆಕ್ಟ್ ಪ್ರಕಾರವಾಗಲೀ ಅವರಿಗೆ ಯಾವುದೇ ರೀತಿಯ ಅಧಿಕಾರ ಇರುವುದಿಲ್ಲ. ಎಂ.ಡಿ. ಅವರನ್ನು ನಾವು ನೇಮಕ ಮಾಡತಕ್ಕದ್ದು ಅಷ್ಟೆ. ಅವರಿಗೆ ಸರ್ಕಾರದಿಂದ ನಾವು ಸಾಕಷ್ಟು ಶಕ್ತಿಯನ್ನು ಕೊಡದೇ, ವರ್ಷಕ್ಕೆ ಒಬ್ಬೊಬ್ಬ, ಆರು ತಿಂಗಳಿಗೆ ಒಬ್ಬೊಬ್ಬ ಎಂ.ಡಿ.ಯನ್ನು ನಾವು ಬದಲಾವಣೆ ಮಾಡಿಕೊಂಡು ಬಂದಿದ್ದೇವೆ. ಮಾನ್ಯ ಸದಸ್ಯರುಗಳು, ನೀವು ಮಂತ್ರಿಗಳಾದ ತಕ್ಷಣ 100 ದಿನಗಳ ಕಾರ್ಯಕ್ರಮವೊಂದನ್ನು ಹಾಕಿಕೊಂಡು ಇದನ್ನೆಲ್ಲಾ ಸರಿ ಮಾಡದೇ ಹೋದರೆ, ಕಣ್ಣಿಗೆ ಕಾಣುವ ರೀತಿಯಲ್ಲಿ ಏನೂ ಬದಲಾವಣೆಗಳು ಆಗದೇ ಹೋದರೆ ನೀವು ಅಧಿಕಾರ ಬಿಟ್ಟು ಹೋಗುತ್ತೇನೆ ಎಂದು ಹೇಳಿದ್ದೀರಿ ಎಂದರು. ನಾನು ಆ ರೀತಿಯಾಗಿ ಹೇಳಿರತಕ್ಕದ್ದು ನಿಜ. ನನಗೆ ಇದನ್ನು ಆರು ತಿಂಗಳೊಳಗಾಗಿ ಸುಧಾರಣೆ ಮಾಡಲಿಕ್ಕೆ ಆಗುವುದಿಲ್ಲ ಎಂದು ಅನಿಸಿದರೆ ನಾನು ಅಧಿಕಾರ ಬಿಟ್ಟು ಹೋಗುತ್ತೇನೆ ಎಂದು ನಾನು ಹೇಳಿರತಕ್ಕದ್ದು ನಿಜ. ದಯವಿಟ್ಟು ತಾವು ಸಬ್ಜೆಕ್ಟೀವ್ ಆಗಿ ಅನ್‌ಲೈಸ್ ಮಾಡುವುದಕ್ಕೆ ಹೋಗಬೇಡಿ, ಅಬ್ಜೆಕ್ಟೀವ್ ಆಗಿ ತೆಗೆದುಕೊಳ್ಳಿ. ನೂರು ದಿನಗಳ ಕಾರ್ಯಕ್ರಮ ಅಂತೇಳಿ ನಾನು ಸಾರಿಗೆ ಮಂತ್ರಿಯಾದ ತಕ್ಷಣ ಹಾಕಿಕೊಂಡಿದ್ದೆ. ಅದರಿಂದ ಏನೂ ಬದಲಾವಣೆ ಆಗಿಲ್ಲವೇ? ನಾನು ಸಾರಿಗೆ ಮಂತ್ರಿಯಾದ ತಕ್ಷಣವೇ ಬೆಲೆಗಳನ್ನು ಜಾಸ್ತಿ ಮಾಡಬಹುದಾಗಿತ್ತು. ಅದನ್ನು ನಾವು ಮಾಡಲಿಕ್ಕೆ ಹೋಗಲಿಲ್ಲ. ಹಿಂದೆ ಮಾನ್ಯ ಬೀಳಗಿಯವರು ಸಾರಿಗೆ ಮಂತ್ರಿಗಳಾಗಿದ್ದಾಗ ಅವರು ತಮ್ಮ ಕಾಲದಲ್ಲಿ ಸುಮಾರು 40 ಕೋಟಿ ರೂ.ಗಳಷ್ಟು ಸಾರಿಗೆ ಸಂಸ್ಥೆಯ ನಷ್ಟವನ್ನು ಕಡಿಮೆ ಮಾಡಲಿಕ್ಕೆ ಒಂದು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದ್ದಾರೆ. ನಾನು ಅಂಕಿಅಂಶಗಳನ್ನು ಕೊಟ್ಟು ಮಾತನಾಡುತ್ತಿದ್ದೇನೆ. ಇದಾದ ಮೇಲೆ ಏನಾಗಿದೆ, ಈ ಆರು

ತಿಂಗಳಲ್ಲಿನಲ್ಲಿ ನೂರು ದಿನಗಳ ಕಾರ್ಯಕ್ರಮ ಎಂದು ಹಾಕಿಕೊಂಡೆವು. ನಾನೇನೂ ಹೊಸದಾಗಿ ಇಲ್ಲದೇ ಇರತಕ್ಕದ್ದನ್ನು ಮಾಡುತ್ತೇನೆ ಎಂದು ಹೇಳುವುದಕ್ಕೆ ಹೋಗಲಿಲ್ಲ. ಒಂದು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದೆ. ಅದರಲ್ಲಿ ಟ್ರಾಫಿಕ್ ರೆವಿನ್ಯೂ, ಮಾನ್ಯ ಯಡಿಯೂರಪ್ಪನವರು ದಯವಿಟ್ಟು ಇದನ್ನು ಗಮನಿಸಬೇಕು, ಪ್ರತಿ ದಿನ ಶೇಕಡ 7ರಷ್ಟು ಜಾಸ್ತಿಯಾಗಿದೆ. ಪ್ರತಿ ದಿನ 2 ಕೋಟಿ ರೂ. ಕಲೆಕ್ಷ್ ಆಗುತ್ತದೆ. ಪ್ರತಿದಿನ ಶೇಕಡ 7ರಷ್ಟು ಜಾಸ್ತಿಯಾಗಿದೆ ಎಂದು ಹೇಳಿದರೆ ಎಷ್ಟು ಎಂದು ನೀವೇ ಲೆಕ್ಕ ಹಾಕಿಕೊಳ್ಳಿ. ಅಂದರೆ 14-25 ಲಕ್ಷ ರೂ.ಗಳು ಪ್ರತಿ ದಿನವೂ ಸಹಿತ ಇದರ ಆದಾಯ ಹೆಚ್ಚಾಗಿದೆ. ಬಸ್ಸುಗಳ ಕ್ಯಾನ್ಸ್‌ಲೇಷನ್ ಹಿಂದೆ ಎಲ್ಲಾ 25-30 ಪರ್ಸೆಂಟ್ ಇತ್ತು, ಅದನ್ನು ನೂರು ದಿನಗಳ ಕಾರ್ಯಕ್ರಮದಿಂದಾಗಿ ಶೇಕಡ 11ಕ್ಕೆ ಕ್ಯಾನ್ಸ್‌ಲೇಷನ್ ಅನ್ನು ತರಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಇದು ಆಗಿರತಕ್ಕ ವಿಚಾರಗಳು. ಹಾಗಾದರೆ ನೂರು ದಿನಗಳಲ್ಲಿ, ಈ ಆರು ತಿಂಗಳಲ್ಲಿ ನೀವು ಏನು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದೀರಿ ಎಂದು ನೀವು ಕೇಳಬಹುದು. ನಾವೇನೂ ಬಹಳ ಸಂತೋಷದಿಂದ ಇದನ್ನೆಲ್ಲಾ ಮಾಡಿದ್ದೇವೆ, ಇದರಿಂದ ಜನ ನಮಗೆ ಬೆನ್ನು ತಟ್ಟುತ್ತಾರೆ, ಇದೊಂದು ಸರ್ಕಾರದ ಸಾಧನೆ ಎಂದು ತಿಳಿದುಕೊಂಡಿಲ್ಲ. ನಮ್ಮ ಪಕ್ಷದ ಶಾಸಕಾಂಗ ಸಭೆಯಲ್ಲೂ ಈ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ. ನಮ್ಮ ಪಕ್ಷದ ಶಾಸಕರುಗಳ ಅಭಿಪ್ರಾಯಗಳನ್ನೂ ಸಹ ಪಡೆದುಕೊಂಡಿದ್ದೇವೆ. ಅನೇಕ ಮಾನ್ಯ ಸದಸ್ಯರುಗಳು ನೀವು ಸದನ ನಡೆಯುತ್ತಿರತಕ್ಕ ಸಂದರ್ಭದಲ್ಲಿ ರಾತ್ರೋರಾತ್ರಿ ದರ ಏರಿಕೆ ಅನೌನ್ಸ್ ಮಾಡಿದ್ದೀರಿ ಎಂದು ಹೇಳಿದರು. ಅಲ್ಲದೇ ಸದನದಲ್ಲಿ ಇದನ್ನು ಚರ್ಚೆ ಮಾಡುತ್ತೇವೆಂದು ನೀವೇ ಹೇಳಿದ್ದಿರಿ, ಆದರೆ ಮಾಡಲಿಲ್ಲ ಎಂದು ಅನೇಕ ಸದಸ್ಯರು ಹೇಳಿದರು. ನಾನು ಕಳೆದ ಮೂರ್‍ನಾಲ್ಕು ತಿಂಗಳುಗಳಿಂದಲೂ ಸಹಿತ ಸಾರ್ವಜನಿಕ ಸಭೆಗಳಲ್ಲಿ, ಅಲ್ಲಿ ಇಲ್ಲಿ ಮಾತನಾಡತಕ್ಕ ಸಂದರ್ಭದಲ್ಲಿ ಬೆಲೆಗಳನ್ನು ಏರಿಸತಕ್ಕದ್ದು ಅನಿವಾರ್ಯವಾಗಿದೆ, ಇವತ್ತಲ್ಲ ನಾಳೆ ದರ ಏರಿಸಬೇಕಾಗಿದೆ, ಸದನದಲ್ಲೂ ಇದರ ಬಗ್ಗೆ ಚರ್ಚೆಯಾಗಲೀ ಎಂದು ಹೇಳಿರತಕ್ಕದ್ದು ನಿಜ. ಕಳೆದ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ಸದಸ್ಯರಾದ ಶ್ರೀಮತಿ ಕೆಂಪಮ್ಮನವರ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ನಾನು ಸ್ಪಷ್ಟವಾದ ಉತ್ತರ ಕೊಟ್ಟಿದ್ದೆ. ಸಧ್ಯದಲ್ಲೇ ಬೆಲೆಗಳನ್ನು ನಾವು ಅನಿವಾರ್ಯವಾಗಿ ಜಾಸ್ತಿ ಮಾಡತಕ್ಕ ಸೂಚನೆಗಳಿವೆ ಎಂದು ನಾನು ಹೇಳಿದ್ದೆ. ಸಾಮಾನ್ಯವಾಗಿ ಜನಗಳಿಗೆ ತೊಂದರೆಯಾಗದ ರೀತಿಯಲ್ಲಿ, ಸಾರಿಗೆ ಸಂಸ್ಥೆ ಬೆಳೆಯಬೇಕು, ನಡೆಯಬೇಕು ಎನ್ನುವ ಮಟ್ಟದಲ್ಲಿ, ಸರ್ಕಾರ ಲಾಭ ಮಾಡಬೇಕೆನ್ನುವ ದೃಷ್ಟಿಯನ್ನು ಇಟ್ಟುಕೊಳ್ಳದೇ ಅನಿವಾರ್ಯವಾಗಿ ಈ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂಬ ಮಾತನ್ನು ನಾನು ಹೇಳಿದ್ದೇನೆ ಹೊರತು ಸದನಕ್ಕೆ ತಪ್ಪಿಸಬೇಕು ಎಂಬ ಉದ್ದೇಶ ನನಗಿಲ್ಲ. ಕಳೆದ 30 ವರ್ಷಗಳ ಇತಿಹಾಸವನ್ನು ತೆಗೆದು ನೋಡಿದಾಗ ಯಾವ ಸಂದರ್ಭದಲ್ಲೂ ಸಾರಿಗೆ ದರ ಏರಿಕೆ ಮಾಡುವ ಬಗ್ಗೆ ಸದನದಲ್ಲಿ ಚರ್ಚೆ ಮಾಡಿ ಒಂದು ನಿರ್ಣಯತೆಗೆದುಕೊಂಡಿರುವುದು ಕಂಡು ಬರುವುದಿಲ್ಲ. ಅಂತಹ ಯಾವುದಾದರೂ ಒಂದು ಉದಾಹರಣೆಯನ್ನು ದಯವಿಟ್ಟು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತರಬೇಕು. ಸದನದ ಬಗ್ಗೆ ನನಗೆ ಅಗೌರವ ಇಲ್ಲ, ಸದನದ ಬಗ್ಗೆ ಬಹಳ ಗೌರವವನ್ನು ನಾನು ಇಟ್ಟುಕೊಂಡಿದ್ದೇನೆ. ಹೇಗಿದ್ದರೂ 17ನೇ ತಾರೀಖು ಅಧಿವೇಶನ ಸಮಾವೇಶಗೊಳ್ಳಲಿದೆ, ಆ ಸಂದರ್ಭದಲ್ಲಿ ಚರ್ಚೆ ಮಾಡೋಣ, ಅಂಕಿಅಂಶಗಳನ್ನು ನಮ್ಮ ಸಹೋದ್ಯೋಗಿಗಳಿಗೆ, ಶಾಸಕರುಗಳಿಗೆ

ತಿಳಿಸೋಣ ಎಂದು ನಾನು ಭಾವಿಸಿದ್ದೆ. ಸದನದಲ್ಲಿ ಇದರ ಬಗ್ಗೆ ಚರ್ಚೆ ಆಗಲಿ ಎನ್ನುವ ದೃಷ್ಟಿಯಿಂದಾಗಲೇ ನಾವಿದ್ದೇವೇ ಹೊರತು ನಾವು ಎಲ್ಲೂ ಸಹ ಅದನ್ನು ಅವಾಯ್ಡ್ ಮಾಡಲಿಕ್ಕೆ ಹೋಗಲಿಲ್ಲ. ಅಥವಾ ಮುಂಚಿತವಾಗಿಯೇ ಇಂತಹ ದಿವಸ ನಾವು ಅನೌನ್ಸ್ ಮಾಡುತ್ತೇವೆ ಎಂದು ಜಾಹೀರಾತನ್ನು ಯಾವಾಗಲೂ ಸಹಿತ ಸಾರಿಗೆ ಸಂಸ್ಥೆ ಕೊಟ್ಟಿಲ್ಲ. ಯಾವ ಸಂದರ್ಭದಲ್ಲೂ ಸಹಿತ ನಾವು ಕೊಡಲಿಕ್ಕೆ ಹೋಗಲಿಲ್ಲ. ಮಾನ್ಯ ಖರ್ಗೆಯವರು ಹೇಳಿದರು, ನೀವು ಶೇಕಡ 150ರಷ್ಟು ಕೆಲವೆಡೆ ದರ ಏರಿಸಿದ್ದೀರಿ, ರ್‍ಯಾಷನಲ್ ಇಲ್ಲ ಎಂದು. ಹೌದು, ಕೆಲವು ಕಡೆಗಳಲ್ಲಿ ನಾನು ಅದನ್ನೂ ಸಹಿತ.......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವಿಧಾನ ಪರಿಷತ್ತಿನಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಶಾಸಕರುಗಳ ಜೊತೆಯಲ್ಲಿ, ಸದನದಲ್ಲಿ ದರ ಏರಿಕೆಯ ಬಗ್ಗೆ ಚರ್ಚೆ ಮಾಡಿ ಅವರ ಅಭಿಪ್ರಾಯಗಳನ್ನು ತೆಗೆದುಕೊಂಡು ಮುಂದುವರೆಯುತ್ತೇನೆ ಎಂದು ಹೇಳಿರತಕ್ಕದ್ದು ನಿಜ ಎಂದು ಈಗ ನೀವೇ ಒಪ್ಪಿಕೊಂಡಿರಿ. ಆದರೆ ಕಾರಣಾಂತರಗಳಿಂದ ಚರ್ಚೆ ಮಾಡದೇ ತಾವೇ ದರ ಏರಿಕೆ ಅನೌನ್ಸ್ ಮಾಡಿದ್ದೀರಿ. ಅದಲ್ಲದೆ ಮತ್ತೊಂದು ಮಾತನ್ನು ತಾವು ಈಗ ಹೇಳಿದಿರಿ. ಹಿಂದೆಂದೂ ಕೂಡ ದರ ಏರಿಕೆಯನ್ನು ಆಡಳಿತಾತ್ಮಕ ವಿಷಯವಾದ್ದರಿಂದ ಸದನದಲ್ಲಿ ಚರ್ಚೆ ಮಾಡಿಲ್ಲ, ಅದಕ್ಕೆ ನಾನೂ ಕೂಡ ಆ ರೀತಿ ಮಾಡತಕ್ಕ ಅವಶ್ಯಕತೆ ಇಲ್ಲ ಎಂಬ ಅಭಿಪ್ರಾಯವನ್ನು ತಾವು ವ್ಯಕ್ತಪಡಿಸುತ್ತಿದ್ದೀರಿ. ಆದರೆ ಮೊದಲೇನೋ ತಾವು ಹಾಗೆ ಹೇಳಿದ್ದಿರಿ, ನೀವು ಆ ರೀತಿ ಹೇಳಿದ್ದಕ್ಕೇ ನಾವೀಗ ನಿಮ್ಮನ್ನು ಕೇಳುತ್ತಿರುವುದು. ನೀವು ಹೇಳಿದ್ದ ಬಗ್ಗೆ ದಾಖಲಾತಿಯಾಗಿ ಪೇಪರ್ ಕಟಿಂಗ್ಸ್ ನನ್ನ ಹತ್ತಿರ ಇವೆ. ಒಂದು ಸಾರಿ ಈ ಸದನದಲ್ಲಿ ತಾವು ಹೇಳಿದ ಮೇಲೆ, ರಾಂಗ್‌ಲೀ ಅಥವಾ ರೈಟ್‌ಲೀ ನೀಋ ಕಮಿಟ್ ಮಾಡಿದ್ದೀರಿ. ಆದರೆ ಇವತ್ತು ನಮ್ಮ ಮುಂದೆ ಎಂತಹ ಪ್ರಸಂಗ ಬಂದಿದೆ ಎಂದರೆ, ಮಾನ್ಯ ಸಿಂಧ್ಯಾರರವರು ಸೋಬನ ಮೊದಲು ಮಾಡಿಕೊಂಡಿದ್ದಾರೆ, ಆದರೆ ಆಮೇಲೆ ನನ್ನ ಲಗ್ನ ಮಾಡಿ ಎಂದು ಹೊರಟಿದ್ದಾರೆ. ಆ ಪದ್ಧತಿ ಪ್ರಕಾರ ನೀವು ನಡೆದಿದ್ದೀರಿ. ಇದಕ್ಕೆ ನಾವು ಏನು ಎಂದು ಹೇಳೋಣ? ನೀವು ಸೋಬನ ಮಾಡಿಕೊಂಡು ಆಮೇಲೆ ನನಗೆ ಲಗ್ನ ಮಾಡಿ ಎಂದು ಹೊರಟರೆ ನಾವೇನು ಮಾಡಬೇಕು?

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ಸದನದಕ್ಕೆ ನಾನು ಅಗೌರವ ಕೊಡಬೇಕು, ಶಾಸಕರಿಗೆ ಅಗೌರವ ಮಾಡಬೇಕು ಅಥವಾ ಮತ್ತೊಬ್ಬರಿಗೆ ಅಗೌರವ ಮಾಡಬೇಕು ಎಂಬ ದೃಷ್ಟಿಯಿಂದ ನಾವು ಇದನ್ನು ಮಾಡಿಲ್ಲ ಎನ್ನುವುದಕ್ಕೆ ನಾನು ವಿವರಣೆಯನ್ನು ಈ ಸಂದರ್ಭದಲ್ಲಿ ಕೊಡಲಿಕ್ಕೆ ಬಯಸುತ್ತೇನೆ. ಈ ಸಂದರ್ಭದಲ್ಲಿ ಈ ಸಾರಿಗೆ ಸಂಸ್ಥೆಯ ಫೈನಾನ್ಷಿಯಲ್ ಕಂಡೀಷನ್ಸ್ ಇವತ್ತು ಏನಿದೆ, ಅದರ ಅಕ್ಯುಮಲೇಟೆಡ್ ಲಾಸಸ್ ಮತ್ತು ಪ್ರಾಫಿಟ್ ಏನಿದೆ, ಅದರ ಪೆಂಡಿಂಗ್ ಬಿಲ್ಸ್ ಏನು ಎಂಬುದರ ಬಗ್ಗೆ ಮಾನ್ಯ ಸದಸ್ಯರ ಮತ್ತು ಸದನದ ಗಮನಕ್ಕೆ ತರಬಯಸುತ್ತೇನೆ. 31.3.1996ರವರೆಗೆ 484 ಕೋಟಿ ರೂ.ಗಳ ಅಕ್ಯುಮಲೇಟೆಡ್ ಲಾಸಸ್ ಇದೆ. ಇದುವರೆಗೂ ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ ಎಷ್ಟು ಮಾಡಿದ್ದೇವೆ ಎಂದರೆ, ಭಾರತ ಸರ್ಕಾರದವರೂ ಇನ್‌ವೆಸ್ಟ್ ಮಾಡಿದ್ದಾರೆ, ರಾಜ್ಯ ಸರ್ಕಾರದವರೂ ಇನ್‌ವೆಸ್ಟ್ ಮಾಡಿದ್ದೇವೆ. ನಾವು ಇದುವರೆವಿಗೂ 650 ಕೋಟಿ ರೂ.ಗಳನ್ನು ಇನ್‌ವೆಸ್ಟ್ ಮಾಡಿದ್ದೇವೆ.

1996ರ ಆದ ಮೇಲೆ, 1997ರಲ್ಲಿ, 1997 ಅಂದರೆ ಕರೆಂಟ್ ಈಯರ್. ಇನ್ನು 11 ದಿವಸಗಳಲ್ಲಿ ಮುಗಿಯತಕ್ಕಂಥದ್ದು. ಇದರಲ್ಲಿ ಪ್ರಾಜೆಕ್ಟೆಡ್ ಲಾಸ್ 88.49 ಕೋಟಿ ರೂ.ಗಳು. If we do not revise the fares, the loss will be to the tune of Rs. 168 crores for the next year. That means, we will be ending up in 1998 March with a accumulated loss of Rs.748 crores. In other words, there is going to be a cash loss next year in the Organisation. This is other than 2500 buses which have already been condemned.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ತಾವು ಏನು ಹೇಳಿದಿರಿ ಅಂದರೆ, It is Rs 480 crores accumulated loss since 1989 till today. ಮತ್ತು ಈ ವರ್ಷದ್ದು ತೆಗದುಕೊಂಡರೆ 740 ಕೋಟಿ ರೂ ಹತ್ತಿರ ಬರುತ್ತದೆ ಎಂದು ಹೇಳಿದ್ದೀರಿ. ತಾವು ಆವರೇಜ್ ದರ ಏನು ಏರಿಸಿದ್ದೀರಿ, 150% to 30%, right from city buses 150% to lower level 30% ಹಿಡಿದುಕೊಂಡರೂ ಕೂಡ ಇವೆರಡೂ ಅಕ್ಯುಮುಲೇಟೆಡ್ ಮಾಡಿದಾಗ ಆವರೇಜ್ 50 ಪರ್ಸೆಂಟ್ ತೆಗೆದುಕೊಂಡರೂ ಕೂಡ, 40 ಪರ್ಸೆಂಟ್ ತೆಗೆದುಕೊಂಡರೂ ಕೂಡ, ನಿಮ್ಮ ಪರ ಡೇ ಕಲೆಕ್ಷನ್ 2 ಕೋಟಿ 65 ಲಕ್ಷ every year collection Rs. 910 crores, ಅಂದರೆ ಇದನ್ನು ನೀವು 40 ಪರ್ಸೆಂಟ್ ಅದಕ್ಕೆ ಆ್ಯಡ್ ಮಾಡಿ ನಿಮ್ಮ ಕಲೆಕ್ಷನ್ ಲೆಕ್ಕ ಹಾಕಿದರೆ more or less your are going to collect in one year Rs. 350 crores ಅಕ್ಯುಮ್ಯುಲೇಟೆಡ್ ಲಾಸ್ 10 ವರ್ಷದ್ದು ನಾನು ಒಂದೇ ವರ್ಷದಲ್ಲಿ ಕಲೆಕ್ಟ್ ಮಾಡುತ್ತೇವೆಂದು ಹೇಳಿದರೆ ಇದು ಯಾವ ನ್ಯಾಯ? ಹೇಗೆ ಒಪ್ಪುತ್ತೀರಿ ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ತಾವು ಹೇಳಿದ ಹಾಗೆ 480 ಕೋಟಿಗಳಲ್ಲಿ 1995-96ರವರೆಗೆ ಕೆ.ಎಸ್.ಆರ್.ಟಿ.ಸಿ. ಎತ್ತಿರತಕ್ಕಂತಹ ಸಾಲ 185 ಕೋಟಿ 81 ಲಕ್ಷ ಕೂಡ ಸೇರಿದೆ. ದಯಮಾಡಿ ರೆಕಾರ್ಡ್ಸ್ ವೆರಿಫೈ ಮಾಡಿ. ನೀವು ಹೇಳಿದಂತಹ ಟೋಟಲ್ ಲಾಸ್ 480 ಕೋಟಿಯಲ್ಲಿ 1995-96ರ ವರೆಗೆ ಕೆ.ಎಸ್.ಆರ್.ಟಿ.ಸಿ. ಸಾಲ 185 ಕೋಟಿ....... you please verify the records.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಖರ್ಗೆಯವರು ಏನು ಹೇಳುತ್ತಿದ್ದಾರೆ, ಇದು ಸಾರ್ವಜನಿಕರಿಗೆ ಗೊತ್ತಾಗಬೇಕಾಗಿದೆ. ತಾವು ಕೇಳಿದ್ದುದು ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ. 480 ಕೋಟಿ ರೂ. ಆಕ್ಯುಮ್ಯುಲೇಟೆಡ್ ಲಾಸಸ್ ತುಂಬಿಕೊಳ್ಳಲಿಕ್ಕೆ ನೀವು 150 ಪರ್ಸೆಂಟ್ ಏನು ಮಾಡಿದ್ದೇವೆ ಎಂದು ಹೇಳುತ್ತಿದ್ದೀರಿ, ಇದು ಸತ್ಯಕ್ಕೆ ದೂರವಾದುದು. 480 ಕೋಟಿ ರೂ. ಆಕ್ಯುಮುಲೇಟೆಡ್ ಲಾಸಸ್‌ನ್ನು ಯಾವುದೇ ಕಾರಣಕ್ಕೆ ತುಂಬುವುದಕ್ಕೆ ಸಾಧ್ಯವಿಲ್ಲ. They are permanent lossess. ಇದನ್ನು ತುಂಬಿಕೊಳ್ಳುವ ಉದ್ದೇಶ ಸರ್ಕಾರಕ್ಕೆ ಇಲ್ಲ. ಅಥವಾ ಅದರಿಂದ ನಾವು ಬೆಲೆಗಳನ್ನು ಜಾಸ್ತಿ ಸಹಿತ ಮಾಡಿಲ್ಲ. ಇವತ್ತು ನಿಂತ ಹೀಗೆ ನಾನು ಎಷ್ಟು ಡ್ಯೂ ಇದ್ದೇನೆಂದರೆ, ರಾಜ್ಯ ಸರ್ಕಾರದ ಮಾತು ಬಿಡಿ, ರಾಜ್ಯ ಸರ್ಕಾರಕ್ಕೆ 1996-97ರಲ್ಲಿ 75 ಕೋಟಿ ರೂ. ಮೋಟಾರ್

ವೆಹಿಕಲ್ ಟ್ಯಾಕ್ಸ್ ಕಟ್ಟಬೇಕು. ಕೆ.ಎಸ್.ಆರ್.ಟಿ.ಸಿ. ಕಟ್ಟಿಲ್ಲ, ಪ್ಲಾನ್ ಸೈಜ್ ಕಟ್ ಮಾಡಿದ್ದೇವೆ. 1995-96ಕ್ಕೆ 28.8 ಕೋಟಿ ಕಟ್ಟಬೇಕಾಗಿತ್ತು, ಅದನ್ನು ಕಟ್ಟುವುದಕ್ಕಾಗಲಿಲ್ಲ. ಮತ್ತೆ ಪ್ಲಾನ್ ಸೈಜ್ ಕಟ್ ಆಗಿದೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನವರಿಗೂ 18.8ಕೋಟಿ ರೂ. ಕೊಡಬೇಕು. ಇಲ್ಲದಿದ್ದರೆ ಡೀಸಲ್ ಕೊಡುವುದಿಲ್ಲ ಎಂದು ಹೇಳುತ್ತಾರೆ. ಸಪ್ಲೇಯರ್ಸ್‌ಗೆ 16 ಕೋಟಿ ರೂಪಾಯಿ ಕೊಡಬೇಕು; ಇಲ್ಲದೆ ಇದ್ದರೆ ನಾವು ಕೊಡುವುದಿಲ್ಲವೆಂದು ಹೇಳುತ್ತಾರೆ, ಸಪ್ಲೇ ಮಾಡತಕ್ಕಂತಹವರಿಗೆ 15ಕೋಟಿ ರೂಪಾಯಿ ಕೊಡಬೇಕು.loans, interest commitment to the State Government, other liabilities to KIMCO, bank guarantee, ಬ್ಯಾಂಕ್ ಗ್ರಾಂಟ್ ಕಮಿಷನ್ಸ್ ಇವೆಲ್ಲಾ ಸೇರಿದರೆ 198ಕೋಟಿ ರೂಪಾಯಿ ನಾನು ಇವತ್ತು ಕಟ್ಟಬೇಕಾಗಿದೆ. This is the pending arreas. 1993ನೇ ಇಸವಿಯಲ್ಲಿ ಬೆಲೆಗಳನ್ನು ಜಾಸ್ತಿ ಮಾಡಿದ್ದು 1993ನೇ ಜನವರಿಯಲ್ಲಿ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ. ನಾಲ್ಕೂವರೆ ವರ್ಷವಾಯಿತು ಐದನೇ ವರ್ಷ ನಡೆಯುತ್ತಿದೆ. ಈ ಐದು ವರ್ಷದ ಸಂದರ್ಭದಲ್ಲಿ ಛಾಸಿಗಳ ಬೆಲೆ 24 ಪರ್ಸೆಂಟ್ ಜಾಸ್ತಿಯಾಗಿದೆ. ಟೈರ್‌ಗಳ ಬೆಲೆ 21 ಪರ್ಸೆಂಟ್ ಜಾಸ್ತಿಯಾಗಿದೆ, ಸ್ಪೇರ್ ಪಾರ್ಟ್ಸ್ ಬೆಲೆ 20 ಪರ್ಸೆಂಟ್ ಜಾಸ್ತಿಯಾಗಿದೆ. ಡೀಸಲ್ ಬೆಲೆ 30.4 ಪರ್ಸೆಂಟ್ ಜಾಸ್ತಿಯಾಗಿದೆ. ಇದು ಒಂದು ಕಡೆ ಆದರೆ ಬಹಳ ಜನ ಸಾರಿಗೆ ಬಸ್‌ಗಳನ್ನು ಕೇಳುತ್ತಾರೆ. ಬಸ್‌ಗಳನ್ನು ಹಳ್ಳಿಗಳಿಗೆ ಹಾಕಬೇಕೆಂದು ಹೇಳುತ್ತಾರೆ, ನಾನು ಒಪ್ಪಿಕೊಳ್ಳುತ್ತೇನೆ. ನಮಗೆ ಇರತಕ್ಕಂತಹ ಒಟ್ಟು ಶೆಡ್ಯೂಲ್‌ನಲ್ಲಿ ಪ್ರಾಫಿಟ್ ಮಾಡತಕ್ಕಂತಹ ರೂಟ್ಸ್ ಎಷ್ಟು ಇದೆ ಎಂದರೆ 25 ಪರ್ಸೆಂಟ್ ಇದೆ "ಎ" ರೂಟ್ಸ್ ಎಂದು ಕರೆಯುತ್ತೇವೆ. ಇವೆಲ್ಲಾ ಕ್ಯಾಲೆಕ್ಯುಲೇಟ್ ಮಾಡಿರುವಂಥದ್ದು, ಲೇಬರ್ ಕಾಸ್ಟ್, ಡೀಸಲ್ ಕಾಸ್ಟ್ ಡಿಪ್ರೀಸಿಯೇಷನ್ ಇವೆಲ್ಲಾ ಲೆಕ್ಕಾ ಹಾಕಿದರೆ, "ಎ" ರೂಟ್ಸ್‌ಗಳಲ್ಲಿ ಇರತಕ್ಕಂಥದ್ದು 25 ಪರ್ಸೆಂಟ್. ಜಸ್ಟ್ ಕಾಸ್ಟ್ ಬೇರ್ ಮಾಡತಕ್ಕಂಥದ್ದು 31 ಪರ್ಸೆಂಟ್. 'ಸಿ' ರೂಟ್ ತಾವು ಹೇಳಿದಿರಿ, ಹಳ್ಳಿಗಳಿಗೆ ಐದು ಜನ ಇದ್ದರೂ ಬಸ್ ಹೋಗಬೇಕಾಗುತ್ತದೆ. ನಾನು ಒಪ್ಪಿಕೊಳ್ಳುತ್ತೇನೆ. That is the special obligation. ಇದು ಎಷ್ಟಿದೆ ಎಂದರೆ ಅನೇಕರು ಬಂದು ಹೇಳುತ್ತಾರೆ, ನಾನು ಒಂದು ಬಸ್ ಹೇಳಿದೆ ನೀವು ಕೊಡಲಿಲ್ಲ ಎಂದು, ಆ ತರಹ ಕೆ.ಎಸ್.ಆರ್.ಟಿ.ಸಿ. ಯಲ್ಲಿ 43.2 "ಸಿ" ರೂಟ್ಸಗಳನ್ನು ಕರ್‌ಟೈಲ್ ಮಾಡುವುದಕ್ಕೆ ಆಗುವುದಿಲ್ಲ. 1990-91ರಲ್ಲಿ ಲಾಭ ಮಾಡಿದ್ದೇವೆ. ಏಕೆ ಮಾಡಿತ್ತು ಎಂದರೆ ಆ ಸಂದರ್ಭದಲ್ಲಿ ಗಲ್ಫ್‌ವಾರ್‌ನಿಂದಾಗಿ, ಡೀಸೆಲ್ ಪೆಟ್ರೋಲ್‌ಗಳನ್ನು ಕನ್‌ಸ್ಯುಮ್ ಮಾಡಬೇಕೆಂದು 'ಸಿ' ರೂಟ್ಸ್‌ಗಳನ್ನು ನಿಲ್ಲಿಸಿದರೂ ಆಗ ಲಾಭ ಮಾಡೇ ಮಾಡುತ್ತೇವೆ. ಆದರೆ ಇವತ್ತು ನಾವು ಸಾರಿಗೆ ಸಂಸ್ಥೆಯಿಂದ ಮಾಡವುದಕ್ಕಾಗುವುದಿಲ್ಲ. ನಾನು ಯಾವತ್ತೂ ಸಹಿತ ಸೂಡೆಂಟ್ಸ್ ಕನ್‌ಸೆಷನ್ ಬಹಳ ದೊಡ್ಡ ಬರ್ಡನ್ ಅಂದು ಕೊಂಡಿಲ್ಲ.

MR. SPEAKER : 'ಸಿ' ರೂಟ್ಸ್‌ನಲ್ಲಿ the loss, is it bacause of wear and tear or due to travel by less number of people travelling

ಶ್ರೀ ಪಿ.ಜಿ. ಆರ್. ಸಿಂಧ್ಯ : ವೇರ್ ಅಂಡ್ ಟೇರ್ಸ್, ಪ್ಯಾಸೆಂಜರ್ಸ್ ಲೋಡ್ ಇರುವುದಿಲ್ಲ. ಒನ್ ಸೈಡೆಡ್ ಟ್ರಾಫಿಕ್ ಹೀಗೆ, ಅದನ್ನೇ ನಾವು 'ಸಿ' ರೂಟ್ಸ್ ಎಂದು ಹೇಳುತ್ತೇವೆ. Kindly do not interrupt; I will lost my thought.

ಶ್ರೀ ಬಿ.ಎಸ್.ಯಡಿಯೂರಪ್ಪ : ಇವತ್ತು ನಿಮ್ಮ ಇಲಾಖೆ ಬಗ್ಗೆ ಬಂಡವಾಳ 408.54 ರೂಗಳು ಇದ್ದರೆ, ನಷ್ಟ 4.84.80ಲಕ್ಷ ರೂ.ಗಳು ನಾನು ನಿಮ್ಮಿಂದ ಏನು ರಿಪ್ಲೈ ನಿರೀಕ್ಷೆ ಮಾಡುತ್ತಿದ್ದೇನೆ ಎಂದರೆ, ಒಟ್ಟು 10,351 ಬಸ್ ಇದ್ದರೆ, ರಸ್ತೆ ಮೇಲೆ ಓಡಾಡುತ್ತಿರುವ ಕೇವಲ 9,171 ಪರ್ಸೆಂಟ್, ಶೇಕಡಾವಾರು ನಿಮ್ಮ ಬಸ್ಸುಗಳು ಉಪಯೋಗಿಸುವುದು ಕೇವಲ 89 ರಿಂದ 70. ಆದರೆ 10.30ರಷ್ಟು ಬಸ್‌ಗಳು ಓಡಾಟವಿಲ್ಲ. ಖಾಸಗಿಯವರು ದಿನಕ್ಕೆ 500 ಕಿ.ಮೀ. ಓಡಿಸಿದರೆ ನೀವು ಆವರೇಜ್ ಓಡಿಸಿರುವುದು ಕೇವಲ 300 ಕಿ.ಮೀ. ಕೆಟ್ಟಿರುವ ಬಸ್ಸನ್ನೂ ರಿಪೇರಿ ಮಾಡಿ ರಸ್ತೆಗೆ ಇಳಿಸುವುದಕ್ಕೆ ನಿಮ್ಮ ಪ್ರಯತ್ನ ಏನು? ಆ ಒಂದು ಕಿ.ಮಿ. 301 ದಿನಕ್ಕೆ ಓಡುವುದಕ್ಕೆ ನಾಲ್ಕು ನೂರು ಎಂದು ಲಾಭದಾಯಕವಾಗಿ ಮಾಡುವುದಕ್ಕೆ ನಿಮ್ಮ ಪ್ರಾಮಾಣಿಕ ಪ್ರಯತ್ನ ಏನು?

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಸಭಾಧ್ಯಕ್ಷರೇ, Let me complete my speech. I will answer all your points. 1996-97ರಲ್ಲಿ ಈ ವರ್ಷದಲ್ಲಿ ಕರ್ನಾಟಕ ರಾಜ್ಯದಲ್ಲಿ 5,38,000 ವಿದ್ಯಾರ್ಥಿಗಳಿಗೆ ನಾವು ಪಾಸ್‌ಗಳನ್ನು ಕೊಟ್ಟಿದ್ದೇವೆ. ಇದರಿಂದ ಸಾರಿಗೆ ಸಂಸ್ಥೆಗೆ ಸುಮಾರು 102 ಕೋಟಿ ರೂಪಾಯಿಯಷ್ಟು ಹೊರೆಯಾಗುತ್ತಿದೆ. 102 ಕೋಟಿ ರೂಪಾಯಿಯಲ್ಲಿ ಏಳು ಕೋಟಿ ರೂಪಾಯಿಗಳನ್ನು ನಾವು ವಿದ್ಯಾರ್ಥಿಗಳಿಂದ ತೆಗೆದುಕೊಂಡು ಪಾಸ್‌ಗಳನ್ನು ಕೊಡುತ್ತೇವೆ. ಇದರಿಂದ ಒಂದು ರೂಪಾಯಿ ಸಹಿತ ಜಾಸ್ತಿ ಮಾಡುವುದಕ್ಕೆ ಹೋಗಿಲ್ಲ. ಈ ಸಂದರ್ಭದಲ್ಲಿ ನನ್ನ ಸಹೋದ್ಯೋಗಿಗಳಾದ ಉಪ ಮುಖ್ಯಮಂತ್ರಿಗಳು, ಹಣಕಾಸಿನ ಮಂತ್ರಿಗಳಿಗೆ, ಮಾನ್ಯ ಮುಖ್ಯಮಂತ್ರಿಗಳಿಗೆ ನಮ್ಮೆಲ್ಲರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ. ಕಳೆದ ವರ್ಷ ವಿದ್ಯಾರ್ಥಿಗಳ ಪಾಸ್‌ಗಳಿಗೋಸ್ಕರ 35 ಕೋಟಿ ರೂಪಾಯಿಗಳನ್ನು ಬಡ್ಜೆಟ್‌ನಿಂದ ರಸ್ತೆ ಸಾರಿಗೆ ಸಂಸ್ಥೆಗೆ ಕೊಟ್ಟಿದ್ದರು. ಈ ವರ್ಷ ಅದನ್ನು 35 ಕೋಟಿ ರೂಪಾಯಿಯಿಂದ 45 ಕೋಟಿ ರೂಪಾಯಿಗೆ ಏರಿಸಿದ್ದಾರೆ. 10 ಕೋಟಿ ರೂಪಾಯಿಗಳನ್ನು ವಿದ್ಯಾರ್ಥಿಗಳ ರಿಯಾಯಿತಿ ಪಾಸ್‌ಗಳನ್ನು ತುಂಬುವುದಕ್ಕೆಂದು ಕೊಟ್ಟಿದ್ದಾರೆ. ಇದಲ್ಲದೆ ಫ್ರೀಡಂ ಫೈಟರ್ಸ್ ಹೋಗುತ್ತಾರೆ, ಬ್ಲೈಂಡ್ ಪ್ಯಾಸೆಂಜರ್ಸ್ ಹೋಗುತ್ತಾರೆ. ಪೋಲೀಸ್ ಪರ್ಸೊನೇಲ್ ಹೋಗುತ್ತಾರೆ. ಇದರ ಬಗ್ಗೆ ಎಷ್ಟು ಖರ್ಚಾಗುತ್ತದೆ, ಸರ್ಕಾರದಿಂದ ಬರತಕ್ಕಂತಹ ದುಡ್ಡು ಇದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇದಲ್ಲದೆ, ಈ ವರ್ಷ ಸಾರಿಗೆ ಸಂಸ್ಥೆಯನ್ನು ಸುಧಾರಣೆ ಮಾಡಬೇಕು. ಅಲ್ಲಿ ಬರತಕ್ಕಂತಹ ಹಣದಿಂದ ಪ್ರಯಾಣಿಕರ ಸೌಕರ್ಯವನ್ನು ಹೆಚ್ಚು ಮಾಡಬೇಕು ಎನ್ನುವ ಒಂದೇ ಒಂದು ದೃಷ್ಟಿಯನ್ನು ಇಟ್ಟುಕೊಂಡು ಇವತ್ತಿನ ಬಡ್ಜೆಟ್‌ನಿಂದ ನಮ್ಮ ಸರ್ಕಾರದವರು ಹಲವಾರು ಅನುಕೂಲಗಳನ್ನು ಕಲ್ಪಿಸಿದ್ದಾರೆ. ಪ್ರೈವೇಟ್ಸ್‌ನವರ ಟ್ಯಾಕ್ಸ್ ರೆವಿನ್ಯೂ ಟ್ರಾಫಿಕ್‌ನಲ್ಲಿ ಕೊಡುವುದಿಲ್ಲ. ಅವರು ಪರ್‌ಪ್ಯಾಸೆಂಜರ್ ಕಟ್ಟುತ್ತಾರೆ. ಆದರೆ ನಾವು ಟ್ರಾಫಿಕ್ ರೆವಿನ್ಯೂ ಮೇಲೆ 12 ಪರ್ಸೆಂಟ್ ಸಾರಿಗೆ ಸಂಸ್ಥೆಯಿಂದ ಸರ್ಕಾರಕ್ಕೆ ಕೊಡುತ್ತಿದ್ದೇವೆ. ಇದನ್ನು ಪ್ರಾರಂಭ ಮಾಡಿದ್ದುದು 1985ರಲ್ಲಿ. ಏಕೆ ಮಾಡಿದೆ ಎಂದರೆ, ಇನ್‌ಕಮ್ ಟ್ಯಾಕ್ಸ್ ಲಾಭ ಮಾಡಿದರೆ ಕೇಂದ್ರ ಸರ್ಕಾರಕ್ಕೆ ಕಟ್ಟಬೇಕಾಗುತ್ತದೆ ಅನ್ನುವ ದೃಷ್ಟಿಯಿಂದ ನಾವು ಇದನ್ನು ಮಾಡಿದ್ದು. 17 ಪರ್ಸೆಂಟ್ ಮಾಡಿದೆವು. ಆದರೆ ನಿಮ್ಮ ಸರ್ಕಾರ ಇದ್ದಾಗ ಶೇಕಡ ಹನ್ನೆರಡರಷ್ಟು ಮಾಡಿದ್ದೀರಿ. ಇವೊತ್ತು ನಮ್ಮ ಬಡ್ಜೆಟ್‌ನಲ್ಲಿ ಅದನ್ನು ಎಂಟು ಪರ್ಸೆಂಟ್ ಮಾಡಿದ್ದಾರೆ. ಮತ್ತು ನಗರ ಪ್ರದೇಶಗಳಲ್ಲಿರತಕ್ಕಂಥ

ಬಸ್ಸುಗಳು, ಅದು ಬಿ.ಟಿ.ಎಸ್. ಇರಬಹುದು, ಮೈಸೂರು ಸಿಟಿ ಸರ್ವಿಸೆಸ್ ಇರಬಹುದು, ಹುಬ್ಬಳ್ಳಿ ಇರಬಹುದು, ಗುಲರ್ಗಾ ಇರಬಹುದು ಅಥವಾ ಬಿಜಾಪುರ ಇರಬಹುದು ಅದಕ್ಕೆ ಐದು ಪರ್ಸೆಂಟ್ ಮಾಡಿದ್ದಾರೆ. ನಾವು ಬರೀ ಜಿಲ್ಲೆಗಳನ್ನು ಜಾಸ್ತಿ ಮಾಡಿಬಿಟ್ಟು, ಜನಸಾಮಾನ್ಯರಿಗೆ ತೊಂದರೆ ಕೊಟ್ಟು 170 ಕೋಟಿ ರೂಪಾಯಿ ಸಂಗ್ರಹ ಮಾಡಿಕೊಳ್ಳದೆ ಕೊಟ್ಟಿದ್ದೇವೆ ಎನ್ನತಕ್ಕಂಥ ಮಾತು ಏನು ಇದೆ ಅದೇ ಸಂದರ್ಭದಲ್ಲಿ ಹೌದು ನಾವು ಮಾಡಿದ್ದೇವೆ, ನಾನು ಇಲ್ಲ ಎಂದು ಎಲ್ಲೂ ಸಹಿತ ಹೇಳಿಲ್ಲ. ನಾನು ಕೊಟ್ಟಿರತಕ್ಕಂಥ ನಿಜವಾದ ಅಂಕಿಅಂಶಗಳು ರಿಯಲೈಸ್ ಎಷ್ಟು ಆಗಿದೆ ಎಲ್ಲವನ್ನೂ ಕೂಡ ಸಭೆಯ ಮುಂದೆ ಇಡಲಿಕ್ಕೆ ಬಯಸುತ್ತೇನೆ. ಸಾರಿಗೆ ಸಂಸ್ಥೆಗೆ ಸುಮಾರು 12 ಪರ್ಸೆಂಟ್ ಇದ್ದದ್ದನ್ನು ರೂರಲ್ ಏರಿಯಾಸ್‌ಗೆ ಎಂಟು ಪರ್ಸೆಂಟ್ ಇಳಿಸಿದ್ದಾರೆ. ಸಿಟಿ ಸರ್ವಿಸೆಸ್‌ಗೆ ಐದು ಪರ್ಸೆಂಟ್ ಇಳಿಸಿದ್ದಾರೆ ಆದರಿಂದ ಮೋಟಾರ್ ವೆಹಿಕಲ್ಸ್ ಟ್ಯಾಕ್ಸೆಸ್ ಬರ್ಡನ್ ಸುಮಾರು 30-40 ಕೋಟಿ ರೂಪಾಯಿ ಕಡಿಮೆಯಾಗುತ್ತದೆ. ಸ್ಟೂಡೆಂಟ್ ಕನ್ಸೇಷನ್ಸ್‌ಗೆ ಹತ್ತು ಕೋಟಿ ರೂಪಾಯಿ ಕೊಟ್ಟಿದ್ದಾರೆ. ನಮ್ಮ ಸಾರಿಗೆ ಸಂಸ್ಥೆಗೆ ಹತ್ತು ಕೋಟಿ ರೂಪಾಯಿ ಜಾಸ್ತಿ ಬಂದಿದೆ. ಶ್ರೀರಾಮರೆಡ್ಡಿಯವರು ಗಮನಿಸಬೇಕು. we want to make this public sector organisation a viable one. We want to improve its a financial condition. ತಾವು ಹೇಳಿದರಲ್ಲಾ, ಇಲ್ಲ ಇದನ್ನು ನೀವು ಖಾಸಗೀಯವರಿಗೆ ಕೊಡಬೇಕು ಎಂದು ಮಾಡಿದ್ದೀರಿ, ಖಾಸಗೀಯವರಿಗೆ ಮಾರಾಟ ಮಾಡುತ್ತಾರೆ ಎನ್ನುವಂಥ ಅನುಮಾನ ಬರುತ್ತಿದೆ, ನೀವು ಸಾರ್ವಜನಿಕ ರಂಗದಲ್ಲಿ ಇರತಕ್ಕಂಥ ಎಲ್ಲಾ ವಲಯಗಳಲ್ಲೂ ಸಹಿತ ಅದನ್ನು ಹರಾಜು ಹಾಕಿ ಮಾರಾಟ ಹಾಕಲಿಕ್ಕೆ ಹೊರಟಿದ್ದೀರಿ, ಜನಸಾಮಾನ್ಯರಿಗೆ ನಂಬಿಕೆ ಹೊರಟು ಹೋಯಿತು ಎಂದು, ಆದರೆ ಅದು ಅಲ್ಲ. ಇಲ್ಲದೇ ಹೋದರೆ ಇಷ್ಟೊಂದು ಹಣ ನಾವು ಏಕೆ ಕೊಡಬೇಕಾಗಿತ್ತು? 1993ರಲ್ಲಿ ಕಾಸ್ಟ್ ಆಫ್ ಇಂಡೆಕ್ಸ್ 267 ಪಾಯಿಂಟ್ ಇತ್ತು, ಇವೊತ್ತು 341 ಪಾಯಿಂಟ್‌ಗೆ ಹೆಚ್ಚಾಗಿದೆ. ಅದನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದರೆ ಸಾರಿಗೆ ಸಂಸ್ಥೆ ನಷ್ಟವಾಗಿದ್ದು ನಿಜ. ಮಾನ್ಯ ಖರ್ಗೆಯವರು ಬಹಳ ಅಭ್ಯಾಸ ಮಾಡಿದ್ದಾರೆ, ಆಡಳಿತದಲ್ಲಿ ಇದ್ದವರು, ಕೆಲವು ವಿಷಯಗಳನ್ನು ತಿಳಿದುಕೊಂಡಿದ್ದಾರೆ, ತಾವು ಎಲ್ಲಾ ವಿಷಯಗಳನ್ನು ಹೇಳಿದ್ದೀರಿ, ಒಂದು ಕ್ಯಾನ್ಸಲೇಷನ್, ಕ್ಯಾನ್ಸಲೇಷನ್‌ಗೆ ಇದೆ. ನಾನು ಇಲ್ಲ ಎಂದು ಹೇಳುವುದಿಲ್ಲ.25-30ಪರ್ಸೆಂಟ್ ಕ್ಯಾನ್ಸಲೇಷನ್ ಇದ್ದದ್ದನ್ನು ನಾನು ಪ್ರಾಮಾಣಿಕವಾಗಿ ಇಳಿಸಲಿಕ್ಕೆ ಪ್ರಯತ್ನ ಮಾಡಿದ್ದೇನೆ. ನನ್ನ ಕಣ್ಣಿಗೆ ಇದನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು ಗೊತ್ತಾಗಿದ್ದರೆ ನಾನು ಒಂದು ನಿಮಿಷ ಕೂಡ ಅಲ್ಲಿ ಇರುತ್ತಿರಲಿಲ್ಲ. 16-17ಪರ್ಸೆಂಟ್ ಇದ್ದುದನ್ನು ನಾನು ಹತ್ತು ಪರ್ಸೆಂಟ್‌ಗೆ ಇಳಿಸಿದ್ದೇನೆ. ಅದಕ್ಕೆ ನಾನು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಇದಕ್ಕೆ ತಾವು ಎಲ್ಲರೂ ಸಹಕಾರ ಕೊಟ್ಟರೆ ಮಾತ್ರ ಆಗುತ್ತದೆ. ಇಲ್ಲದೇ ಹೋದರೆ ಆಗುವುದಿಲ್ಲ ಎನ್ನುವಂಥದ್ದನ್ನು ಹೇಳುವುದಕ್ಕೆ ಬಯಸುತ್ತೇನೆ. ಯಾವ ರೀತಿ ಸಹಕಾರ ಬೇಕು ಎನ್ನುವಂಥದ್ದನ್ನು ಕೊನೆಯಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸಭಾಪತಿಗಳೇ, ತಾವು ಹೇಳಿದ ಹಾಗೆ ಇದುವರೆಗೆ ರಿಕ್ರೂಟ್‌ಮೆಂಟ್ ಆಗಿಯೇ ಇರಲಿಲ್ಲ, ರಿಕ್ರೂಟ್‌ಮೆಂಟ್ ಬ್ಯಾನ್ ಮಾಡಿದ್ದರು, ಆರು ತಿಂಗಳಲ್ಲಿ ನಾಲ್ಕು ಸಾವಿರ ಜನರಿಗೆ ನಾವು ರಿಕ್ರೂಟ್ಮೆಂಟ್ ಮಾಡಿದ್ದೇವೆ. ಆಫೀಸರ್ಸ್‌ನ್ನು 1987ರಲ್ಲಿ ಅಪಾಯಿಂಟ್‌ಮೆಂಟ್ ಮಾಡಿಕೊಂಡಿದ್ದರು. ಈ ತಿಂಗಳಲ್ಲಿ ನಾವು 180

ಜನ ಆಫೀಸರ್ಸ್‌ನ್ನು ಅಪಾಯಿಂಟ್ ಮಾಡುವುದಕ್ಕೆ ಹೊರಟಿದ್ದೇವೆ. ಅಡ್ವರ್ಟೈಸ್ ಮಾಡಿದ್ದೇವೆ. ಇನ್ನು ರೀ-ಪ್ಲೇಸ್‌ಮೆಂಟ್ ಆಫ್ ವೆಹಿಕಲ್ಸ್, ತಾವು ನೋಡುತ್ತಿದ್ದೀರಿ ಎರಡೂವರೆ ಸಾವಿರ ವೆಹಿಕಲ್ಸ್‌ನ್ನು ಏನಾದರೂ ಮಾಡಿ ರೀಪ್ಲೇಸ್ ಮಾಡಬೇಕೆಂದು ಹೊರಟಿದ್ದೇವೆ. ಮತ್ತು ಕೆಲವರು ಆಬ್‌ಸೆಂಟ್ ಆಗುತ್ತಾರೆ. ಏಕೆ ಆಬ್‌ಸೆಂಟ್ ಆಗುತ್ತಾರೆ ಅದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಏಕೆ ಆಬ್‌ಸೆಂಟ್ ಆಗುತ್ತಾರೆ ಎಂದರೆ ಯಾವುದೋ ಒಂದು ರೂಟಿಗೆ ಕೊಡಬೇಕು, ನಾನು ಎಲ್ಲರಿಗೂ ಒಂದೇ ಸಾರಿಗೆ ವಿರೋಧ ಮಾಡಲಿಕ್ಕೆ ಆಗುವುದಿಲ್ಲ. ಯಾವುದೋ ಒಬ್ಬ ಕಾರ್ಮಿಕ, ಒಬ್ಬ ಕಂಡಕ್ಟರ್, ಒಬ್ಬ ಡ್ರೈವರ್ ಮಾಡಿದ ತಪ್ಪನ್ನು ನೋಡಿ ಇಡೀ ಕಾರ್ಮಿಕ ಸಮುದಾಯ ಮಾಡುತ್ತಿದೆ ಎಂದು ನಾನು ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇಷ್ಟೇ ಹೇಳುತ್ತೇನೆ. Absentiesm is part of the discipline. ಫಿಲ್‌ಫರೇಜ್ ಇದೆ. ಫಿಲ್‌ಫರೇಜ್ ಇಲ್ಲ ಎಂದು ನಾನು ಎಲ್ಲೂ ಸಹಿತ ಹೇಳಿಲ್ಲ ಪಿಲ್‌ಫರೇಜ್ ಹತ್ತು ಪರ್ಸೆಂಟ್ ಇದೆ ಎಂದು ನಾನು ಬಹಿರಂಗವಾಗಿ ಹೇಳುತ್ತೇನೆ. ಹತ್ತು ಪರ್ಸೆಂಟ್ ಎಂದರೆ 1200 ಕೋಟಿ ರೂಪಾಯಿ. ಈ ವರ್ಷ ನಮ್ಮ ಪ್ರಾಫಿಟ್ ರೆವಿನ್ಯೂಗೆ 120 ಕೋಟಿ ರೂಪಾಯಿ ಫಿಲ್‌ಫರೇಜ್ ಇರತಕ್ಕಂಥದ್ದು ನಿಜ. ಇದನ್ನು 5-6 ಪರ್ಸೆಂಟ್‌ಗೆ ಇಳಿಸಲಿಕ್ಕೆ ಏನು ಮಾಡಬೇಕು. ಆಂಧ್ರಪ್ರದೇಶದ ಎ.ಪಿ.ಎಸ್.ಆರ್.ಟಿ.ಸಿ.ನಲ್ಲಿ ಒಂದು ಕಾನೂನನ್ನು ಮಾಡಿದ್ದಾರೆ. ರಾಷ್ಟ್ರದಲ್ಲಿ ನಾವು ಯು.ಪಿ. ಬಿಹಾರ್‌ಗೆ ಕಂಪೇರ್ ಮಾಡುವುದು ಬೇಡ. ಕಲ್ಕತ್ತಾಗೂ ಕಂಪೇರ್ ಮಾಡುವ ಅವಶ್ಯಕತೆ ಇಲ್ಲ. I cannot comment on those things. ಕೇರಳದಲ್ಲಿ ಎಂಭತ್ತರಷ್ಟು ಖಾಸಗೀಯವರ ಕೈಯಲ್ಲಿ ಇದೆ. ಸಾರಿಗೆಯವರ ಕೈಯಲ್ಲಿ ಇರತಕ್ಕಂಥದ್ದು ಕೇವಲ ನೂರಕ್ಕೆ ಇಪ್ಪತ್ತು ಪರ್ಸೆಂಟ್ ಮಾತ್ರ. ಪಶ್ಚಿಮ ಬಂಗಾಳದಲ್ಲಿ ಇವೊತ್ತು ಖಾಸಗಿಯವರ ಕೈಯಲ್ಲಿ ನೂರಕ್ಕೆ ಎಪ್ಪತ್ತರಷ್ಟು ಇದೆ. ಸರ್ಕಾರಿ ರಂಗದಲ್ಲಿ ಇವೊತ್ತು ಕೇವಲ ನೂರಕ್ಕೆ ಮೂವತ್ತರಷ್ಟು ಇದೆ. ಆದರೆ ನಮ್ಮ ರಾಜ್ಯದಲ್ಲಿ ನೂರಕ್ಕೆ ಎಪ್ಪತ್ತರಷ್ಟು ಸಾರ್ವಜನಿಕ ವಲಯದಲ್ಲಿದೆ. ಆದಕಾರಣ ನಮ್ಮ ರಾಜ್ಯದಲ್ಲಿ ಯಾರ್‍ಯಾರು ಆಡಳಿತ ನಡಸಿದ್ದಾರೆ ಅವರನ್ನೆಲ್ಲ ನಾವು ಶ್ಲಾಘಿಸಿಕೊಳ್ಳಬೇಕು. ಇವೊತ್ತು ಗುಲ್ಬರ್ಗಾ, ಬೀದರ್, ರಾಯಚೂರು, ದಾವಣಗೆರೆ, ಚಿತ್ರದುರ್ಗ ಈ ನಾಲ್ಕು ಜಿಲ್ಲೆಗಳಲ್ಲಿ ರಾಷ್ಟ್ರೀಕರಣ ಮಾಡಿದ್ದು ನಮ್ಮ ಸರ್ಕಾರ ಇದ್ದಂಥ ಕಾಲದಲ್ಲಿ. ಅಲ್ಲಿ ಅನೇಕ ಜನ ಖಾಸಗೀಯವರಿಗೆ ನಮ್ಮ ಮೇಲೆ ಒತ್ತಡ ತಂದರು. ಈ ವಿಚಾರ ಖರ್ಗೆಯವರಿಗೆ ಗೊತ್ತಿದೆ. ಧರ್ಮಸಿಂಗ್ ಅವರಿಗೆ ಗೊತ್ತಿದೆ, ಕಾಗೋಡು ತಿಮ್ಮಪ್ಪರವರಿಗೆ ಗೊತ್ತಿದೆ. 1977ರಲ್ಲಿ ಕಾಂಟ್ರಾಕ್ಟ್ ಕ್ಯಾರೇಜ್ ಒಂದು ಆಕ್ಟ್‌ನ ಮೂಲಕವಾಗಿ ದೇವರಾಜ್ ಅರಸುರವರು ಖಾಸಗೀ ಬಸ್ಸುಗಳನ್ನು ತೆಗೆದುಕೊಂಡು ಬಿಟ್ಟಮೇಲೆ ಯಾರೂ ಸಹಿತ ರಾಷ್ಟ್ರೀಕರಣವನ್ನು ಮಾಡುವುದಕ್ಕೆ ಹೊರಟಿರಲಿಲ್ಲ. ನಾವು ರಾಷ್ಟ್ರೀಕರಣ ಮಾಡುವುದರಿಂದ ಏನಾದರೂ ಸರಿ ಮಾಡಬೇಕು, ಉತ್ತಮ ಪಡಿಸಬೇಕು ಎನ್ನುವ ದೃಷ್ಟಿಯಿಂದ ಮಾಡಿದ್ದೇವೆ. ಆದರೆ ಇವೊತ್ತು ನಾವು ಒಂದು ವಯಾ ಮೀಡಿಯಾವನ್ನು ಹುಡುಕಬೇಕಾಗಿದೆ. ಏಕೆಂದರೆ ನಾವು ಯಾವ ಉದ್ದೇಶದಿಂದ ಮಾಡಿದ್ದೇವೋ ಆ ಉದ್ದೇಶದ ಫಲಿತಾಂಶ ಇವೊತ್ತು ಆ ಭಾಗದಲ್ಲಿ ಸಿಗಲಿಲ್ಲ. ಅದಕ್ಕಾಗಿ ಎರಡಕ್ಕೂ ಬಂದು ವಯಾ ಮೀಡಿಯಾ ಹುಡುಕಲಿಕ್ಕೆ ಹೊರಟಿದ್ದೇವೆ. ಇವೊತ್ತು ಫಿಲ್‌ಫಲೇಜ್ ಕಡಿಮೆ ಮಾಡಲಿಕ್ಕೆ ಕ್ಯಾನ್ಸಲೇಷನ್ ಕಡಿಮೆ ಮಾಡಲಿಕ್ಕೆ ರೀ-ಪ್ಲೇಸ್‌ಮೆಂಟ್ ಆಫ್ ವೆಹಿಕಲ್ಸ್, ಮತ್ತು ವೆಹಿಕಲ್ಸ್ ಯೂಟಿಲೈಸೇಷನ್ ಈ

ಪ್ಯಾರಾ-ಮೀಟರ್ಸ್ ಇಂಪ್ರೂವ್ ಆಗಬೇಕು ನಾನು ಒಪ್ಪಿಕೊಳ್ಳುತ್ತೇನೆ. ಬಹಳ ಮುಖ್ಯವಾಗಿರತಕ್ಕಂಥದ್ದು ಮೂರು ವಿಚಾರಗಳು. ಒಂದು, ಒಂದು ಲೀಟರ್ ಡಿಸೇಲ್‌ಗೆ ಒಂದು ಬಸ್ಸು ಎಷ್ಟು ಓಡುತ್ತದೆ ಎಂದರೆ ನನಗೆ ಈ ವಿಚಾರದಲ್ಲಿ ಬಹಳ ನೋವು ಆಗುತ್ತದೆ. 1986ರಲ್ಲಿ ಇದೇ ಬಸ್ಸುಗಳು ಒಂದು ಲೀಟರ್ ಡಿಸೇಲ್‌ನಲ್ಲಿ4.8 ಕಿ.ಮೀ. ಓಡುತ್ತಿತ್ತು. ಇವೊತ್ತು4.5 ಕಿ.ಮೀ.ಗೆ ಬಂದಿದೆ. ಇದಕ್ಕೆ ಹೊಣೆ ಅಲ್ಲ. ಇದು ವಸ್ತುಸ್ಥಿತಿ. ಇದಕ್ಕೆ ರಸ್ತೆಗಳ ಕಂಡೀಷನ್ ಕಾರಣ ಇರಬಹುದು, ಮತ್ತೊಂದು ಇರಬಹುದು, ಮಗದೊಂದು ಇರಬಹುದು. ಆದರೆ 4.8 ಕಿ.ಮೀ.ಗೆ ಇಳಿದಿದ್ದು ನಿಜ. ಇಳಿದಿರತಕ್ಕಂಥ ಒಂದು ಪಾಯಿಂಟ್‌ಗೆ ಅಂದರೆ ಒಂದು ಪಾಯಿಂಟ್ ಕಡಿಮೆ ಆದರೆ ಎರಡು ಕೋಟಿ ರೂಪಾಯಿ ಲುಕ್ಸಾನ್ ಆಗುತ್ತದೆ. ಆದರೆ ಇಡೀ ರಾಷ್ಟ್ರದಲ್ಲಿ ನಮ್ಮ ಸಾರಿಗೆ ಸಂಸ್ಥೆ ಟೈಯರ್ ಮೈಲೇಜ್ ಮತ್ತು ಆಕ್ಸಿಡೆಂಟ್ ವಿಚಾರದಲ್ಲ ಪರವಾಗಿಲ್ಲ ಎಂದು ಹೇಳಬಹುದು. ಒಂದು ಲಕ್ಷ ಹತ್ತು ಸಾವಿರಕ್ಕೆ ಹೋಗಿದೆ ನಮ್ಮ ಟೈರ್ ಮೈಲೇಜ್. ಇದಕ್ಕಿಂತ ಜಾಸ್ತಿ ಮಾಡುವುದಕ್ಕೆ ಆಗುವುದಿಲ್ಲ. ಇನ್ನು ವೆಹಿಕಲ್ ಯುಟಿಲೈಸೇಷನ್ ವಿಚಾರದಲ್ಲಿ ನಾವು ಹೋಲಿಕೆ ಮಾಡಿಕೊಂಡರೆ ಇಡೀ ರಾಷ್ಟ್ರದಲ್ಲಿ ನಾಲ್ಕೈದು ಸಾರಿಗೆ ಸಂಸ್ಥೆಗೆ ನಾವು ಹೋಲಿಕೆ ಮಾಡಿಕೊಳ್ಳಬಹುದು. ಗುಜರಾತ್, ಮಹಾರಾಷ್ಟ್ರ, ರಾಜಸ್ಥಾನ್ ಮತ್ತು ಆಂಧ್ರಪ್ರದೇಶ್ ಇವು ಇಷ್ಟೇ. ತಮಿಳುನಾಡಿನಲ್ಲಿ ಹತ್ತು ವರ್ಷದ ಹಿಂದೆ ಇತ್ತು. ಇವೊತ್ತು ಅಲ್ಲಿಯ ಪರಿಸ್ಥಿತಿ ಕೂಡ ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದಾರೆ. ಈ ವರ್ಷ ಅಲ್ಲಿ 16 ಕಾರ್ಪೊರೇಷನ್‌ಗಳು ಇವೆ. ಆ 16 ಕಾರ್ಪೊರೇಷನ್‌ನಲ್ಲಿ 300 ಕೋಟಿ ರೂಪಾಯಿಗಳ ಲುಕ್ಸಾನ್ ಆಗುತ್ತಿದೆ. ಎಂ.ಎಸ್.ಆರ್.ಟಿ.ಸಿ. ಅಂದರೆ ಮಹಾರಾಷ್ಟ್ರದಲ್ಲಿ ಏನು ಮಾಡಿದ್ದಾರೆಂದರೆ ಪ್ರತಿ ವರ್ಷವೂ ಸಹಿತ ಡಿಸೇಲ್ ಬೆಲೆ ಜಾಸ್ತಿ ಎಷ್ಟು ಆಗುತ್ತದೆ, ಬೇರೆ ಬೇರೆ ಕಾಂಪೊಸೆಂಟ್‌ಗಳಿಗೆ ಎಷ್ಟು ಜಾಸ್ತಿಯಾಗುತ್ತದೆ ಅಷ್ಟರಮಟ್ಟಿಗೆ ಅವರು ಆಟೋಮ್ಯಾಟಿಕ್ ಆಗಿ ಫೇರ್ ರಿವಿಷನ್ ಮಾಡಿಬಿಡುತ್ತಾರೆ. ಅವರು ಯಾವುದಕ್ಕೂ ಕೇಳುವುದಕ್ಕೆ ಹೋಗುವುದಿಲ್ಲ, ಚರ್ಚೆಯನ್ನೂ ಮಾಡುವುದಿಲ್ಲ. ಎಷ್ಟು ಬೆಲೆಗಳು ಜಾಸ್ತಿಯಾಗುತ್ತವೆ, ಅಷ್ಟು ಬೆಲೆಗಳನ್ನು ಅವರು ಜಾಸ್ತಿ ಮಾಡಿಕೊಂಡು ಬಂದಿದ್ದಾರೆ. ಅದು ಮಹಾರಾಷ್ಟ್ರದಲ್ಲಿ ಆದರೆ ಗುಜರಾತ್‌ನಲ್ಲಿ ಅವರ ಬೆಲೆಗಳು ಏನು ಇವೆ ಎನ್ನುವುದನ್ನು ತಾವು ಕಂಫೇರ್ ಮಾಡಿ ನೋಡಿ. ಗುಜರಾತ್‌ನಲ್ಲಿ ಕಡಿಮೆ ಇದೆ, ಆಂಧ್ರದಲ್ಲಿ ಕಡಿಮೆ ಇದೆ ಅಥವಾ ಅವರದು ಜಾಸ್ತಿ ಇದೆ ನಮ್ಮದು ಕಡಿಮೆ ಇದೆ ಎನ್ನತಕ್ಕಂಥ ಒಂದು ವಾದಕ್ಕೆ ನಾನು ಹೋಗುವುದಕ್ಕೆ ತಯಾರು ಇಲ್ಲ. I don't want to go into those arguments. ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿ ನೋಡಿದರೆ ಆ್ಯಕ್ಸಿಡೆಂಟ್ ವಿಚಾರದಲ್ಲಿ ಕೆ.ಎಸ್.ಆರ್.ಟಿ.ಸಿ. ಚೆನ್ನಾಗಿ ಇದೆ. ನಾವೇನಾದರೂ ಕಂಪೇರ್ ಮಾಡಿಕೊಂಡರೆ ರಾಜಸ್ಥಾನದಲ್ಲಿರತಕ್ಕಂಥ ಟ್ರಾನ್ಸ್‌ಪೋರ್ಟ್ ಅಂಡರ್‌ಟೇಕಿಂಗ್ ಉತ್ತಮವಾಗಿ ಕೆಲಸ ಮಾಡುತ್ತಿದೆ. ಅದಕ್ಕೆ ಕಾರಣ ಇದೆ. ಅದಕ್ಕೆ ಕಾರಣ ಏನು ಇದೆ ಎಂದರೆ ಅವರು ಪ್ರೈವೇಟ್ ಬಸ್ಸುಗಳನ್ನು ಬಾಡಿಗೆಗೆ ತೆಗೆದುಕೊಂಡು ಓಡಿಸುತ್ತಿದ್ದಾರೆ. ಕಂಡಕ್ಟರ್ ಟಿಕೆಟ್ ಮಾತ್ರ ಕೊಡುತ್ತಾರೆ. ಉಳಿದದ್ದೆಲ್ಲಾ ಪ್ರೈವೇಟ್‌ನವರದು. ಮೇನ್‌ಟೇನೆನ್ಸ್ ಕೂಡ ಪ್ರೈವೇಟ್‌ನವರದು. ಮೋಟರ್ ವೆಹಿಕಲ್ಸ್ ಟ್ಯಾಕ್ಸ್ ಎಕ್ಸೆಂಪೆಷನ್ ಕೊಟ್ಟಿದ್ದಾರೆ. ಟೂರಿಸ್‌ಂಗೆ ಹೆಚ್ಚು ಎನ್‌ಕರೇಜ್ ಮಾಡಿದ್ದಾರೆ. ರೋಡ್‌ಗಳು ಚೆನ್ನಾಗಿ ಇವೆ. ಟೈಯರ್ ಮೈಲೇಜ್ ಚೆನ್ನಾಗಿ ಬರುತ್ತದೆ. ಈ ಕಾರಣದಿಂದಾಗಿ ರಾಜಸ್ಥಾನ್ ನಮಗಿಂತ ಉತ್ತಮವಾಗಿದೆ. ಅಲ್ಲಿರತಕ್ಕಂಥ

ಫೇರ್‌ಗಳನ್ನು ನಾವು ಕಂಪೇರ್ ಮಾಡಿಕೊಂಡರೆ ನಮ್ಮ ಫೇರ್‌ಗಳು ಹೆಚ್ಚು ಉತ್ತಮ ಎನ್ನುವಂಥ ಸಂದರ್ಭದಲ್ಲಿ ಹೇಳುತ್ತೇನೆ. Fares revised with effect from 21.11.96. I am only comparing with Rajasthan. ಬೇರೆ ಯಾವ ರಾಜ್ಯಕ್ಕೆ ನಾನು ಕಂಪೇರ್ ಮಾಡುವುದಕ್ಕೆ ಹೋಗುವುದಿಲ್ಲ. ಆರ್ಡಿನರಿ ಸರ್ವಿಸೆಸ್ ಪರ್ ಕಿ.ಮೀ.24ಪೈಸೆ ಇದೆ. ನಮ್ಮ ಬೆಲೆಗಳು ಜಾಸ್ತಿ ಮಾಡಿದ ಮೇಲೆ 22 ಪೈಸೆಗೆ ನಾವು ಇಳಿಸಿದ್ದೇವೆ. ಎಕ್ಸ್‌ಪ್ರೆಸ್ ಸರ್ವಿಸೆಸ್ 29ಪೈಸೆ ಇದೆ. ಡೀಲಕ್ಸ್ 51ಪೈಸೆ ಇದೆ. ಏರ್ ಕಂಡಿಷನ್ ಬಸ್ 81 ಪೈಸೆ ಪರ್ ಕಿ.ಮೀ. ಇದೆ ರಾಜಸ್ಥಾನದಲ್ಲಿ ಆದರೆ ನಾನು ಇದನ್ನೆಲ್ಲಾ ಏತಕ್ಕೆ ಹೇಳುತ್ತಿದ್ದೇನೆಂದರೆ ನಾವು ಏನೋ ಲೂಟಿ ಮಾಡುವುದಕ್ಕೆ ಹೊರಟಿದ್ದೇವೆ ಎನ್ನತಕ್ಕಂಥ ಭಾವನೆ ಜನಗಳಲ್ಲಿ ಬರಬಾರದು ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಲೀಗಲ್ ಪೋಸಿಷನ್ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇನ್ನು ಈಗಾಗಲೇ ನಾವು ನೈತಿಕವಾಗಿ ಬೆಲೆಗಳ ಬಗ್ಗೆ ನಿರ್ಣಾಯ ತೆಗೆದುಕಂಡಾಗಿದೆ ಎಂದು ಹೇಳಿದ್ದೇನೆ. ಅದರ ಬಗ್ಗೆ ಚರ್ಚೆ ಮಾಡೋಣ ಅದರಲ್ಲಿ ನಮ್ಮದೇನೂ ತಕರಾರು ಇಲ್ಲ ಬೆಲೆಗಳನ್ನು ಜಾಸ್ತಿ ಮಾಡುವ ಬಗ್ಗೆ ಚರ್ಚೆ ಮಾಡೋಣ ಎಂದು ನಾನು ವಿಧಾನ ಪರಿಷತ್ತಿನಲ್ಲಿ ಶ್ರೀಮತಿ ಕೆಂಪಮ್ಮನವರಿಗೆ ಅವರು ಕೇಳಿರತಕ್ಕಂಥ ಸಂದರ್ಭದಲ್ಲಿ ಹೇಳಿದ್ದು ನಿಜ. ಕಳೆದ ಸಾರಿ ಅಧಿವೇಶನದಲ್ಲಿ ಕೆ.ಇ.ಬಿ. ಮತ್ತು ಕೆ.ಎಸ್.ಆರ್.ಟಿ.ಸಿ. ಯ ಬಗ್ಗೆ ನಾವು ಚರ್ಚೆ ಮಾಡೋಣ ಎನ್ನತಕ್ಕಂಥದ್ದು ಇತ್ತು. ಆದರೆ ಧರಣೆಗಳು, ಅನೇಕ ಬೇರೆ ಬೇರೆ ವಿಚಾರಗಳ ಬಗ್ಗೆ ಚರ್ಚೆ ಆದುದ್ದರಿಂದ ಇದು ಚರ್ಚೆಗೆ ಬರಲಿಲ್ಲ. ಅದಕ್ಕಾಗಿ ನಾನು ಸದನದಲ್ಲಿ ತಮ್ಮೆಲ್ಲರ ಕ್ಷಮೆಯನ್ನು ಕೇಳುತ್ತೇನೆ. ಒಂದು ಸಾರಿ ನಾವು ತಿಳಿಸಿ ಬಿಟ್ಟು ಮಾಡಿದ್ದರೆ ಏನೂ ತಪ್ಪಾಗುತ್ತಿರಲಿಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅಷ್ಟರಮಟ್ಟಿಗೆ ಈ ಸದನ ನನಗೆ ಕ್ಷಮಿಸಬೇಕು ಎನ್ನತಕ್ಕಂಥದ್ದನ್ನು ಹೇಳುತ್ತೇನೆ.

4.30 ಪಿ.ಎಂ

ಇನ್ನು ನಾವು ಎಷ್ಟು ದರವನ್ನು ಜಾಸ್ತಿ ಮಾಡಿದ್ದೇವೆನ್ನುವುದು ಬಹಳ ಮುಖ್ಯವಾಗಿರುತ್ತದೆ. ಮಾನ್ಯ ಖರ್ಗೆಯವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮೊಫೆಸಿಯಲ್ ಆರ್ಡಿನರಿ ಬಸ್‌ನಲ್ಲಿ ಏನು ದರ ಏರಿಸಲಾಗಿದೆ. ಆ ಬಗ್ಗೆ ನಾನು ಒದಗಿಸಿರತಕ್ಕಂಥ ಕಾಪಿಯನ್ನು ತೋರಿಸಿಯೇ ಖರ್ಗೆಯವರು ಹೇಳಿದ್ದುದು. ಮೊಫೆಸಿಯಲ್ ಆರ್ಡಿನರಿ ಬಸ್‌ನಲ್ಲಿ ಒಂದು ಕಿ.ಮೀ.ಗೆ 16.47 ಪೈಸೆ ಇತ್ತು, ಸಾಮಾನ್ಯವಾಗಿ ಈ ಬಸ ಒಂದು ಹಳ್ಳಿಯಿಂದ ತಾಲ್ಲೂಕಿಗೆ ಹೋಗತಕ್ಕಂಥದ್ದು. ಇದರಲ್ಲಿ ಸಾಮಾನ್ಯವಾಗಿ ಬಡವರು, ಕಾರ್ಮಿಕರು ಮತ್ತು ವಿದ್ಯಾರ್ಥಿಗಳು ಹೋಗುತ್ತಾರೆ. ನಾವು ಇದರಲ್ಲಿ ಒಂದು ಕಿ.ಮೀ.ಗೆ 16.47 ಪೈಸೆ ಇದ್ದದ್ದನ್ನು 22 ಪೈಸೆ ಮಾಡಿದ್ದೇವೆ. ಅಂದರೆ ಸರಾಸರಿ ಶೇಕಡ 33.64 ಬರುತ್ತದೆ. ಇನ್ನು ಮೊಫೆಸಿಯಲ್ ಎಕ್ಸ್‌ಪ್ರೆಸ್ ಬಸ್‌ನಲ್ಲಿ 18.76 ಪೈಸೆ ಇದ್ದದ್ದನ್ನು ನಾವು 26 ಪೈಸೆ ಮಾಡಿದ್ದೇವೆ, ಇನ್ನು ಸೆಮಿ ಲೆಕ್ಸುರಿ ಬಸ್‌ನಲ್ಲಿ ಶೇಕಡ 33ರಷ್ಟು, ಮೊಫೆಸಿಯಲ್ ಲಕ್ಸುರಿ ಅಲ್ಲಾ ಡೀಲಕ್ಸ್ ಬಸ್‌ನಲ್ಲಿ ಶೇಕಡ 33ರಷ್ಟು ದರವನ್ನು ನಾವು ಜಾಸ್ತಿ ಮಾಡಿದ್ದೇವೆ. ಇನ್ನು ಸಿಟಿಗಳಲ್ಲಿ ಹೇಳಬೇಕೆಂದರೆ ಈ ವಿಚಾರ ಮಾನ್ಯ ಅಧ್ಯಕ್ಷರೇ, ತಮಗೂ ಗೊತ್ತಿರಬಹುದು. ಇಂದು ಬೆಲೆಗಳನ್ನು

ಜಾಸ್ತಿ ಮಾಡಿದಮೇಲೂ ಕೂಡ ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ದರ ಏನಿದೆ ಅದನ್ನು ನಗರ ಪ್ರದೇಶಗಳಿಗೆ ಹೋಲಿಕೆ ಮಾಡಿದರೆ ಇವೊತ್ತಿಗೂ ಸಹಿತ ಅದು ಹೆಚ್ಚಾಗುತ್ತದೆ. ನಾವು ಹಿಂದಿನಿಂದಲೂ ನಗರ ಪ್ರದೇಶಗಳಲ್ಲಿ ಸಬ್ಸಿಡಿಯನ್ನು ಮಾಡಿಕೊಂಡೇ ಬಂದಿದ್ದೇವೆ. ಈಗ ನಾವು ಎಷ್ಟೇ ಸಬ್ಸಿಡಿ ಕೊಟ್ಟರೂ ಸಹ ಅಟ್‌ಲೀಸ್ಟ್ ಕಾಸ್ಟ್ ವರ್ಕ್‌ಔಟ್ ಆಗಬೇಕಲ್ಲಾ. ನಾವು ಲೇಬರ್ ಕಾಸ್ಟ್ ಎಷ್ಟು, ಡೀಸಲ್ ಕಾಸ್ಟ್ ಎಷ್ಟು, ಸ್ಪೇರ್ ಪಾರ್ಟ್ಸ್ ಕಾಸ್ಟ್ ಎಷ್ಟು ಎಂಬುದನ್ನು ಲೆಕ್ಕ ಹಾಕತಕ್ಕಂಥ ಸಂದರ್ಭದಲ್ಲಿ ಸಿಟಿ ದರವನ್ನು ಸ್ವಲ್ಪ ಜಾಸ್ತಿ ಮಾಡಿರತಕ್ಕಂಥದ್ದು ನಿಜ. ಸಿಟಿಯಲ್ಲಿ ಆರ್ಡಿನರಿ ಬಸ್‌ನಲ್ಲಿ ಒಂದು ಸ್ಟೇಜ್‌ಗೆ 12 ಪೈಸೆ ಇದ್ದದ್ದನ್ನು ನಾವು 17 ಪೈಸೆಗೆ ಮಾಡಿದ್ದೇವೆ. ಅಂದರೆ ಶೇಕಡ 36ರಷ್ಟು ಜಾಸ್ತಿಯಾಗಿದೆ. ಸಬ್ ಅರ್ಬನ್‌ನಲ್ಲಿ ನಾವು 35.30 ಕೊಟ್ಟಿದ್ದೇವೆ. ಇನ್ನು ಪುಷ್ಪಕ್ ಬಸ್‌ಗಳ ಬಗ್ಗೆ ಹೇಳಬೇಕೆಂದರೆ ಒಟ್ಟು 250 ಬಸ್‌ಗಳು ಬೆಂಗಳೂರು ಸಿಟಿಯಲ್ಲಿ ಮಾತ್ರ ಇರತಕ್ಕಂಥದ್ದು, ನಾನ್-ಸ್ಟಾಪ್ ಬಸ್‌ಗಳನ್ನು ಓಡಿಸುವ ಉದ್ದೇಶದಿಂದ ಇದನ್ನು ಬೆಂಗಳೂರಿನಲ್ಲಿ ಮಾತ್ರ ಪ್ರಾರಂಭ ಮಾಡಿದ್ದು. ಇದರಲ್ಲಿ ದರ ಜಾಸ್ತಿ ಮಾಡಿರುವ ಬಗ್ಗೆ 150 ಆಗಿರುವುದು ಎಂದು ಏನು ನೀವು ಹೇಳಿದಿರಿ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. 4ನೇ ಕಿ.ಮೀ.ವರೆಗೆ ಇದ್ದದ್ದರಲ್ಲಿ ಇದ್ದದ್ದುರ ಶೇಕಡ 50ರಷ್ಟು ಜಾಸ್ತಿಯಾಗಿದೆ. 5ನೇ ಕಿ.ಮೀ. ಇದ್ದದ್ದು ಅದರಲ್ಲಿ ರೂ. 2 ಇದ್ದದ್ದು 5 ರೂ.ಗಳನ್ನು ಮಾಡಿದ್ದೇವೆ. ಅದು ಒಂದು ಕಡೆ ಮಾತ್ರ ಶೇಕಡ 150ರಷ್ಟು ಜಾಸ್ತಿಯಾಗಿರುವುದು ನಿಜ. ಆದರೆ ಬಾಕಿ ಎಲ್ಲವೂ ಸರಿಯಿದೆ. ಅದನ್ನು ರೀ-ಸ್ಟ್ರಕ್ಚರ್ ಮಾಡಬೇಕೆನ್ನುವ ವಿಚಾರವನ್ನು ಇಟ್ಟುಕೊಂಡಿದ್ದೇವೆ ಹೊರತು ಬೇರೆ ಯಾವುದನ್ನೂ ಸಹಿತ ಮಾಡುವುದಕ್ಕೆ ಹೋಗಿಲ್ಲ. ಮಾನ್ಯ ಅಧ್ಯಕ್ಷರೇ, ನಾನು ನನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಬೇಕು ಎಂಬ ದೃಷ್ಟಿಯಿಂದ ಈ ಮಾತನ್ನು ನಾನು ಹೇಳುತ್ತಿಲ್ಲ. ಆದರೂ I would like to compare myself. ಪ್ರೈವೇಟ್ ಆಪರೇಟರ್ಸ್‌ದ್ದು ಇದಕ್ಕಿಂತ ಕಡಿಮೆ ಇದೆಯೇ? ಮಾನ್ಯ ಖರ್ಗೆಯವರು ಈ ಒಂದು ಪಾಯಿಂಟ್‌ನ್ನು ಗಮನಿಸಬೇಕು. ತಾವು ಏನು ಹೇಳಿದ್ದೀರೆಂದರೆ ಸುಮಾರು 5 ಸಾವಿರ ಪ್ರೈವೇಟ್ ಬಸ್‌ಗಳಲ್ಲಿ ಸುಮಾರು 50 ಲಕ್ಷ ಜನರು ಪ್ರಯಾಣ ಮಾಡುತ್ತಾರೆ, ಅದರಿಂದಾಗಿ ಅವರ ಬಸ್‌ಗಳಲ್ಲಿಯೂ ದರ ಜಾಸ್ತಿಯಾಯಿತು ಎಂದಿದ್ದೀರಿ. ಅದನ್ನು ನಾವು ಸೆಪ್ಟೆಂಬರ್ 1996ರಲ್ಲಿ ಮೋಟಾರ್ ವೆಹಿಕಲ್ ಟ್ಯಾಕ್ಸಸ್ ಸೆಕ್ಷನ್ 67 ಪ್ರಕಾರ ಒಂದು ಸೆಪರೇಟ್ ನೋಟಿಫಿಕೇಷನ್ ಮಾಡಿ ಮಿನಿಮಮ್ ಅಂಡ್ ಮ್ಯಾಕ್ಸಿಮಮ್ ಎರಡನ್ನೂ ಫಿಕ್ಸ್ ಮಾಡಿದ್ದೇವೆ. ಪ್ರೈವೇಟ್‌ನವರು ಆರ್ಡಿನರಿ ಬಸ್ ಸರ್ವೀಸ್‌ನಲ್ಲಿ 30 ಪೈಸೆಯನ್ನು ಜಾಸ್ತಿ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇವೆ. ಆದರೆ ಪ್ರೈವೇಟ್‌ನವರು ಏನು ಮಾಡುತ್ತಾರೆಂದರೆ ಮಳೆಗಾದಲ್ಲಿ ಪ್ಯಾಸೆಂಜರ್ಸ್ ಕಡಿಮೆ ಇದ್ದರೆ ಬಸ್‌ಗಳನ್ನು ಓಡಿಸುವುದಿಲ್ಲ; ಪ್ಯಾಸೆಂಜರ್ಸ್ ಯಾವಾಗ ಜಾಸ್ತಿ ಇರುತ್ತಾರೆ ಆಗ ದರಗಳನ್ನು ಜಾಸ್ತಿ ಮಾಡುತ್ತಾರೆ. ಆ ರೀತಿಯಲ್ಲಿ ನಾವು ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ಮಹಾರಾಷ್ಟ್ರದಲ್ಲಿ ಇವೊತ್ತಿಗೂ ಕೂಡ ಆರ್ಡಿನರಿ ಬಸ್‌ನಲ್ಲಿ 20,21, ಪೈಸೆ ಇದೆ. ಅವರು 1993ರಲ್ಲಿ ಫೇರ್ ರಿವೈಸ್ ಮಾಡಿರುವುದು. ಅವರು ನಾಲ್ಕು ವರ್ಷದ ಹಿಂದೆಯೇ 21 ಪೈಸೆ ಮಾಡಿದ್ದಾರೆ, ಆದರೆ ನಾವು ಇವೊತ್ತು 16ರಿಂದ 21 ಪೈಸೆ ಮಾಡಿದ್ದೇವೆ. ಆಂಧ್ರಪ್ರದೇಶದಲ್ಲಿ 1996ರ ಜುಲೈನಲ್ಲಿ ಫೇರ್ ರಿವೈಸ್ ಮಾಡಿದ್ದು ಆರ್ಡಿನರಿ ಬಸ್‌ನಲ್ಲಿ 22ಪೈಸೆ ಮಾಡಿದ್ದಾರೆ. ಕೇರಳಾಕ್ಕೆ ನಾನು

ಯಾವುದನ್ನೂ ಹೋಲಿಕೆ ಮಾಡುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಅವರು 24,25, 29ರಲ್ಲಿ ಇದ್ದಾರೆ. ನಾವು ಏನಾದರೂ ಕಂಪೇರ್ ಮಾಡಿಕೊಂಡರೆ ಆಂಧ್ರಕ್ಕೆ ಮಾಡಿಕೊಳ್ಳಬೇಕು ಅಥವಾ ಪಕ್ಕದ ರಾಜ್ಯವಾದ ತಮಿಳುನಾಡಿಗೆ ಮಾಡಿಕೊಳ್ಳಬೇಕು. ಈಗ ತಮಿಳುನಾಡಿನವರು ನಮಗಿಂತ ಸ್ವಲ್ಪ ಪಕ್ಕದ ರಾಜ್ಯವಾದ ತಮಿಳುನಾಡಿಗೆ ಮಾಡಿಕೊಳ್ಳಬೇಕು. ಈಗ ತಮಿಳುನಾಡಿನವರು ನಮಗಿಂತ ಸ್ವಲ್ಪ ಕಡಿಮೆ ಇದ್ದಾರೆ. ಅವರ ಅಕ್ಯುಮುಲೇಟೆಡ್ ಲಾಸೆಸ್ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಇದೊಂದೇ ವರ್ಷದಲ್ಲಿ ಸುಮಾರು 300 ಕೋಟಿ ರೂ.ಗಳಷ್ಟು ಲುಕ್ಸಾನು ಆಗುವ ಸಾಧ್ಯತೆಯಿದೆ. ಆ ರೀತಿಯಲ್ಲಿ ನಾವು ಲುಕ್ಸಾನು ತುಂಬುವುದಕ್ಕೆ ಸಾಧ್ಯವೇ? ಅಷ್ಟರ ಮಟ್ಟಿಗೆ ನಾವು ಸಬ್ಸಿಡೈಸ್ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನೂ ಕೂಡ ನಾವು ವಿಚಾರ ಮಾಡಬೇಕಾಗಿದೆ. ಇವೊತ್ತು ಬೆಂಗಳೂರು ಸಿಟಿಯಲ್ಲಿ ಪುಷ್ಪಕ್ ಸ್ಟೇಜ್‌ನಲ್ಲಿ 2 ಕಿ.ಮೀ. ಇದ್ದದ್ದನ್ನು ನಾವು 4 ಕಿ.ಮೀ.ಗೆ ತೆಗೆದುಕೊಂಡು ಹೋಗಿದ್ದೇವೆ. 25 ಪೈಸೆ ಇದ್ದ ಕಡೆ ನಾವು ರೌಂಡ್ ಆಫ್ ಮಾಡಿದ್ದೇವೆ. ಏಕೆಂದರೆ ಇದು ಯಾರಿಗೂ ಅನುಕೂಲವಾಗುವುದಿಲ್ಲವೆನ್ನುವ ದೃಷ್ಟಿಯಿಂದ ರೌಂಡ್ ಆಫ್ ಮಾಡಿರುವುದು. ಇನ್ನು ಟ್ಯಾರಿಫ್ ಕಮಿಟಿ ರೆಕಮೆಂಡೇಷನ್ ಬಗ್ಗೆ ಹೇಳಬೇಕೆಂದರೆ ಈ ವಿಷಯದಲ್ಲಿ ಸಾರ್ವಜನಿಕವಾಗಿಯೂ ಚರ್ಚೆ ಆಗುತ್ತಿದೆ. ಏನೆಂದರೆ ನೀವೇ ಸದನ ಸಮಿತಿಯ ಅಧ್ಯಕ್ಷರಾಗಿದ್ದು, ಎರಡೂ ಸದನಗಳ ಸದಸ್ಯರೂ ಇದ್ದು ಸುಮಾರು 16 ಜನರಿರುವ ಸದಸ್ಯರ ಸಹಕಾರದೊಂದಿಗೆ ನೀವೇ ಮಾಡಿರತಕ್ಕಂಥ ರೆಕಮೆಂಡೇಷನ್‌ನ್ನು ನೀವು ಇಂಪ್ಲಿಮೆಂಟ್ ಮಾಡುತ್ತಿಲ್ಲವೆಂದು ಹೇಳಲಾಗುತ್ತಿದೆ. ಆ ದೃಷ್ಟಿಯಿಂದ ಈ ಪುಸ್ತಕವನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ ಮಾನ್ಯ ಅಧ್ಯಕ್ಷರೇ, ತಾವು ಇದನ್ನು ಚರ್ಚೆಯ ನಂತರ ಓದಬೇಕು. ಆ ಕಮಿಟಿಯಲ್ಲಿ ಕಾಂಗ್ರೆಸ್ ಪಕ್ಷ, ಬಿ.ಜೆ.ಪಿ. ಪಕ್ಷ, ವಾಟಾಳ್ ಪಕ್ಷ, ಹೀಗೆ ಎಲ್ಲಾ ಪಕ್ಷದ ಸದಸ್ಯರು ಇದ್ದು 32 ರೆಕಮೆಂಡೇಷನ್‌ಗಳನ್ನು ನಾವು ಮಾಡಿದ್ದೇವೆ. ಇದರಲ್ಲಿ ಮೊದಲನೆಯ ಶಿಫಾರಸ್ಸು ಕೆ.ಎಸ್.ಆರ್.ಟಿ.ಸಿ. ಬೈಫರ್‌ಕೇಷನ್ ಮಾಡತಕ್ಕಂಥದ್ದು. ಈಗಾಗಲೇ ಸರ್ಕಾರೀ ಆದೇಶವನ್ನು ಹೊರಡಿಸಿದ್ದೇವೆ. Immediately after the session, we are appointing a special Senior I.A.S. Officer. ಯಾವ ಯಾವ ಎಂಪ್ಲಾಯೀಸ್ ಎಲ್ಲಿಗೆ ಹೋಗಬೇಕು, ಅಸೆಟ್ಸ್ ಏನಾಗಬೇಕು, ಲಯಬಿಟಿಸ್ ಏನಾಗಬೇಕು, ಕಾರ್ಪೊರೇಷನ್‌ಗೆ ಏನು ಹೆಸರಿಸಬೇಕು ಎಂಬುದನ್ನೆಲ್ಲಾ ವಿಚಾರ ಮಾಡಿದ್ದೇವೆ. ಗುಲ್ಬರ್ಗಾದಲ್ಲೊಂದು ಇಂಡಿಪೆಂಡೆಂಟ್ ಕಾರ್ಪೊರೇಷನ್ ಹಾಗೇ ಬೀದರ್, ಗುಲ್ಬರ್ಗಾ, ಬಳ್ಳಾರಿ, ರಾಯಚೂರು, ಗುಲ್ಬರ್ಗಾ ಇಲ್ಲಿ ಹೆಡ್ ಕ್ವಾರ್ಟರ್. ಅದೇ ರೀತಿ ಬೆಳಗಾಂ, ಧಾರವಾಡ, ಬಿಜಾಪುರ ಮತ್ತು ಕಾರವಾರಕ್ಕೆ ಒಂದು ಕಾರ್ಪೇರೇಷನ್, ಇದೆಲ್ಲಾ ಆದಮೇಲೆ ಉಳಿದಿರತಕ್ಕಂಥ 10 ಜಿಲ್ಲೆಯಲ್ಲಿ ಇಂಡಿಪೆಂಡೆಂಟ್ ಕಾರ್ಪೊರೇಷನ್ ಇರಬೇಕು. ಒಟ್ಟು ನಾಲ್ಕು ಇಂಡಿಪೆಂಡೆಂಟ್ ಕಾರ್ಪೊರೇಷನ್‌ಗಳನ್ನು ಮಾಡುವುದಕ್ಕೆ ಹೊರಟಿದ್ದೇವೆ. It is going to become a reality. ನಾವು ಇದನ್ನೇನೂ ಹರಾಜು ಮಾಡುವುದಕ್ಕೆ ಖಂಡಿತವಾಗಿಯೂ ಹೋಗಿಲ್ಲ. ಇವೊತ್ತು ಮೋಟಾರ್ ವೆಹಿಕಲ್ ಟ್ಯಾಕ್ಸ್‌ನಲ್ಲಿ ಮಾನ್ಯ ಹಣಕಾಸಿನ ಸಚಿವರು ನಮಗೆ ಕನ್ಸೇಷನ್ ಕೊಟ್ಟಿರತಕ್ಕಂಥದ್ದು ಗುಲ್ಬರ್ಗಾದಲ್ಲಿ ಒಂದು ರೀಜನಲ್ ವರ್ಕ್‌ಶಾಪ್‌ನ್ನು ಮಾಡಬೇಕು ಎಂಬ ದೃಷ್ಟಿಯಿಂದ. ಟೋಟಲಿ ರಾಷ್ಟ್ರೀಕರಣವಾಗಿರತಕ್ಕಂಥ 9 ಜಿಲ್ಲೆಯ ಪ್ರತಿಯೊಂದು

ತಾಲ್ಲೂಕಿನಲ್ಲೂ ಕೂಡ ಇನ್ನು 15 ತಿಂಗಳೊಳಗೆ ಒಂದೊಂದು ಬಸ್ ಡಿಪೋವನ್ನು ಪ್ರಾರಂಭ ಮಾಡಬೇಕೆಂದು ತೀರ್ಮಾನ ನಾವು ಮಾಡಿದ್ದೇವೆ. ಇದನ್ನೆಲ್ಲಾ ಮಾಡಬೇಕಾದರೆ ಹಣ ಬೇಕೇ ಬೇಕು. ಹಣವಿಲ್ಲದಿದ್ದರೆ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ಈಗ ಜನಗಳಿಗೆ ತೊಂದರೆಯಾಗಿದೆ. ಆ ನೋವನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾನು ಸದನ ಸಮಿತಿಯ ಅಧ್ಯಕ್ಷನಾಗಿ ಸದನ ಸಮಿತಿ ರೆಕಮೆಂಡ್ ಮಾಡಿದ ಎಲ್ಲಾ ರೆಕಮೆಂಡೇಷನ್‌ಗಳನ್ನೂ ಕೂಡ with very little changes ಅದನ್ನು ಅಕ್ಸೆಪ್ಟ್ ಮಾಡಿಕೊಳ್ಳುತ್ತಿದ್ದೇವೆ. ಇದರಲ್ಲಿ ಒಂದು ಚೂರೂ ಕೂಡ ನಾವು ಆ ಕಡೆ ಈ ಕಡೆ ಹೋಗುವುದಕ್ಕೆ ಬಯಸುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ರೆಕಮೆಂಡೇಷನ್ ನಂಬರ್ 12ರಲ್ಲಿ ಏನು ಮಾಡಿದ್ದೀರಿ ಹೇಳಿ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಎಲ್ಲವನ್ನೂ ಹೇಳುತ್ತೇನೆ, ಮಾಡಿರುವುದನ್ನು ಮತ್ತು ಮಾಡದಿರುವುದನ್ನೂ ಹೇಳುತ್ತೇನೆ. "The Committee recommends immediate constitution of a fare fixation body or a tariff Committee with a retired High Court Judge or an exper in the transport field as Chairman with Transport Managers and Transport economists as members and representatives of the commuters and passengers which can work out an escalation formual for raising fares, to cover incrase of prices like diesel, tyres and rise in cost of living index so as to provide a rational bais for fare increase". We have done it. ಈ ಸರ್ಕಾರದಲ್ಲಿ ಉಪ ಮುಖ್ಯ ಕಾರ್ಯದರ್ಶಿಗಳಾಗಿ ಕೆಲಸ ಮಾಡಿರತಕ್ಕಂಥ ವಿಶ್ವನಾಥ್‌ರವರ ಅಧ್ಯಕ್ಷತೆಯಲ್ಲಿ ಎಂಟು ತಿಂಗಳ ಹಿಂದೆ ಸಮಿತಿ ಮಾಡಿ, ಆ ಸಮಿತಿಯಲ್ಲಿ ಸಾರ್ವಜನಿಕ ಪ್ರತಿನಿಧಿಗಳು ಇದ್ದರು. ಶಾಸಕರೇ ಅದರಲ್ಲಿ ಇರಲಿಲ್ಲ. ಮತ್ತು ಕನ್‌ಷ್ಯೂಮರ್ ಸೊಸೈಟಿ ರೆಪ್ರ್ಸೆಂಟೆಟೀವ್ಸ್ ಇದ್ದರು. ಅವರದೆಲ್ಲಾ ಅಭಿಪ್ರಾಯಗಳನ್ನು ತೆಗೆದುಕೊಂಡು ನಾವು ಫೇರ್ ಫಿಕ್ಸೇಷನ್‌ನ್ನು ಕಮಿಟಿಯ ಅಭಿಪ್ರಾಯದ ಮೇಲೆ ಮಾಡಿದ್ದೇವೆಯೇ ಹೊರತು ಬೇರೆ ಇನ್ನಾವುದೇ ರೀತಿಯಲ್ಲಿ ಮಾಡುವುದಕ್ಕೆ ಹೋಗಿಲ್ಲವೆಂದು ಹೇಳುತ್ತಾ...

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಎಲ್ಲಿ ಹೇಳಿದ್ದಾರೆ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಹೇಳಿದ್ದಾರೆ, ಸಮಿತಿಯ ವರದಿಯಲ್ಲಿ ಜಾಸ್ತಿ ಮಾಡಿ ಎಂದು ರೆಕಮೆಂಡ್ ಮಾಡಿದ್ದಾರೆ. ಅದನ್ನು ಹೇಳುತ್ತಿದ್ದೇನೆ, ಜೆ.ವಿ. ವಿಶ್ವನಾಥ್‌ರವರು ಪ್ರೊಫೆಸರ್ ಜೆಸ್ಸೋರವರು, ಡಾ: ಕೋಟೇಶ್ವರನ್ - he is an expert from APSRTC, and Mr. Salgar, who was Director (trafic) in the K.S.R.T.C. ವಿಶ್ವನಾಥ್ ಉಪ ಮುಖ್ಯ ಕಾರ್ಯದರ್ಶಿಗಳಾಗಿದ್ದರು. ಇವರು ಹೇಳಿರುವುದನ್ನೆಲ್ಲಾ ಸೇರಿಸಿ ನಾವು ಮಾಡಿದ್ದೇವೆ. ಆದುದರಿಂದ ಸಿಂಧ್ಯಾರವರು ಏನೋ ಅವರ ರಿಪೋರ್ಟ್‌ನ್ನು ಬಿಟ್ಟು ಬಾಕಿ ಏನು ಮಾಡುವುದಕ್ಕೆ ಹೊರಟಿದ್ದಾರೆ ಎನ್ನುವಂತಹ ವಿಚಾರದಲ್ಲಿ

ಸತ್ಯವಿಲ್ಲ. ಇದು ಒಂದು ತಪ್ಪು ಗ್ರಹಿಕೆ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ಡಿಸಿಪ್ಲಿನರಿ ಆ್ಯಕ್ಷನ್‌ನ್ನು ತೆಗೆದುಕೊಳ್ಳಲಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ನಾವು ಡಿಸಿಪ್ಲಿನರಿ ಆ್ಯಕ್ಷನ್‌ನ್ನು ತೆಗೆದುಕೊಳ್ಳುತ್ತಿದ್ದೇವೆ. ಒಂದು ಲಕ್ಷಕ್ಕೂ ನಮಗೆ ಅಲ್ಲಿಲ್ಲಿ ಟೀಕೆ ಟಿಪ್ಪಣಿಗಳನ್ನು ಮಾಡುತ್ತಾರೆ. ಅದನ್ನು ಸಹಿಸಿಕೊಂಡು ನನ್ನಲ್ಲಿ ಏನಾದರೂ ತಪ್ಪಿದ್ದರೆ, I am not delcaring a war or some such thing on the poor representatives of the workers. ನಾನು ಮೊದಲು ಹೇಳಿದೆ, ನಮ್ಮ ವರ್ಕರ್ಸ್ ಒಳ್ಳೆಯವರು ಇದ್ದಾರೆ ಎಂದು. ನಾನು ದೊಡ್ಡ ಸಂಘರ್ಷ ಇಟ್ಟುಕೊಂಡು ಮಾಡಬೇಕು ಎಂದು ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಉಪ ಮುಖ್ಯಮಂತ್ರಿಗಳು, ಕಾರ್ಮಿಕ ಮಂತ್ರಿಗಳು, ಮಾನ್ಯ ಎಂ.ಪಿ. ಪ್ರಕಾಶ್ ರವರು ಹಾಗೂ ನಾಣಯ್ಯನವರು ಅವರು ಎಲ್ಲರನ್ನೂ ಕರೆದು ಸೌಹಾರ್ದಯುತವಾಗಿ ಮಾತನಾಡಿದ್ದಾರೆ. ಅವರ ಸಮಸ್ಯೆಗಳು ಏನಿದೆ ಅದನ್ನು ನ್ಯಾಯಯುತವಾಗಿ ಇರತಕ್ಕಂಥ ಸಮಸ್ಯೆಗಳು. ಸರ್ಕಾರದ ದೃಢ ನಿರ್ಧಾರಗಳು ಇವುಗಳ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ. ಮಾನ್ಯ ಖರ್ಗೆಯವರು ಲೀಕೇಜ್ ಪ್ಲಗ್ ಮಾಡಬೇಕೆಂದು ಹೇಳಿದ್ದಾರೆ. ಲಿಕೇಜ್ ಪ್ಲಗ್ ಮಾಡಬೇಕಾದರೆ ಅದಕ್ಕೆ ಸಾರ್ವಜನಿಕರಿಂದ ಸಹಕಾರ ಬೇಕು. ನಾನು ಅತ್ಯಂತ ವಿನಮ್ರತೆಯಿಂದ ರಾಜ್ಯದ ಪ್ರಯಾಣಿಕರಲ್ಲಿ ಈ ಸದನ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ಬರೀ ನಾವು ಕಂಡಕ್ಟರ್‌ಗಳ ಬಗ್ಗೆ ಸ್ಟ್ರಿಕ್ಟ್ ಮಾಡಿದರೆ ಆಗುವುದಿಲ್ಲ. ಎಲ್ಲರೂ ಸಹ ಸಹಕಾರವನ್ನು ಕೊಡಬೇಕಾಗುತ್ತದೆ. ಟಿಕೇಟ್‌ನ್ನು ಕೇಳಿ ಪಡೆದು ಅದಕ್ಕೆ ಸರಿಯಾದ ದರವನ್ನು ಕೊಡುವಂತಹ ಕೆಲಸವನ್ನು ಮಾಡಿದರೆ ಯಾರಿಗೂ ಸಹ ತೊಂದರೆಯಾಗುವುದಿಲ್ಲ. ಈ ಒಂದು ಸಂದರ್ಭದಲ್ಲಿ ಇದನ್ನು ತಿಳಿಸುತ್ತಾ, ಅಬ್ಸೆಂಟಿಸಂ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ವೆಹಿಕಲ್ ಯುಟಿಲೈಸೇಷನ್ ಇಂಪ್ರೂವ್ ಮಾಡಿಕೊಳ್ಳುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಕ್ಸಿಡೆಂಟ್ ಆಗಿರುವಂಥಾದ್ದಕ್ಕೆ ಎಷ್ಟು ಪರಿಹಾರ ಕೊಡಿಸಿದ್ದೀರಿ ? ಇಷ್ಟು ಗಂಭೀರವಾದಂತಹ ವಿಷಯದ ಬಗ್ಗೆ ನಾವು ಸಹಕಾರ ಕೊಡುವಂತಹ ಕಾಲದಲ್ಲಿ, ಮಾನ್ಯ ಮುಖ್ಯಮಂತ್ರಿಗಳು ಏನಿದ್ದಾರೆ ಅವರು ನಮ್ಮ ಒತ್ತಾಯಗಳು ಏನಿದೆ ಅದು ಅವರಿಗೆ ಮನವರಿಕೆಯಾಗಿದೆ. ಇದರ ಬಗ್ಗೆ ಮಾಡಬಹುದು ಎನ್ನುವಂತಹ ವಿಚಾರವಿದ್ದಾಗ, ನಾವು ಇಷ್ಟೊಂದು ಸೀರಿಯಸ್ಸಾಗಿ ಸರ್ಕಾರಕ್ಕೆ ಸಹಕಾರ ಕೊಟ್ಟರೆ, ನಾವು ಇಲ್ಲಿ ರಿಪ್ಲೈ ಕೇಳುವುದಕ್ಕೆ ಸಿದ್ಧವಿರಲಿಲ್ಲ. ಇವತ್ತು ಚರ್ಚೆಯಾಗಬೇಕು. ಅದಕ್ಕೆ ಪರಿಹಾರ ಹುಡುಕಬೇಕೆಂದು ಕುಳಿತಿದ್ದೇವೆ. ಇದಕ್ಕೆ ಪರಿಹಾರಕ್ಕೆ ಸರಿಯಾದಂತಹ ಒಂದು ಮದ್ದು ಕೊಡಬೇಕಾದಂತಹ ಮಾನ್ಯ ಮುಖ್ಯಮಂತ್ರಿಗಳು ಮನೆಯಲ್ಲಿ ಮಲಗಿದ್ದಾರೆ. ಇದನ್ನು ಸಹಿಸಿಕೊಳ್ಳುವುದಕ್ಕೆ ಆಗುವುದಿಲ್ಲ.

SRI R.V. DESHPONDE : Sir, he should withdraw that remark "C.M. ಮನೆಯಲ್ಲಿ ಮಲಗಿದ್ದಾರೆ". I do not agree with that. The Hon. Chief Minister is here. It is not fair on the part of the hon. Member to remark that on the floor of this August House. It should not go on record.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಅದು ರೆಕಾರ್ಡ್‌ನಲ್ಲಿ ಹೋಗಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ : ವಿಧಾನಸೌಧದ ಮೂರನೆಯ ಮಹಡಿಯಲ್ಲಿದ್ದಾರೆ. ಇಂತಹ ಗಂಭೀರವಾದಂತಹ ಚರ್ಚೆಯಾಗಬೇಕಾದರೆ...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ಗಂಭೀರವಾಗಿ ಚರ್ಚೆಯಾಗುವಂತಹ ಸಂದರ್ಭದಲ್ಲಿ ಇದಕ್ಕೆ ಪರಿಹಾರ ಕೊಡುತ್ತಾರೆ ಎಂದು ನಾವು ಇಲ್ಲಿ ಇದ್ದುಕೊಂಡು ನಿಮ್ಮ ಸರ್ಕಾರದ ಜೊತೆ ಸೌಜನ್ಯದಿಂದ ವರ್ತನೆ ಮಾಡಿದರೆ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇಲ್ಲ. ನಿಮ್ಮ ಮಾತನ್ನು ಕೇಳುವುದಕ್ಕೆ ಸಿದ್ಧವಿಲ್ಲ. ಯಾವ ಇಲಾಖೆ ಈ ದುಸ್ಥಿತಿಗೆ ಬರುವುದಕ್ಕೆ ಕಾರಣಕರ್ತರಾದರು ಎಂದು ಈ ಪರಿಸ್ಥಿತಿಯಲ್ಲಿ ಕುಳಿತು ಸಮಾಧಾನದಿಂದ ಕೇಳುತ್ತಿದ್ದೇವೆ. ಇದು ಇಷ್ಟು ಸೀರಿಯಸ್ಸಾಗಿದೆ, ಇದಕ್ಕೆ ಪರಿಹಾರವನ್ನು ಮಾನ್ಯ ಮುಖ್ಯಮಂತ್ರಿಗಳು ಹುಡುಕಬೇಕೆಂದು ಇದ್ದಾರೆಯೇ? ಲಕ್ಷಾಂತರ, ಕೋಟ್ಯಾಂತರ ಜನರಿಗೆ ತೊಂದರೆ ಆಗಿರಬೇಕಾದರೆ ಇದರ ಬಗ್ಗೆ ಕೇಳುವುದಕ್ಕೆ ನಮಗೆ ಅಧಿಕಾರ ಇಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ಇವರು ಏನೂ ಕಡಿಮೆ ಮಾಡದೆ ಸುಮ್ಮನೆ ಈ ಕಥೆ ಎಲ್ಲಾ ಹೇಳಿಕೊಂಡು ಬಂದಿದ್ದಾರೆ. ಅವರು ಮಾತನಾಡತಕ್ಕಂಥ ಧಾಟಿಯನ್ನು ನೋಡಿದರೆ ಬೆಲೆಯನ್ನು ಕಡಿಮೆ ಮಾಡತಕ್ಕಂಥ ಇಚ್ಛೆ ಕಾಣಲಿಲ್ಲ. ಅವರಿಗೆ ಆಸ್ಥೆ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳನ್ನು ಕರೆಸಬೇಕು. ನಮ್ಮ ಬೇಡಿಕೆ ಏನಿದೆ ಅದಕ್ಕೆ ಪರಿಹಾರ ಹುಡುಕಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದುವರೆಗೂ ಸುಮಾರು ನಾನು ಒಂದೂವರೆ ಎರಡು ಗಂಟೆ ಮಾತನಾಡಿದ್ದೇನೆ. ಸಾರಿಗೆ ಸಂಸ್ಥೆ ಸಾರ್ವಜನಿಕ ವಲಯದಲ್ಲಿ ಇರತಕ್ಕಂಥ ಒಂದು ಉದ್ಯಮ. ಇದನ್ನು ನಾವು ಪ್ರತಿಷ್ಠೆ ಪ್ರಶ್ನೆ ಮಾಡಿಕೊಂಡು ಇದನ್ನು ಏನೋ ಮಾಡಬೇಕು ಎನ್ನುವಂತಹ ಉದ್ದೇಶ ಖಂಡಿತ ಇಲ್ಲ. ಇದನ್ನು ಸರಿ ಮಾಡಲೇಬೇಕು ಎಂದು ನಾನು ಪ್ರಾರಂಭದಲ್ಲೇ ಹೇಳಿದೆ. ಕೆ.ಇ.ಬಿ. ಮತ್ತು ಕೆ.ಎಸ್.ಆರ್.ಟಿ.ಸಿ ಇವೆರಡನ್ನು ಏನಾದರೂ ಮಾಡಿ ನಾವು ಸರಿ ಮಾಡಲೇಬೇಕು. ಇದರಿಂದ ಜನರಿಗೆ ನಾವು ದೊಡ್ಡ ಉಪಕಾರ ಮಾಡಿದ ಹಾಗೆ ಆಗುತ್ತದೆ. ಜನ ಸ್ಮರಿಸಿಕೊಳ್ಳುತ್ತಾರೆ, ಇದನ್ನು ಸರಿ ಮಾಡಬೇಕು ಎನ್ನುವ ದೃಷ್ಟಿಯಿಂದ ನಾವು ಮಾಡಿದ್ದೇವೆ. ಅನೇಕ ಮಾನ್ಯ ಗೌರವಾನ್ವಿತ ಸದಸ್ಯರುಗಳು ಹೇಳಿದರು. ಕಾರ್ಮಿಕರ ಮುಖಂಡರ ಜೊತೆಯಲ್ಲಿ ಸೌಹಾರ್ದಯುತ ವಾತಾವರಣವನ್ನು ಸೃಷ್ಟಿ ಮಾಡುವುದಕ್ಕೆ ನೀವು ಪ್ರಯತ್ನ ಮಾಡಬೇಕು ಎಂದು ಹೇಳಿದ್ದಾರೆ. ಅದರ ಬಗ್ಗೆ ನಾನು ಹೇಳಿದ್ದೆ. ಮಾನ್ಯ ಮುಖ್ಯಮಂತ್ರಿಗಳು ಸ್ವತಃ ಸಭೆಯಲ್ಲಿ ಕರೆಸಿ ಚರ್ಚೆ ಮಾಡಿದ್ದೇವೆ. ಅವರ ಒಂದು ರಚನಾತ್ಮಕವಾಗಿರ ತಕ್ಕಂಥ ಸಲಹೆಗಳು, ನ್ಯಾಯಯುತವಾಗಿರತಕ್ಕಂಥ ಬೇಡಿಕೆಗಳು ಏನಿದೆ ಅದನ್ನು ಈಡೇರಿಸಲಿಕ್ಕೆ

ಸರ್ಕಾರ ಸದಾ ಸಿದ್ಧವಿದೆ ಎನ್ನುವ ಮಾತನ್ನು ಹೇಳಿ ಅವರು ಅನೇಕ ಉತ್ತಮವಾಗಿರತಕ್ಕಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಸೋರಿಕೆ ವಿಚಾರದಲ್ಲಿ ಬೇರೆ ರಾಜ್ಯದ ಜೊತೆಯಲ್ಲಿ ಪರ್‌ಫಾರ್ಮೆನ್ಸ್ ಯಾವರೀತಿ ಇದೆ, ಮತ್ತು ಹೇಗಿದೆ ಎನ್ನುವ ಬಗ್ಗೆ ಸಲಹೆಗಳನ್ನು ಕೊಟ್ಟಿದ್ದಾರೆ. ಬೋಗಸ್ ಟಿಕೇಟ್ ಬಗ್ಗೆ ಭಾಲ್ಕಿ ಬಿಟ್ಟರೆ ಬೇರೆ ಯಾರ ಕಡೆ ಸಹ ಈ ರೀತಿಯ ಪ್ರಕರಣ ನನ್ನ ಗಮನಕ್ಕೆ ಬಂದಿಲ್ಲ. ಅಷ್ಟೇ ಅಲ್ಲ ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ನಮ್ಮದು ತುಂಬಾ ಪಾರದರ್ಶಕವಾದಂತಹ ಆಡಳಿತ. ಯಾವುದೇ ಪರ್‌ಚೇಸ್ ಇರಲಿ, ಈಗ ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿ ಇದೆ, ಸಬ್ಜೆಕ್ಟ್ ಕಮಿಟಿ ಇದೆ, ಯಾವ ಫೈಲ್ ಬೇಕಾದರೂ ಸದನದಲ್ಲಿ ತಂದು ಇಡುವದಕ್ಕೆ ತಯಾರಿದ್ದೇನೆ. Ours is a transparent administration. Any purchase, either of Motor Vehicle Department or in KSRTC, the subject committee of this House can scrutinise it. ಏಕೆಂದರೆ ಇದು ಸಾರ್ವಜನಿಕರಿಗೆ ಗೊತ್ತಾಗಬೇಕು. ನಮಗೂ ಅನಿಸುತ್ತದೆ, ಇದು ಅನಿವಾರ್ಯ. ನಾವೇನೋ ಬಹಳ ಸಂತೋಷದಿಂದ ಕುಡಿಯುವ ನೀರನ್ನು ಕೊಟ್ಟಿದ್ದೇವೆ. ಅಕ್ಕಿ ಕೊಟ್ಟಿದ್ದೇವೆ. ಹಾಗೆ ಇದನ್ನು ಮಾಡಿದ್ದೇವೆ ಎಂದು ನಾವು ಹೇಳುವುದಿಲ್ಲ. ಇವತ್ತು ಇದನ್ನು ಬದುಕಿಸಬೇಕು, ರಾಜ್ಯದಲ್ಲಿ ಒಂದು ಒಳ್ಳೆಯ ಸಾರಿಗೆ ಸುಧಾರಣೆಯನ್ನು ತರಬೇಕು. ರಾಷ್ಟ್ರೀಕರಣವಾಗಿರತಕ್ಕಂಥ ಎಲ್ಲಾ ಪ್ರದೇಶದ ಹಳ್ಳಿಗಳಿಗೆ ಸಾರಿಗೆ ಸಂಸ್ಥೆಯಿಂದ ಬಸ್ಸುಗಳನ್ನು ಹಾಕಬೇಕು. ರಾಷ್ಟ್ರೀಕರಣ ಆಗದೇ ಇರತಕ್ಕಂಥ ಪ್ರದೇಶದಲ್ಲಿ ಸಹ ಹಳ್ಳಿಗಳಿಗೆ ಸಮಯಕ್ಕೆ ಸರಿಯಾಗಿ ಬಸ್ ಹಾಕಬೇಕು, ಅದರ ಜೊತೆಗೆ ನಾವು ವಿದ್ಯಾರ್ಥಿಗಳಿಗೆ ತೊಂದರೆ ಕೊಡುವುದಕ್ಕೆ ಹೋಗಿಲ್ಲ. ವಿದ್ಯಾರ್ಥಿಗಳಿಗೆ ಕೊಡುತ್ತಿರುವ ಪಾಸ್‌ನಿಂದ 102-105 ಕೋಟಿ ರೂಪಾಯಿಗಳಷ್ಟು ಹೊರೆಯಾಗುತ್ತದೆ. ಅದನ್ನೂ ಸಹ ನಾವು ಹೊರೆ ಎಂದು ಪರಿಗಣಿಸಿಲ್ಲ. ಅದರ ಬದಲಾಗಿ ನಾವು ಸಬ್ಸಿಡೈಸ್ ಮಾಡಿದ್ದೇವೆ. 35 ಕೋಟಿ ರೂಪಾಯಿ ಅದನ್ನು 45 ಕೋಟಿ ರೂಪಾಯಿ ಮಾಡಿದ್ದೇವೆ. ಮೋಟಾರ್ ವೆಹಿಕಲ್ ಟ್ಯಾಕ್ಸ್ ಕಡಿಮೆ ಮಾಡಿದ್ದೇವೆ. ಆದುದರಿಂದ ಇವತ್ತು ಅಕ್ಯುಮಲೇಟ್ ಲಾಸ್ ಏನಾಗಿದೆ ಅದನ್ನು ತುಂಬಿಕೊಳ್ಳಬೇಕೆನ್ನುವ ದೃಷ್ಟಿಯಿಂದ ನಾವು ಮಾಡಿರುವುದಲ್ಲ. ಇದೆಲ್ಲಾ ಹೊರೆಯಾಗುತ್ತದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಪ್ರಜಾವಾಣಿ ಪತ್ರಿಕೆಯಲ್ಲಿ ಇವತ್ತು ಒಂದು ಮುಖಪುಟದಲ್ಲಿ ಆರ್ಟಿಕಲ್ ಬಂದಿದೆ. ಅದರಲ್ಲಿ ಏನು ಹೇಳಿದ್ದಾರೆ ಎಂದರೆ ತಾವು ತಮ್ಮ ಭಾಷಣದಲ್ಲಿ ಹೇಳಿದಿರಿ. ಎಷ್ಟು ರಿವೈಸ್ ಮಾಡಿದ್ದೀರಿ, ಅಷ್ಟು ರಿಯಲೈಸೇಷನ್ ಆಗಿಲ್ಲ, ಎಂದು ನಾನು ಒಪ್ಪಿಕೊಳ್ಳುತ್ತೇನೆ. ನಿಮಗೆ ಯಾವ್ಯಾವುದು ಎಷ್ಟೆಷ್ಟು ಎಂದು ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ನಾವು ರೈಸ್ ಮಾಡಿದರೂ ಸಹ ಅಷ್ಟೊಂದು ರಿಯಲೈಸ್ ಆಗುವುದಕ್ಕೆ ಆಗಿಲ್ಲ. ಸುಮಾರು 16ರಿಂದ 21-22-23 ಪರ್ಸೆಂಟ್‌ವರೆಗೂ ರಿಯಲೈಸ್ ಆಗುತ್ತಿದೆ. ಏಕೆಂದರೆ ಇನ್ನು 15ದಿನ ಆಗಿದೆ. ಈ ಮಧ್ಯದಲ್ಲಿ ಹಬ್ಬ, ರಜೆ ದಿನಗಳು, ಸಾವು ಬಂತು. ಹೀಗಾಗಿ ಇನ್ನು ಸ್ಟೆಬ್‌ಲೈಸ್ ಆಗಿಲ್ಲ. ನಾವು ಹಿಂದಿನ ಇತಿಹಾಸವನ್ನು ತೆಗೆದು ನೋಡಿದಾಗ ಸ್ಟೆಬ್‌ಲೈಸ್ ಆಗುವುದಕ್ಕೆ 2-3- ತಿಂಗಳಾದರೂ ಬೇಕಾಗುತ್ತದೆ. ಟ್ರಾಫಿಕ್ ಬೇರೆಬೇರೆ ಕಡೆ ಡಿವಿಯೇಟ್ ಆಗಿರುತ್ತದೆ. ಅದನ್ನೆಲ್ಲಾ ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ನಾವು ನೀವು ಎಲ್ಲಾ ಸೇರಿ ಈ ಒಂದು ಸಾರಿಗೆ ಸಂಸ್ಥೆಯನ್ನು ಸಾರ್ವಜನಿಕ ವಲಯದಲ್ಲಿ ಇರತಕ್ಕಂಥಾದ್ದನ್ನು ತಾವೇ ಹೇಳಿದ ಹಾಗೆ 80 ಲಕ್ಷ ಪ್ರಯಾಣಿಕರು ಹೋಗತಕ್ಕಂಥ

ಸಂಸ್ಥೆಯನ್ನು ನಾವು ಬಲಪಡಿಸೋಣ. ನಿಮ್ಮ ಸಹಕಾರ ಸಾರ್ವಜನಿಕ ಸಹಕಾರವನ್ನು ಕೇಳುತ್ತೇನೆ. ಈಗಾಗಲೇ ಸಮಿತಿಗಳು ಇವೆ. ಸಬ್ಜೆಕ್ಟ್, ಪಬ್ಲಿಕ್ ಅಂಡರ್‌ಟೇಕಿಂಗ್ ಇದೆ. ಅದನ್ನೆಲ್ಲಾ ಅವರ ಪುಸ್ಕೂಟಿನೈಸ್ ಮಾಡಬಹುದು. ಅದನ್ನೆಲ್ಲಾ ನೋಡಬಹುದು. ನಾನು ಅಂಕಿಅಂಶಗಳನ್ನು ಸದನದಲ್ಲಿ ಕೊಡುವುದಕ್ಕೆ ತಯಾರಿದ್ದೇನೆ. ಆದರೆ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಗೌರವಾನ್ವಿತ ಹಿರಿಯ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸುತ್ತಾ ನನಗೆ ರಾಜೀನಾಮೆ ಕೊಡಿ ಎಂದು ಹೇಳಿದ್ದಾರೆ. ನಾನು ರಾಜೀನಾಮೆ ಕೊಡುವುದಕ್ಕೆ ಬಂದಿಲ್ಲ. ನಾನು ಆಳುವುದಕ್ಕೆ ಬಂದಿರುವುದು. ಇದನ್ನು ಸರಿ ಮಾಡಬೇಕೆಂದು ಮುಖ್ಯಮಂತ್ರಿಗಳು, ನಮ್ಮ ಸರ್ಕಾರ ನಾವು ಇಟ್ಟುಕೊಂಡಿದ್ದೇವೆ. ಸದನದ ಸಮಿತಿಯನ್ನು ಮಾಡತಕ್ಕಂಥ ಅವಶ್ಯಕತೆ ಇಲ್ಲ, ಸಾರ್ಜಜನಿಕರು ಇದನ್ನು ಸಹಿಸಿಕೊಂಡು ಮತ್ತೆ ತಮ್ಮ ಪ್ರಯಾಣವನ್ನು ಸುಖಕರವನ್ನಾಗಿ ಮಾಡುವುದಕ್ಕೆ ಸಹಾಯ ಮಾಡಬೇಕು. ಈಗ 2200 ಬಸ್ಸುಗಳನ್ನು ಹೊಸದಾಗಿ ತೆಗೆದುಕೊಳ್ಳುತ್ತಿದ್ದೇವೆ.27 ಡಿಪೋಗಳನ್ನು ತೆಗೆಯುತ್ತಿದ್ದೇವೆ.30-40 ಬಸ್ ಸ್ಟ್ಯಾಂಡ್‌ಗಳನ್ನು ಕಟ್ಟುತ್ತಿದ್ದೇವೆ. ಲಕ್ಸುರಿ ಬಸ್‌ಗಳನ್ನು ತೆಗೆದುಕೊಳ್ಳುತ್ತಿದ್ದೇವೆ.2,500 ಬಸ್‌ಗಳನ್ನು ರಿಪ್ಲೇಸ್ ಮಾಡುತ್ತಿದ್ದೇವೆ. ಇದನ್ನೆಲ್ಲಾ ತೆಗೆದುಕೊಳ್ಳಬೇಕಾದರೆ ತಮ್ಮ ಸಹಕಾರಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಏರಿಸಿರುವ ದರವನ್ನು ಹಿಂತೆಗೆದುಕೊಳ್ಳುತ್ತೀರೋ ಇಲ್ಲವೋ ಅಷ್ಟನ್ನು ನೀವು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಏಕೆಂದರೆ ರೆಕಾರ್ಡ್ಸ್ ಸ್ಟ್ರೈಟ್ ಇರಬೇಕು. ಈ ಸದನವನ್ನು ತಪ್ಪುದಾರಿಗೆ ಎಳೆಯುವಂಥದ್ದನ್ನೂ ಕೂಡ ಮಾಡಬಾರದು. ಏಕೆಂದರೆ, ಅವರೇ ಈ ಸದನದಲ್ಲಿ ಹೇಳಿದರು, ಮೊಫೆಸಿಯಲ್ ಏರಿಯಾದಲ್ಲಿ 33 ಪರ್ಸೆಂಟ್‌ನಿಂದ 36 ಪರ್ಸೆಂಟ್‌ವರೆಗೆ ನಾವು ದರವನ್ನು ಏರಿಸಿದ್ದೇವೆ. ಆಮೇಲೆ ಪುಷ್ಪಕ್ ಒಂದನ್ನು ಬಿಟ್ಟು ಬಾಕಿಯಯದೆಲ್ಲವನ್ನೂ ಕೂಡ 100 ಮತ್ತು 50 ಪರ್ಸೆಂಟ್ ಈ ರೀತಿಯಾಗಿ ನಗರದಲ್ಲಿದೆ ಎನ್ನತಕ್ಕಂಥ ಮಾತನ್ನು ಅವರೇ ಒಪ್ಪಿಕೊಂಡರು. ನಾವು ಕನಿಷ್ಟ ಪಕ್ಷ ಅವರ ಹೇಳಿಕೆಯನ್ನು ಒಪ್ಪಿಕೊಂಡರೂ ಕೂಡ 36 ಪರ್ಸೆಂಟ್ ಎಂದರೆ ಇವರ ಅನ್ಯುಯಲ್ ಕಲೆಕ್ಷನ್ ಕೋಟಿ 918 ರೂ.ಗಳು.

SRI. P.G.R. SINDHIA : This is not the traffic revenue. There are so many revenues like capital contribution and so on.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಯಿತು 830 ಕೋಟಿ ನಿಮ್ಮದೆ ಲೆಕ್ಕ ಹಾಕಿ. ಅಧ್ಯಕ್ಷರೆ 36 ಪರ್ಸೆಂಟ್ ಅಂದರೆ ನೀವು ಆವರೇಜ್ ತೆಗೆದುಕೊಂಡರೆ ಸುಮಾರು 320 ಕೋಟಿ ರೂಪಾಯಿಗಳು ಆಯಿತು. 36 ಪರ್ಸೆಂಟ್ ಏನಾನ್ಸ್‌ಮೆಂಟ್ ಎಂದರೆ, you compare to Rs. 840 crore. ಏಕೆಂದರೆ ಸದನವನ್ನು ತಪ್ಪುದಾರಿಗೆ ಎಳೆಯಬಾರದು. ಅಂದರೆ, 320 ಕೋಟಿ ಅಂದರೆ ನಿಮ್ಮ ಅಕ್ಯುಮಲೇಟೆಡ್ ಲಾಸ್ ಇರತಕ್ಕಂಥದ್ದೇ 480 ಕೋಟಿ ರೂಪಾಯಿ, ಅಂದರೆ, ಎರಡು ವರ್ಷದಲ್ಲಿ ಕಲೆಕ್ಟ್ ಮಾಡುವುದಕ್ಕೋಸ್ಕರ ಈ ತಂತ್ರ ಹೂಡಿ, ನಮಗೆ 20 ಪರ್ಸೆಂಟ್, 15 ಪರ್ಸೆಂಟ್ ಏನೂ ಜಾಸ್ತಿ ಇಲ್ಲ ಎಂಬ ಮಾತನ್ನು ಹೇಳುತ್ತಿದ್ದೀರಿ. ಎರಡನೆಯದಾಗಿ ಇವೊತ್ತಿನ ದಿವಸ ಒಂದು ಲೀಟರ್

ಡೀಸಲ್‌ಗೆ ಬಸ್ಸು ಎಷ್ಟು ಕಿಲೋಮಿಟರ್ ಓಡುತ್ತದೆ, ಆ ಕಿಲೋಮೀಟರ್‌ನಲ್ಲಿ ಪಾಯಿಂಟ್ ಫೈವ್ ಕಡಿಮೆಯಾದರೆ ಕೋಟ್ಯಾಂತರ ರೂಪಾಯಿ ಲುಕ್ಸಾನಾಗುತ್ತದೆ ಎಂದು ಹೇಳಿದಿರಿ. ಅದು ಮಹಾರಾಷ್ಟ್ರ, ಗುಜರಾತ್, ಉತ್ತರ ಪ್ರದೇಶ ನೀವು ಯಾವುದನ್ನೂ ತೆಗೆದುಕೊಂಡರೂ ಅಲ್ಲಿ ನಮ್ಮಲ್ಲಿ ನಡೆಸತಕ್ಕಂಥ ಅವ್ಯರೇಜ್ ಒಂದೇ ಇದೆ. ಮಹಾರಾಷ್ಟ್ರ, ಆಂಧ್ರದಲ್ಲೂ ಕೂಡ 4.99 ಇದ್ದರೆ ನಮ್ಮಲ್ಲಿ 4.50 ಅಂದರೆ ಅದರಲ್ಲೂ ಕೂಡ ವ್ಯತ್ಯಾಸ ಇಲ್ಲ. ಇಷ್ಟು ಇದ್ದರೂ ಕೂಡ ಇಷ್ಟು ಅಕ್ಯುಮಲೇಟಡ್ ಆಗುತ್ತದೆ, ಅದನ್ನು ಯಾವರೀತಿಯಾಗಿ ಸರಿಪಡಿಸುತ್ತೀರಿ ಎಂಬುದನ್ನು ಸಹ ಹೇಳಲಿಲ್ಲ. ಎರಡನೆಯದಾಗಿ, 360 ಕೋಟಿ ರೂಪಾಯಿಗಳನ್ನು ಇವೊತ್ತು ಕಲೆಕ್ಟ್ ಮಾಡತಕ್ಕ ತಂತ್ರ ಹಾಕಿ ನಮಗೆ 170 ಕೋಟಿ ರೂಪಾಯಿ ಎನ್ನತಕ್ಕಂಥದ್ದು ಹೇಳುತ್ತಿದ್ದೀರಿ. ಅದಕ್ಕಾಗಿಯೇ ಇವೊತ್ತು ನಾವು ಏನು ಕೇಳಿದ್ದೇವೆಂದರೆ ಒಂದು ಸದನದ ಸಮಿತಿ ಮಾಡಿ, ಅದಕ್ಕಾಗಿ ಇವೊತ್ತಿನ ದಿವಸ ನಾವೇನು ಹೋರಾಟ ಮಾಡಿದ್ದೇವೆ ಲಾಠಿ ಚಾರ್ಜ್ ಆಗಿದೆ ಅದು ಎಲ್ಲವೂ ಕೂಡ ಇದರಲ್ಲಿ ಬರಬೇಕಾದರೆ ಸದನದ ಸಮಿತಿಯನ್ನು ಮಾಡಿ, ಅದರಲ್ಲಿ ಇವೊತ್ತಿನ ದಿವಸ ಲೀಕೇಜ್ ಎಷ್ಟು ಇದೆ, ಎಷ್ಟು ಹಣ ನಾವು ಸಂಗ್ರಹಣೆ ಮಾಡಬಹುದು, ಎಷ್ಟು ದರವನ್ನು ನಾವು ಏರಿಸಬಹುದು ಎನ್ನತಕ್ಕಂಥದನ್ನು ಈ ಸದನದ ಎಲ್ಲಾ ಸದಸ್ಯರು ತೀರ್ಮಾನ ತೆಗೆದುಕೊಂಡಾದ ಮೇಲೆ ನೀವು ಮಾಡಿ, ಅಲ್ಲಿಯವರೆಗೆ ಇದನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ನಾವು ಕೇಳಿದ್ದೇವೆ. ನಿಮ್ಮ ಉತ್ತರದಲ್ಲಿ ಇದನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ ಎಂದು ನೀವು ಹೇಳಲಿಲ್ಲ ದರ ಕಡಿಮೆ ಮಾಡುತ್ತೇವೆ ಎಂದು ಹೇಳಲಿಲ್ಲ, ಸದನ ಸಮಿತಿಯನ್ನು ಮಾಡುತ್ತೇನೆ ಎಂದು ಹೇಳಲಿಲ್ಲ, ಇದೇನೆಂದರೆ ಕೊನೆಗೆ ನಾವು ಮಾಡಿದ್ದೇ ಸರಿ, ನಾವು ಹೇಳುವುದು ಸರಿ ಎನ್ನತಕ್ಕಂಥದ್ದು ಎಂದರೆ, ಎಷ್ಟು ಅನ್ಯಾಯವಾಗುತ್ತಿದೆ ಎಂಬುದನ್ನು ಅಂಕಿಅಂಶ ಸಮೇತ ಹೇಳಿದರೂ ಕೂಡ ನಿಮಗೆ ಈ ಬಗ್ಗೆ ಕಾಳಜಿ ಇಲ್ಲ ಎಂದು ಅಂದರೆ ನಾವೆಲ್ಲರೂ ಕೂಡ ಅನಿವಾರ್ಯವಾಗಿ ಧರಣಿಯನ್ನು ಮಾಡಬೇಕಾಗುತ್ತದೆ.....

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಕ್ಲಾರಿಫೈ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಟ್ಯೂಬು, ಟೈರು, ಪರ್ಚೆಸ್ ಮಾಡುತ್ತೀರೀ, ಆ ಪರ್ಚೆಸ್ ಮಾಡಿದ್ದು ರೀಪ್ಲೇಸ್ ಆಗುವುದಿಲ್ಲ....ಅಲ್ಲೇ ಮಾರಾಟ ನಡೆಯುತ್ತದೆ. ಲೆಕ್ಕ ತೋರಿಸುತ್ತಿದ್ದೀರಿ. ಈ ರೀತಿ ಲೂಟಿ ನಡೆಯುತ್ತಾ ಇದೆ. ಫೇಕ್ ಟಿಕೇಟ್ ಉಪಯೋಗ ಆಗುತ್ತಿದೆ. ಇದನ್ನು ನಾನು ಜವಾಬ್ದಾರಿ ಸ್ಥಾನದಲ್ಲಿ ನಿಂತು ಹೇಳುತ್ತಿದ್ದೇನೆ. ಅದಕ್ಕಾಗಿ ಎರಡೂ ಸದನದ ಸಮಿತಿಯನ್ನು ಮಾಡಿ, ಯಾವ ರೀತಿ ಲೂಟಿ ನಡೆಯುತ್ತಾ ಇದೆ, ನೀವು ಟೈರ್ ಖರೀದಿ ಮಾಡಿದ್ದೀರಿ, ಆದರೆ ಟೈರ್ ಹಾಕಿಯೇ ಇಲ್ಲ. ಲೆಕ್ಕದ ಬುಕ್ ತೋರಿಸಿದಿರಿ. ಸ್ಪೇರ್ ಪಾರ್ಟ್ಸ್ ಖರೀದಿ ಮಾಡಿದ್ದೀರಿ, ಕೆಟ್ಟ ಹಳೆಯ ಸ್ಪೇರ್ ಪಾರ್ಟ್ಸ್ ಉಪಯೋಗಿಸಿದಿರಿ ಅದನ್ನು ಹಾಗೆ ಮಾರಿಕೊಂಡಿರಿ, ಲೆಕ್ಕ ತೋರಿಸುತ್ತಿದ್ದೀರಿ, ಈ ರೀತಿ ಲೂಟಿ ನಡೆಯುತ್ತಿದೆ, ಫೇಕ್ ಟಿಕೇಟ್ ಉಪಯೋಗ ಆಗುತ್ತಿದೆ. ಅದಕ್ಕೆ ಮುಖ್ಯಮಂತ್ರಿಗಳಿಗೆ ನಾನು ಏನು ಹೇಳುವುದು ಎಂದರೆ, ತಾವು ಪ್ರಾಮಾಣಿಕವಾಗಿ ಹೇಳಿ. ಈ ಸದನದಲ್ಲಿ ವಿದ್ಯುತ್ ದರ ಜಾಸ್ತಿ ಮಾಡಿದಂಥ ಕಾಲದಲ್ಲಿ ಸಹಕರಿಸಲಿಲ್ಲವೇ ಸದನ ಸಮಿತಿಯು ಕುಳಿತು ಗಂಭೀರವಾಗಿ ಅದರ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ನಾವು ಶಿಫಾರಸ್ಸು ಮಾಡಿದ್ದು, ಅದು ಸರ್ವಾನುಮತದಿಂದ

ತೀರ್ಮಾನವಾಯಿತು. ಆಮೇಲೆ ಅದನ್ನು ವ್ಯತ್ಯಾಸ ಮಾಡಿಕೊಂಡು ಮತ್ತೆ ಏರಿಸಿದಿರಿ ಅದು ನಿಮಗೆ ಬಿಟ್ಟದ್ದು. ನಾನು ಇವೊತ್ತು ನಿಮಗೆ ಏನು ಹೇಳುತ್ತಿದ್ದೇನೆ, ಒಂದು ಸರ್ಕಾರ ನಡೆಸಬೇಕಾದರೆ ಇವೊತ್ತಿನ ಪರಿಸ್ಥಿತಿಯಲ್ಲಿ ಸಾರಿಗೆ ದರವನ್ನು ಜಾಸ್ತಿ ಮಾಡುವುದು ಅನಿವಾರ್ಯ ಎಂದು ನಿಮಗೆ ಅನಿಸಿ ಇವೊತ್ತು 30 ರಿಂದ 150 ಪರ್ಸೆಂಟ್‌ವರೆಗೂ ಏರಿಸಿದ್ದೀರಿ. ನಾವೇನು ಹೇಳುತ್ತೇವೆ, ಈ ಸಾರಿಗೆ ದರವನ್ನು ಏರಿಸದೆಯೇ ಹಳೆಯ ದರದಲ್ಲೇ ಈ ಲೂಟಿಯಾಗುವುದನ್ನು ತಪ್ಪಿಸಿದರೆ, ಅದನ್ನು ಮನವರಿಕೆ ಮಾಡಿಕೊಟ್ಟರೆ ನೀವು ಒಪ್ಪಿಕೊಳ್ಳಬೇಕಲ್ಲಾ. ಇಲ್ಲಾವೆಂದರೆ ಎಷ್ಟು ಪರ್ಸೆಂಟ್ ಅಗತ್ಯವಿದೆಯೋ ಏರಿಸೋಣ. ಅದುಬಿಟ್ಟು ಇಷ್ಟೊತ್ತು ನಾವು ಹೇಳಿದ್ದೇವೆ, ಸದನ ಸಮಿತಿಯನ್ನು ಮಾಡಿ, ಚರ್ಚೆ ಮಾಡೋಣ, ದಯಮಾಡಿ ಏರಿಸಿರುವಂಥದ್ದನ್ನು ಸಂಪೂರ್ಣವಾಗಿ ತಾವು ವಾಪಸ್ಸು ತೆಗೆದುಕೊಳ್ಳಿ, ನಾವು ನಿಮಗೆ ಸಹಕಾರ ಕೊಡುವುದಕ್ಕೆ ಸಿದ್ಧರಿದ್ದೇವೆ ಎನ್ನುವ ಮಾತನ್ನು ನಾವು ಹೇಳಿದ್ದೇವೆ. ಎರಡನೆಯದಾಗಿ, ಮುಖ್ಯ ಮಂತ್ರಿಗಳೇ, ತಮಗೆ ಪೇಪರ್ ಕಟಿಂಗ್ಸ್‌ನ್ನು ಕಳುಹಿಸಿಕೊಡುತ್ತೇನೆ, ತಾವು ಗಂಭೀರವಾಗಿ ಯೋಚನೆ ಮಾಡಿ ನಿಮ್ಮ ಸಚಿವ ಸಂಪುಟದ ಸಹೋದ್ಯೋಗಿಗಳು ಎಂಬ ಮಮಕಾರಕ್ಕೆ ತುತ್ತಾಗಿ ರಾಜ್ಯದ ಜನತೆಗೆ ಅನ್ಯಾಯವಾಗುವಂತೆ ಮುಖ್ಯಮಂತ್ರಿಗಳಾಗಿ ನೋಡಿಕೊಳ್ಳಬೇಡಿ. ಅವರು ಏನು ಹೇಳಿದ್ದಾರೆ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಕ್ಯಾನ್ಸರ್‌ಗಿಂತ ಭಯಾನಕವಾಗಿರುವ ಏಯ್ಡ್ಸ್ ರೋಗ ಬಂದಿದೆ, ಸಾರಿಗೆ ಸಂಸ್ಥೆಯಲ್ಲಿ ಭಯೋತ್ಪಾದಕರು ಹಾಗೂ ಕ್ರಿಮಿನಲ್ಸ್‌ಗಳು ಸೇರಿಕೊಂಡಿದ್ದಾರೆ. ಯಾರು ಬಂದರೂ ಈ ಸಾರಿಗೆ ಸಂಸ್ಥಯನ್ನು ರಿಪೇರಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುವಂಥ ಒಬ್ಬ ಸಾರಿಗೆ ಸಚಿವರನ್ನು ಕಟ್ಟಿಕೊಂಡು ಇದನ್ನು ರಿಪೇರಿ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಅವರು ರಾಜೀನಾಮೆಯನ್ನು ಕೊಡಬೇಕು, ಸದನ ಸಮಿತಿಯನ್ನು ಮಾಡಬೇಕು ಈಗೇನು ದರವನ್ನು ಏರಿಸಿದ್ದೀರಿ ಅದನ್ನು ವಾಪಸ್ಸು ಪಡೆಯಬೇಕು ಇಲ್ಲದಿದ್ದರೆ ಮೂರು ದಿವಸವಾದರೂ ಪರವಾಗಿಲ್ಲ, ನನಗೆ ಗೊತ್ತು, ಇವೊತ್ತು ಇಲ್ಲ ಯಡಿಯೂಪ್ಪನವರೇ, ನಮ್ಮ ಸರ್ಕಾರ ಉತ್ತರ ಕೊಟ್ಟಿದ್ದೇವೆ, ಏನೂ ಬದಲಾವಣೆ ಮಾಡುವುದಿಲ್ಲ ನಿಮ್ಮ ದಾರಿ ನಿಮಗೆ, ನಮ್ಮ ದಾರಿಗೆ ನಮಗೆ. ರಾಜ್ಯದ ಜನತೆಗೆ ಗೊತ್ತಾಗಲಿ ಇದು ಮೊಂಡ ಸರ್ಕಾರ, ಪ್ರತಿಪಕ್ಷಗಳ ಮಾತಿಗೆ ಸಹಕಾರ ಕೊಡದೇ ಇರುವಂಥ ಸರ್ಕಾರ, ಪ್ರಾಮಾಣಿಕವಾಗಿ ಇಲ್ಲಿ ಆಗುತ್ತಿರುವಂಥ ಲೂಟಿಯನ್ನು ತಪ್ಪಿಸಲಿಕ್ಕೆ ಸಲಹೆಯನ್ನು ಕೊಡುತ್ತೇವೆ ಎಂದು ಹೇಳಿದರೆ ಒಪ್ಪದೇ ಇರುವಂಥ ಭಂಡ ಸರ್ಕಾರ ಎಂದು ಜನರಿಗೆ ಗೊತ್ತಾಗಲಿ, ಎಂದು ಹೇಳಿ ನಾವು ಯಾವುದಕ್ಕೂ ಸಿದ್ಧರಿದ್ದೇವೆ. ಅದಕ್ಕೋಸ್ಕರ ಮೂರು ದಿನ ಆಗಲೀ, ನಾಲ್ಕು ದಿನವಾಗಲೀ ರಾತ್ರಿ ಹಗಲು ನಾವು ಇಲ್ಲಿ ಧರಣಿ ಕುಳಿತುಕೊಳ್ಳುತ್ತೇವೆ, ನಮಗೆ ಬೇರೆ ಮಾರ್ಗ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವರು ಬಸ್ ದರವನ್ನು ಕಡಿಮೆ ಮಾಡಲು ಒಪ್ಪಲಿಲ್ಲ, ಲಾಠಿ ಚಾರ್ಜ್ ಬಗ್ಗೆ ಹೇಳಲಿಲ್ಲ...ಎರಡು ಗಂಟೆಯಿಂದ ಸುಮ್ಮನೆ ಕುಳಿತ್ತಿದ್ದೇವೆ, ಮುಖ್ಯಮಂತ್ರಿಗಳು ಏನಾದರೂ ಅನೌನ್ಸ್ ಮಾಡುತ್ತಾರೆ ಎಂದರೆ ನನ್ನದೇನೂ ತಾಪತ್ರಯವಿಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಗ್ಗೆ ಸಮಗ್ರ ನ್ಯಾಯಾಂಗ ತನಿಖೆಯಾಗಬೇಕು, ಸರ್ಕಾರ ಈಗ ಅಧನ್ನು ಒಪ್ಪಬೇಕು. ಮತ್ತು ಪೋಲೀಸಿನವರು ಮೊನ್ನೆ ಚಳುವಳಿ ಮಾಡಿದಂಥ ಚಳುವಳಿಗಾರರ ಮೇಲೆ ಹಾಕಲಾಗಿರುವ ಕೇಸನ್ನು ಸಮಗ್ರವಾಗಿ

ಹಿಂತೆಗೆದುಕೊಳ್ಳಬೇಕು, ಅದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು. ಬಸ್ ದರವನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳಲೇ ಬೇಕು, ಅದರಲ್ಲಿ ಬೇರೆ ಮಾತಿಲ್ಲ. ಮತ್ತೆ ಬಹಳ ಜನರನ್ನು ಈಗ ಜೈಲಿಗೆ ಕಳುಹಿಸಿದ್ದಾರೆ. ಆ ಜೈಲಿನಲ್ಲಿರತಕ್ಕವರನ್ನು ಈ ಕೂಡಲೇ ಬಿಡುಗಡೆ ಮಾಡಬೇಕು ಮತ್ತು ಕೇಸ್‌ಗಳನ್ನು ಹಿಂತೆಗೆದುಕೊಳ್ಳಬೇಕು. ಅದು ಇಲ್ಲ ಎಂದು ಹೇಳಿದರೆ, ಮೊಂಡುತನದಲ್ಲೇ ಮಾಡಬೇಕು ಎಂದು ಹೇಳಿದರೆ ನನಗನ್ನಿಸುತ್ತದೆ, ನಮ್ಮ ಮುಖ್ಯಮಂತ್ರಿಗಳು ಮೊಂಡುತನಕ್ಕೆ ಹೋಗಲಾರರು ಎಂದು ನಾನು ಅಂದುಕೊಂಡಿದ್ದೇನೆ. ಏಕೆಂದರೆ ಅನೇಕ ವರ್ಷಗಳ ಕಾಲದಿಂದ ಅವರನ್ನು ನೋಡಿದ್ದೇನೆ, ಅವರು ಮೊಂಡುತನಕ್ಕೆ ಹೋಗಲಾರರು. ಏನಾದರೂ ಇವರ ಸಹವಾಸದಿಂದ ತಾವು ಕೆಟ್ಟರೆ ಅದಕ್ಕೆ ನಾವು ಜವಾಬ್ದಾರರಲ್ಲ, ಅದು ನಿಮ್ಮ ಹಣೆಬರಹ.

+ ಶ್ರೀ ಜೆ.ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಸಾಧ್ಯವಾದುದನ್ನು ಮಾಡುವುದಕ್ಕೆ ಸರ್ಕಾರ ಹಿಂಜರಿಯುವುದಿಲ್ಲ. ಸಾಧ್ಯವಾಗದ್ದನ್ನು ನಾನು ಇವೊತ್ತು ಮಾನ್ಯ ಖರ್ಗೆಯವರಿಗೆ, ಯಡಿಯೂರಪ್ಪನವರಿಗೆ,ವಾಟಾಳ್‌ರವರಿಗೆ ಕೇಳುವುದೇನೆಂದರೆ, ನೀವು ಮನಮುಟ್ಟಿ ಹೇಳಿ, ತಾವು ಮಾತನಾಡಿದ್ದನ್ನು ಇಲ್ಲೂ ಕೇಳಿದೆ, ನಂತರ ನನ್ನ ಛೇಂಬರ್‌ಗೆ ಹೋಗಿ ಕೂಡ ಕೇಳಿದೆ. ತಾವು ಅಂಕಿಅಂಶಗಳನ್ನೆಲ್ಲಾ ಕೊಟ್ಟಿದ್ದೀರಿ. ಹತ್ತು ವರ್ಷದ ಕೆಳಗೆ ಇಂಡಿಯನ್ ಏರಲೈನ್ ಸರ್ವೀಸ್‌ನಲ್ಲಿ ದೆಹಲಿಗೆ ಎರಡು ಸಾವಿರ ರೂಪಾಯಿ ಟಿಕೇಟ್ ಇತ್ತು. ಈಗ ಆರು ಸಾವಿರ ರೂಪಾಯಿ ಇದೆ. ಹಡಗಿನಲ್ಲಿ ಮಂಗಳೂರಿನಿಂದ ಬೊಂಬಾಯಿಗೆ ಹೋಗುವುದಾದರೆ ಬರೀ 150 ರೂಪಾಯಿ ಇತ್ತು, ಇವೊತ್ತು 2500 ರೂಪಾಯಿ ಆಗಿದೆ. ಏಕೆ?

5.00 ಪಿ.ಎಂ.

ಈಗ ಇಂಡಿಯನ್ ಏರಲೈನ್ ಸಾರ್ವಜನಿಕ ಸಂಸ್ಥೆ ಹಾಗೆಯೇ ಕೆ.ಎಸ್.ಆರ್.ಟಿ.ಸಿ.ಯೂ ನಮ್ಮ ಸರ್ಕಾರದ್ದು. ನಮ್ಮದು ನಿಮ್ಮದು ಇದಕ್ಕೆ ಏಕೆ ಈ ಸ್ಥಿತಿ ಬಂತು, ಯಾವ ಯಾವ ಕಾರಣಗಳಿಂದ ಬಂತು ಎಂದರೆ ನಿಮಗೆ ಕೋಪ ಬರಬಹುದು. ಒಂದು ಕಾಲದಲ್ಲಿ ಸಮಯಕ್ಕೆ ತಕ್ಕಂತೆ ಒಂದು ಮೊಳೆಯನ್ನು ಹಾಕದಿದ್ದರೆ, first for want of a nail, you lose a horse shoe, and for want of an horse shoe, you lose a horse and for want of a horse you lose a war. ಹಾಗೆ ಆಗಿದೆ. ಮಾನ್ಯ ಸಾರಿಗೆ ಸಚಿವರು ಬಂದು ನನ್ನನ್ನು ಏನು ಮಾಡಲಿ ಎಂದು ಕೇಳಿದರು. ನಮಗೆ ಏನೂ ಕೆ.ಎಸ್.ಆರ್.ಟಿ.ಸಿ ಯೂನಿಯನ್‌ನವರ ಮೇಲೆ ದ್ವೇಷವಿಲ್ಲ. ನಾವು ಅವರನ್ನು ಕರೆದು ಕೇಳಿದ್ದೇವೆ. ಈಗ ನೀವು ಹೇಳುವುದರಲ್ಲಿ ಬಹುತೇಕ ಎಲ್ಲಿ ಸೋರಿ ಹೋಗಿದೆ. ಅದನ್ನು ಏನಾದರೂ ಮಾಡಿ ತಡೆ ಹಿಡಿದು ನಡೆಸುವುದಕ್ಕೆ ಸಾಧ್ಯವಿತ್ತೆಂದರೆ I agree with you. ಸೋರಿ ಹೋಗುವುದನ್ನು ನಿಲ್ಲಿಸುವುದಕ್ಕೋಸ್ಕರ ಏನಾದರೂ ಒಂದು ಉಗ್ರವಾದ ಕ್ರಮವನ್ನು ತೆಗೆದುಕೊಂಡು....ನಾವು ಕಂಡ ಹಾಗೆ ನಾಲ್ಕು ಬಸ್ಸುಗಳನ್ನು ಖಾಸಗಿಯಾಗಿ ಇಟ್ಟುಕೊಂಡಿರುವವರರು ಬಹಳ ಶ್ರೀಮಂತರಾಗಿರುವುದನ್ನು ನಾವು ನೋಡಿಲ್ಲವೇ? ಸರ್ಕಾರ ಹನ್ನೊಂದು ಸಾವಿರ ಬಸ್ಸುಗಳನ್ನು ಓಡಿಸುವಂಥ ಒಂದು ವರ್ಷಕ್ಕೆ 160 ಕೋಟಿ ರೂಪಾಯಿಗಳು ಲುಕ್ಸಾನ್ ಆಗುತ್ತದೆ ಎಂದರೆ ಇದು ಏಕೆ ಎಂಬುದನ್ನು ತಾವು ದಯಮಾಡಿ

ಯೋಚನೆ ಮಾಡಬೇಕು. ತಾವು ವಿರೋಧ ಮಾಡುವುದರ ಬಗ್ಗೆ, ಸಿಟ್ಟು ಮಾಡುವದರ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲ. Please apply your mind objectively. Don't get prejudiced. He is not responsible for what has happened. ನಮಗೂ ಇವತ್ತು ಕಡಿಮೆ ದುಡ್ಡಿನಲ್ಲಿ ಹಳ್ಳಿಗಳಿಗೆ ಜನರನ್ನು ತಲುಪಿಸಬೇಕೆಂದು ಆಸೆ ಇಲ್ಲವೇ? ಮಾನ್ಯ ನಾಯಕರು ಮತ್ತು ವಿರೋಧ ಪಕ್ಷದ ನಾಯಕರು ಇದು ಸೋಷಿಯಲ್ ಸರ್ವೀಸ್ ಎಂದು ಹೇಳಿದರು. I have seen the entire world. ರೈಲ್ವೆ ಸರ್ವಿಸ್ ಮತ್ತು ಟ್ರಾನ್ಸ್‌ಪೋರ್ಟ್ ಸರ್ವಿಸ್ ಸಿಸ್ಟಂ ಅನ್ನು ಸೋಷಯಲ್ ಸರ್ವೀಸ್ ಸಿಸ್ಟಂ ಎಂದು ನಡೆಸಿರುವುದು ಈ ದೇಶದಲ್ಲಿ ಇವತ್ತು ಯಾವುದಾದರೂ ರಾಜ್ಯದಲ್ಲಿ ನಡೆಸಿದ್ದರೆ ಅದನ್ನು ನಾವು ಒಪ್ಪಿಕೊಳ್ಳೋಣ. ಅದಕ್ಕೋಸ್ಕರ ನಾವು ಬೇಕಾದರೆ ಕೆ.ಎಸ್.ಆರ್.ಟಿ.ಸಿ.ಗೆ 100 ಕೋಟಿ ರೂಪಾಯಿಗಳನ್ನು ತೆಗೆದು ಇಡುತ್ತೇವೆ. ನಾವು ಶಿಕ್ಷಣಕ್ಕೆ, ಆರೋಗ್ಯಕ್ಕೆ ಖರ್ಚು ಮಾಡುತ್ತಿದ್ದೇವೆ.ಈಗ ಶಿಕ್ಷಣಕ್ಕೆ ಮತ್ತು ಆರೋಗ್ಯಕ್ಕೆ ಖರ್ಚು ಮಾಡಿದ ಹಾಗೆ ಟ್ರಾನ್ಸ್‌ಪೋರ್ಟ್‌ಗೆ ಖರ್ಚು ಮಾಡುವುದು, please show me a way. Is there any state? Is there any country? ಸಾಮಾನ್ಯವಾಗಿ ಟ್ರಾನ್ಸ್‌ಪೋರ್ಟ್, communication - they have become instruments of earning. ದುಡ್ಡು ಮಾಡುತ್ತಾರೆ ಅದರಿಂದ ದುಡಿಮೆ ಮಾಡಿ ಬೇರೆಯದಕ್ಕೆ ಜನರಿಗೆ ಅನುಕೂಲ ಮಾಡುತ್ತಾರೆ. ತಾವೂ ಸಹ ಸಾಕಷ್ಟು ಬಾರಿ ರಾಜ್ಯವನ್ನು ಆಳೀದ್ದೀರಿ, ನೋಡಿದ್ದೀರಿ, ನೀವು ಹೇಳುವಾಗ ರಿಯಾಲಿಟಿನೇ ಬೇರೆ ನೀವು ಹೇಳುವುದೇ ಬೇರೆ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ರಿಯ್ಯಾಲಿಟಿ ಬಿಟ್ಟು ಹೋಗುತ್ತಿದ್ದೀರಿ. ನಾನು ಎಂಟು ದಿವಸಗಳು ಊಟ ಮಾಡಲಿಲ್ಲ, ಆದುದರಿಂದ ಒಂದೇ ದಿವಸದಲ್ಲಿ ಎಂಟು ದಿವಸಗಳ ಊಟವನ್ನು ಮಾಡುತ್ತೇವೆಂದು ನೀವು ಹೊರಟಿದ್ದೀರಿ, ಇದು ಸರಿಯಾದುದ್ದಲ್ಲವೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್ : ಅದು ಹಾಗೆ ಆಗುವುದೂ ಇಲ್ಲ. ಈಗ ಮಾನ್ಯ ಯಡಿಯೂರಪ್ಪನವರು, ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಬೇರೆ ಮಾನ್ಯ ಸದಸ್ಯರುಗಳು ಹೇಳಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ನಾವು ಏನು ಸಲಹೆಯನ್ನು ಕೊಟ್ಟಿದ್ದೇವೆಂಬುದನ್ನು ಹೇಳಿ.

ಶ್ರೀ ಜೆ.ಹೆಚ್. ಪಟೇಲ್ : ನೀವು ಏನು ಹೇಳಿದ್ದಿರೆಂದರೆ ಸದನ ಸಮಿತಿಯನ್ನು ಮಾಡಿ ಎಲಕ್ಟ್ರಿಸಿಟಿ ಬಗ್ಗೆ ತಾವು ಹೇಗೆ ಒಪ್ಪಿದ್ದಿರಿ, ಹಾಗೆ ಒಪ್ಪಿ ಎಂದು ಬೆಲೆ ಏರಿಕೆಯ ಬಗ್ಗೆ ನಮ್ಮದು ವಿರೋಧವಿಲ್ಲವೆಂದು ತಾವು ಹೇಳಿದ್ದುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಬೆಲೆ ಏರಿಕೆಯಾಗದ ಹಾಗೆ ಸಲಹೆ ಕೊಡುತ್ತೇವೆ, ತಾವು ಸದನ ಸಮಿತಿಯನ್ನು ಮಾಡಿದರೆ, ತಾವು ನಮಗೆ ಎರಡು ತಿಂಗಳುಗಳ ಸಮಯ ಕೊಡಿ.

ಶ್ರೀ ಜೆ.ಹೆಚ್. ಪಟೇಲ್ : ತಾವು ಆಮೇಲೆ ಏನು ಹೇಳಿದ್ದೀರೆಂದರೆ ಅನಿವಾರ್ಯವಾದರೆ ಎಷ್ಟು ಏರಿಸಬೇಕು ಎಂದು.... ರೆಕಾರ್ಡ್ ತರಿಸಲಾ....ತಾವೇ ಹೇಳಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸದನ ಸಮಿತಿ ಮಾಡಿದ ಮೇಲೆ ಅನಿವಾರ್ಯವಾಗಿ ಮಾಡಬೇಕೆಂದರೆ ಡೆಫ಼್‌ನೆಟಲಿ ನಿಮ್ಮ ಜೊತೆಗೆ ನಾವು ನಿಲ್ಲುತ್ತೇವೆ. ಆದರೆ ಈಗ ನೀವು ಎರಡು ಸದನಗಳಿಂದ ಒಂದು ಸಮಿತಿಯನ್ನು ಮಾಡಿ, ನಮಗೆ ಎರಡು ತಿಂಗಳುಗಳ ಕಾಲಾವಕಾಶವನ್ನು ಕೊಡಿ ಮತ್ತು ನೀವು ಈಗ ಏರಿಕೆ ಮಾಡಿರುವಂಥಾದ್ದನ್ನು ವಿಥ್‌ಡ್ರಾ ಮಾಡಬೇಕು. ನೀವು ಹಾಗೆ ಮಾಡದಿದ್ದರೆ ಮೊಂಡು ಸರ್ಕಾರ, ವಿರೋಧ ಪಕ್ಷವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಕ್ಕೆ ರೆಡಿ ಇಲ್ಲ, ಚರ್ಚೆ ಮಾಡದೆ ಮನಬಂದಂತೆ ಏರಿಸಿದ್ದೀರಿ ಎಂದು ಪ್ರತಿಭಟನೆಯನ್ನು ಮಾಡಬೇಕಾಗುತ್ತದೆ. ನಾವು ಯಾವ ಕಾರಣಕ್ಕೂ ಇದು ವಿರೋಧ ಪಕ್ಷ ಅದು ಆಡಳಿತ ಪಕ್ಷವೆಂದು ನಾವು ನೋಡುತ್ತಾ ಇಲ್ಲ. ಆ ರೀತಿ ಇದ್ದಿದ್ದರೆ ಇಲ್ಲಿ ಇಷ್ಟು ಒಳ್ಳೆಯ ರೀತಿಯಲ್ಲಿ ಚರ್ಚೆಯಾಗುತ್ತಾ ಇರಲಿಲ್ಲ. ನಾವು ಅನೇಕ ಸಲಹೆಗಳನ್ನು ಕೊಟ್ಟಿದ್ದೇವೆ. ನಾವು ಏನು ಹೇಳಿದ್ದೇವೆ ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಇವತ್ತು ನೀವು ಶೇ.35 ರಿಂದ ಶೇ.150 ರವರಗೆ ಏರಿಕೆ ಮಾಡಿದ್ದೀರಿ. ತಾವು ಎರಡು ಮನೆಯ ಸದಸ್ಯರ ಸದನ ಸಮಿತಿಯನ್ನು ಮಾಡಿ, ಆಗ ನಾವು ಎಲ್ಲಿ ಲೂಟಿಯಾಗುತ್ತಿದೆಂಬುದನ್ನು ಮನವರಿಕೆ ಮಾಡುವಂತಹ ಪ್ರಯತ್ನವನ್ನು ಮಾಡುತ್ತೇವೆ, ಮತ್ತು ದರ ಏರಿಕೆಯನ್ನು ಮಾಡದೇ ಹಳೆಯ ದರದಲ್ಲೇ ಕೆ.ಎಸ್.ಆರ್.ಟಿ.ಸಿ.ಯನ್ನು ನಡೆಸುವುದಕ್ಕೆ ನಾವು ಸಲಹೆ ಕೊಡುತ್ತೇವೆ. ಅದು ಅನಿವಾರ್ಯವಾದರೆ ಎಷ್ಟು ಏರಿಕೆ ಮಾಡಬೇಕೆಂಬ ಬಗ್ಗೆ ಒಮ್ಮತದ ತೀರ್ಮಾನವನ್ನು ತೆಗೆದುಕೊಳ್ಳೋಣ. ಅದಕ್ಕೆ ನಾವು ರೆಡಿ ಎನ್ನುವ ಮಾತನ್ನು ನಾವು ಒಕ್ಕೊರಲಿನಿಂದ ಹೇಳಿದ್ದೇನೆ. ನಿಮಗೆ ಇನ್ನು ಎರಡು ತಿಂಗಳಲ್ಲಿ ಏನು ಆಗುತ್ತದೆ? ನಿಮಗೆ ನಮ್ಮ ಮೇಲೆ ವಿಶ್ವಾಸವಿಲ್ಲ? ಇಲ್ಲಿ ಕುಳಿತಿರುವವರು ಸರ್ಕಾರ ಹಾಳಾಗಿ ಹೋಗಬೇಕು, ಕೆ.ಎಸ್.ಆರ್.ಟಿ.ಸಿ ಹಾಳಾಗಿ ಹೋಗಬೇಕು, ಜನರು ಸಾಯಬೇಕೆನ್ನುವುದಕ್ಕೋಸ್ಕರ ನಮ್ಮನ್ನು ಇಲ್ಲಿ ವಿರೋಧ ಪಕ್ಷದಲ್ಲಿ ಕೂರಿಸಿದ್ದಾರೆಯೇ?

ಶ್ರೀ ಜೆ.ಹೆಚ್. ಪಟೇಲ್ : ಈಗ ಶೇ.35ರಷ್ಟು ಏರಿಸಿದ್ದೇವೆಂದು ಹೇಳಿದ್ದೇವೆ. ಮಾನ್ಯ ಸಚಿವರು ಹೇಳಿದ ಹಾಗೆ ಲೆಕ್ಕದಲ್ಲಿ ಶೇ.35ರಷ್ಟು ಆದರೂ ಕೂಡ ಅದು ಅಕೌಂಟೆಬಿಲಿಟಿ ಶೇ.25, 27, 28 ರಷ್ಟು ಆಗಿದೆ. ಈಗ ಅದರ ಮೇಲೆ ಇರತಕ್ಕಂಥ ಸಾಲ, ಅದನ್ನು ವ್ಯವಸ್ಥಿತವಾಗಿ ನಡೆಸಬೇಕೆಂದರೆ ಇದರ ಬಗ್ಗೆ ಮಾನ್ಯ ಸಾರಿಗೆ ಸಚಿವರು, ಹಣಕಾಸು ಸಚಿವರು ಹಾಗೂ ಮಾನ್ಯ ಪ್ರಕಾಶ್‌ರವರು ನಾವೆಲ್ಲಾ ಕುಳಿತು ಮಾತನಾಡುವಾಗ ಇದನ್ನು ನಾವೇಕೆ ವಿನಾಃಕಾರಣ ತಲೆಯ ಮೇಲೆ ಹೊತ್ತುಕೊಂಡು ಹೋಗೋಣ. ಇದನ್ನು ಯಾರಾದರೂ ನಡೆಸಿಕೊಂಡು ಹೋಗುವವರು ಇದ್ದರೆ ಎಷ್ಟು ಛಾರ್ಜ್ ಬೇಕೋ ಮಾಡಿಕೊಳ್ಳಲಿ ಅದನ್ನು ಬಿಟ್ಟು ಕೊಡೋಣವೆಂದು......

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಕ್ಕೆ ನಾವು ಬಿಡೋಲ್ಲ, ನಿಮಗೆ ಮನಸ್ಸಿನಲ್ಲಿ ಎಲ್ಲೋ ಒಂದು ಕಡೆ ಇದೆ, ನಾವು ಖಾಸಗೀಕರಣ ಮಾಡುವುದಕ್ಕೆ ಬಿಡುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ನಾನು ವಿಚಾರ ನಡೆದದ್ದನ್ನು ಹೇಳುತ್ತೇನೆ, ನಾನು ಹೇಳುವಂಥಾದ್ದು ಪೂರ್ತಿ ಕೇಳಿ. ನಾವು ಒಂದು ಹಂತದಲ್ಲಿ ಜನರಿಗೆ ದಿನನಿತ್ಯ ಜೀವನದಲ್ಲಿ ಬಹಳ ಅತ್ಯಾವಶ್ಯಕವಾಗಿ ಅವರಿಗೆ ಹತ್ತಿರವಾಗುವಂಥಾದ್ದು ಕೆ.ಇ.ಬಿ. ಮತ್ತು ಕೆ.ಎಸ್.ಆರ್.ಟಿ.ಸಿ ಈ ಎರಡು ಸಂಸ್ಥೆಗಳನ್ನು ನಾವು

ಇವತ್ತು ಸರಿಪಡಿಸದಿದ್ದರೆ ಜನರು ನಮ್ಮನ್ನು ಸರಿಪಡಿಸುವುದಿಲ್ಲ. ಇದನ್ನು ನಾವು ಏನಾದರೂ ಮಾಡಿ ಸಾಲ ಸೂಲವಾದರೂ ಮಾಡಿ ಸರಿಪಡಿಸಬೇಕು. ಆದರೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ತಾತ್ವಿಕ, ಸೈದ್ಧಾಂತಿಕ ನಾಯಕರು 1991ನೇ ಇಸವಿಯಲ್ಲಿ ನಮ್ಮ ದೇಶಕ್ಕೆ ಹೊಸದಾಗಿ ಖಾಸಗೀಕರಣ, ವಿಶ್ವದೀಕರಣ, ಮತ್ತು ಲಿಬರಲೈಜೇಶನ್ ಎಂದು ನಾವು ಏಕೆ ಇದನ್ನು ಹೊತ್ತುಕೊಂಡು ಹೋಗೋಣ, ಯಾರಾದರೂ ಮಾಡಿಕೊಂಡು ಹೋಗಲಿ ಬಸ್ಸು ಓಡಿಸುವವನು ಬಸ್ಸು ಓಡಿಸುತ್ತಾನೆ. ಒಂದೆರಡು ಬಸ್ಸುಗಳನ್ನು ಇಟ್ಟುಕೊಂಡಿರುವವರು ಬಹಳ ಶ್ರೀಮಂತರಾಗಿರುತ್ತಾರೆ. ನಾವು 11,00 ಬಸ್ಸುಗಳನ್ನು ಇಟ್ಟುಕೊಂಡು ಲಾಸ್ ಮಾಡಿಕೊಳ್ಳುತ್ತಿದ್ದೇವೆಂದರೆ ಇದು ಯಾರಿಗಾದರೂ.....

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್: ನಾನು ಅದನ್ನು ಒಪ್ಪುತ್ತೇನೆ, ನಾನು ಅಲ್ಲಗಳೆಯುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ ; ನಿಮ್ಮ ಇಬ್ಬರ ಮಧ್ಯೆ ನಮಗೆ, ಜನರಿಗೆ ಸಾಯುವ ಪರಿಸ್ಥಿತಿ ಬಂದಿದೆಯಲ್ಲಾ....

ಶ್ರೀ ಜೆ.ಹೆಚ್. ಪಟೇಲ್: ನಮಗೆ ನೀವು ಸಾಯಬೇಕೆನ್ನುವ ಇಚ್ಛೆ ಇಲ್ಲ. ಆದರೆ ಸಾಯುತ್ತೀರಿ, ನಾನು ಏನು ಮಾಡಲಿ, ಅದು ಅನಿವಾರ್ಯವಾಗಿದೆ. ಈಗ ಅವರ ಜಾಗಕ್ಕೆ ನೀವು, ನಿಮ್ಮ ಜಾಗಕ್ಕೆ ಅವರು ಹೀಗೆ ಬದಲಾವಣೆಯಾಗುತ್ತಿರುತ್ತೀರಿ. ಇನ್ನು 10-15 ವರ್ಷಗಳು ಇರುತ್ತೀರಿ? ಇದರ ಬಗ್ಗೆ ನಮ್ಮದೇನೂ ಇಲ್ಲ.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ಈಗ ಮಾನ್ಯ ನಾಯಕರು ಏನು ಹೇಳಿದರು, ಮಾನ್ಯ ಯಡಿಯೂರಪ್ಪನವರು ಏನು ಹೇಳಿದರು. ನಮಗೆ ಸದನದ ಮೇಲೆ ವಿಶ್ವಾಸವಿಲ್ಲವೆಂದರೆ ಇನ್ನು ಯಾರ ಮೇಲೆ ವಿಶ್ವಾಸವಿರುತ್ತದೆ. ನಾವು ಈಗಾಗಲೇ ಒಂದು ಹೆಜ್ಜೆ ಇಟ್ಟಿದ್ದೇವೆ. ಇದು ನಮ್ಮ ಮನಸ್ಸಿನ ಇಚ್ಛೆಯಿಲ್ಲದಿದ್ದರೂ ಅನಿವಾರ್ಯವಾಗಿ, ನಾವು ಈ ಕೆಲಸವನ್ನು ಮಾಡಲೇ ಬೇಕಾಗುತ್ತದೆ. ಈಗ ಒಬ್ಬ ರೋಗಿ ಸಾಯುತ್ತಿದ್ದಾನೆಂದು ಅವನಿಗೆ ಆಮ್ಲಜನಕ ಕೊಡಬೇಕೆಂದು ಹೇಳಿದರೆ ಅದನ್ನು ತೆಗೆದು ಬಾ, ಆಮೇಲೆ ವಿಚಾರ ಮಾಡೋಣ ಅಂದರೆ ಅವನು ಹೋಗಿ ಬಿಡುತ್ತಾನೆ. ಹಾಗೆ ಆಕ್ಸಿಜನ್ ತೆಗೆದ ಮೇಲೆ ಚರ್ಚೆ ಮಾಡುವುದಕ್ಕೆ ಏನೂ ವಿಷಯವಿರುವುದಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಅದಕ್ಕೆ ಹೋಲಿಕೆನೇ ಇಲ್ಲ ಅದಕ್ಕೆ ಹೋಲಿಕೆ ಏಕೆ ಇಲ್ಲವೆಂದರೆ ನೀವೇ ನಮ್ಮನ್ನು ಕೌನ್ಸಿಲ್‌ನಲ್ಲಿ ಕೇಳಿ ಮಾಡುತ್ತೇವೆ ಎಂದು ಸ್ಟೇಟ್‌ಮೆಂಟ್ ಮಾಡಿದ್ದೀರಿ.

ಶ್ರೀ ವಾಟಾಳ್ ನಾಗರಾಜ್: ನಿಜವಾಗಿಯೂ ಉಸಿರಾಡುವಂತಹ ವ್ಯವಸ್ಥೆ ಇದ್ದರೂ ಇವರು ಬೇಕೆಂದೇ ಆಮ್ಲಜನಕವನ್ನು ಕೊಡುತ್ತಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್ : ಹಾಗೆ ಬೇಕೆಂದೇ ಕೊಡುವುದಕ್ಕಾಗುವುದಿಲ್ಲ. Even excess oxygen will kill a man. That is a different matter. ಈಗ ತಾವು ಸಹಕಾರ ನೀಡಿದ್ದೀರಿ, ಹಿಂದೆಸೂ ಮಾಡಿದ್ದೀರಿ, ಮುಂದೆಯೂ ಮಾಡುತ್ತೀರಿ. ಆದರೆ ಮಾನ್ಯ ಯಡಿಯೂರಪ್ಪನವರೇ ನಾನು ಯಾವುದೇ ಭಾವವೇಶ, ಕೋಪವಿಲ್ಲದೆ ಹೇಳುತ್ತಿದ್ದೇನೆ.Increase is inevitable/indispensable. ಇದನ್ನು ಬಿಟ್ಟು ಬೇರೆ ಮಾರ್ಗವೇ ಇಲ್ಲ. ಈಗ ನಾವು ಇನ್‌ಕ್ರೀಸ್ ಮಾಡಿದ್ದೇವೆ. ಮಾನ್ಯ ಯಡಿಯೂರಪ್ಪನವರು, ಮಾನ್ಯ ವಾಟಾಳ್ ನಾಗರಾಜ್‌ಮತ್ತು ಮಾನ್ಯ ನಂಜೇಗೌಡರು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈ ನಾಲ್ಕು ಜನ ಹಿರಿಯರಾದಂತಹ ಸದಸ್ಯರನ್ನು ತಾವು ಕರೆಯಿರಿ. ಇದಕ್ಕೆ ಸದನ ಸಮಿತಿ ಅದು ಇದು ಪ್ರೊಸಿಜರ್ ಬೇಡ. ನಾನು ಮತ್ತು ನಮ್ಮ ಹಿರಿಯ ಸಚಿವರು ಇದು ಹೇಗೆ ಅನಿವಾರ್ಯವೆನ್ನುವುದನ್ನು ನಾವು ನಿಮಗೆ ಮನದಟ್ಟು ಮಾಡಿಕೊಡುತ್ತೇವೆ. ತಾವು ಇಲ್ಲಿ ಹೇಳುವ ಪ್ರಕಾರ ದರವನ್ನು ಕಡಿಮೆ ಮಾಡಿ, administrative efficiency increase ಮಾಡಿ ಇದನ್ನು ರನ್ ಮಾಡುವುದಕ್ಕೆ ಸಾಧ್ಯವೆನ್ನುವುದನ್ನು ತೋರಿಸಿ ಇದಕ್ಕಿಂತ ದರವನ್ನು ಏರಿಸಿದೆ ಇದನ್ನು ಸರಿಪಡಿಸಬೇಕೆಂದು ನೀವು ಕನ್ವಿನ್ಸ್ ಮಾಡಿದರೆ, We are prepared to agree. We are not fanatics.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಬೆಯನ್ಸ್ ಮಾಡಿ, ಸ್ಟೇ ಮಾಡಿ, ಸದನದ ಸಮಿತಿಯನ್ನು ಮಾಡಿ, we are ready to co-operate.

ಶ್ರೀ ಜೆ.ಹೆಚ್. ಪಟೇಲ್ : ಈಗ ಮೂರ್‍ನಾಲ್ಕು ದಿವಸ ಚರ್ಚೆ ಮಾಡುವುದರಿಂದ, ಆಕಾಶವೇನೂ ಬಿದ್ದು ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೂರ್‍ನಾಲ್ಕು ದಿವಸ ಹೇಗೆ ಆಗುತ್ತದೆ?

ಶ್ರೀ ಜೆ.ಹೆಚ್. ಪಟೇಲ್ : ಸ್ವಾಮಿ,ಈಗ ತಾವೇ ತೀರ್ಮಾನ ಮಾಡಿರುವಂತೆ ಇಪ್ಪತ್ತೇಳನೆ ತಾರೀಖಿನವರೆಗೆ ನಮ್ಮ ಆಯವ್ಯಯ, ಆ ಆಯವ್ಯಯದ ಮೇಲೆ ನಾವೇನು ಓಟ್ ಆನ್ ಅಕೌಂಟ್ ತೆಗೆದುಕೊಳ್ಳುತ್ತಿದ್ದೇವೆ, ಈ ಮಧ್ಯೆ ಈ ಅಧಿವೇಶನಕ್ಕೆ ತಾವೇನು ಸಮಯವನ್ನು ನಿಗದಿ ಮಾಡಿದ್ದೀರಿ ಅಷ್ಟರೊಳಗಾಗಿ, ತಮಗೆ ಅನುಕೂಲವಾದ ಯಾವುದೇ ಸಮಯದಲ್ಲಿ ಕುಳಿತು ಚರ್ಚೆ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ನೀವು ಸದನದ ಸಮಿತಿಯನ್ನು ರಚಿಸುತ್ತೀರಾ, ಇಲ್ಲವೇ ಎಂಬುದನ್ನು ಹೇಳಿಬಿಡಿ, ಬೇರೆ ವಿಷಯ ಬೇಡ. ಏಕೆಂದರೆ ಸದನ ಸಮಿತಿಯನ್ನು ರಚಿಸುವುದರಿಂದ ಇದಕ್ಕೆ ಪರಿಹಾರವನ್ನು ಹುಡುಕಬಹುದು, ನಾವು ಮೂರ್‍ನಾಲ್ಕು ಜನ ಬರುವುದರಿಂದ, ಚರ್ಚೆ ಮಾಡುವುದರಿಂದ ಇಡೀ ರೆಕಾರ್ಡ್ ಅನ್ನು ನೋಡಲು ಆಗುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ನಾನು ತಿಳಿದುಕೊಂಡಿದ್ದು ಏನೆಂದರೆ ನೀವು ಮೂರ್‍ನಾಲ್ಕು ಜನರ ಮೇಲೆ ನಿಮ್ಮ ಜನರ ವಿಶ್ವಾಸವಿದೆ ಎಂದು ಅದಕ್ಕೋಸ್ಕರ ನಾನು ಹೇಳಿದ್ದುದು. ಇಲ್ಲದಿದ್ದರೆ ನಾನು ಏತಕ್ಕೆ ಹೇಳುವುದಕ್ಕೆ ಹೋಗುತ್ತಿದ್ದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸದನದ ಸಮಿತಿ ರಚಿಸಿದರೆ ಅದರಲ್ಲಿ ನಿಮ್ಮವರು ಇರುತ್ತಾರೆ, ಸದನದ ಸಮಿತಿ ಎಂದರೆ ನಮ್ಮವರೇ ಇರುವುದಿಲ್ಲ. ಸದನದ ಸಮಿತಿ ರಚಿಸಿದರೆ ಈ ಕಡೆಯವರು ಇರುತ್ತಾರೆ ಆ ಕಡೆಯವರು ಇರುತ್ತಾರೆ, ದಯವಿಟ್ಟು ವಿಷಯವನ್ನು ಡೈವರ್ಟ್ ಮಾಡಬೇಡಿ.

ಶ್ರೀ ಜೆ.ಹೆಚ್. ಪಟೇಲ್ : ಅತ್ಯಂತ ವಿನಯಪೂರ್ವಕವಾಗಿ ಹೇಳುತ್ತೇನೆ, ಸದನ ಸಮಿತಿಯ ಅವಶ್ಯಕತೆಯಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವಶ್ಯಕತೆ ಇಲ್ಲವೆಂದರೆ ನಾವು ಇಲ್ಲೇ ಕುಳಿತುಕೊಳ್ಳುವುದು ಸರಿ.

ಶ್ರೀ ಜೆ.ಹೆಚ್. ಪಟೇಲ್ : ಇದಕ್ಕೆ ನಾನು ಏನು ಮಾಡುವುದಕ್ಕಾಗುತ್ತದೆ ಸ್ವಾಮಿ? ನೆಲ ಹಿಡಿಯಬೇಡಿ, ಹಿಡಿಯಬೇಡಿ ಎಂದು ಸಾವಿರ ಸಲ ಹೇಳಾಯಿತು, ಮತ್ತೆ ನೆಲ ಹಿಡಿಯುತ್ತೇವೆಂದರೆ.....

ಶ್ರೀ ವಾಟಾಳ್ ನಾಗರಾಜ್: ನೀವು ಸದನ ಸಮಿತಿಯನ್ನು ರಚಿಸುವುದಿಲ್ಲವೆಂದರೆ, ನಮಗೆ ಧರಣಿ ಮಾಡದೆ ವಿಧಿಯಿಲ್ಲ.

(ಈ ಸಂದರ್ಭದಲ್ಲಿ ವಿರೋಧಪಕ್ಷದ ನಾಯಕರು ಹಾಗೂ ಸದಸ್ಯರೆಲ್ಲಾ ಸದನದ ಬಾವಿಯಲ್ಲಿ ಬಂದು ಧರಣಿ ಕುಳಿತರು)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಹೇಳುತ್ತೇನೆ, ನಿಮ್ಮ ಕಾಲದಲ್ಲೇ ನೀವು ಇದಕ್ಕೆ ಹೋರಾಟ ಮಾಡಿದವರು, ಇನ್ನು ಮೂರು ದಿವಸವಾಗಲಿ, ಹಗಲು ರಾತ್ರಿಯಾಗಲಿ ನಾವು ಈ ಸ್ಥಳವನ್ನು ಬಿಟ್ಟು ಹೋಗುವುದಿಲ್ಲ. ಸದನದ ಸಮಿತಿಯನ್ನು ರಚಿಸಬೇಕು, ಈಗ ಏರಿಸಿರುವ ಬಸ್ ಪ್ರಯಾಣ ದರವನ್ನು ವಾಪಸ್ ತೆಗೆದುಕೊಳ್ಳಬೇಕು, ಚರ್ಚೆಯಾಗಿ, ಅನಿವಾರ್ಯವಾದರೆ ಆಮೇಲೆ ಯೋಚನೆ ಮಾಡೋಣ ಎನ್ನುವ ಸೂಕ್ತ ಸಲಹೆಯನ್ನು ನಾವು ಕೊಡುತ್ತಿದ್ದೇವೆ. ಮತ್ತೆ ಯಾವ ನಿಮ್ಮ ಸಾರಿಗೆ ಸಚಿವರು, ಈ ಇಲಾಖೆಯನ್ನು ನಡೆಸುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೋ ಅವರು ರಾಜೀನಾಮೆ ಕೊಟ್ಟ ಮೇಲೆ ಈ ಸದನದ ಸಮಿತಿಯನ್ನು ರಚಿಸಬೇಕು. ಆ ರಾಜೀನಾಮೆ ಕೊಡುವ ಮುಂಚೆ ಅವರ ನೇತೃತ್ವದಲ್ಲಿ ಆ ಸಮಿತಿ ರಚಿಸಿದರೂ ನಾವು ಹೋಗುವುದಿಲ್ಲ, ಮೊದಲು ಅವರ ರಾಜೀನಾಮೆಯನ್ನು ತೆಗೆದುಕೊಳ್ಳಿ, ಸದನದ ಸಮಿತಿಯನ್ನು ರಚಿಸಿ. ಅವರಿಂದ ಸಾಧ್ಯವೇ ಇಲ್ಲ, ಇಲಾಖೆ ಕುಲಗೆಟ್ಟು ಹೋಗಿದೆ ರಿಪೇರಿ ಮಾಡುವುದಕ್ಕಾಗುವುದಿಲ್ಲವೆಂದು ಹೇಳುವ ಮಂತ್ರಿಯನ್ನು ಕಟ್ಟಿಕೊಂಡು ನೀವು ಉದ್ಧಾರ ಮಾಡುತ್ತೀರಾ?

(ಈ ಸಂದರ್ಭದಲ್ಲಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ಸದನದ ಬಾವಿಗೆ ಬಂದು ಧರಣಿ ಕುಳಿತರು)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮುಖ್ಯಮಂತ್ರಿಗಳು, ಸ್ವಲ್ಪ ಹತ್ತಿರಕ್ಕೆ ಬಂದು ನಾಲ್ಕೈದು ಜನ ಸದಸ್ಯರನ್ನು ಕರೆದು ಮಾತನಾಡುತ್ತೇನೆಂದು ಒಂದು ಸಲಹೆಯನ್ನು ಕೊಟ್ಟರು. ನಾನು ಇನ್ನು ಸ್ವಲ್ಪ ಮುಂದೆ ಹೋಗಿ ನಾನು ಅವರಿಗೆ ಸಲಹೆ ಮಾಡುವುದೇನೆಂದರೆ, ಸದನ ಸಮಿತಿಯನ್ನು ರಚಿಸತಕ್ಕಂಥ

ಒಂದು ಒಳ್ಳೆಯ ಅಗತ್ಯವಿದೆ, ಅದನ್ನು ಮಾಡುವುದರಿಂದ, ಸರ್ಕಾರಕ್ಕೆ ಒಳ್ಳೆಯ ಪರಿಣಾಮ ಹಾಗೂ ಗೌರವ ಬರುತ್ತದೆ. ಆ ದೃಷ್ಟಿಯಿಂದ ನಾನು ಸ್ಪಷ್ಟವಾಗಿ ಒತ್ತಾಯ ಮಾಡುತ್ತೀದ್ದೇನೆ, ಇದರಲ್ಲಿ ಯಾವುದೇ ಪ್ರತಿಷ್ಠೆ ಪ್ರಶ್ನೆಯನ್ನಾಗಿ ಮಾಡಿಕೊಳ್ಳದೆ ಸದನದ ಸಮಿತಿಯನ್ನು ರಚಿಸಬೇಕು. ಸದನದ ಸಮಿತಿಯನ್ನು ಮಾಡಬೇಕೆಂದು ನಾನು ಒತ್ತಾಯ ಮಾಡಿ ನಮ್ಮ ಪಕ್ಷದ ವತಿಯಿಂದ ನಾನು ಕೂಡ ಧರಣಿ ಮಾಡುತ್ತಿದ್ದೇನೆ.

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸದನದ ಬಾವಿಗೆ ತೆರಳಿ ಧರಣಿ ಕುಳಿತುಕೊಂಡರು)

ಶ್ರೀ ಬಿ. ಮುನಿಯಪ್ಪ : ಸನ್ಮಾನ್ಯ ಅಧ್ಯಕ್ಷರೆ, ದಯವಿಟ್ಟು ಮುಖ್ಯಮಂತ್ರಿಗಳು ಕರೆದು ತಮ್ಮ ಕಛೇರಿಯಲ್ಲಿ ಮಾತನಾಡದಿದ್ದರೆ ಇದು ರಾಜ್ಯಕ್ಕೆ ಒಳ್ಳಯದಾಗುವುದಿಲ್ಲ, ಕರೆದು ಏನಾದರೂ ಮಾತನಾಡಿದರೆ ರಾಜ್ಯಕ್ಕೆ ಒಳ್ಳೆಯದಾಗುತ್ತದೆ. ಸರ್ಕಾರವು ಹಠ ಮಾಡುವುದು ಬೇಡ, ವಿರೋಧಪಕ್ಷದವರು ತಮ್ಮ ಕಛೇರಿಯಲ್ಲಿ ಮೊದಲನೆ ಹಂತವಾಗಿ ತಮ್ಮ ಕಛೇರಿಯಲ್ಲಿ ಕುಳಿತು ಮಾತನಾಡಿ ಆಮೇಲೆ ಪರಿಹಾರವನ್ನು ಹುಡುಕಿ, ಇದರಿಂದ ಒಳ್ಳೆಯದಾಗುವುದಿಲ್ಲ. ದಯವಿಟ್ಟು ಮುಖ್ಯಮಂತ್ರಿಗಳು, ಸರ್ಕಾರ ಪ್ರತಿಷ್ಠೆಯಾಗಿ ತೆಗೆದುಕೊಳ್ಳುವುದು ಬೇಡ, ಎಲ್ಲರನ್ನು ಕರೆಯಿಸಿ ಮಾತನಾಡಿ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳುತ್ತಿದ್ದೇನೆ. ತಾವು ಈ ವಿಷಯವನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ತನ್ನಿ ಸರ್.

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಿ. ಮುನಿಯಪ್ಪನವರು ಸದನದ ಬಾವಿಗೆ ತೆರಳಿ ಧರಣಿಯಲ್ಲಿ ಭಾಗವಹಿಸಿದರು)

(ಘೋಷಣೆ ಕೂಗಾಟ)

ಅಧ್ಯಕ್ಷರು : ಶಂಕರಲಿಂಗೇಗೌಡರೇ ಬೇಡಿ, ಸದನವನ್ನು ಬೆಳಗ್ಗೆಯಿಂದ ಬಹಳ ಗೌರವ ರೀತಿಯಲ್ಲಿ ನಡೆಸಿಕೊಂಡು ಹೋಗಿದ್ದೀರಿ, ಇದೆಲ್ಲಾ ಪ್ರಜಾಪ್ರಭುತ್ವದಲ್ಲಿ ಇರತಕ್ಕಂಥದ್ದೇ ಮಾಡಿ ಚೆನ್ನಾಗಿರುತ್ತದೆ ಅದಕ್ಕೇನೂ ಅಭ್ಯಂತರವಿಲ್ಲ, ಅವೆಲ್ಲಾ ಬೇಡ. ಮುಖ್ಯಮಂತ್ರಿಗಳೇ ಈಗ ಏನು ಮಾಡೋಣ ನಿನ್ನೆ ನೀವು ಬಿಸಿನಸ್ ಅಡ್ವೈಸರಿ ಕಮಿಟಿಯಲ್ಲಿ ಕೊಟ್ಟ ಕ್ಲೂ ತೆಗೆದುಕೊಂಡಿದ್ದಾರೆ, ಅದಕ್ಕೇ ಅವರು ಗಂಭೀರವಾಗಿ ಬಂದು ಕುಳಿತುಬಿಟ್ಟಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ : ಈಗ ನಾನು ಏತಕ್ಕೆ ತಮ್ಮ ಎದುರಿಗೆ ಚರ್ಚೆ ಮಾಡೋಣ ಎಂದು ಹೇಳಿದೆ ಎಂದರೆ, ಈಗ ಸದನದಲ್ಲಿ ನಾನು ಸಂಖ್ಯಾ ಬಲದ ಮೇಲೆ ಮಾತನಾಡುತ್ತಿಲ್ಲ, ಮತ್ತೆ ಯಾವುದೇ ವಿಷಯವನ್ನು ಇರ‍್ಯಾಷನಲ್ ಆಗಿ, ನಮ್ಮ ವಾದದಲ್ಲಿ, ನಮ್ಮ ಬಸ್ ದರದ ಏರಿಕೆಯಲ್ಲಿ ರ‍್ಯಾಷನಾಲಿಟಿ ಇದೆ ಎನ್ನುವುದನ್ನು ಮನವರಿಕೆ ಮಾಡುವದಕ್ಕೆ, ನಿಮ್ಮಲ್ಲಿ ನಾಲ್ಕೈದು ಜನ ನಾಯಕರು ಚರ್ಚೆ ಮಾಡುವುದಕ್ಕೆ ಬರಲಿ ಎಂದು ಹೇಳಿದೆ, ಇನ್ನೂ ಬೇಕಾದರೆ ನಾಲ್ಕೈದು ಜನ ಬರಲಿ. ಚರ್ಚೆ ಮಾಡುವುದಕ್ಕೆ ನಾನು ಯಾವತ್ತೂ ಸಿದ್ಧ. I am ready to convince them and I am ready to

be convinced by them, both. ಅದಕ್ಕಿಂತ ಹೆಚ್ಚಾಗಿ ನಾನು ಏನು ಹೇಳಲಿ? ಏನೇಯಾದರೂ ನಾವು ಕೇಳುವುದಿಲ್ಲವೆಂದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದನ್ನು ಯಾರೂ ಕೂಡ ಪ್ರತಿಷ್ಠೆ ಪ್ರಶ್ನೆಯಾಗಿ ತೆಗೆದುಕೊಂಡಿಲ್ಲ. ಇದನ್ನು ನಾವೂ ಕೂಡ ಅಂಕಿಅಂಶಗಳನ್ನು ಕೊಟ್ಟು ಮನವರಿಕೆಯನ್ನು ಮಾಡಿಕೊಟ್ಟೇ ಹೇಳಿದ್ದೇವೆ. ನೀವು ಶೇಕಡವಾರು ಎಷ್ಟು ವರ್ಕ್ಔಟ್ ಮಾಡಿದ್ದೀರಿ, ಅದರ ಮೇಲೆ ನಾವು ವರ್ಕ್ಔಟ್ ಮಾಡಿ, ನಿಮ್ಮ ಪ್ರತಿವರ್ಷದ ನಷ್ಟವೆಷ್ಟು, ಸರ್‌ಪ್ಲಸ್ ಏನು ಎನ್ನುವುದು ಅದೂ ಕೂಡ ಇದೆ. ಈಗ ನಾವು ನೋಡಿದ್ದೇವೆ, ಅನೇಕ ಸಾರಿ ತಮ್ಮ ಛೇಂಬರ್‌ನಲ್ಲಿ ಸಭೆಯಾಗಿದ್ದು, ಅದರ ಪ್ರಕಾರ ನಡೆದುಕೊಂಡು ಹೋಗಿಲ್ಲ. ಉಧಾಹರಣೆಗೆ ಯು.ಆರ್. ಸಭಾಪತಿಯವರಿಗೆ ಏನಾಯಿತು? ಈ ಸದನದಲ್ಲೇ ಜಯರಾಮ ಶೆಟ್ಟಿಯವರದು, ಯು.ಆರ್. ಸಭಾಪತಿಯವರದು ಎರಡು ಸಾರಿ ಸಭೆಯಾಯಿತು. ಒಂದು ಸಭೆ ಹೆಚ್. ಡಿ. ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ, ಮತ್ತೊಂದು ಸಭೆ ತಾವು ಅಥವಾ ಸಂಸದೀಯ ವ್ಯವಹಾರಗಳ ಸಚಿವರಿದ್ದಾಗ ನಡೆಯಿತು, ಕೊನೆಗೆ ಏನಾಯಿತು? ಇಲ್ಲಿ ವಿಥ್‌ಡ್ರಾ ಮಾಡುತ್ತೇವೆಂದು ಮಾತು ಕೊಟ್ಟಿರಿ, ಮಾಡಲೇ ಇಲ್ಲ. ಮೊನ್ನೆ ಪುನಃ ಇಲ್ಲಿ ಸದನದಲ್ಲಿ ಪ್ರಸ್ತಾಪವಾದಾಗಲೂ ಆ ಸಂದೇಶ ಹೋಗಲಿಲ್ಲ. ಕೊನೆಗೆ ಏನಾಯಿತು ಎಂದರೆ, ಅವರನ್ನು ದಸ್ತಗಿರಿ ಮಾಡಿದ ಮೇಲೆ, ಅಲ್ಲಿಂದ ತಮಗೂ ಕೂಡ ದೂರವಾಣಿಯ ಮೇಲೆ ದೂರವಾಣಿಯನ್ನು ಮಾಡಿದರು, ಇಲ್ಲಿ ನಾವೆಲ್ಲಾ ಮಾಡಿದ ಮೇಲೆ......

ಶ್ರೀ ಜೆ.ಹೆಚ್. ಪಟೇಲ್ : ದಯವಿಟ್ಟು, ನಾನು ಸತ್ಯಾಂಶ ಏನೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ನಾನು ಮಾತನಾಡುಬಿಡುತ್ತೇನೆ, ಆವಾಗ ತಮ್ಮನ್ನೂ ಕೂಡ ಸಂಪರ್ಕಿಸಿದ ಮೇಲೆ, ನಾನು ವಿಚಾರ ಮಾಡುತ್ತೇನೆ, ನಾನು ಮೈಸೂರಿಗೆ ಹೋಗುತ್ತಿದ್ದೇನೆ ಎಂದು ಹೇಳಿದಿರಿ. ನಾನು ಆವತ್ತು ದೆಹಲಿಯಲ್ಲಿದ್ದೆ, ನಾನು ದೆಹಲಿಯಿಂದಲೇ ಎಲ್ಲರನ್ನೂ ಸಂಪರ್ಕಿಸಿದೆ. ಏನಾಗುತ್ತದೆಂದರೆ, ಅನೇಕ ಸಾರಿ, ಅಲ್ಲಿ ಮಾತುಕತೆಗೆ ಬೆಲೆಯಿದ್ದು, ಅದರಂತೆ ನಡೆದುಕೊಂಡು ಹೋದರೆ ಒಂದು ತರಹ. ಆದರೆ ಅನೇಕ ಸಾರಿ ಆ ಮಾತನ್ನು ತಿರಸ್ಕರಿಸಿರತಕ್ಕಂಥದ್ದನ್ನು ಕೂಡ ನಾವು ನೋಡಿದ್ದೇವೆ. ಎರಡನೆಯದು ಹೌಸಿಂಗ್‌ದೂ ಕೂಡ ಆಯಿತು, ಸರ್ಕಾರಿ ಆದೇಶ ಹೊರಡಿತೇ? ಅಲ್ಲೆಲ್ಲಾ ಮಾತುಕತೆಯಾಯಿತು. ಇನ್ನೂ ಕೂಡ ಅದರ ಸರ್ಕಾರಿ ಆದೇಶ ಹೊರಡಿಸಿಲ್ಲ. ಪ್ರತಿಯೊಂದು ಅಸೆಂಬ್ಲಿ ಕ್ಷೇತ್ರಕ್ಕೆ ನೂರು, ನೂರು ಮನೆಗಳನ್ನು ಕೊಡಬೇಕೆನ್ನುವುದು ಆಗಲಿಲ್ಲ, ನಾವು ಮಾಡಿದ್ದೇ ಸರಿಯೆಂದು ಹೊರಗಡೆ ಹೇಳಿಕೆಯನ್ನು ಕೊಟ್ಟಿರಿ. ಅಂದರೆ ಏನು ಮಾಡುವುದು? ನಾವೇನೂ ಅಲ್ಲಿಗೆ ಹೋಗಬಾರದು, ಇಲ್ಲಿಗೆ ಹೋಗಬಾರದು ಎಂದು ಇಲ್ಲ. ತಾವು ನಮ್ಮನ್ನು ಕರೆದರೆ ಶಿರಸಾವಹಿಸಿ ಬರುತ್ತೇವೆ, ಆ ಮಾತು ಬೇರೆ. ಆದರೆ ನಾವು ಯಾವ ಒಂದು ಸಲಹೆಯನ್ನು ಕೊಟ್ಟರೂ ಕೂಡ. ಅದನ್ನು ನೀವು ಲಘುವಾಗಿ ತೆಗೆದುಕೊಂಡು ಮಾತುಕೊಟ್ಟ ಮರುದಿವಸ ಅದನ್ನು ಹೊರಡಿಸುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತೀರಿ. ನಮ್ಮ ಶಾಸಕರಿಗೆ ಕಛೇರಿಯನ್ನು ಕೊಡತಕ್ಕಂಥದ್ದು, ಮತ್ತು ಆಶ್ರಯ ಸಮಿತಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸುತ್ತೇವೆಂದು ಹೇಳಿದರು, ಅಂದರೆ

ಆಡಿದಂಥ ಯಾವ ಒಂದು ಮಾತೂ ಕೂಡ ಕಾರ್ಯಗತವಾಗಿಲ್ಲ. ಅದಕ್ಕೆ ನಾನು ಏನು ಹೇಳುತ್ತೇನೆಂದರೆ ಕೊನೆಯ ಪಕ್ಷ, ನಾವು ಅಲ್ಲಿಗೆ ಮಾತುಕತೆಗೆ ಬರುವುದಕ್ಕೆ ಅಭ್ಯಂತರವೇನಿಲ್ಲ, ತಾವು ಹೇಳಿದ್ದನ್ನು ವಿಚಾರ ಮಾಡೋಣ. ಆದರೆ ಇವರು ಸದನ ಸಮಿತಿಯನ್ನು ರಚನೆ ಮಾಡುವುದಕ್ಕೆ ಪ್ರತಿಷ್ಠೆ ಏತಕ್ಕೆ ಮಾಡಬೇಕು? ಇದರಲ್ಲಿ ನಿಮ್ಮ ಸದಸ್ಯರೂ ಇರುತ್ತಾರೆ, ವಿಧಾನ ಪರಿಷತ್ತಿನ ಸದಸ್ಯರು ಇರುತ್ತಾರೆ, ನಮ್ಮ ಸದಸ್ಯರು ಇರುತ್ತಾರೆ, ಏನು ರ್‍ಯಾಶನಾಲಿಟಿ ಇರುತ್ತದೆ, ಎಲ್ಲರೂ ಕೂಡ ಅದನ್ನೇ ಹೇಳುತ್ತಾರೆ, ಯಾರೂ ಕೂಡ ಎಕ್ಸ್‌ಟ್ರಾ ಆಗಿ ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತು ಇದೊಂದಕ್ಕೆ ಸದನ ಸಮಿತಿಯನ್ನು ರಚನೆ ಮಾಡಿ ಎಂದು ಕೇಳುತ್ತಿಲ್ಲ, ದೊಡ್ಡ ದೊಡ್ಡ ಅನೇಕ ಭೂಸುಧಾರಣಾ ಕಾಯಿದೆಯಂಥ ಕಾನೂನನ್ನೂ ಕೂಡ ಜಂಟಿ ಸದನದ ಸಮಿತಿಯನ್ನು ಮಾಡಿಕೊಂಡು ಎಷ್ಟೋ ಸಾರಿ ಒಂದು ಸಣ್ಣ ತಿದ್ದುಪಡಿ ಇದೆ ಎಂದರೆ ಕನ್ಸಲ್ಟೆಂಟ್ ಮಾಡಿ ಮಾಡಿದ್ದಾರೆ. ಆದುದರಿಂದ ಇದೇನೂ ದೊಡ್ಡ ಮಾತೇನಲ್ಲ, ಅದಕ್ಕೆ, ಎಪ್ಪತ್ತೊಂದು ಲಕ್ಷ ಜನರಿಗೆ ತೊಂದರೆ ಒಂದು ಕಡೆಯಾದರೆ, ಮತ್ತೊಂದು ಕಡೆ ಸೈಡ್ ಎಫೆಕ್ಟ್ ಏನೆಂದರೆ ಅರವತ್ತು ಎಪ್ಪತ್ತು ಲಕ್ಷ ಜನರು ಖಾಸಗಿ ಬಸ್‌ಗಳಲ್ಲಿ, ಮ್ಯಾಕ್ಸಿ ಕ್ಯಾಬ್‌ಗಳಲ್ಲಿ ಓಡಾಡುವ ಜನರಿಗೂ ಕೂಡ ತೊಂದರೆಯಾಗುತ್ತದೆ. ಆದುದರಿಂದ ದಯವಿಟ್ಟು ಇದರ ಬಗ್ಗೆ ತಾವು ಪ್ರತಿಷ್ಠೆ ಮಾಡಬೇಡಿ, ತಾವು ಸದನದ ಸಮಿತಿಯನ್ನು ರಚನೆ ಮಾಡಿ, ಆ ಸಮಿತಿಗೆ ಯಾರ್ಯಾರು ಸದಸ್ಯರಾಗಿರಬೇಕೆನ್ನುವುದನ್ನು ಅಧ್ಯಕ್ಷರು ಸೂಚಿಸುತ್ತಾರೆ, ಆ ಸಮಿತಿ ವರದಿಯನ್ನು ಕೊಡುತ್ತದೆ, ಅಲ್ಲಿಯವರೆಗೆ ತಮ್ಮ ರಿಪೋರ್ಟ್ ಅನ್ನು ಅಬೆಯನ್ಸ್‌ನಲ್ಲಿಟ್ಟು ಸ್ಟೇ ಮಾಡಿ, ಯಾವಾಗ ಆ ವರದಿ ಹೊರ ಬರುತ್ತದೆ, ಆಮೇಲೆ ಬೇಕಾದರೆ ಜಾರಿಗೆ ತನ್ನಿ. ದಯವಿಟ್ಟು ಇದನ್ನು ತಾವು ಮಾಡಬೇಕು, ಇಲ್ಲವೆಂದರೆ ತಾಪತ್ರೆಯಾಗುತ್ತದೆನ್ನುವ ಮಾತನ್ನು ಅಧ್ಯಕ್ಷರೆ ನಾನು ಹೇಳುತ್ತಿದ್ದೇನೆ.

(ಈ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರು ಪುನಃ ಸದನದ ಬಾವಿ ಕಡೆಗೆ ಬಂದು ಧರಣಿಯಲ್ಲಿ ಪಾಲ್ಗೊಂಡರು)

ಶ್ರೀ ಬಿ. ಎಸ್. ಯಡಿಯೂರಪ್ಪ : ನಾನು ಖಂಡಿತಾ ಮುಖ್ಯ ಮಂತ್ರಿಗಳಿಗೆ ಹೇಳುವುದೇನೆಂದರೆ, ಇದರಲ್ಲಿ ರಾಜಕಾರಣ ಮಾಡುವುದಕ್ಕೆ ನಾವು ಬಿಲ್‌ಕುಲ್ ಸಿದ್ಧರಿಲ್ಲ. ಇವತ್ತು ಪ್ರತಿಪಕ್ಷದಲ್ಲಿದ್ದುಕೊಂಡು ನಮ್ಮ ಕರ್ತವ್ಯವನ್ನು ನಿರ್ವಹಿಸಬೇಕಾಗಿದೆ. ಜನರು ಈ ರೀತಿ ಇಪ್ಪತ್ತೈದರಿಂದ, ನೂರೈವತ್ತರಷ್ಟು ಶೇಕಡ ಬಸ್ ಪ್ರಯಾಣ ದರವನ್ನು ಹೆಚ್ಚಿಸಿರುವುದರ ಬಗ್ಗೆ ಜನರು ಆ ಭಾರವನ್ನು ಭರಿಸಲಾಗುತ್ತಿಲ್ಲ. ಅದಕ್ಕೆ ನಾವೇನು ಸಲಹೆಯನ್ನು ಕೊಡುತ್ತಿದ್ದೇವೆಂದರೆ, ಎರಡು ತಿಂಗಳ ಮಟ್ಟಿಗೆ ಈಗ ನೀವೇನು ಹೆಚ್ಚಿಗೆ ಮಾಡಿದ್ದೀರಿ, ಅದನ್ನು ಅಬೆಯನ್ಸ್‌ನಲ್ಲಿಡಿ.

(ಗೊಂದಲ)

ಮಾನ್ಯ ಸದಸ್ಯರು : ನಿಮಗೆ ತಾಪತ್ರೆಯಾಗಿರುವುದು, ಜನರಿಗೆ ತಾಪತ್ರಯ ಆಗಿಲ್ಲ.

ಶ್ರೀ ಜೆ.ಬಿ. ಶಿವಕುಮಾರ : ದಯಮಾಡಿ ಈ ರಾಜ್ಯದ ಜನ ಚುನಾಯಿಸಿ ಕಳುಹಿಸಿಕೊಟ್ಟು, ಈ ಪ್ರದರ್ಶನಗಳನ್ನು ನೋಡಿ ಸಾಕಾಗಿದೆ, ಜನಪ್ರತಿನಿಧಿಗಳ ಮೇಲೆ ವಿಶ್ವಾಸವೇ ಹೊರಟುಹೋಗಿದೆ, ಯಾರು ಬಂದರೂ ತಪ್ಪಿಲ್ಲ. ಸದನವನ್ನು ನಡೆಸಬೇಕೆಂದು ಒಂದು ಕಡೆ ಹೇಳುತ್ತಾರೆ. ನೀರಿಲ್ಲದೆ ಇರುವ

ಬಾವಿಗೆ ಬಂದು ಬೀಳುವುದು ಒಂದು ಕಡೆ, ಟಿ.ವಿ.ನಲ್ಲಿ ಬರಬೇಕೆಂದು ಒಂದು ರೀತಿಯ ಆಸೆ, ಇದನ್ನು ನೋಡಿ ಏನು ಮಾಡಬೇಕು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಎರಡೂ ಸದನದ ಸಮಿತಿಯನ್ನು ರಚನೆ ಮಾಡಿ. ಮಾನ್ಯ ಅಧ್ಯಕ್ಷರೆ, ಶ್ರೀ ದೇಶಪಾಂಡೆಯವರು ಬಂದು ನೀವು ಒಪ್ಪಿಕೊಳ್ಳಬೇಡಿ ಎಂದು ಹೇಳುತ್ತಿದ್ದಾರೆ. ನೀವು ಒಪ್ಪಿಕೊಳ್ಳುತ್ತೀರೆಂದು ಭಯ. ಇವರನ್ನು ನಂಬಿಕೊಂಡರೆ ನಿಮ್ಮನ್ನು ಮುಳುಗಿಸುತ್ತಾರೆ. ರಾಜ್ಯದ ಜನರನ್ನು ಮುಳುಗಿಸಿಬಿಡುತ್ತಾರೆ. ಒಂದು ಕೆಲಸ ಮಾಡಿ, ಇವತ್ತು ನಾವು ನೀವು ಹೋಗೋಣ. 100ಕ್ಕೆ 50 ಜನರನ್ನು ನಿಮಗೆ ಯಾವ ಯಾವ ಎಜೆನ್ಸಿಗಳು ಇದ್ದಾರೆ ಅವರ ಜೊತೆಗೆ ಹೋಗಿ ಆ ಜನರ ಅಭಿಪ್ರಾಯ ಕೇಳಿ. ಕಳೆದ ಒಂದು ವರ್ಷದಲ್ಲಿ ಸಾಮಾನ್ಯ ಜನರಿಗೆ ಕುಡಿಯುವ ನೀರು, ವಿದ್ಯುತ್ ಬಸ್ಸು ಪ್ರಯಾಣ ದರ, ಮನೆ ತೆರಿಗೆ ಇತ್ಯಾದಿ 600 ರಿಂದ 700 ರೂಪಾಯಿವರೆಗೆ ಹೆಚ್ಚಿನ ಭಾರ ಬಿದ್ದಿದೆ. ಅವನಿಗೆ ಆದಾಯ ಇಲ್ಲ. ಇದರಿಂದ ಜನಸಾಮಾನ್ಯ ಕಷ್ಟ ಅನುಭವಿಸುತ್ತಿದ್ದಾನೆ. ಒಂದೇ ಬಾರಿಗೆ ಈ ರೀತಿ ಬೆಲೆ ಏರಿಸುವುದರಿಂದ ಈ ಸಮಸ್ಯೆಗೆ ಪರಿಹಾರವಲ್ಲ. ಎಲ್ಲಾ ಸರಿಹೋಗುತ್ತದೆ ಎನ್ನುವುದನ್ನು ನಾವು ನಿಮಗೆ ಮನವರಿಕೆ ಮಾಡಿಕೊಡುತ್ತೇವೆ. ಸಾವಿರ ಟಯರುಗಳನ್ನು ಖರೀದಿ ಮಾಡುತ್ತಾರೆ. ನಂತರ ನಾವು ಟಯರ್‌ನ್ನು ಹೊಸದಾಗಿ ಹಾಕಿದ್ದೇವೆಂದು ಹೇಳುತ್ತಾರೆ, ಹಾಗೆಯೇ ಅವುಗಳನ್ನು ಮಾರ್ಕೆಟಿನಲ್ಲಿ ಜಮಾ ಮಾಡಿ ಖರ್ಚು ಆಗುತ್ತದೆ. ಸ್ಪೇರ್ ಪಾರ್ಟ್ಸ್ ಖರೀದ ಮಾಡುತ್ತೇವೆಂದು ಹೇಳುತ್ತಾರೆ, ಆದರೆ ಆ ಸ್ಪೇರ್ ಪಾರ್ಟ್ಸ್ ಬಸ್ಸು ಡಿಪೋಗಳಿಗೆ ಬಂದಿರುವುದಿಲ್ಲ. ಅಲ್ಲಿ ಅಡ್ಜೆಸ್ಟಿಂಗ್ ಆಗುತ್ತಿದೆ. ಇದನ್ನು ತೋರಿಸುತ್ತೇವೆ. ಒಂದು ಬಸ್ಸು ಒಂದು ದಿವಸಕ್ಕೆ 500 ಕಿ.ಮೀ. ನಷ್ಟು ಓಡಾಡಬಹುದಾದರೂ ಸಹ 250 ಕಿ.ಮೀ. ನಷ್ಟು ಕೂಡ ಓಡಾಡುತ್ತಿಲ್ಲ. 10 ಸಾವಿರ ಬಸ್ಸುಗಳಲ್ಲಿ 2 ಸಾವಿರ ಬಸ್ಸುಗಳು ಕೆಟ್ಟುನಿಂತಿರುತ್ತವೆ. ಮೈಲೇಜ್ ಇಲ್ಲ. ಅಲ್ಲಿ ಲೂಟಿ ನಡೆಯುತ್ತಿದೆ. ಸದನ ಸಮಿತಿ ಮಾಡಿದರೆ ನಿಮಗೆ ನಾವು ಮನವರಿಕೆ ಮಾಡುತ್ತೇವೆ. ನಾವು ನಿಮಗೆ ಕನ್‌ವಿನ್ಸ್ ಮಾಡುವುದಕ್ಕೆ ಆಗದಿದ್ದರೆ ನೀವು ಹೇಳಿದ ಹಾಗೆ ನಾವು ಒಪ್ಪಿಕೊಳ್ಳುತ್ತೇವೆ. ನಾವು ನಿಮಗೆ ಕನ್‌ವಿನ್ಸ್ ಮಾಡಿದರೆ ನೀವೂ ಒಪ್ಪಿಕೊಳ್ಳಬೇಕಲ್ಲವೇ? ಈ ಬೆಲೆ ಏರಿಕೆಯನ್ನು ಎರಡು ತಿಂಗಳ ಮಟ್ಟಿಗೆ ಮುಂದೂಡಿ. ಅಧ್ಯಕ್ಷರಿಗೆ ಪ್ರಾರ್ಥನೆ ಮಾಡುವುದೇನೆಂದರೆ, ದಯವಿಟ್ಟು ನೀವು ನಮ್ಮನ್ನು ನಿಮ್ಮ ಕೊಠಡಿಗೆ ಕರೆಯಬೇಡಿ. ನೀವು ಕರೆಯುವುದಿಲ್ಲ, ಏಕೆ ಹೇಳುತ್ತಿದ್ದೇನೆಂದರೆ ಇದು ಇಕ್ಕಟ್ಟಿನ ಪ್ರಸಂಗ. ಆದ್ದರಿಂದ ಈ ವಿಷಯದ ಬಗ್ಗೆ ಸದನದಲ್ಲಿ ಮುಖ್ಯಮಂತ್ರಿಗಳೂ ಸಹ ಇದ್ದಾರೆ. ಇಲ್ಲಿಯೇ ಚರ್ಚೆ ಆಗಲಿ. ಅಥವಾ 'ನಾವು ಕಡಿಮೆ ಮಾಡುವುದಕ್ಕಾಗುವುದಿಲ್ಲ ಯಡಿಯೂರಪ್ಪನವರೇ ವಿರೋಧಪಕ್ಷದ ಸದಸ್ಯರು ಹೀಗೇ ನಡೆದುಕೊಳ್ಳಿ. ನಾವು ಹೀಗೇ ಆಡಳಿತ ನಡೆಸುತ್ತೇವೆ, ಇನ್ನೂ ಎರಡೂವರೆ ವರ್ಷ ಇದೆ, ಚುನಾವಣೆಯಲ್ಲಿ ನೋಡಿಕೊಳ್ಳೋಣವೆಂದು ಹಗುರವಾಗಿ ವಿರೋಧ ಪಕ್ಷದವರನ್ನು ತೆಗೆದುಕೊಳ್ಳುವುದಾದರೆ, ಹೇಗೆಯೇ ಮಾಡಿ. ಗಂಭೀರವಾದಂಥ ಮಾತನ್ನು ಮಾನ್ಯ ನಾಗೇಗೌಡರು ಹೇಳಿದ್ದಾರೆ. 50-100 ಜನರ ಜೊತೆ ಸತ್ಯಾಗ್ರಹ ಮಾಡಿದಿರಿ, ನಿಮಗೆ ಜನ ಬೆಂಬಲವಿಲ್ಲವೆಂದು ಹೇಳಿದರು. ನಿಮಗೆ ಎಷ್ಟು ಜನ ಜೈಲಿಗೆ ಹೋಗಬೇಕು? ಜೈಲಿಗೆ ಹೋದ ಮೇಲೆ ಬೆಲೆ ಏರಿಕೆಯನ್ನು ವಾಪಸ್ಸು ತೆಗೆದುಕೊಳ್ಳುತ್ತೀರೋ? ನಾವು ರೆಡಿ ಇದ್ದೇವೆ, ಬಸ್ಸುಗಳಿಗೆ ಬೆಂಕಿ ಹಚ್ಚಬೇಕೇ ಜನ ಇವತ್ತು

ಸಿದ್ದರಿದ್ದಾರೆ. ಅದೇ ದಾರಿ, ಅದೇ ಮಾರ್ಗ, ಅದೇ ನಮಗೆ ಸರಿಯಾದುದು, ಹಿಂದಿನ ಸಂಸ್ಕೃತಿ ಬೆಳೆಯಬೇಕು ಎನ್ನತಕ್ಕಂಥ ಅಪೇಕ್ಷೆ ಇದ್ದರೆ ಜನ ಬೀದಿಗೆ ಇಳಿದು ಆಂಧೋಳನ ಮಾಡುವುದಕ್ಕೆ ಸಿದ್ದರಿದ್ದಾರೆ. ನಿಮ್ಮ ಸರ್ಕಾರದ ಬಗ್ಗೆ ಜನ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ನಿಮ್ಮ ಆಡಳಿತದ ಬಗ್ಗೆ ಜನ ಬೇಸತ್ತಿದ್ದಾರೆ. ಒಂದು ರೀತಿ ವಿಚಿತ್ರ ಪರಿಸ್ಥಿತಿ ಇದೆ. ಇದೇ ಮುಂದುವರಿಯಬೇಕೆಂದು ನಿಮ್ಮ ಅಪೇಕ್ಷೆ ಇದ್ದರೆ ನಿಮಗೆ ಖುಷಿ ಬಂದಹಾಗೆ ಮಾಡಿ. ನಾವು ಯಾವುದೇ ಕಾರಣಕ್ಕೂ ನಿಮಗೆ ತೊಂದರೆ ಕೊಡುವುದಿಲ್ಲ.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಎಲ್ಲರಿಗೂ ಮತ್ತೊಮ್ಮೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಸರ್ಕಾರ ಮೊಂಡು, ಜನ ತಿರುಗಿ ಬೀಳುತ್ತಾರೆ. ಇವೆಲ್ಲಾ ಪ್ರಸ್ತಾವಿಕವಾಗಿ ತಾವು ಹೇಳಬೇಕಾದ ಮಾತುಗಳು. ಅದಕ್ಕೆ ನಾನು ಚಾಲೆಂಜ್‌ನಲ್ಲಿ ಒಪ್ಪಿಕೊಂಡೇ ಇಲ್ಲಿಯವರೆಗೆ ಇಲ್ಲಿ ನಿಂತಿರುವುದು. ಹೇಳಿದ ಕೂಡಲೇ ನಾನು ಹೆದರಿ ಓಡುವವನಲ್ಲ. ಇಲ್ಲಿ ಯಾರೂ ಹೆದರುವುದಿಲ್ಲ. ಆ ಮಾತು ಬೇರೆ. ಆದರೆ ಅಬ್ಜೆಕ್ಟಿವಿಟಿ ಬಗ್ಗೆ ಆಗಲೇ ನಾನು ಮಾನ್ಯ ಖರ್ಗೆಯವರು ಹೇಳಿದ ಹಾಗೆ, ಎಲ್ಲಾ ಸಂಖ್ಯೆಗಳನ್ನು ಕೊಟ್ಟಹಾಗೆ ಕೆ.ಎಸ್.ಆರ್.ಟಿ.ಸಿ. ಇದರೊಳಗೆ ಎಲ್ಲಾ ಸತ್ಯಾಂಶ ಇದೆ. ಬಹಳಷ್ಟು ಸೋರಿ ಹೋಗುತ್ತದೆ. ಈ ಸಂಸ್ಥೆ ಕೆಟ್ಟುಹೋಗಿದೆ, ಅದನ್ನು ಸರಿಪಡಿಸುವುದಕ್ಕೆ ಅವರು ಹೇಳಿದ ಮಾರ್ಗದಿಂದ ಮಾತ್ರ ಸಾಧ್ಯವಾದರೆ, ನಾವು ಎಷ್ಟೋ ಸಾರಿ ಮಾಡಿದ್ದೇವೆ, ಏನಾದರೂ ಮಾಡಿ ಇದನ್ನು ಸರಿಪಡಿಸಬೇಕೆಂದು ನಾವು ಎಷ್ಟೋ ಸಲ ಯೂನಿಯನ್‌ರವರನ್ನು ಕರೆದು ಯೋಚನೆ ಮಾಡಿದ್ದೇವೆ, ಈ ಮಾರ್ಗ ಬಿಟ್ಟರೆ ಬೇರೆ ಮಾರ್ಗವಿಲ್ಲವೆಂದು ಅತ್ಯಂತ ವಿನಯ ಪೂರ್ವಕವಾಗಿ ಹೇಳುತ್ತೇನೆ. ನಾನು ಈ ಮಾರ್ಗವನ್ನು ಬಿಟ್ಟು ಬೇರೆ ಮಾರ್ಗಕ್ಕೆ ಹೋಗುವುದಕ್ಕಾಗುವುದಿಲ್ಲ ಖರ್ಗೆಯವರೇ, ಯಡಿಯೂರಪ್ಪನವರೇ, ದಯವಿಟ್ಟು ಕ್ಷಮಿಸಿ, ಸಹಕರಿಸಿ. ಇನ್ನು ಒಂದು ವರ್ಷ ಬಿಟ್ಟು ನೋಡಿ - ಕೆ.ಎಸ್.ಆರ್.ಟಿ.ಸಿ. ಯಾವ ಸ್ಥಿತಿಗೆ ಬರುತ್ತದೆ ಎಂಬುದನ್ನು ನೋಡಿ ತೋರಿಸುತ್ತೇನೆ. ಒಂದು ವರ್ಷ ಕಾಯುವುದರಿಂದ ಆಕಾಶ ಬಿದ್ದು ಹೋಗುವುದಿಲ್ಲ. ಈಗ ನಾವು ಎಲ್ಲಾ ಸೇರಿ ಮಾತನಾಡುವುದು, ಒಂದು ಕಿ.ಮೀ.ಗೆ 10 ರಿಂದ 20 ಪೈಸೆ ಜಾಸ್ತಿಯಾದರೆ, ಇವತ್ತು ತಾವು ಹಳ್ಳಿಯಲ್ಲಿ ಹುಟ್ಟಿ ಬೆಳೆದವರು, ರೂ 1-75 ಬದಲು 2 ರೂ. ಕೊಡಿ ಎಂದು ಹೇಳಿದರೆ, ಬಹಳ ಜನರಿಗೆ ಕಷ್ಟ ಇದೆ. ನೀವೆಲ್ಲರೂ ಎಲೆಕ್ಟ್ರಿಸಿಟಿ ಬಗ್ಗೆ ಹೀಗೆ ಮಾತನಾಡಿದಿರಿ. ಈಗ ಜನ ಹೇಳುತ್ತಾರೆ' ಹೌದು ನಾವು ಇದಕ್ಕೆ ದುಡ್ಡು ಕೊಡಬೇಕೆಂದು. ಇವತ್ತು ಜನ ಇದಕ್ಕೆ ಒಪ್ಪುತ್ತಾರೆ.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ನಾನು ಹಾಸ್ಯಕ್ಕೆ ಹೋಗುವುದಿಲ್ಲ, ನಾನು ಯಾವುದೇ ಅಹಂಕಾರಕ್ಕೆ ಹೋಗುವುದಿಲ್ಲ. ನಾನು ಅಧ್ಯಕ್ಷರ ಮೂಲಕ ತಮಗೆಲ್ಲಾ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ದಯವಿಟ್ಟು ಸಹಕರಿಸಿ. ಇದರ ಬಗ್ಗೆ ಒಂದು ವರ್ಷ ಕಾದು ನೋಡೋಣ. ಮುಂದಿನ ವರ್ಷದ ಹೊತ್ತಿಗೆ ಏನಾದರೂ ಪುನಃ ನೀವು ಹೇಳಿದ ಸಲಹೆಗಳು ಸರಿಯೆಂದು ಕಂಡುಬಂದರೆ ಆ ರೀತಿ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಮುಂದಿನ ವರ್ಷದವರೆಗೆ ನಾವು ಧರಣಿ ಮಾಡಿಕೊಂಡು ಇಲ್ಲಿಯೇ ಕುಳಿತಿರುತ್ತೇವೆ.

ಅಧ್ಯಕ್ಷರು : ಸಭೆಯನ್ನು ಮುಂದೂಡಿದ್ದೇನೆ, ಪುನಃ ನಾಳೆ ಬೆಳಿಗ್ಗೆ ಸೇರುವುದರಿಂದ ಪ್ರಯೋಜನ ಇಲ್ಲವಲ್ಲಾ. ಅವರ ವಾದಕ್ಕೆ ಅವರು ನಿಂತಿದ್ದಾರೆ, ನಿಮ್ಮ ವಾದಕ್ಕೆ ನೀವು ನಿಂತಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾವು ಇಲ್ಲ ಪ್ರೊಟೆಸ್ಟ್ ಮಾಡದೆ ಮತ್ತೆ ನಾವು ಇನ್ನೂ ಎಲ್ಲಿಗೆ ಹೋಗಬೇಕು?

ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಕೆಲವು ಹಿರಿಯ ನಾಯಕರನ್ನು ತಮ್ಮ ಕೊಠಡಿಗೆ ಕರೆಯಿಸಿ ಇದರ ಬಗ್ಗೆ ಏನಾದರೂ ಪ್ರಯತ್ನ ಮಾಡಬೇಕೆಂದು ಇದ್ದಾಗ, ವಿರೋಧ ಪಕ್ಷದ ಸದಸ್ಯರುಗಳು - ನಾವು ಹೇಳಿದ್ದೇ ಆಗಬೇಕು ಸರ್ಕಾರ ಹೇಳುವಂಥ ಅಗತ್ಯ ಏನೂ ಇಲ್ಲವೆನ್ನತಕ್ಕಂಥದ್ದು, ಸರಿಯಲ್ಲ. ಮುಖ್ಯಮಂತ್ರಿಗಳು ಇವರನ್ನು ಎಷ್ಟು ಕೇಳಿಕೊಂಡರೂ ಕೂಡ ಯಾವ ಸಹಕಾರವನ್ನು ನೀಡದೆ ಅಂತಿಮ ರೂಪವೆಂದು ಕುಳಿತುಕೊಂಡರೆ, ಈ ಕರ್ನಾಟಕದ ಜನ ನಮ್ಮನ್ನು ಪ್ರತಿನಿಧಿಗಳನ್ನಾಗಿ ಮಾಡಿ ಕಳುಹಿಸಿದಂಥವರು ಏನು ಹೇಳುತ್ತಾರೆ ಎಂಬುದನ್ನಾದರೂ ತಿಳಿದುಕೊಂಡರೆ ಚೆನ್ನಾಗಿರುತ್ತದೆ..... ಮಾನ್ಯ ಸಗೀರ್ ಅಹಮದ್‌ರವರೇ ನಿಮ್ಮ ಸರ್ಕಾರ ಮಾಡಿದ ಪಾಪವನ್ನೆಲ್ಲಾ, ನಾವು ಹೊತ್ತುಕೊಂಡು ಇವತ್ತು ಜನರಿಗೆ ಹೊರೆಯನ್ನು ಹೊರಿಸತಕ್ಕಂಥ ಪರಿಸ್ಥಿತಿಯಲ್ಲಿ ನಿಮ್ಮ ಪಾಲೂ ಸಹ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅನ್ ಪ್ರವೋಕ್ ಆಗಿ ಇರತಕ್ಕಂಥ ವಾತಾವರಣದಲ್ಲಿ ಅದನ್ನು ಪೊಲೀಸರು ಮಾಡಿದ್ದಾರೆ ಎನ್ನತಕ್ಕಂಥದ್ದರ ಬಗ್ಗೆ ಕೂಡ ನಾನು ಕೇಳಿದ್ದೇನೆ. ಅದರಿಂದ ನೀವು ಸದನ ಸಮಿತಿಯನ್ನು ಮಾಡಿ; ಬೇಕಾದರೆ 15 ದಿವಸದಲ್ಲಿ ನೀವು ವರದಿಯನ್ನು ತೆಗೆದುಕೊಳ್ಳಿ. ಏಕೆಂದರೆ ನೀವು ಯಾವ ರೀತಿಯಾಗಿ ಕನ್‌ವಿನ್ಸ್ ಮಾಡುತ್ತೀರೋ ಅದೇ ರೀತಿಯಾಗಿ ನಾವೂ ಕೂಡ ನಿಮಗೆ ಮನವರಿಕೆಯಾಗುವ ರೀತಿಯಲ್ಲಿ ಸ್ಟ್ಯಾಟಿಸ್ಟಿಕ್ಸ್ ಕೊಟ್ಟು, ಬೇರೆ ಬೇರೆ ಕಡೆಯಲ್ಲಿ ಇರತಕ್ಕಂಥದ್ದನ್ನೂ ಕೂಡ ನೋಡಿಕೊಂಡು ಬಂದು ನಿಮಗೆ ವರದಿ ಕೊಡುತ್ತೇನೆ. ನಂತರ ಬೇಕಾದರೆ ಅದರ ಮೇಲೆ ನಿರ್ಣಯಕ್ಕೆ ಬಂದಾಗ ನೋಡೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಪ್ರೊವೈಡೆಡ್ ಅವರು ಬೇರೆ ಯಾರ ಮಾತನ್ನೂ ಕೇಳಬಾರದು. ಸ್ವಂತ ನಮ್ಮ ಮಾತನ್ನು ಕೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಡಿಯೂರಪ್ಪನವರು ಅದೂ ಹೇಳುತ್ತಿದ್ದಾರೆ. ನೀವು ಯಾವಾಗಲೂ ಒಬ್ಬರೇ ಇದ್ದರೆ ಸರಿ ಇರುತ್ತೀರಿ, ಬೇರೆಯವರು ಮಾತನಾಡಿದರೆ ಹೀಗೆ ಆಗುತ್ತೀರೆಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದು ಮಾನ್ಯ ಮುಖ್ಯಮಂತ್ರಿಯವರ ದೌರ್ಬಲ್ಯ. ನಮ್ಮ ಜೊತೆಯಲ್ಲಿ ಇದ್ದರೆ ಸರಿ ಇರುತ್ತಾರೆ. ಅವರು ಆ ಕಡೆ ಹೋದರೆ ಕೆಟ್ಟು ಹೋಗುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜನ ಖರ್ಗೆ : ಅದಕ್ಕಾಗಿ ಸದನಸಮಿತಿ ಮಾಡಿ ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಇವರ ಜೊತೆಯಲ್ಲಿ ಇದ್ದರೆ ಇಲ್ಲಿ ಇರುತ್ತೇನೆ. ಅವರ ಜೊತೆಗಿದ್ದರೆ ಎಲ್ಲಿ ಇರುತ್ತೇನೋ ಗೊತ್ತಿಲ್ಲ. ಇನ್ನು ಸದನದ ಸಮಿತಿ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಅಧ್ಯಕ್ಷರೇ ತಮಗೆ ಗೊತ್ತಿದೆ.

ಅಧ್ಯಕ್ಷರು : ಆಯಿತು,

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಬಹಳ ದಿವಸ ಇರಬೇಕೆಂದಾದರೆ ನಮ್ಮ ಮಾತು ಕೇಳಲಿ, ಅಥವಾ ಇನ್ನು ಒಂದೆರಡು ತಿಂಗಳಲ್ಲಿ ಅಲ್ಲಿಂದ ಜಾಗ ಬಿಟ್ಟು ಹೋಗಬೇಕೆಂದಾದರೆ ಅವರ ಮಾತನ್ನು ಕೇಳಲಿ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸದನದಲ್ಲಿ ನಮ್ಮ ಜೊತೆಯಲ್ಲಿ ಇರಿ ಎಂದು ನಾವು ಹೇಳುತ್ತಿದ್ದೇವೆ. ಹೊರಗಡೆ ಜೆ.ಡಿ. ಎಲ್.ಪಿ. ಮೀಟಿಂಗ್‌ನಲ್ಲಿ ಅವರ ಜೊತೆಯಲ್ಲಿ ಇದ್ದರೆ ಪರವಾಗಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಸಭಾಧ್ಯಕ್ಷರೇ, if it is possible, I would never hesitate, but it is not possible.

ಅಧ್ಯಕ್ಷರು : ಏಕೋ ಟೈಮ್ ಸರಿಯಾಗಿ ಇದ್ದ ಹಾಗಿಲ್ಲ. ಈಗ ಮುಂದಕ್ಕೆ ಸಭೆಯನ್ನು ಹಾಕೋಣ.

ಶ್ರೀ ವಾಟಾಳ್ ನಾಗರಾಜ್ : ಏಕೋ ನಾಳೆಯೂ ಟೈಮ್ ಸರಿಯಾಗಿಲ್ಲ ಸರ್. ಇದರ ಬಗ್ಗೆ ಸೇರಿದ್ದೇ ಟೈಮ್ ಸರಿಯಾಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ... ಬಸ್ಸು ಪ್ರಯಾಣದ ದರ ಏರಿಕೆ 35 ಪರ್ಸೆಂಟ್‌ನಿಂದ 150 ಪರ್ಸೆಂಟ್‌ವರೆಗೆ ಆಗಿರುವಾಗ ಸರ್ಕಾರ ಎಲ್ಲವನ್ನೂ ಸರಿಯೆಂದು ಸಮರ್ಥನೆ ಮಾಡಿಕೊಂಡರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ಯಾವುದಕ್ಕೂ ಸರ್ಕಾರ ಮಾಡಿದ್ದೇ ಸರಿ ಎಂದು ಅವರು ಹೇಳುತ್ತಿದ್ದಾರೆ.

ಅಧ್ಯಕ್ಷರು : ಈಗ ಸದನವು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 10-00 ಗಂಟೆಗೆ ಸೇರುವುದು.

(ಸದನವು ಸಂಜೆ 5 ಗಂಟೆ 30 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 20ನೇ ಮಾರ್ಚ್ 1997ರ ಗುರುವಾರದಂದು ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು).

---

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).